ವಿಜಯನಗರದ ತುಳುವ ಅರಸರ ರಾಣಿಯರು : ಚಾರಿತ್ರಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ನಿಬಂಧ

ಸಂಶೋಧಕರು

ಆರ್. ಸುಮನ

ಮಾರ್ಗದರ್ಶಕರು

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೬

ವಿಜಯನಗರದ ತುಳುವ ಅರಸರ ರಾಣಿಯರು : ಚಾರಿತ್ರಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ನಿಬಂಧ

ಸಂಶೋಧಕರು
ಆರ್. ಸುಮನ

ಮಾರ್ಗದರ್ಶಕರು
ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೬

118

ಪ್ರಮಾಣ ಪತ್ರ

ವಿಜಯನಗರದ ತುಳುವ ಅರಸರ ರಾಣಿಯರು : ಚಾರಿತ್ರಿಕ ಅಧ್ಯಯನ ಎಂಬ ನಿಬಂಧವನ್ನು ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್ ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨೦-೬-೦೬
ಸ್ಥಳ : ವಿದ್ಯಾರಣ್ಯ

ಸಂಶೋಧಕರು
R. Sumana.
(ಆರ್. ಸುಮನ)

ದೃಢೀಕರಣ ಪತ್ರ

ವಿಜಯನಗರದ ತುಳುವ ಅರಸರ ರಾಣಿಯರು : ಚಾರಿತ್ರಿಕ ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಕು|| ಆರ್. ಸುಮನ ಅವರು ನನ್ನ ಮಾರ್ಗದರ್ಶನ ದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 20-2-05

ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರು

(ಡಾ: ವಿರೂಪಾಕ್ಷಿ ಪೂಜಾರಹಳ್ಳಿ)

ಕೃತಜ್ಞತೆಗಳು

"ವಿಜಯನಗರದ ತುಳುವ ಅರಸರ ರಾಣಿಯರು; ಚಾರಿತ್ರಿಕ ಅಧ್ಯಯನ" ಎಂಬ ನಿಬಂಧವನ್ನು ಕನ್ನಡ ಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಶ್ರೀ ಬಿ. ಎ. ವೇಕ ರೈ, ಮತ್ತು ಕುಲ ಸಚಿವರಾದ ಶ್ರೀ ವಿ. ಶಂಕರ್ ಅವರಿಗೆ, ನಿಬಂಧದ ವಿಷಯವನ್ನು ಸೂಚಿಸಿ, ಸೂಕ್ತ ಸಲಹೆ ೂಚನೆಗಳೊಂದಿಗೆ ಮಾರ್ಗದರ್ಶನವನ್ನು ನೀಡಿದ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರಿಗೆ, ಅಧ್ಯಯನದ ಅವಧಿಯಲ್ಲಿ ಚರಿತ್ರೆಯ ವಿವಿಧ ಆಯಾಮಗಳನ್ನು ಬೋಧಿಸಿದ ಚರಿತ್ರೆ ವಿಭಾಗದ ಸಂಚಾಲಕರಾದ ಡಾ. ಮೋಹನ ್ರಷ್ಣ ರೈ, ಪ್ರೊ. ಲಕ್ಷ್ಮಣ ತೆಲಗಾವಿ, ಪ್ರೊ. ಟಿ.ಪಿ. ವಿಜಯ ಪೂಣಚ್ಚ, ಡಾ. ಸಿ. ಆರ್. ಗೋವಿಂದ ರಾಜು, ಡಾ. ಿನ್ನಸ್ವಾಮಿ ಸೋಸಲೆ ಅವರಿಗೆ, ಅಧ್ಯಯನದ ಆರಂಭದಿಂದ ಅಂತ್ಯದವರೆಗೆ ಜೊತೆಯಲ್ಲಿದ್ದು, ಸಲಹೆ ಸೂಚನೆಗಳನ್ನು ೀಡಿದ ಸ್ನೇಹಿತರಾದ ವಿಜು, ಶುಭ, ಸುಚಿತ್ರಾ, ರಾಧಾ, ವಿಜಯಲಕ್ಷ್ಮಿ, ದೀಪು, ಅನು, ಹನುಮಂತರಾಯ, ದೇವರಾಜ ಮತ್ತು ನನ್ನೆಲ್ಲಾ ಸ್ನೇಹಿತರಿಗೆ.

ವಿಶ್ವವಿದ್ಯಾಲಯದ ಗ್ರಂಥಾಲಯದಿಂದ ಹೆಚ್ಚಿನ ಗ್ರಂಥಗಳ ಸೌಲಭ್ಯ ಒದಗಿಸಿಕೊಟ್ಟ ಗ್ರಂಥಪಾಲಕರಿಗೆ, ಚರಿತ್ರೆ ವಿಭಾಗದ ಬೋಧಕೇತರ ಸಿಬ್ಬಂಧಿಗಳಾದ ಗಂಗಾಧರ, ಸೋಮಶೇಖರ, ಎಸ್. ಕಣವಿ ಅವರಿಗೆ, ಸದಾ ಮಗಳ ಳ್ಗೆಯನ್ನು ಬಯಸುವ ತಂದೆ-ತಾಯಿಯರಾದ ರಾಮಸ್ವಾಮಿ ತೆಲಗಾವಿ ಮತ್ತು ಇಂದ್ರಮ್ಮ ಅವರಿಗೆ, ಚಿಕ್ಕಪ್ಪಂದಿರಿಗೆ, ಣ್ಣ-ತಂಗಿಯರಿಗೆ, ಅಕ್ಕ-ಭಾವಂದಿರಿಗೆ, ಅತ್ತೆ-ಮಾವಂದಿರಿಗೆ, ತಂಗಿ-ತಮ್ಮಂದಿರಿಗೆ ಒಟ್ಟು ನನ್ನ ಕುಟುಂಬ ರ್ಗದವರಿಗೆ.

ಅಕ್ಷರ ಸಂಯೋಜನೆ ಮಾಡಿಕೊಟ್ಟ ಶಿವಕುಮಾರ ಅವರಿಗೆ ಕೃತಜ್ಞತೆಗಳು.

ಆರ್.ಸುಮನ.

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಯನದ ಉದ್ದೇಶ

ಮಧ್ಯಕಾಲೀನ ಜಗತ್ತಿನಲ್ಲಿ ಅನೇಕ ಪರಿವರ್ತನೆಗಳಾಗಿರುವುದು ಸ್ಪಷ್ಟ. ಭೂಶೋಧನೆ, ನವೀನ ಯಂತ್ರಗಳ ಆವಿಷ್ಕಾರ, ಧರ್ಮಸುಧಾರಣೆ ಇತರೇ ಕೆಲವು ಸಂಗತಿಗಳು ಗಮನಾರ್ಹ ಬದಲಾವಣೆ ತಂದಿವೆ. ಭಾರತದಲ್ಲಿ ವಿಶೇಷವಾಗಿ ಈ ಕಾಲಘಟ್ಟವು ರಾಜಪ್ರಭುತ್ವಗಳ ಆಳ್ವಿಕೆಯಿಂದ ಕೂಡಿದ್ದಿತು. ಉತ್ತರ ಭಾರತದಲ್ಲಿ ದೆಹಲಿ ಸುಲ್ತಾನರು ಮತ್ತು ಮೊಗಲ್‌ರ ಆಳ್ವಿಕೆ, ದಕ್ಷಿಣ ಭಾರತದಲ್ಲಿ ದೇವಗಿರಿ ಯಾದವರು, ವಾರಂಗಲ್‌ನ ಕಾಕತೀಯರು ಮತ್ತು ದ್ವಾರಸಮುದ್ರದ ಹೊಯ್ಸಳರು ರಾಜ್ಯಾಳ್ವಿಕೆ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಮಲ್ಲಿಕಾಫರ್, ಮಹಮದ್-ಬಿನ್-ತೊಘಲಕ್ ಮೊದಲಾದವರ ದಾಳಿ ಮತ್ತು ಆಕ್ರಮಣಗಳಿಗೆ ಇವು ತುತ್ತಾಗಿ ಅನೇಕ ಪರಿಣಾಮಗಳನ್ನು ಕಂಡವು. ಇಂಥ ಸಂದಿಗ್ಧ ಕಾಲಘಟ್ಟದಲ್ಲಿ ಕಮ್ಮಟದುರ್ಗದ ನಾಯಕ ಅರಸರು ಆಳ್ವಿಕೆ ನಡೆಸುತ್ತಿದ್ದರು. ಇವರ ಅವಸಾನವೇ ವಿಜಯನಗರ ಸಾಮ್ರಾಜ್ಯಕ್ಕೆ ಅಡಿಗಲ್ಲಾಯಿತು.

ವಿಜಯನಗರ ಸಾಮ್ರಾಜ್ಯವನ್ನು ಕ್ರಿ.ಶ. ೧೩೩೬ರಲ್ಲಿ ಹರಿಹರ ಮತ್ತು ಬುಕ್ಕರು ಸ್ಥಾಪಿಸಿದರು. ಅಂದಿನಿಂದ ಸಂಗಮ, ಸಾಳುವ, ತುಳುವ ಮತ್ತು ಅರವೀಡು ಎಂಬ ನಾಲ್ಕು ವಂಶಗಳು ಆಳ್ವಿಕೆ ನಡೆಸಿವೆ. ಇದರಲ್ಲಿ ತುಳುವ ವಂಶವು ದಕ್ಷಿಣ ಭಾರತವಲ್ಲದೇ ಇಡೀ ಜಗತ್ತಿಗೆ ಖ್ಯಾತಿ ಪಡೆದದ್ದು ಸ್ಪಷ್ಟ. ಅನೇಕ ದೇಶೀಯ ಸಾಹಿತ್ಯ ಹಾಗೂ ವಿದೇಶಿಯ ಯಾತ್ರಿಕರ ಬರವಣಿಗೆಗಳಿಂದ ತಿಳಿಯಬಹು ದಾಗಿದೆ. ಈ ಸಾಮ್ರಾಜ್ಯವು ವೈಭವದಿಂದ ಕೂಡದ್ದು ಸುವರ್ಣಯುಗವಾಗಿತ್ತು ಎಂಬ ಅಭಿಪ್ರಾಯ ಗಳಿವೆ. ಆದರೆ ವಾಸ್ತವವಾಗಿ ಸುವರ್ಣಯುಗ ಎಂಬುದೇ ಈವರೆಗೆ ಇಲ್ಲ. ಈ ಮಟ್ಟಕ್ಕೆ ಕೊಂಡ್ಯೊ ಯಲಿಕ್ಕೆ ಅರಸನೊಂದಿಗೆ ಅರಸಿಯರ ಪಾತ್ರವು ಇಲ್ಲಿ ಸ್ಮರಣೀಯವಾದುದು. ಇಲ್ಲಿ ರಾಣಿಯರು ಎಲೆಮರೆ ಕಾಯಿಯಂತೆ ಈ ಸಾಮ್ರಾಜ್ಯಕ್ಕೆ ತಮ್ಮ ಸೇವೆ ಸಲ್ಲಿಸಿದ್ದಾರೆ. ಇವರಿಂದಲೇ ದೇವಾಲಯಗಳ ನಿರ್ಮಾಣ, ಸಾರ್ವಜನಿಕ ಕಾರ್ಯಗಳು ಜರುಗಿರುವುದು ಇಲ್ಲಿ ಗಮನಾರ್ಹ. ಪುರುಷರಷ್ಟೇ ಅಲ್ಲದೆ ಮಹಿಳೆಯರು ಸಹಾ ವಿಜಯನಗರ ಸಾಮ್ರಾಜ್ಯದಲ್ಲಿ ಸಿಂಹಪಾಲನ್ನು ಪಡೆದಿದ್ದಾರೆ. ಅಂಥವರ ಬಗ್ಗೆ ಎಲ್ಲೂ ಸ್ಪಷ್ಟವಾಗಿ ದಾಖಲೆಯಾಗಿಲ್ಲ.

ರಾಬರ್ಟ್ ಸಿವೆಲ್, ಬಿ. ಸೂರ್ಯನಾರಾಯಣರಾವ್, ಬರ್ಟನ್ ಸ್ಟೈನ್, ಎ.ಎಚ್. ಲಾಂಗ್ ಹರ್ಸ್ಟ್, ಸಿ.ಟಿ.ಎಂ. ಕೊಟ್ರಯ್ಯ, ಡಾ. ಎಸ್. ರಾಜಶೇಖರ್, ಡಾ. ಎಸ್. ಶೆಟ್ಟರ್, ಪಿ. ರಾಮ

ಶರ್ಮ, ಎ.ವಿ. ವೆಂಕಟರತ್ನಂ, ವಸುಂಧರಾ ಫಿಲಿಯೋಜಾ, ಶ್ಯಾಮರಾವ್, ಡಾ. ಯು. ಸೂರ್ಯನಾಥ ಕಾಮತ್, ಎಸ್.ಕೆ. ರಾಮಚಂದ್ರರಾವ್ ಮೊದಲಾದ ಚರಿತ್ರಕಾರರು, ಸಾಹಿತಿಗಳು ಸಾಕಷ್ಟು ಕೃಷಿ ನಡೆಸಿರುವುದು ಸ್ಮರಣೀಯ. ಆದರೆ ಈವರೆಗೆ ವಿಜಯನಗರದ ರಾಣಿಯರ ಕುರಿತು ಯಾರು ಸಮಗ್ರವಾಗಿ ಅಧ್ಯಯನ ಮಾಡಿರುವುದಿಲ್ಲ. ಎನ್. ಸರಸ್ವತಿ ಅವರ 'ದಿ ಪೊಝಿಷನ್ ಆಫ್ ವುಮನ್ ಡುರಿಂಗ್ ವಿಜಯನಗರ ಪಿರಿಯಡ್' ಮತ್ತು 'ವಿಜಯನಗರ ಕಾಲದ ಶಿಲ್ಪದಲ್ಲಿ ಸ್ತ್ರೀಯರು' ಹಾಗೂ ಎಂ.ಬಿ. ಪದ್ಮ ಅವರ 'ವಿಜಯನಗರ ಕಾಲದಲ್ಲಿ ಉದ್ಯೋಗಸ್ಥ ಮಹಿಳೆಯರು' ಎಂಬ ಕೃತಿ ಮತ್ತು ಬಿಡಿ ಲೇಖನಗಳು ರಾಣಿಯರ ಕುರಿತು ಹೊಸ ಬೆಳಕು ಚೆಲ್ಲುತ್ತವೆ. ಹಾಗೆಯೇ ಚೆನ್ನಕ್ಕ ಎಲಿಗಾರ ಅವರ 'ಪ್ರಾಚೀನ ಕರ್ನಾಟಕದ ರಾಣಿಯರು' ಎಂಬ ಕೃತಿಯನ್ನು ಬಿಟ್ಟರೆ ವಿಜಯನಗರ ಕಾಲದ ರಾಣಿಯರ ಕುರಿತು ಪ್ರಸ್ತಾಪ ಇರುವುದು ಕಡಿಮೆ. ವಿಜಯನಗರ ಅಧ್ಯಯನ ಸಂಚಿಕೆಯಲ್ಲಿ ಅನೇಕ ಸಂಗತಿಗಳು ಕುರಿತು ಸಂಶೋಧನೆಗಳು ಆಗಿದ್ದರೂ ಸಹ ವಿಜಯನಗರದ ರಾಣಿಯರ, ಮಹಿಳೆಯರ ಕುರಿತಂತೆ ನಿರ್ಲಕ್ಷ್ಯ ವಹಿಸಿರುವುದು ಸ್ಪಷ್ಟ. ಪ್ರಸ್ತುತವಾಗಿ ವಿಜಯನಗರದ ನಾಲ್ಕು ವಂಶಗಳ ರಾಣಿಯರ ಬಗ್ಗೆ ಪ್ರತ್ಯೇಕ ಅಧ್ಯಯನಗಳು ನಡೆದಿಲ್ಲ. ಈ ಹಿನ್ನೆಲೆಯಲ್ಲಿ ತುಳುವ ಅರಸರ ಕಾಲದ ರಾಣಿಯರನ್ನು ಕುರಿತು ಸಂಶೋಧನೆ ಮಾಡಲು ಪ್ರಸ್ತುತ ವಿಷಯವನ್ನು ಕೈಗೆತ್ತಿ ಕೊಳ್ಳಲಾಗಿದೆ.

ರಾಣಿ ಎಂದರೆ ರಾಜನ ಪತ್ನಿ, ಅರಸಿ, ಚಕ್ರವರ್ತಿನಿ, ಅರಸನ ಹೆಂಡತಿ ಎಂದರ್ಥ. ಇವಳಿಗೆ ಅರಸಿ, ಪಟ್ಟಮಹಿಷಿ, ರಾಣಿ, ಮಹಾರಾಣಿ ಎಂದೆಲ್ಲಾ ಕರೆಯುತ್ತಾರೆ. ಕರ್ನಾಟಕದ ರಾಣಿಯರು ತಮ್ಮದೇ ಆದ ಜೀವನ ಶೈಲಿ ಆಚಾರ, ಸಂಪ್ರದಾಯಗಳನ್ನು ರೂಢಿಸಿಕೊಂಡಿದ್ದಾರೆ. ವಿಜಯನಗರದ ರಾಣಿಯರ ಜೀವನವು ವೈಶಿಷ್ಟ್ಯಪೂರ್ಣವಾಗಿತ್ತು. ರಾಣಿಯರನ್ನು ಕುರಿತು ಸಮಕಾಲೀನ ಕನ್ನಡ, ತೆಲುಗು, ಸಂಸ್ಕೃತದ ಸಾಹಿತ್ಯ ಕೃತಿಗಳು ಬೆಳಕು ಚೆಲ್ಲುತ್ತವೆ. ವಿಜಯನಗರ ಕಾಲದ ಶಾಸನ, ಶಿಲ್ಪ, ವೀರಗಲ್ಲು, ಮಾಸ್ತಿಗಲ್ಲು, ದೇವಾಲಯ, ನಾಣ್ಯ ಇತರೆ ಆಕರಗಳಲ್ಲಿಯೂ ರಾಣಿಯರ ಉಲ್ಲೇಖಗಳಿವೆ. ಮೌಖಿಕ ಆಕರ ಹಾಗೂ ವಿದೇಶಿ ಯಾತ್ರಿಕರ ಬರಹಗಳಲ್ಲಿ ರಾಣಿಯರ ಪ್ರಸ್ತಾಪ ಇರುವುದನ್ನು ಇಲ್ಲಿ ವಿಶ್ಲೇಷಿಸಲಾಗುವುದು. ವಿಜಯನಗರ ಚರಿತ್ರೆಯ ಪುನರ್‌ರಚನೆಯ ಸಂದರ್ಭದಲ್ಲಿ ಮರೆಯಾದ ಇಂಥ ಅನೇಕ ಸಂಗತಿಗಳನ್ನು ಮರು ಅವಲೋಕಿಸಲು ಅಸ್ಪದವಾಗುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ವಿಜಯನಗರದ ಸಂಕ್ಷಿಪ್ತ ಇತಿಹಾಸವನ್ನು ಅವಲೋಕಿಸಲಾಗುವುದು. ಆ ಮೂಲಕ ವಿಜಯನಗರದ ಚರಿತ್ರೆಯಲ್ಲಿ ನಾಲ್ಕು ವಂಶಗಳ ಆಳ್ವಿಕೆ ಮಹಾಪರಿವರ್ತನೆಗಳಲ್ಲಿ ರಾಣಿಯರ ಪಾತ್ರವನ್ನು ಬೆಳಕಿಗೆ ತರುವುದಾಗಿದೆ. ಸಂಗಮ, ಸಾಳುವ ಮತ್ತು ಅರವೀಡು ವಂಶಗಳ ರಾಣಿಯರ ಸಾಧನೆಗಳನ್ನು ಇಲ್ಲಿ ಸ್ಥೂಲವಾಗಿ ಹಾಗೂ ಅನುಕ್ರಮವಾಗಿ ಪಟ್ಟಿಮಾಡಲಾಗುವುದು. ಈ ಮೂರು ವಂಶಗಳ ರಾಮಿಯರಿಗೂ ಇರುವ ಸಾಮ್ಯತೆ ಭಿನ್ನತೆಗಳನ್ನು ತಿಳಿಸಲಾಗುವುದು. ತುಳುವ ವಂಶದ ಉಗಮ ಮತ್ತು ವಿಕಾಸವು ಬಹುಚಾರಿತ್ರಿಕ ಮಹತ್ವವನ್ನು ಹೊಂದಿರುತ್ತದೆ. ಈವರೆಗೆ ಬೆಳಕಿಗೆ ಬಾರದ ತುಳುವ ವಂಶದ ಮೂಲವನ್ನು ಇಲ್ಲಿ ಚರ್ಚಿಸಿ, ತುಳುವ ಪದದ ಪ್ರಾಚೀನತೆಯ ಕುರಿತು ಪುರಾಣ, ಐತಿಹ್ಯ, ದಾಖಲೆಗಳ ಮೂಲಕ ಚಾರಿತ್ರಿಕವಾಗಿ ತಿಳಿಸಲಾಗುವುದು. ದಾಖಲೆಗಳ

ಪ್ರಕಾರ ವೈಜ್ಞಾನಿಕವಾಗಿ ವಿಶ್ಲೇಷಿಸುವುದಾದರೆ ಈಶ್ವರನಾಯಕ, ನರಸನಾಯಕ, ವೀರನರಸಿಂಹ, ಕೃಷ್ಣದೇವರಾಯ ಮತ್ತು ಅಚ್ಯುತರಾಯನ ಸಾಧನೆಗಳನ್ನು ಕುರಿತು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲಾಗುವುದು.

ಈವರೆಗೆ ತುಳುವ ವಂಶದ ರಾಣಿಯರನ್ನು ಕುರಿತು ನಿಖರವಾಗಿ ಎಲ್ಲೂ ಅಧ್ಯಯನಗಳೇ ನಡೆದಿಲ್ಲ. ಹಾಗಾಗಿ ತುಳುವ ವಂಶದ ಚಾರಿತ್ರಿಕ ಹಿನ್ನೆಲೆ ಮೂಲಕ ಆ ರಾಣಿಯರನ್ನು ಕುರಿತು ಸಮಗ್ರವಾಗಿ ಅಧ್ಯಯನ ಮಾಡಲಾಗುವುದು. ತುಳುವ ವಂಶದಲ್ಲಿ ಬರುವ ರಾಣಿಯರೆಂದರೆ: ಬುಕ್ಕಾಂಬೆ, ತಿಪ್ಪಾಂಬೆ, ನಾಗಲಾದೇವಿ, ಓಬಾಂಬೆ, ತಿರುಮಲಾದೇವಿ, ಚಿನ್ನಾದೇವಿ, ಜಗನ್ಮೋಹಿನಿ, ಮೋಹನಾಂಗಿ, ವೇಂಗಳಾಂಬೆ, ಓದುವ ತಿರುಮಲಮ್ಮ ಮತ್ತು ವರದರಾಜಮ್ಮ ಮೊದಲಾದ ರಾಣಿಯರು ಕಂಡು ಬರುತ್ತಾರೆ. ಇವರ ಬಗೆಗಿರುವ ಆಕರಗಳನ್ನು ಬಳಸಿಕೊಂಡು ಇಲ್ಲಿ ಸಮಗ್ರವಾಗಿ ಅಧ್ಯಯನ ಮಾಡುವ ಪ್ರಯತ್ನವಾಗಿದೆ.

ತುಳುವ ವಂಶದ ರಾಣಿಯರೆಲ್ಲರೂ ರಾಜಕುಟುಂಬಕ್ಕೆ ಸೇರಿದವರಲ್ಲ. ಕೆಲವೊಬ್ಬ ರಾಣಿಯರು ಪ್ರಾರಂಭದಲ್ಲಿ ವೇಶ್ಯೆ, ದಾಸಿಯಾಗಿದ್ದು ನಂತರ ಅರಸರ ಪ್ರೋತ್ಸಾಹದಿಂದ ಅರಸಿ ಪಟ್ಟಕ್ಕೆ ಏರಿದ್ದಾರೆ. ಇಂಥ ರಾಣಿಯರು ಯಾರು, ಹೇಗೆ ಅವರು ಅರಸಿಯ ಪಟ್ಟಕ್ಕೆ ಯಾವ ಹಿನ್ನೆಲೆಯಿಂದ ಪ್ರವೇಶ ಪಡೆದ ಬಗ್ಗೆ ವಿಶ್ಲೇಷಿಸಲಾಗುವುದು. ಹೀಗೆ ರಾಣಿಯರ ಮೂಲ, ಹಿನ್ನೆಲೆ ಅನಂತರ ಆಕೆಯೂ ಸಹಾ ಇತರ ರಾಣಿಯರೊಂದಿಗೆ ವಹಿಸಿದ ಪಾತ್ರವನ್ನು ಇಲ್ಲಿ ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗುವುದು.

ಪ್ರಸ್ತುತ ಅಧ್ಯಯನದಲ್ಲಿ ರಾಣಿವರ್ಗದವರು ಕೇವಲ ಅರಮನೆಯ ಅರಗಿಳಿಗಳಾಗಿರಲಿಲ್ಲ. ಅವರು ಸಹಾ ಸಾಮ್ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಪರೋಕ್ಷವಾಗಿ ಕಾರಣೀಭೂತರಾಗಿದ್ದರು. ಜೊತೆಗೆ ಕೆಲವೊಂದು ಸಂದರ್ಭಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಉದಾ. ರಾಜನು ಯುದ್ಧಕ್ಕೆ ಹೊರಡುವಾಗ ಆತನೊಂದಿಗೆ ರಾಣಿಯರು ಸಹಾ ಭಾಗವಹಿಸಿದ್ದರು. ರಾಣಿಯರು ಕಲಿಯುತ್ತಿದ್ದಂಥಹ ವಿದ್ಯೆಗಳಲ್ಲಿ ಪ್ರಮುಖವಾದವು ಸಂಗೀತ, ನೃತ್ಯ ಮುಂತಾದವುಗಳಲ್ಲಿ ವಿಶೇಷ ಪರಿಣಿತಿ ಪಡೆದಿದ್ದರು. ಅಲ್ಲದೇ ತಮ್ಮನ್ನು ತಾವು ಹೆಚ್ಚಾಗಿ ಧಾರ್ಮಿಕ, ಸಾಮಾಜಿಕ, ರಾಜಕೀಯದಲ್ಲಿಯೂ ಸಹಾ ಪಾಲ್ಗೊಂಡ ಅಂಶದ ವಿಶ್ಲೇಷಣೆಯೂ ಇಲ್ಲಿ ಪ್ರಮುಖವಾಗಿದೆ. ಇಲ್ಲಿ ರಾಣಿಯರು ತಮ್ಮದೇ ಆದ ಗೌರವ ಭಾವನೆ, ಪೂಜ್ಯತೆಯನ್ನು ತಮ್ಮ ಪುತ್ರರಿಂದ ಕಿರಿಯರಿಂದ ಪಡೆಯುತ್ತಿದ್ದರು. ಈ ಕಿರಿಯರಿಂದಲೇ ಇವರನ್ನು ಪ್ರತ್ಯೇಕವಾಗಿ ನೋಡುವ ಪ್ರಯತ್ನವನ್ನು ಮಾಡಲಾಗಿದೆ. ಅಲ್ಲದೇ ರಾಣಿಯರ ಹೆಸರಿನಲ್ಲಿ ನಿರ್ಮಿಸಿದ ಕೆರೆ, ಪಟ್ಟಣ ಇತ್ಯಾದಿಗಳಿಗೆ ಇವರು ಹೆಸರಿನಿಂದ ನಿರ್ಮಿಸಿದ ಕಾರಣ ಬೀರಿದ ಪ್ರಭಾವವನ್ನು ಪ್ರಸ್ತುತವಾಗಿ ನೋಡಲಾಗುವುದು. ರಾಣಿಯರ ಜೀವನವು ಆರ್ಥಿಕವಾಗಿ ವೈಭೋಗದಿಂದ ಕೂಡಿತ್ತು. ಅದೇ ರೀತಿ ಸಾಮಾನ್ಯ ಮಹಿಳೆಯರ ಜೀವನವು ಹೀನಾಯವಾಗಿತ್ತು. ಸಾಮಾನ್ಯ ಮಹಿಳೆಯರು ಸಹಾ ಅಂದು ಹಲವಾರು ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ರಾಣಿಯರ ಹಾಗೂ ಸಾಮಾನ್ಯ ಮಹಿಳೆಯರ ಕುರಿತು ಹೋಲಿಕೆ ಮತ್ತು ಭಿನ್ನತೆಯನ್ನು ಬಿಡಿಬಿಡಿಯಾಗಿ ಅಧ್ಯಯನ ಮಾಡುವ ಮತ್ತು ಸೂಕ್ಷ್ಮವಾಗಿ ನೋಡುವ ಪ್ರಯತ್ನ ಈ ಅಧ್ಯಯನದ ಉದ್ದೇಶವಾಗಿದೆ.

[illegible]

ಒಟ್ಟಾರೆಯಾಗಿ ತುಳುವ ವಂಶವು ವಿಜಯನಗರ ಸಾಮ್ರಾಜ್ಯದ ನಾಲ್ಕು ವಂಶಗಳಲ್ಲಿ ಅತ್ಯಂತ ಖ್ಯಾತಿ ಹಾಗೂ ಪ್ರಗತಿಗೆ ಶ್ರಮಿಸಿದ್ದಾಗಿದೆ. ಇಂಥ ವಂಶದಲ್ಲಿ ಕೇವಲ ಅರಸರ ಪಾತ್ರ ಮುಖ್ಯವಾಗಿ ರುವುದರ ಜೊತೆಗೆ ಅಂದು ಅರಸಿಯರು ಸಹಾ ಪ್ರಮುಖವಾಗಿ ಪಾತ್ರವಹಿಸಿದ್ದರು. ರಾಣಿಯರ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನ ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಪ್ರಸ್ತುತ ನಿಬಂಧವನ್ನು ಏಳು ಅಧ್ಯಯನಗಳಲ್ಲಿ ವಿಂಗಡಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಯನದ ವಿವರ ಇಂತಿದೆ.

ಮೊದಲನೆಯ ಅಧ್ಯಯನದಲ್ಲಿ, ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನವನ್ನು ತಿಳಿಸಲಾಗಿದೆ. ವಿಜಯನಗರದ ಆಮೂಲಕ ನಾಲ್ಕು ವಂಶಗಳಲ್ಲಿ ತುಳುವ ವಂಶವು ಪ್ರಖ್ಯಾತಿ ಪಡೆದಿದ್ದು ನಿಜ. ಈ ವಂಶದಲ್ಲಿ ಹೆಚ್ಚಾಗಿ ಪುರುಷ ಕೇಂದ್ರಿತ ಅಧ್ಯಯನಗಳಾಗಿರುವುದೇ ಹೆಚ್ಚು. ಹಲವಾರು ವಿಚಾರಗಳ ಕುರಿತು ಅಧ್ಯಯನಗಳಾಗಿದ್ದರು ಸಹ ರಾಣಿಯರ ಕುರಿತು ದಿವ್ಯ ನಿರ್ಲಕ್ಷ್ಯ ವಹಿಸಿರುವುದು ಸ್ಪಷ್ಟ ಸಂಗತಿ. ಹಾಗಾಗಿ ಇಲ್ಲಿ ರಾಣಿಯರ ಕುರಿತಾದ ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವಿಧಾನವನ್ನು ಸ್ಪಷ್ಟವಾಗಿ ವಿಶ್ಲೇಷಿಸಲಾಗಿದೆ.

ಎರಡನೆಯ ಅಧ್ಯಯನದಲ್ಲಿ, ವಿಜಯನಗರ ಸಾಮ್ರಾಜ್ಯದ ಸ್ಥಾಪನೆ, ಆಳ್ವಿಕೆಯ ಕುರಿತು ಸಂಕ್ಷಿಪ್ತವಾಗಿ ತಿಳಿಸುತ್ತಾ ಇಲ್ಲಿ ಆಳ್ವಿಕೆ ನಡೆಸಿದ ನಾಲ್ಕು ವಂಶಗಳಲ್ಲಿ ಮೂರು ವಂಶಗಳಾದ ಸಂಗಮ, ಸಾಳುವ, ಅರವೀಡು ವಂಶಗಳ ರಾಣಿಯರ ಕುರಿತು ಸೂಕ್ಷ್ಮವಾದ ಪರಿಚಯವನ್ನು ತಿಳಿಸುವ ಉದ್ದೇಶವಿದೆ.

ತುಳುವ ವಂಶದ ಹಿನ್ನೆಲೆ, ತುಳುವ ವಂಶದವರ ಹೆಸರೇ ಸೂಚಿಸುವಂತೆ ತುಳು ದೇಶ ಅಂದರೆ ಉತ್ತರ ಕನ್ನಡದ ಭಾಗದಿಂದ ಬಂದವರೆಂಬ ವಾದವನ್ನು ಆನೇಕ ವಿದ್ವಾಂಸರ ಹೇಳಿಕೆಗಳನ್ನು ಆಧರಿಸಿ ವಿಶ್ಲೇಷಿಸಲಾಗಿದೆ. ಅಲ್ಲದೇ ಈ ವಂಶದ ರಾಜರುಗಳು ಸ್ಥಾಪಿಸಿದ ಸಾಮ್ರಾಜ್ಯದ ಆಳ್ವಿಕೆ ಬಗ್ಗೆ ಬೆಳಕು ಬೀರುವ ಪ್ರಯತ್ನ ಮೂರನೆಯ ಅಧ್ಯಯನದಲ್ಲಿ, ಮಾಡಲಾಗಿದೆ.

ನಾಲ್ಕನೆಯ ಅಧ್ಯಯನದಲ್ಲಿ, ತುಳುವ ಅರಸರ ರಾಣಿಯರ ಕುರಿತಂತೆ ಹನ್ನೊಂದು ಜನ ರಾಣಿಯರನ್ನು ಗುರುತಿಸಲಾಗಿದ್ದು, ಅವರ ಮೂಲ ಹಿನ್ನೆಲೆ, ಸಾಮ್ರಾಜ್ಯದಲ್ಲಿ ಇವರ ಪ್ರಾಮುಖ್ಯತೆಗಳನ್ನು ರಾಣಿಯರು ಅರಸರೊಂದಿಗೆ ವಹಿಸಿದ ಪಾತ್ರದ ಬಗ್ಗೆ ವಿಶ್ಲೇಷಿಸಲಾಗಿದೆ.

ತುಳುವ ಅರಸರ ರಾಣಿಯರು ತಮ್ಮನ್ನು ರಾಜಕೀಯ, ಧಾರ್ಮಿಕ, ಸಾಹಿತ್ಯ, ಕಲೆ ವಾಸ್ತುಶಿಲ್ಪ ಹಾಗೂ ಇತರೆ ಕ್ಷೇತ್ರಗಳಿಗೆ ಅರ್ಪಿಸಿಕೊಂಡು ನೀಡಿದ ಕೊಡುಗೆ ಹಾಗೂ ಭಾಗವಹಿಸಿದ ಸಾಂಸ್ಕೃತಿಕ ಚಟುವಟಿಕೆಗಳ ಪರಿಚಯವನ್ನು ಐದನೆಯ ಅಧ್ಯಯನದಲ್ಲಿ, ವಿವೇಚಿಸಲಾಗಿದೆ.

ಆರನೆಯ ಅಧ್ಯಯನವು ತುಳುವ ಅರಸರ ರಾಣಿಯರು ಹಾಗೂ ಆ ಕಾಲದ ಸಾಮಾನ್ಯ ಮಹಿಳೆಯರ ಸ್ಥಿತಿಗತಿ ಕುರಿತಂತೆ ವಿವರಿಸುವ ಪ್ರಯತ್ನವಿದೆ. ಅಂದರೆ ಇವರ ನಡುವಿನ ಜೀವನ ಶೈಲಿ ಅನೇಕ ಆಚರಣೆಗಳಲ್ಲಿ, ಉಡುಗೆ ತೊಡುಗೆಗಳಲ್ಲಿ ಸಾಕಷ್ಟು ಭಿನ್ನತೆಯನ್ನು ಕಾಣಬಹುದು. ಆ ಭಿನ್ನತೆಗಳ ತೌಲನಿಕ ಅಧ್ಯಯನದ ವಿವರಣೆಯನ್ನು ಈ ಅಧ್ಯಯನ ಒಳಗೊಂಡಿದೆ.

ಏಳನೆಯ ಅಧ್ಯಯನವು ಸಮಾರೋಪವಾಗಿದ್ದು, ಆರು ಅಧ್ಯಾಯಗಳಿಂದ ಹೊರಹೊಮ್ಮಿದ ಫಲಿತಗಳನ್ನು ವಿಶ್ಲೇಷಣೆ ಮಾಡಲಾಗುವುದು. ಅನುಬಂಧದಲ್ಲಿ ಛಾಯಾಚಿತ್ರ, ಗ್ರಂಥಋಣವನ್ನು ತಿಳಿಸಲಾಗುವುದು. ಒಟ್ಟಾರೆ ತುಳುವ ಅರಸರ ಕಾಲದ ರಾಣಿಯರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನವೊಂದು ಚರಿತ್ರೆ ಪುಟಗಳಲ್ಲಿ ಮರೆಯಾಗಿದ್ದು, ಅದನ್ನು ಕಟ್ಟಿಕೊಡುವ ಪ್ರಯತ್ನ ಇದಾಗಿದೆ.

ಅಧ್ಯಯನದ ವಿಧಾನ

ಸಮಾಜ ವಿಜ್ಞಾನಗಳಲ್ಲಿ ಚರಿತ್ರೆ ಕ್ಷೇತ್ರ ದೊಡ್ಡದು. ಇಲ್ಲಿ ಅನೇಕ ವಿಧದ ಮಾಹಿತಿಗಳು ಬೇರೆ ಬೇರೆ ರೂಪದಲ್ಲಿ ವ್ಯಕ್ತವಾಗಿರುತ್ತವೆ. ಹಾಗಾಗಿ ಪ್ರಸ್ತುತ ಅಧ್ಯಯನದಲ್ಲಿ ರಾಣಿಯರ ಕುರಿತು ಸಮಾಜ ವಿಜ್ಞಾನ ಕ್ಷೇತ್ರದ ಸಂಶೋಧನಾ ವಿಧಿ-ವಿಧಾನಗಳನ್ನು ಅನುಸರಿಸಲಾಗಿದ್ದು ಸೂಕ್ತವಾಗಿದೆ. ಚರಿತ್ರೆ ವಿಧಾನದ ಕಾಲ, ಘಟನೆ, ಸಂದರ್ಭ, ಕಾರಣ, ಪರಿಣಾಮಗಳ ಹಿನ್ನೆಲೆಯಲ್ಲಿ ಕಾಲಾನುಕ್ರಮಾಣಿಕೆಯನ್ನು ಅನುಸರಿಸಲಾಗಿದೆ. ತುಳುವ ವಂಶದ ಅರಸರ ಆಳ್ವಿಕೆಯ ಕಾಲದಲ್ಲಿನ ಸಮಕಾಲೀನ ಸಾಹಿತ್ಯ ಕೃತಿಗಳಲ್ಲಿ ಶ್ರೀಕೃಷ್ಣದೇವರಾಯನ 'ಅಮುಕ್ತಮಾಲ್ಯದ', ಕನಕದಾಸರ 'ಮೋಹನ ತರಂಗಿಣಿ' ಇತರ ಕೃತಿಗಳನ್ನು, ಜೊತೆಗೆ ವಿದೇಶಿ ಪ್ರವಾಸಿಗರಾದ ಬಾರ್ಬೋಸಾ, ನ್ಯೂನಿಜ್, ಡೋಮಿಂಗೋ ಪಾಯಸ್ ಅವರ ಹೇಳಿಕೆಗಳನ್ನು, ಎಚ್.ಎಲ್. ನಾಗೇಗೌಡರ 'ಪ್ರವಾಸಿ ಕಂಡ ಇಂಡಿಯ ಸಂಪುಟ-೨' ಹಾಗೂ ಬಿ.ಎ. ವಿವೇಕ ರೈ ಅವರ 'ಪ್ರವಾಸಿ ಕಂಡ ವಿಜಯನಗರ' ಮೊದಲಾದ ಬರವಣಿಗೆಗಳನ್ನು ಕುರಿತು ಸೂಕ್ಷ್ಮವಾಗಿ ಮಾಹಿತಿಗಳನ್ನು ಕಲೆಹಾಕಲಾಗಿದೆ. ಅಲ್ಲದೇ ಸಮಕಾಲೀನ ಸಂದರ್ಭದಲ್ಲಿ ಎನ್. ಸರಸ್ವತಿ ಅವರ 'ದಿ ಪೊಸಿಷನ್ ಆಫ್ ವುಮನ್ ಡೂರಿಂಗ್ ವಿಜಯನಗರ ಪಿರಿಯಡ್' ಹಾಗೂ ಇನ್ನಿತರ ಇವರ ಬಿಡಿಬಿಡಿಯಾದ ಲೇಖನಗಳನ್ನು ಹಾಗೂ ಅನೇಕ ಪ್ರಕಟಿತ, ಅಪ್ರಕಟಿತ ಲೇಖನ, ಗ್ರಂಥಗಳನ್ನು ಮೌಖಿಕ ಸಾಹಿತ್ಯ, ಶಿಲ್ಪ, ಕಥನ ಇವುಗಳಲ್ಲದೆ, ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕಾಲ, ಘಟನೆ, ವಸ್ತು, ವಿಷಯ ಹೀಗೆ ರಾಣಿಯರ ಚಾರಿತ್ರಿಕ ಸಂದರ್ಭಗಳನ್ನು ಕಾಲಾನುಕ್ರಮವಾಗಿ, ಸೂಕ್ತವಾಗಿ ಅಧ್ಯಯನ ಮಾಡಲಾಗಿದೆ. ಪ್ರಾಥಮಿಕ ಆಕರ, ಅನುಷಂಗಿಕ ಆಕರಗಳಲ್ಲದೆ, ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮೌಖಿಕ ವಿವರಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಅಗತ್ಯಕ್ಕೆ ತಕ್ಕಂತೆ ಕೊನೆಟಿಪ್ಪಣಿಗಳನ್ನು ಕೊಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ವಿಜಯನಗರದ ತುಳುವ ಅರಸರ ರಾಣಿಯರನ್ನು ಕುರಿತದ್ದು. ಇಲ್ಲಿ ತುಳುವ ಅರಸರಾದ ಈಶ್ವರನಾಯಕ, ನರಸನಾಯಕ, ವೀರನರಸಿಂಹ, ಕೃಷ್ಣದೇವರಾಯ ಮತ್ತು ಅಚ್ಯುತರಾಯನ ಆಡಳಿತ ಅವಧಿಯಲ್ಲಿನ ರಾಣಿಯರಾದ ಬುಕ್ಕಾಂಬೆ, ತಿಪ್ಪಾಂಬೆ, ನಾಗಲಾದೇವಿ, ಒಬಾಂಬೆ, ತಿರುಮಲಾದೇವಿ, ಚಿನ್ನಾದೇವಿ, ಜಗನ್ಮೋಹಿನಿ, ಮೋಹನಾಂಗಿ, ವೆಂಗಳಾಂಬೆ, ವರದಾದೇವಿ, ಓದುವ ತಿರುಮಲಮ್ಮ ಇವರ ಕುರಿತ ಅಧ್ಯಯನವಾಗಿದೆ. ಅಂದರೆ ಕ್ರಿ.ಶ. ೧೪೯೦ ರಿಂದ ಕ್ರಿ.ಶ. ೧೫೪೨ರ ಅವಧಿಯನ್ನು ಸೀಮಿತಗೊಳಿಸಿಕೊಂಡು ಈ ಅವಧಿಯಲ್ಲಿ ಬರುವ ರಾಣಿಯರ ಬಗ್ಗೆ ಸೂಕ್ಷ್ಮವಾದ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಅಂದರೆ ಕ್ರಿ.ಶ. ೧೪೯೦ ರಿಂದ ಕ್ರಿ.ಶ. ೧೫೪೨ರ ಅವಧಿಯನ್ನು ಸೀಮಿತಗೊಳಿಸಿಕೊಂಡು ಈ ಅವಧಿಯಲ್ಲಿನ ರಾಣಿಯರು ಮತ್ತು ಸಾಮಾನ್ಯ ಮಹಿಳೆಯರನ್ನು ಕುರಿತು ಹೊಸ ಬೆಳಕು ಚೆಲ್ಲುವ ಉದ್ದೇಶವಿದೆ.

ಅಧ್ಯಾಯ ೨

ವಿಜಯನಗರದ ಸಾಮ್ರಾಜ್ಯದ ಸಂಕ್ಷಿಪ್ತ ಇತಿಹಾಸ

೨.೧. ಸಂಗಮ ವಂಶದ ರಾಣಿಯರು

೨.೨. ಸಾಳುವ ವಂಶದ ರಾಣಿಯರು

೨.೩. ಅರವೀಡು ವಂಶದ ರಾಣಿಯರು

ವಿಜಯನಗರ ಸಾಮ್ರಾಜ್ಯದ ಸಂಕ್ಷಿಪ್ತ ಇತಿಹಾಸ

೨.೧. ವಿಜಯನಗರ ಸಾಮ್ರಾಜ್ಯದ ಸಂಕ್ಷಿಪ್ತ ಇತಿಹಾಸ

ವಿಜಯನಗರ ಸಾಮ್ರಾಜ್ಯವು ಭಾರತದ ಇತಿಹಾಸದಲ್ಲಿಯೇ ರಾಜ್ಯಾಳ್ವಿಕೆಯ ಕಾರಣಗಳಿಂದಾಗಿ ಚಾರಿತ್ರಿಕ ಮಹತ್ವ ಪಡೆದಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಒಟ್ಟು ನಾಲ್ಕು ಮನೆತನಗಳು ಕ್ರಿ.ಶ. ೧೩೩೬ ರಿಂದ ೧೬೪೬ರ ವರೆಗೆ ಆಳ್ವಿಕೆ ನಡೆಸಿರುತ್ತವೆ. ಸಂಗಮ, ಸಾಳ್ವ, ತುಳುವ ಮತ್ತು ಅರವೀಡು ವಂಶಗಳಲ್ಲಿ ಹೆಚ್ಚಾಗಿ ತುಳುವ ವಂಶದ ಆಳ್ವಿಕೆಯಲ್ಲಿ ಈ ಸಾಮ್ರಾಜ್ಯ ಅತಿ ಪ್ರಖ್ಯಾತಿ ಪಡೆಯಲು ಕಾರಣವಾಗಿದೆ. ಈ ಸಾಮ್ರಾಜ್ಯವು ಸಂಪತ್ತು, ಸಮೃದ್ಧಿಗಳಿಂದ ಕೂಡಿ ಆಳ್ವಿಕೆ ನಡೆಸಲು ಸಂಗಮ ವಂಶದ ಕಾಣಿಕೆ ಅಪಾರ. ಈ ಸಾಮ್ರಾಜ್ಯವು 'ಹಂಪೆ'ಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿತು.[೧] ಈ ವಿಜಯನಗರಕ್ಕೆ ನಾನಾ ಹೆಸರುಗಳಿಂದಲೂ ಕರೆಯುತ್ತಾರೆ. ಮುಖ್ಯವಾಗಿ ವಿರೂಪಾಕ್ಷ ಪಾದ, ವಿರೂಪಾಕ್ಷ ಪಟ್ಟಣ, ಹೊಸಪಟ್ಟಣ, ವಿದ್ಯಾನಗರ, ವಿರೂಪಾಕ್ಷಪುರ ಎಂದು ಕಾವ್ಯದಲ್ಲಿ ಪಂಪಾತೀರ್ಥ, ಭಾಸ್ಕರ ಕ್ಷೇತ್ರ, ಪಂಪಾವರ ಕ್ಷೇತ್ರ, ಭುವನತ್ರಯೈಕಹಿತ ಮೊದಲಾದ ಹೆಸರುಗಳಿಂದ ಹಂಪೆ ತನ್ನ ಚರಿತ್ರೆಯನ್ನು ಇತಿಹಾಸದಲ್ಲಿ ಸ್ಥಿರಗೊಳಿಸಿಕೊಂಡಿದೆ.[೨]

ಹಂಪೆಯಲ್ಲಿ ಪ್ರಾಗೈತಿಹಾಸಿಕ ಕುರುಹುಗಳು ಕಂಡುಬರುತ್ತವೆ. ಈ ಪ್ರದೇಶವು ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಮಹತ್ವ ಪಡೆದಿದೆ. ಮುಖ್ಯವಾಗಿ ಧಾರ್ಮಿಕ ಸಾಮರಸ್ಯವನ್ನು, ಸಮನ್ವಯತೆಯನ್ನು ಎತ್ತಿಹಿಡಿಯುವ ಪ್ರೇಕ್ಷಣೆಯ ಸ್ಥಳವಾಗಿ ಪರಿವರ್ತನೆಗೊಂಡಿರುವುದನ್ನು ಕಾಣಬಹುದು. ಮೌರ್ಯರ ಕಾಲದಿಂದ ಆಧುನಿಕ ಮೈಸೂರಿನ ಒಡೆಯರು, ನಾಯಕರು, ಪಾಳೆಯಗಾರರು ಈ ಪ್ರದೇಶದಲ್ಲಿ ಆಳ್ವಿಕೆಯನ್ನು ನಡೆಸಿದ್ದಾರೆ. ಆದರೆ ವಿಜಯನಗರ ಕಾಲದ ಅರಸರಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯಿತು. ಇದು ಮುಖ್ಯವಾಗಿ ವೈಭೋಗ ಜೀವನ ಸಾಹಿತ್ಯದ ಕೊಡುಗೆ, ಕಲೆ, ವಾಸ್ತುಶಿಲ್ಪ ಧಾರ್ಮಿಕ ಕಾರಣಗಳಿಂದಾಗಿ ವಿಜಯನಗರವು ತನ್ನದೇ ಆದ ಕೊಡುಗೆ ನೀಡಿರುವುದು ಸ್ಪಷ್ಟ. ಈ ಸಮಯದಲ್ಲಿ ಸಾಮ್ರಾಜ್ಯದ ವೀಕ್ಷಣೆಗಾಗಿ ದೇಶ-ವಿದೇಶಗಳಿಂದ ಪ್ರವಾಸಿಗರು ಭೇಟಿ ನೀಡಿದ್ದರು. ಅವರುಗಳಲ್ಲಿ ಮುಖ್ಯವಾಗಿ ಅಬ್ದುಲ್ ರಜಾಕ್, ನ್ಯೂನಿಜ್, ಡೋಮಿಂಗೋ ಪಯಾಸ್‌ರವರು ಪ್ರಮುಖರು. ಈ ಸಾಮ್ರಾಜ್ಯ ಕುರಿತು ಪೋರ್ಚುಗೀಸ್ ಪ್ರವಾಸಿಗರಾದ ಡೋಮಿಂಗೋ ಪಯಾಸ್ ವಿಜಯನಗರ ಕುರಿತು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ. ರೋಮ್ ನಗರದಷ್ಟು ದೊಡ್ಡದಾಗಿದ್ದು, ನೋಡುವುದಕ್ಕೆ ಬಹಳ ಸುಂದರವಾಗಿದೆ. ಪ್ರಪಂಚದಲ್ಲಿಯೇ ಇದಕ್ಕಿಂತ ಸಂಪತ್ಸಮೃದ್ಧಿಯುಳ್ಳ ಪಟ್ಟಣ ಮತ್ತೊಂದಿಲ್ಲ ಎಂದು ಅಭಿಪ್ರಾಯ ಪಟ್ಟಿರುವುದರಿಂದ ಅಂದಿನ ವಿಜಯನಗರ ಕುರಿತು ಇರುವಂತಹ ಸ್ಥಿತಿಯ ಬಗ್ಗೆ ಪರಿಚಯ ನೀಡುತ್ತದೆ.[೩]

ವಿಜಯನಗರ ಸಾಮ್ರಾಜ್ಯವು ಅನೇಕ ಪ್ರವಾಸಿಗರನ್ನು, ಸಂಶೋಧಕರನ್ನು, ಸಾಹಿತ್ಯಾಸಕ್ತರನ್ನು, ಭೂವಿಜ್ಞಾನಿಗಳನ್ನು ಆಕರ್ಷಿಸಿ ಹೊಸ ಹೊಸ ತರಹದ ಚಿಂತನೆಗೆ ಇದು ಅವಕಾಶ ನೀಡುತ್ತಿದೆ. ಈ ಸಾಮ್ರಾಜ್ಯವನ್ನು ಕುರಿತು ಮೊಟ್ಟಮೊದಲಿಗೆ ಬೆಳಕು ಚೆಲ್ಲಿದವರು. ವಿದೇಶಿ ವಿದ್ವಾಂಸರಾದ ರಾಬರ್ಟ್ ಸಿವೆಲ್‌ರವರು 'A Forgotton Empire' (೧೯೦೦) 'ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ' (೧೯೯೨) ಎಂಬ ಕೃತಿ ರಚಿಸಿ ಇದರ ಮಹತ್ವದ ಬಗ್ಗೆ ತಿಳಿಸಿದ್ದಾರೆ. ನಂತರ ಈ ವಿಜಯನಗರ ಕುರಿತು ಅನೇಕ ವಿದ್ವಾಂಸರು ಕೆಲಸ ಮಾಡಿರುವುದು ಕಾಣಬಹುದು. ಅದರಲ್ಲಿ ಮುಖ್ಯವಾಗಿ ಬಿ. ಸೂರ್ಯನಾರಾಯಣರಾವ್ (೧೯೦೫) 'ಎ ಹಿಸ್ಟರಿ ಆಫ್ ವಿಜಯನಗರ ದಿ ನೆವರ್ ಟು ಬೀ ಫರ್ ಗಾಟನ್ ಎಂಪೈರ್' ಎಂಬ ಕೃತಿ ರಚಿಸಿದ್ದಾರೆ. ಕೆ. ಈಶ್ವರ ದತ್ತ (೧೯೨೮) 'ಜೀರ್ಣ ವಿಜಯನಗರ ಚರಿತ್ರೆ', ಪಿ.ಬಿ. ದೇಸಾಯಿ (೧೯೩೬) 'ವಿಜಯನಗರ ಸಾಮ್ರಾಜ್ಯ', ಓ. ರಾಮಚಂದ್ರಯ್ಯನವರ 'ಸ್ಟಡೀಸ್ ಅಂಡ್ ಕೃಷ್ಣದೇವರಾಯ ಆಫ್ ವಿಜಯನಗರ' ಹೀಗೆ ಹಲವು ಪ್ರಮುಖ ಕೃತಿಗಳನ್ನು ರಚಿಸಿದರು. ಕೆ. ವೆಂಕಟರಾಮಪ್ಪನವರ 'ಶ್ರೀಕೃಷ್ಣದೇವರಾಯನ ಕಾಲದ ಕರ್ನಾಟಂದ್ರ ಸಾಹಿತ್ಯ ಸಮೀಕ್ಷೆ' (೧೯೭೪), ಸಿ.ಟಿ.ಎಂ. ಕೊಟ್ರಯ್ಯ 'ವಿಜಯನಗರ ಕಾಲದ ನೀರಾವರಿ', ಕೆ.ಎಸ್. ಶಿವಣ್ಣನವರು ಸಂಪಾದಿಸಿರುವ 'ಸಮಗ್ರ ಕರ್ನಾಟಕದ ಚರಿತ್ರೆ', ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಚೆಲುವರಾಜ 'ಹಂಪಿ ಜಾನಪದ' ಹೀಗೆ ಹಲವು ಕೃತಿಗಳು ವಿಜಯನಗರ ಸಾಮ್ರಾಜ್ಯದ ಇತಿಹಾಸ ಕುರಿತು ಬೆಳಕು ಚೆಲ್ಲುತ್ತವೆ.

ವಿಜಯನಗರ ಕುರಿತು ಇಂದು ಸಾಬಾಲ್ಟರ್ನ, ಮಾರ್ಕ್ಸ್‌ವಾದ, ವಾಸ್ತವ ನೆಲೆಯಲ್ಲಿನ ಸಿದ್ಧಾಂತ ಮತ್ತು ವಾದಗಳ ಮೂಲಕ ಮರೆಯಾದ ಚರಿತ್ರೆಗೆ ನ್ಯಾಯ ಒದಗಿಸಲು ಪ್ರಯತ್ನ ನಡೆಸಲಾಗಿದೆ. ಈ ಸಾಮ್ರಾಜ್ಯದಲ್ಲಿ ತುಳಿತಕ್ಕೆ ಒಳಗಾದವರು, ಶೋಷಣೆಗೆ ಒಳಪಟ್ಟ ಮಹಿಳೆಯರು, ಗುಲಾಮ ಪದ್ಧತಿ, ಬಾಲಕಾರ್ಮಿಕರು, ದೇವದಾಸಿಯರು, ಸತಿ ಸಹಗಮನ, ನರಬಲಿ, ಪ್ರಾಣಿಬಲಿ, ಬೇಟೆ ಮತ್ತು ಮೊದಲಾದ ಅನಿಷ್ಟ ಪದ್ಧತಿಗಳ ಕುರಿತು ಅಧ್ಯಯನ ನಡೆದಿದೆ.

ವಿಶ್ವವಿಖ್ಯಾತವಾದ ಪುರಾತನ ಪಟ್ಟಣಕ್ಕೆ ಹೊರದೇಶದಿಂದ ಪ್ರವಾಸಿಗರು, ವ್ಯಾಪಾರಿಗಳು ಬಂದು ಹೋಗಿರುವ ವರದಿಗಳ ಆಧಾರದಿಂದಲೂ ಶಾಸನ/ಆಕರ ಸಾಹಿತ್ಯದಿಂದಲೂ ಲಭಿಸಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿ ಅನೇಕ ವಿದ್ವಾಂಸರು ಸಲ್ಲಿಸುತ್ತಿರುವ ಸೇವೆ ಚಿರಸ್ಮರಣೀಯ. ಇತ್ತೀಚಿಗೆ ಹತ್ತು-ಹದಿನೈದು ವರ್ಷಗಳಿಂದ ಅಮೇರಿಕಾ, ಇಂಗ್ಲೆಂಡ್, ಭಾರತ ಇತರ ದೇಶಗಳ ವಿಶ್ವವಿದ್ಯಾಲಯ ಅಧ್ಯಯನ ಕೇಂದ್ರಗಳಿಂದ ಬಂದ ಸಂಶೋಧನಾ ತಂಡಗಳು ವಿಜಯನಗರದ ಅಧ್ಯಯನದಲ್ಲಿ ತೊಡಗಿರುವುದು ಈ ಸಾಮ್ರಾಜ್ಯದ ಪ್ರಖ್ಯಾತಿಯನ್ನು ತಿಳಿಸುತ್ತದೆ.

ಒಟ್ಟಾರೆಯಾಗಿ ವಿಜಯನಗರದ ಕುರಿತು ಆಧುನಿಕ ಕಾಲದಲ್ಲಿಯೇ ಹೆಚ್ಚಾಗಿ ಸಂಶೋಧಕರು, ಸಾಹಿತ್ಯಾಸಕ್ತರು, ಭೂವಿಜ್ಞಾನಿಗಳು ಹೊಸ ಹೊಸ ತರಹದ ಚಿಂತನೆಗೆ ಅವಕಾಶ ಮಾಡಿಕೊಡುತ್ತಾರೆ. ಈಗಾಗಲೇ ಅನೇಕ ಅಲಕ್ಷಿತ ಕ್ಷೇತ್ರ, ಸಂಗತಿಗಳನ್ನು ಕುರಿತು ಅಧ್ಯಯನ ನಡೆಸಿದ್ದರೂ ಸಹಾ ಇನ್ನು ಇದರ ಮೇಲೆ ಐತಿಹಾಸಿಕ ಮಹತ್ವ ನೀಡುವ ವಿಚಾರ ಸಂಗತಿಗಳ ಚರಿತ್ರೆಯಾಗಿ ಹೊಳೆಯುತ್ತವೆ. ವಿಜಯನಗರವು ಮಹತ್ವ ಪಡೆದಿದೆ.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆ

೧೪ನೇ ಶತಮಾನದ ಮೊದಲ ಮೂರು ದಶಕಗಳು ದಖ್ಖನ್ ಮತ್ತು ದಕ್ಷಿಣ ಭಾರತದ ಇತಿಹಾಸದ ಒಂದು ಪ್ರಮುಖ ಘಟ್ಟ. ಬಹುಕಾಲದಿಂದಲೂ ನಿರಂತರವಾಗಿ ಅನ್ಯರ ದಾಳಿಯ ಪರಿಣಾಮದಿಂದ ರಾಜಕೀಯ ಸ್ವಾವಲಂಬನೆ, ಧಾರ್ಮಿಕ ಸ್ವಾತಂತ್ರ್ಯ ಪರಾಧೀನತೆ, ಧಾರ್ಮಿಕ ಜೀವನದ ಅಸ್ಥಿರತೆ ಮತ್ತು ಸಾಂಸ್ಕೃತಿಕ ಹಿನ್ನೆಡೆಗಳು ಕಂಡುಬಂದು, ಅನ್ಯರ ದಾಳಿಯ ದಿಗ್ವಿಜಯದಿಂದ ಬಲಾತ್ಕಾರವಾಗಿ ಹೇರಲ್ಪಟ್ಟ ಅಧಿಕಾರದ ಮುಂದುವರಿಕೆಯ ಈ ಸಂದರ್ಭದಲ್ಲಿ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ರಕ್ಷಣೆಯನ್ನು ಸಂರಕ್ಷಿಸುವ ಹಾಗೂ ಅನ್ಯರ ದಾಳಿಯನ್ನು ತಡೆಗಟ್ಟಲು ಸ್ಥಾಪನೆಯಾದ ಸಾಮ್ರಾಜ್ಯವೇ ವಿಜಯನಗರಯಾಗಿದೆ.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಅನೇಕ ಕಾರಣಗಳಿವೆ. ಉತ್ತರ ಭಾರತದಿಂದ ಮುಸ್ಲಿಂ ದಾಳಿ ತಡೆಗಟ್ಟುವ ಸಲುವಾಗಿ ಈ ಸಾಮ್ರಾಜ್ಯ ಉದಯವಾಗಿತ್ತೆಂದು ಹೇಳಲಾಗುತ್ತದೆ. ವಿಜಯನಗರ ಸ್ಥಾಪನೆಯ ಪೂರ್ವದಲ್ಲಿ ಉತ್ತರ ಭಾಗದಲ್ಲಿ ಧೀರನು, ಪರಾಕ್ರಮಿಯು ಆಗಿದ್ದಂತಹ ಅಲ್ಲಾವುದ್ದೀನ್ ಖಿಲ್ಜಿ ೧೨೯೬-೧೩೧೬ ರಲ್ಲಿ ಆಳ್ವಿಕೆ ನಡೆಸುತ್ತಿದ್ದ. ಇವನ ಕಾಲದಲ್ಲಿ ಮೊಗಲರು ಪದೇ ಪದೇ ಈತನ ರಾಜ್ಯದ ಮೇಲೆ ದಾಳಿ ಮಾಡಿದಾಗ ಬಲಿಷ್ಟ ಸೈನ್ಯವನ್ನು ಸ್ಥಾಪಿಸಲು ಈತನ ಧನ ಸಹಾಯಕ್ಕಾಗಿ ಅನ್ಯಮಾರ್ಗವಾಗಿ ದಕ್ಷಿಣ ಭಾಗದ ಮೇಲೆ ದಾಳಿ ಮಾಡಲು ಪ್ರಾರಂಭಿಸಿದನು.[೪] ಮತ್ತೊಂದು ಅಭಿಪ್ರಾಯದ ಪ್ರಕಾರ ಕ್ರಿ.ಶ. ೧೨೦೬ರಲ್ಲಿ ಸ್ಥಾಪನೆಯಾದ ದೆಹಲಿ ಸುಲ್ತಾನರ ಸಾಮ್ರಾಜ್ಯವು ಸಂಪೂರ್ಣ ಉತ್ತರ ಭಾರತವನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದರು. ಈಗ ಅವರು ದಕ್ಷಿಣ ಭಾರತದ ಕಡೆಗೆ ತಮ್ಮ ಗಮನವನ್ನು ಹರಿಸಿದರು. ಈ ಸಂದರ್ಭದಲ್ಲಿ ದಕ್ಷಿಣದಲ್ಲಿ ದೇವಗಿರಿಯ ಸೇವುಣರು, ವಾರಂಗಲ್ಲಿನ ಕಾಕತೀಯರು, ದ್ವಾರಸಮುದ್ರದ ಹೊಯ್ಸಳರು ಮತ್ತು ಮಧುರೆಯ ಪಾಂಡ್ಯರು ಆಳ್ವಿಕೆ ನಡೆಸುತ್ತಿದ್ದರು.[೫] ಇವರ ಆಳ್ವಿಕೆಯಲ್ಲಿ ಅತ್ಯಂತ ಅವನತಿಯ ಹಾದಿಯಲ್ಲಿದ್ದರು. ಖಿಲ್ಜಿಯು ಕ್ರಿ.ಶ. ೧೨೯೩ ಮತ್ತು ೧೩೦೬ರಲ್ಲಿ ದಂಡೆಯಾತ್ರೆ ಮಾಡಿ ದೇವಗಿರಿಯನ್ನು ವಶಪಡಿಸಿಕೊಂಡನು. ಕ್ರಿ.ಶ. ೧೩೨೫ರಲ್ಲಿ ಅಧಿಕಾರಕ್ಕೆ ಬಂದ ಖಿಲ್ಜಿಯು ಇಡೀ ದಕ್ಷಿಣ ಭಾರತವನ್ನು ಗೆಲ್ಲಲು ಮುಂದಾದನು. ಅದಕ್ಕಾಗಿ ತನ್ನ ಸಮರ್ಥ ದಂಡನಾಯಕ ಮಲ್ಲಿಕಾಫರನ ಮೂಲಕ ಕ್ರಿ.ಶ. ೧೩೦೯ರಲ್ಲಿ ದೇವಗಿರಿಯನ್ನು ಮೂರನೇ ದಂಡೆಯಾತ್ರೆಯಲ್ಲಿ ಸಂಪೂರ್ಣವಾಗಿ ಸೇವುಣರನ್ನು ಸೋಲಿಸಿ ಶರಣಾಗತ ನಾಗುವಂತೆ ಮಾಡಿದನು. ಕ್ರಿ.ಶ. ೧೩೧೧ರಲ್ಲಿ ದ್ವಾರಸಮುದ್ರಕ್ಕೆ ಮುತ್ತಿಗೆ ಹಾಕಿ ಹೊಯ್ಸಳರ ಮೂರನೇ ಬಲ್ಲಾಳನನ್ನು ಸೋಲಿಸಿ ದ್ವಾರಸಮುದ್ರವನ್ನು (ಕರಾವಳಿ ಪ್ರದೇಶವನ್ನು) ವಶಪಡಿಸಿಕೊಂಡರು.[೬] ಹೀಗೆ ಹಲವು ರಾಜ್ಯಗಳನ್ನು ತಮ್ಮ ಅಧೀನಕ್ಕೆ ಒಳಪಡಿಸಿಕೊಂಡು ಕ್ರಿ.ಶ. ೧೩೦೯ ರಿಂದ ೧೩೧೧ರ ವರೆಗೂ ದಕ್ಷಿಣ ದೇಶದಲ್ಲಿ ವಾರಂಗಲ್, ದ್ವಾರಸಮುದ್ರ, ತಿರುವಣ್ಣಾಮಲೆ, ಕಂಚಿ, ಶ್ರೀರಂಗ, ಮಧುರೆಯ ರಾಮೇಶ್ವರ ಮೊದಲಾದ ಪ್ರದೇಶಗಳು ಇವರ ಅಧೀನಕ್ಕೆ ಒಳಪಟ್ಟವು.[೭]

ಕ್ರಿ.ಶ. ೧೩೩೦ರ ಸಂದರ್ಭದಲ್ಲಿ ಸಣ್ಣ ಪುಟ್ಟ ರಾಜವಂಶಗಳು ತಮ್ಮ ತಮ್ಮಲ್ಲಿಯೇ ಒಳಜಗಳ ಪಿತೂರಿಗಳು ಈ ಸಂದರ್ಭದಲ್ಲಿ ಹೆಚ್ಚಾದವು. ಕ್ರಿ.ಶ. ೧೩೨೫ರಲ್ಲಿ ಮಹಮ್ಮದ್ ಬಿನ್

ತೊಘಲಕ್ ಸಿಂಹಾಸನವನ್ನು ಏರಿದಾಗ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಈತನ ಅಸಮಾನ್ಯ ನಡುವಳಿಕೆ ಹಾಗೂ ದೆಹಲಿಯಿಂದ ರಾಜಧಾನಿಯನ್ನು ದೇವಗಿರಿಗೆ ವರ್ಗಾಯಿಸುವ ಸಂಗತಿ ಮುಖ್ಯ ವಾಗುತ್ತದೆ. ಹಿಂದೂ ಧರ್ಮದ ಪ್ರಾಂತ್ಯಗಳ ಆಳ್ವಿಕೆ ಹಳೆಯ ರಾಜಮನೆತನಗಳ ವಿನಾಶ, ಅವರ ಧರ್ಮಗಳ ಗುಡಿಗಳ ಪಟ್ಟಣಗಳ ನಾಶ ದಕ್ಷಿಣದ ನಿವಾಸಿಗಳಿಗೆ ಅಪ್ರಿಯವಾಗಿದ್ದುದ್ದೆಲ್ಲ ತತ್ತರಿಸಿ ಬೀಳುವಂತೆ ತೋರಿತು. ಇದರಿಂದಾಗಿ ವಿದೇಶಿ ದಾಳಿಗೆ ತೆರೆ ಎಳೆಯಲು ಮೊದಮೊದಲು ಅಡ್ಡಿ ಪಡಿಸಿ, ಪ್ರತಿರೋಧ, ಭದ್ರಕೋಟೆ ಕಟ್ಟಲು ಪ್ರಾರಂಭಿಸಿದರು.[೮]

ಇಂತಹ ಅಸಹಾಯಕ ಸ್ಥಿತಿಯಲ್ಲಿ ಪ್ರಮುಖ ಪಾತ್ರವಹಿಸಿದವರೆಂದರೆ ಅಂದಿನ ದೇವಸ್ಥಾನ, ಮಠ, ಹಾಗೂ ಆಶ್ರಮಗಳಂತಹ ಧಾರ್ಮಿಕ ಸಂಸ್ಥೆಗಳ ಮುಖ್ಯಸ್ಥರು, ಆಚಾರ್ಯರು, ಸ್ವಾಮಿಗಳು. ಅಂದಿನ ಹಂಪೆಯ ಪರಿಸರದಲ್ಲಿ ಪ್ರಸಿದ್ಧಿ ಪಡೆದ ಪಾಶುಪಥ (ಕಾಳಾಮುಖ) ಆಚಾರ್ಯರೆಂದರೆ 'ಕ್ರಿಯಾಶಕ್ತಿ ಪಂಡಿತರು' ಮುಖ್ಯಸ್ಥರು ಇವರಿಗೆ ಕ್ರಿಯಾಶಕ್ತಿ ವಿದ್ಯಾರಣ್ಯ; ಕ್ರಿಯಾಶಕ್ತಿ ದೇವತೆ, ಶ್ರೀವಿಲಾಸ ಕ್ರಿಯಾಶಕ್ತಿ ಇತರೆ ಹೆಸರಿನಲ್ಲಿ ಬಣ್ಣಿಸುತ್ತಾರೆ. ಸಂಗಮ ಸಹೋದರರ ಕುಲಗುರುಗಳು ಆಗಿದ್ದುದ್ದನ್ನು ಅನೇಕ ಶಾಸನಗಳು ತಿಳಿಸುತ್ತವೆ. ಈ ಗುರುಗಳು ಮುಸ್ಲಿಂ ದಾಳಿಯನ್ನು ತಡೆಗಟ್ಟಲು ಪ್ರಬಲರಾದವರೆಂದರೆ ಸಂಗಮ ಸಹೋದರರೆಂದು ಅರಿತರು. ಇವರಲ್ಲಿ ವಿಶ್ವಾಸ ಮೂಡಿಸಲು ಕಂಕಣ ಬದ್ಧರಾದವರು ಇದರಿಂದ ಸಹೋದರರಿಗೆ ಬೆಂಬಲ ನೀಡಲು ಸಿದ್ಧರಾದವರು ಜೊತೆಗೆ ಅಂಥ ಪರಿಸ್ಥಿತಿಯೂ ನಿರ್ಮಾಣಗೊಂಡಿತು.[೯]

ಜೊತೆಗೆ ಇದೇ ಸಂದರ್ಭದಲ್ಲಿ ವೀರಬಲ್ಲಾಳನು ವೃದ್ಧನಾಗಿದ್ದು ಈತನ ಮಗ ನಾಲ್ಕನೇ ಬಲ್ಲಾಳನು ಅಸಮರ್ಥನಾಗಿದ್ದನು. ಹೀಗಾಗಿ ಬಲ್ಲಾಳನು ತನ್ನ ವಿಶ್ವಾಸಕ್ಕೆ ಮತ್ತು ನಂಬಿಕೆಗೆ ಪಾತ್ರನಾಗಿದ್ದ ತನ್ನ ಜೊತೆಗೂಡಿ ಶತೃಗಳ ಮೇಲೆ ಯುದ್ಧಮಾಡಿದ ಪ್ರಾಂತಿಯ ಅಧಿಕಾರಿ ಹರಿಹರನು ಸಮರ್ಥನೆಂದು ನಿರ್ಧರಿಸಿ ಸಾಮ್ರಾಜ್ಯದ ಮೂರನೇ ರಾಜಧಾನಿಯಾದ ಹೊಸಪಟ್ಟಣ (ಹಂಪೆ) ರಾಜಪಾಲನನ್ನಾಗಿ ನೇಮಿಸಿದನು. ಅಲ್ಲದೇ ಅಗತ್ಯವಾದ ಎಲ್ಲಾ ಸ್ವಾತಂತ್ರ್ಯವನ್ನು ನೀಡಿ ಪ್ರೋತ್ಸಾಹಿಸುತ್ತಾನೆ. ಹೀಗೆ ಸಂಗಮ ವಂಶದ ಹರಿಹರನ ನೇಮಕವೇ ಮುಂದೆ ವಿಜಯನಗರ ಸಾಮ್ರಾಜ್ಯದ ಉಗಮಕ್ಕೆ ಕಾರಣವಾಯಿತು ಎಂಬುದು ಶ್ರೀಕಂಠಯ್ಯನವರ ಅಭಿಪ್ರಾಯವಾಗಿದೆ.[೧೦] (ಜೊತೆಗೆ ಕ್ರಿ.ಶ. ೧೩೪೦ ಶಾಸನದಲ್ಲಿ ಚಾಮರಸನೆಂಬ ಹರಿಹರನ ಅಧಿಕಾರಿಯು ಬಾದಾಮಿಯಲ್ಲಿ ಒಂದು ಕೋಟೆ ಕಟ್ಟಿಸಿದುದನ್ನು ತಿಳಿಸುತ್ತದೆ. ಹರಿಹರನು ಮೂರನೇ ಬಲ್ಲಾಳ ಮಹಾಮಂಡಲೇಶ್ವರನಾಗಿದ್ದನೆಂಬುದು ಸುಸ್ಪಷ್ಟವಾಗಿದೆ.)

ತುಂಗಭದ್ರೆಯಿಂದ ಕಾವೇರಿವರೆಗಿನ ವಿಶಾಲವಾದ ಹೊಯ್ಸಳರ ರಾಜ್ಯದಲ್ಲಿ ಸಂಗಮನ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಯಿತು. ವಿಜಯನಗರವು ೧೩೩೬ರಲ್ಲಿ ಸಾಮಾನ್ಯವಾಗಿ ಸ್ಥಾಪನೆ ಯಾಯಿತೆಂದು ಒಂದು ಅಭಿಪ್ರಾಯವಾದರೆ ಮತ್ತೊಂದು ಅಭಿಪ್ರಾಯ ೧೩೪೬ರಲ್ಲಿ ಎಂದು ಅಭಿಪ್ರಾಯ ಪಡಲಾಗಿದೆ. ಆದರೆ ಇದಕ್ಕೆ ಸ್ಪಷ್ಟವಾದ ಮಾಹಿತಿಯಿಲ್ಲ. ಒಟ್ಟಿನಲ್ಲಿ ಸಂಗಮ ಸಹೋದರರು ಮುಖ್ಯವಾಗಿ ಹರಿಹರ ಬುಕ್ಕರೇ ವಿಜಯನಗರ ಸ್ಥಾಪನೆಗೆ ಕಾರಣರೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.[೧೧] ವಿಜಯನಗರ ಸ್ಥಾಪಕ ಮೂಲವಿಚಾರದ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಒಂದು ಮೂಲದ ಪ್ರಕಾರ ಇವರು

ಆಂಧ್ರರೆಂದು ಹೇಳಿದರೆ ಮತ್ತೊಂದು ವಾದವು ಇವರನ್ನು ಕನ್ನಡಿಗರೆಂದು ತಿಳಿಸುತ್ತದೆ. ಮುಖ್ಯವಾಗಿ ಗಮನಿಸುವಾಗ ವಿಜಯನಗರದ ಹರಿಹರ-ಬುಕ್ಕರು ತೆಲುಗು ಮೂಲದವರೆಂದು ಒಂದು ವಾದವಿದೆ. ಈ ಪ್ರಕಾರ ಹರಿಹರ-ಬುಕ್ಕರು ವಾರಂಗಲ್ಲಿನ ಪ್ರತಾಪರುದ್ರನ ಆಸ್ಥಾನದಲ್ಲಿ ಸಚಿವ ಹಾಗೂ ಕೋಶಾಧಿಕಾರಿಗಳಾಗಿ ಆಳ್ವಿಕೆ ನಡೆಸುತ್ತಿದ್ದರು. ಈ ರಾಜ್ಯವನ್ನು ಸುಲ್ತಾನ ವಶಪಡಿಸಿಕೊಂಡ ನಂತರ ಈ ಸಹೋದರರು ಆನೆಗೊಂದಿ ಅಥವಾ ಕಂಪಲಿಗೆ ಬಂದರೆಂದು ಅಲ್ಲಿ ಸ್ವಾತಂತ್ರ್ಯವಾಗಿ ವಿಜಯನಗರ ಸ್ಥಾಪಿಸಿದರು ಎಂದು ಆದ್ದರಿಂದ ಇವರು ತೆಲುಗು ಮೂಲದವರೆಂಬ ವಾದವಿದೆ.

ಆದರೆ ಅನೇಕ ಶಾಸನಗಳು ಸಮಕಾಲೀನ ಗ್ರಂಥಗಳಲ್ಲಿ ಇವರು ಕನ್ನಡಿಗರು, ಕನ್ನಡ ಮೂಲದವರೆಂಬುದಕ್ಕೆ ಸಾಕಷ್ಟು ಸಾಕ್ಷಿ ದೊರೆಯುತ್ತವೆ.

೧. ಕ್ರಿ.ಶ. ೧೩೪೨ರ ವೇಳೆಗೆ ಹರಿಹರನು ಕೊಂಕಣ ಪ್ರದೇಶದಲ್ಲಿ ಅಧಿಕಾರಿಯಾಗಿದ್ದನು. ಇದನ್ನು ವಿರೋಧಿಸುವವರು ಇರಲಿಲ್ಲ. ಹೊನ್ನಾವರದಲ್ಲಿದ್ದ ಮುಸ್ಲಿಂ ಅಧಿಕಾರಿಯು ಸಹಾ ಹರಿಹರನಿಗೆ ಕಪ್ಪಕಾಣಿಕೆಯನ್ನು ಸಲ್ಲಿಸುತ್ತಿದ್ದನೆಂದು ಇಬ್ನಬತೂತ ಹೇಳುತ್ತಾನೆ. ಮತ್ತೊಂದು ಪ್ರಮುಖವಾದ ಅಂಶವೆಂದರೆ ೧೩೪೬ರ ಶೃಂಗೇರಿ ಶಾಸನ ಈ ಸಂದರ್ಭದಲ್ಲಿ ಪರಿಗಣಿಸಬೇಕಾದ ಶಾಸನ. ಈ ಸಂದರ್ಭದಲ್ಲಿ ಹರಿಹರನು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಿರುವ ನೆನಪಿಗಾಗಿ ತನ್ನ ನಾಲ್ವರು ಸಹೋದರರೊಂದಿಗೆ ಶೃಂಗೇರಿಗೆ ಭೇಟಿ ನೀಡಿ ಅನೇಕ ದಾನದತ್ತಿಗಳನ್ನು ಮಾಡಿದನೆಂದು ತಿಳಿಸುತ್ತದೆ. ಕ್ರಿ.ಶ. ೧೩೩೬ ಏಪ್ರಿಲ್ ೧೮ರಂದು ವಿಜಯನಗರ ಶಂಕುಸ್ಥಾಪನೆ ನೆರವೇರಿಸಿದರೆಂದು, ಇವರು ಕನ್ನಡಿಗರು ಎಂದು ತಿಳಿಸುತ್ತದೆ.[೧೧]

೨. ಸಂಗಮ ವಂಶದ ಕಂಪಣನ ರಾಣಿಯಾದ ಗಂಗಾದೇವಿ ವಿರಚಿತ ಕೃತಿಯಾದ 'ಮಧುರ ವಿಜಯಂ' ನಲ್ಲಿಯೂ ಸಹಾ ವಿಜಯನಗರ ಅರಸರು ಕನ್ನಡಿಗರೆಂದು ಸ್ಪಷ್ಟವಾಗಿ ತಿಳಿಸಲಾಗಿದೆ.[೧೨]

ಆಂಧ್ರ-ತಮಿಳುನಾಡಿನಲ್ಲಿ ದೊರೆತಿರುವ ವಿಜಯನಗರದ ಶಾಸನಗಳು ಹೆಚ್ಚಾಗಿ ಕನ್ನಡ ಲಿಪಿಯಲ್ಲಿವೆ. ಜೊತೆಗೆ ಶ್ರೀಕೃಷ್ಣದೇವರಾಯನ ಆಸ್ಥಾನ ಕವಿ ಅಲ್ಲಾಸಾನಿ ಪೆದ್ದಣ್ಣ ಕೂಡ ಕೃಷ್ಣದೇವರಾಯನನ್ನು 'ಕನ್ನಡ ರಾಜ್ಯ ರಮಾರಮಣ' ಎಂದು ಹೊಗಳಿರುವುದನ್ನೇ ಇತ್ತೀಚೆಗೆ ಆಂಧ್ರದ ಖ್ಯಾತ ಇತಿಹಾಸತಜ್ಞರಾದ ಕೆ. ಸತ್ಯನಾರಾಯಣರವರು ಸಹಾ ವಿಜಯನಗರ ಅರಸರು ಕನ್ನಡಿಗರು, ಕರ್ನಾಟಕದವರು ಅನೇಕ ದಾನ ಶಾಸನಗಳಲ್ಲಿ ಅವರನ್ನು ಕರ್ನಾಟಕದ ಅರಸರೆಂದು ರಾಜರನ್ನು ಕರ್ನಾಟಕದ ಪ್ರಭುಗಳೆಂದು ಹೇಳಿರುವುದರಿಂದ ಹಾಗೂ ಕನ್ನಡ ಭಾಷೆಯಲ್ಲಿ ಶ್ರೀ ವಿರೂಪಾಕ್ಷವೆಂಬ ಶಾಸನದಲ್ಲಿ ಸಹಿ ಮಾಡಿರುವುದರಿಂದ ಇವರು ಕನ್ನಡಿಗರೆಂಬುದಕ್ಕೆ ಸ್ಪಷ್ಟವಾಗಿದೆ. ಜೊತೆಗೆ ಪೋರ್ಚುಗೀಸ್ ಪ್ರವಾಸಿಗರು ವಿಜಯನಗರ ಅರಸರು ಆಚರಿಸುವ ಹೊಸ ವರ್ಷದ ಹಬ್ಬವು ಸಹ ಕನ್ನಡ ವರ್ಷವೇ ಆಗಿತ್ತು ಎಂದು ತಿಳಿಸುತ್ತಾರೆ.[೧೩] ವಿಜಯನಗರದ ಅನೇಕ (ತಾಮ್ರ) ಸಂಸ್ಕೃತ ಶಾಸನಗಳಲ್ಲಿ ಅರಸರಿಗೆ 'ಕರ್ನಾಟಕ ಕ್ಷಿತಿನಾಥ' 'ಭಾಷೆಗೆ ತಪ್ಪುವ ರಾಯರ ಗಂಡ', 'ಕನ್ನಡ ರಾಜ್ಯ ರಮಾರಮಣ' ಮುಂತಾದ ಬಿರುದುಗಳಿದ್ದವು. ಇದು ಇವರು ಕನ್ನಡಿಗರೆಂಬುದಕ್ಕೆ ಸಾಕ್ಷಿಯಾಗಿವೆ.[೧೪] ಸಂಗಮ ವಂಶವು ಕ್ರಿ.ಶ. ೧೩೩೬ರಲ್ಲಿ ಹರಿಹರ, ೧ನೇ ಬುಕ್ಕ, ಕಂಪಣ್ಣ, ಮಾರಪ್ಪ ಮತ್ತು ಮುದ್ದಪ್ಪ ಎಂಬ ಸಹೋದರರಿಂದ

ಸ್ಥಾಪನೆಯಾಯಿತು. ಇವರು ಸಂಗಮನ ಮಕ್ಕಳಾಗಿರುವ ಈ ವಂಶಕ್ಕೆ ಸಂಗಮ ವಂಶದವರೆಂದು ಕರೆಯಲಾಗಿದೆ. ಕ್ರಿ.ಶ. ೧೩೩೬ರಿಂದ ೧೪೮೫ರ ವರೆಗೆ ೯ ಜನ ಅರಸರು ಆಳ್ವಿಕೆ ನಡೆಸಿರುವುದು ಸ್ಪಷ್ಟ ವಾಗುತ್ತದೆ.

೧ನೆಯ ಹರಿಹರನು ವಿಜಯನಗರಕ್ಕೆ ಅಸ್ತಿಭಾರವನ್ನು ಹಾಕಿ ರಾಜ್ಯವನ್ನು ಬಾದಾಮಿವರೆಗೆ ವಿಸ್ತರಿಸಿದನು.[೧೫] ನಂತರ ಕ್ರಿ.ಶ. ೧೩೫೬ರಲ್ಲಿ ೧ನೇ ಬುಕ್ಕನು ಸಿಂಹಾಸನಕ್ಕೆ ಬಂದು ದಕ್ಷಿಣ ಭಾರತದ ಅನೇಕ ವೈರಿಗಳನ್ನು ತಮ್ಮ ಮಗ ೨ನೆಯ ಕಂಪಣನ ಸಹಾಯದಿಂದ ಸ್ಥಾಪಿಸಿದನು. ಈತನ ಕಾಲದಲ್ಲಿ ಬಹುಮನಿ ಸುಲ್ತಾನನೊಡನೆ ಮತ್ತೆ ಮತ್ತೆ ಯುದ್ಧಗಳನ್ನು ಕೈಗೊಳ್ಳಬೇಕಾಯಿತು. ಮುಖ್ಯವಾಗಿ ಗುಲ್ಬರ್ಗಾದ ಮಹಮ್ಮದ್ ಷಾ ಮತ್ತು ಅನಂತರ ಬಂದ ಮಗ ಮುಬಾಹಿದ್ ಇವರೊಡನೆ ಅನೇಕ ಯುದ್ಧಗಳು ನಡೆದವು. ಈತನ ಕಾಲದಲ್ಲಾದ ಬಹಳ ಮುಖ್ಯ ಘಟನೆಯೆಂದರೆ ಈತನ ಮಗನಾದ ಕುಮಾರ ಕಂಪಣನು ಮಧುರ ದಂಡಯಾತ್ರೆಯಾಗಿದೆ. ಆದರೆ ೨ನೆಯ ಬುಕ್ಕನು ಬಹುಬೇಗನೆ ಪುತ್ರವಿಯೋಗ ಅನುಭವಿಸಬೇಕಾಯಿತು. ಇವರು ಕಾಲದಲ್ಲಿ ಒಡೆಯರ್, ಮಹಾಮಂಡಲೇಶ್ವರನಾಗಿ ಮಾತ್ರ ಕಂಡುಬರುತ್ತಾರೆ. ಆದರೆ ೨ನೇ ಹರಿಹರನ ಕಾಲದಿಂದ ಚಕ್ರವರ್ತಿ ಎಂಬ ಬಿರುದು ಪಡೆದು ಆಳ್ವಿಕೆ ನಡೆಸಿದ್ದಾನೆ. ಇವನ ಕಾಲದಲ್ಲಿ ಭಾರೀ ಕ್ಷಾಮವು ಕಾಣಿಸಿಕೊಂಡಿತ್ತು. ಆಗ ಪ್ರಜೆಗಳ ಯೋಗ ಕ್ಷೇಮಕ್ಕಾಗಿ ಅನೇಕ ಕೆರೆ-ಕಾಲುವೆಗಳ ನಿರ್ಮಾಣ ಕೈಗೊಂಡನು, ಇದರಲ್ಲಿ ಪ್ರಮುಖ ಎಂಜಿನಿಯರ್‌ರೆಂದರೆ ಹೈಡ್ರಲಿಕ್‌ನ ಮೂಲಕ ಹೆನ್ನೆ ನದಿಯಿಂದ ಒಂದು ಕಾಲುವೆಯನ್ನು ನಿರ್ಮಿಸಿ ಪೆನುಗೊಂಡೆಗೆ ನೀರನ್ನು ಒದಗಿಸಿದನು. ವ್ಯಾಪಾರ ವಾಣಿಜ್ಯಗಳು ಅಭಿವೃದ್ಧಿಪಡಿಸಿದನು. ಕನ್ನಡ ಸಾಹಿತ್ಯಕ್ಕೆ ಸಾಕಷ್ಟು ಪ್ರೋತ್ಸಾಹ ನೀಡಿದನು. ಇದರಿಂದಾಗಿ ಈತನಿಗೆ 'ವೈದಿಕ ಮಾರ್ಗ ಸ್ಥಾಪನಾಚಾರ್ಯ' ಬಿರುದು ನೀಡಿ 'ಕರ್ನಾಟಕ ವಿದ್ಯಾವಿಲಾಸ' ಎಂದು ಕರೆಯಲಾಗಿದೆ.[೧೬]

ಕ್ರಿ.ಶ. ೧೪೦೪ರಿಂದ ೨ನೇ ಬುಕ್ಕನು ಸಿಂಹಾಸನಕ್ಕೆ ಬಂದನು. ಈತನ ಅಕಾಲ ಮೃತ್ಯುವಿನಿಂದ ಕ್ರಿ.ಶ. ೧೪೦೬ರಲ್ಲಿ ೧ನೇ ದೇವರಾಯನು ಸಿಂಹಾಸನಕ್ಕೆ ಬಂದನು. ಈತನು ರೆಡ್ಡಿಗಳೊಂದಿಗೆ ಹಾಗೂ ಬೈರೂಬಾಶಾಹ ಬಹಮನಿಯೊಂದಿಗೆ ಮುದಗಲ್ಲನ ರೈತನೊಬ್ಬನ ಮಗಳನ್ನು ರಾಣಿಯನ್ನಾಗಿ ಪಡೆಯಲು ಈತನು ಕೈಗೊಂಡ ಸಾಹಸದ ಕಥೆಯನ್ನು ಚರಿತ್ರೆಕಾರ ಫಿರಿಷ್ತ (Firishtah) ಧೀರ್ಘವಾಗಿ ವರ್ಣಿಸಿದ್ದಾನೆ. ಜೊತೆಗೆ ಈತನ ಕಾಲದಲ್ಲಿ ಇಟಲಿ ದೇಶದ ನಿಕಲೋಕೊಂಟಿಯ ಎಂಬ ಯಾತ್ರಿಕನು ವಿಜಯನಗರದ ವೈಭವದ ಕುರಿತು ಪರಿಚಯ ನೀಡಿದ್ದಾನೆ. ಈತನ ಮಗನಾದ ವೀರವಿಜಯರಾಯನು ಕ್ರಿ.ಶ. ೧೪೧೨-೧೩ದಿಂದ (ಮಗನು ಕೇವಲ ಕೆಲವು) ಐದಾರು ವರ್ಷಗಳ ಆಳ್ವಿಕೆಯನ್ನು ನಡೆಸಿದನು.

ಇವನ ನಂತರ ೨ನೇ ದೇವರಾಯನು ಸಿಂಹಾಸನಕ್ಕೆ ಬಂದನು. ಈತನ ಆಳ್ವಿಕೆಯಲ್ಲಿ (ಸಂಗಮ ವಂಶದಲ್ಲಿ) ಪ್ರಮುಖವಾಗಿ ಕಲೆಗೆ ಹೆಚ್ಚು ಮಹತ್ವ ನೀಡಿದನು. ದೊರೆ ಈತನಿಗೆ 'ಗಜವೇಂಟೆಗಾರ' ಎಂಬ ಬಿರುದಿತ್ತು. ಈತನೂ ಸಂಗಮ ವಂಶದಲ್ಲಿ ಪ್ರಸಿದ್ಧನಾದ ದೊರೆಯಾಗಿದ್ದನು. ಇವನ ಕಾಲದಲ್ಲಿ ಪರ್ಶಿಯಾ ದೇಶದ ಅಬ್ದುಲ್ ರಜಾಕ್‌ನು ವಿಜಯನಗರಕ್ಕೆ ಭೇಟಿ ನೀಡಿದನು. ಈತನ ಕಾಲದಲ್ಲಿ ಸಾಮ್ರಾಜ್ಯವು ಸಿಲೋನಿನಿಂದ ಹಿಡಿದು ಗುಲ್ಬರ್ಗಾದವರೆಗೂ ಒರಿಸ್ಸಾ-ಬಂಗಾಳಗಳಿಂದ ಮಲಬಾರಿನವರೆಗೂ ಈತ ರಾಜ್ಯವನ್ನು ವಿಸ್ತರಿಸಿದನು.

ಅಬ್ದುಲ್ ರಜಾಕನ ಪ್ರಕಾರ ಇಡೀ ಪ್ರಪಂಚದಲ್ಲಿಯೇ ಇಂತಹ ಇನ್ನೊಂದು ಸಾಮ್ರಾಜ್ಯವನ್ನು ಕಣ್ಣಿದ್ದವರು ನೋಡಲಾರರು, ಕಿವಿಯಿದ್ದವರು ಕೇಳಲಾರರು ಎನ್ನುವ ಮಾತುಗಳನ್ನು ಹೃದಯತುಂಬಿ ನುಡಿದಿರುವದರಿಂದ ವಿಜಯನಗರಭವ್ಯ ಇತಿಹಾಸವನ್ನು ವರ್ಣಿಸಿದ್ದಾನೆ. ಇವನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯ ಸುಭಿಕ್ಷವಾಗಿತ್ತು ಎಂದು ತಿಳಿದುಬರುತ್ತದೆ. ಈತನು ಸಾಹಿತ್ಯ, ಕಲೆ, ವಾಸ್ತುಶಿಲ್ಪಕ್ಕೆ ವಿಶೇಷ ಪ್ರೋತ್ಸಾಹ ನೀಡಿದನು. ೧೪೨೬ರಲ್ಲಿ ಜೈನದೇವಾಲಯವನ್ನು ನಿರ್ಮಿಸಿದನು. ಅದು ಹಜಾರರಾಮಸ್ವಾಮಿ ದೇವಾಲಯದ ಹತ್ತಿರವಿರುವ ಬಜಾರ್ ಇದ್ದಿರಬಹುದೆಂದು ಗುರುತಿಸಲಾಗಿದೆ. ಆನೆಗೊಂದಿಯಿಂದ ಅರಮನೆಗೆ ರಸ್ತೆಯನ್ನು ನಿರ್ಮಿಸಿದನು. ತಂಜಾವೂರು ಜಿಲ್ಲೆಯ ಒಂದು ದೇವಾಲಯಕ್ಕೆ ಕ್ರಿ.ಶ. ೧೪೩೦ ರಲ್ಲಿ ದಾನ ನೀಡಿದನು. ಒಟ್ಟಿನಲ್ಲಿ ಇತನು ಹೆಚ್ಚಾಗಿ ಕಲೆಗೆ ಪ್ರೋತ್ಸಾಹ ನೀಡಿದ್ದನು.[೧೬]

ಇವನ ನಂತರ ತಮ್ಮನಾದ ಪ್ರತಾಪದೇವರಾಯ (೩ನೇ ವಿಜಯ) ಸ್ವಲ್ಪ ಕಾಲ ಆಳಿದನು. ನಂತರ ಮಗನಾದ ಮಲ್ಲಿಕಾರ್ಜುನ ಈತನು ತಂದೆಯಂತೆ ಸಮರ್ಥನಾಗಿರಲಿಲ್ಲ. ಆದರೆ ಈತನ ಆಡಳಿತಾವಧಿಯಲ್ಲಿ ಬಹಮನಿ ಸುಲ್ತಾನನು ಹಾಗೂ ಕಪಿಲೇಶ್ವರ ಗಜಪತಿಯೂ ವಿಜಯನಗರ ಸಾಮ್ರಾಜ್ಯದ ಮೇಲೆ ಆಕ್ರಮಣ ಮಾಡಿದರೂ ಸಹ ವಿಜಯನಗರ ಸೈನ್ಯವು ಅವರನ್ನು ಹಿಮ್ಮೆಟ್ಟಿಸಿದರೂ ಸಹ ಅನೇಕ ಪ್ರದೇಶಗಳನ್ನು ಒರಿಸ್ಸಾದ ದೇಶದ ಹಮ್ಮೀರನು ವಶಪಡಿಸಿಕೊಂಡನು. ಇದು ಮಲ್ಲಿಕಾರ್ಜುನನನ್ನು ಕಂಗೆಡಿಸಿತು. ಭವಿಷ್ಯದ ಹಾಗೂ ಸಾಮ್ರಾಜ್ಯದ ಮಾರಕವಾಗುವಂತೆ ತೋರಿದಾಗ, ಎಲ್ಲೆಲ್ಲೂ ಗೊಂದಲ, ಅವಿಧೇಯತೆ ಕಂಡುಬಂದವು. ಇದರಿಂದಾಗಿ ಈತನು ಅಧಿಕಾರದಿಂದ ಪದಚ್ಯುತನಾಗಿ (೩ನೇ) ಮಲ್ಲಿಕಾರ್ಜುನ ಮಗನಾದ ರಾಜಶೇಖರನ ಹಕ್ಕನ್ನು ತಿರಸ್ಕರಿಸಿ ೩ನೇ ವಿರೂಪಾಕ್ಷನು ಪಟ್ಟಕ್ಕೆ ಬಂದನು.

ಈತನು ಅಸಮರ್ಥ ಆಡಳಿತಗಾರನಾಗಿ ಸುಖಭೋಗ, ದುಶ್ಚಟಗಳಿಗೆ ಬಲಿಯಾದ ಕಾರಣ ಅನೇಕ ರಾಜ್ಯಗಳು ದಾಳಿ ನಡೆಸಿದವು. ಆದರೆ ಈತನು ಆಕ್ರಮಣ ಮಾಡಿದ ರಾಜ್ಯಗಳಿಗೆ ಯುದ್ಧ ಮಾಡಿದ್ದಕ್ಕಿಂತ ಮಿಗಿಲಾಗಿ ಲಂಚವನ್ನು ಕೊಟ್ಟು, ಖೇಟ್ನಕೋಟೆಯನ್ನು ವಶಪಡಿಸಿಕೊಂಡು, ನಂತರ ಗೋವಾ, ಉತ್ತರಕೊಂಕಣ ಇತರೆ ಪ್ರಾಂತ್ಯಗಳನ್ನೂ ಕಳೆದುಕೊಂಡನು. ಇದು ಪ್ರಮುಖ ಲಾಭದಾಯಕ ವ್ಯಾಪಾರ ವಹಿವಾಟು ಸೇನಾಬಲ ಹೊಂದಿದ ಪಾಂತ್ಯವಾಗಿದ್ದರಿಂದಾಗಿ ಇದು ವಿಜಯನಗರದ ಮೇಲೆ ಸಾಕಷ್ಟು ಪೆಟ್ಟು ನೀಡಿತ್ತು. ಜೊತೆಗೆ ಈತನ ಕಾಲದಲ್ಲಿ ಅನೇಕ ದಂಗೆಗಳು ಸಂಭವಿಸಿದ್ದವು. ಇವನಿಗೆ ಜನರ ಬೆಂಬಲವಾಗಲಿ ಅಥವಾ ಅಧಿಕಾರದ ಬೆಂಬಲವಾಗಲಿ ಇರದೇ ಬೇಸತ್ತ ಮಗನಿಂದಲೇ ಕೊಲೆಯಾದನು. ಒಟ್ಟಿನಲ್ಲಿ ೨೯.೧.೧೪೪೫ ಹಾಗೂ ೧.೧೧.೧೪೮೬ ಎರಡರ ನಡುವೆ ವಿರೂಪಾಕ್ಷ ಮತ್ತು ಪ್ರೌಢದೇವರಾಯನನ್ನು ಪತನಗೊಳಿಸಲಾಯಿತೆಂದು ತಿಳಿದುಬರುತ್ತದೆ.[೧೮]

ಸಾಳುವರ ಆಡಳಿತಾವಧಿಯೂ ಅಲ್ಪಾವಧಿಯಾಗಿದೆ. ಇವರು ಮಂಗಳಗಿರಿಯಿಂದ ವಲಸೆ ಬಂದು ಮಂಗು ಎಂಬುವವನು, ಸಂಗಮವಂಶದ ೨ನೇ ಕಂಪಣನಿಗೆ ನೆರವು ನೀಡಿದನು. ಇವರ ಪೂರ್ವಿಕರು ಕಲ್ಯಾಣಿಯಲ್ಲಿ ಆಳುತ್ತಿದ್ದರು. ತಾವು ಯಾದುವಿನಿಂದ ಬಂದವರೆಂದೂ, ಸೂರ್ಯ ಕುಲಕ್ಕೆ ಸೇರಿದವರೆಂದು ಹೇಳಿಕೊಂಡರು. ಅಲ್ಲದೆ, ಸಂಗಮವಂಶದ ೨ನೇ ದೇವರಾಯನ ತಂಗಿಯಾದ ಹರಿಮಾಳನ್ನು ಸಾಳುವ

ವಂಶದ ತಿಮ್ಮನು ಮದುವೆಯಾಗಿದ್ದರಿಂದಾಗಿ ಇವರು ಸಂಗಮವಂಶದೊಂದಿಗೆ ರಕ್ತಸಂಬಂಧವನ್ನು ಹೊಂದಿದ್ದರು. ಈ ವಂಶದಲ್ಲಿ ಕ್ರಿ.ಶ. ೧೪೫೨ರಲ್ಲಿ ನರಸಿಂಹನಿಂದ ರಾಜಕೀಯ ಪ್ರಾರಂಭವಾಯಿತು. ಈತನು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆ ಮತ್ತು ತಮಿಳುನಾಡಿನಲ್ಲಿ ಎರಡು ಆರ್ಕಾಟ್ ಜಿಲ್ಲೆಗಳನ್ನು, ಕರ್ನಾಟಕದಲ್ಲಿ ಕೋಲಾರ ಜಿಲ್ಲೆಯನ್ನು ಪ್ರಾರಂಭದಲ್ಲಿ ಅಂದರೆ ವಿರೂಪಾಕ್ಷನ ಆಳ್ವಿಕೆಯಲ್ಲಿ ತನ್ನ ಹತೋಟಿಗೆ ತೆಗೆದುಕೊಂಡನು. ಆಂಧ್ರಪ್ರದೇಶದ ಕರಾವಳಿ, ಉದಯಗಿರಿಕೋಟೆ, ಚೋಳದೇಶ, ತೊಂಡೈ ಮಂಡಲ ದೇಶಗಳನ್ನು ಸಹ ಗೆದ್ದುಕೊಂಡನು, ರಾಮೇಶ್ವರ, ಶ್ರೀಲಂಕಾದವರೆಗೂ ಕಪ್ಪಕಾಣಿಕೆಯನ್ನು ಪಡೆಯಲಾರಂಭಿಸಿದನು. ಕ್ರಿ.ಶ.೧೪೭೧ರಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು. ಈತನು ರಾಜನಾದ ಬಗೆ ನಿಖರವಾದ ಕಾಲಾವಧಿ ಇಲ್ಲ.[೧೯] ಇಮ್ಮಡಿ ನರಸಿಂಹನ ಇಬ್ಬರು ಮಕ್ಕಳಲ್ಲಿ ಹಿರಿಯ ಮಗನಾದ ತಿಮ್ಮಭೂಪನನ್ನು ಮೊದಲು ರಾಜನನ್ನಾಗಿ ಮಾಡಿದನು. ಈತನ ಕೊಲೆಯಾಯಿತು. ನಂತರ ಕಿರಿಯ ಮಗ ಇಮ್ಮಡಿ ನರಸಿಂಹನನ್ನು ಪಟ್ಟಾಭಿಷೇಕ ಮಾಡಿದನು. ಆದರೆ ಆಡಳಿತವೆಲ್ಲವೂ ತುಳುವ ನರಸನಾಯಕನ ಕೈಯಲ್ಲಿ ಕೇಂದ್ರಿಕೃತವಾಗಿ ಈ ಮೂಲಕ ತುಳುವ ವಂಶದ ಆಳ್ವಿಕೆಗೆ ಅವಕಾಶ ಮಾಡಿಕೊಟ್ಟಿತು.[೨೦] ಈ ವಂಶದಲ್ಲ ಕೃಷ್ಣದೇವರಾಯ ಅಚ್ಯುತರಾಯ ಪ್ರಮುಖ ಅರಸನಾಗಿದ್ದರೆ, ಇವರು ಕಲೆ, ಸಾಹಿತ್ಯ, ವಾಸ್ತುಶಿಲ್ಪ ಹೀಗೆ ಅನೇಕ ಕ್ಷೇತ್ರಗಳಲ್ಲಿ ಅಭಿವೃದ್ಧಿಪಡಿಸಿದರು. ಕ್ರಿ.ಶ. ೧೫೪೨ ರಿಂದ ತುಳುವ ವಂಶದ ಆಳ್ವಿಕೆಯೂ ಅರವೀಡು ವಂಶದ ಆಳ್ವಕೆಗೆ ಒಳಪಟ್ಟಿತ್ತು. ಇಲ್ಲಿ ಅಳಿಯ ರಾಮರಾಯ, ತಿರುಮಲದೇವರಾಯ, ವೆಂಕಟಪತಿರಾಯರು ಮುಖ್ಯರಾಗಿದ್ದರು. ಕ್ರಿ.ಶ. ೧೫೪೨ ರಿಂದ ೧೬೮೮ ರವರೆಗೆ ಒಟ್ಟು ೧೨೦ ವರ್ಷಗಳ ಧೀರ್ಘ ಆಳ್ವಿಕೆ ನಡೆಸಿದರು. ಇಲ್ಲಿ ಆಂತರೀಕ ಕಲಹ ಹೆಚ್ಚಾಗಿ ವಿಜಯನಗರದ ಆಳ್ವಿಕೆಯ ಅಂತ್ಯವಾಗುವಂತೆ ಆಯಿತು.

ಒಟ್ಟಿನಲ್ಲಿ, ವಿಜಯನಗರ ಸಾಮ್ರಾಜ್ಯವನ್ನು ಅನ್ಯರ ದಾಳಿಯಿಂದ ತಡೆಗಟ್ಟಲು ಹಾಗೂ ೧೪ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ದುರ್ಬಲಗೊಂಡ ಸಾಮಂತ ದೊರೆಗಳನ್ನು ಬದಿಗೊತ್ತುವ ಉದ್ದೇಶವಿತ್ತು. ಹಾಗಾಗಿ ಸಂಗಮ ವಂಶದ ಸಹೋದರರಿಂದ ಸ್ಥಾಪನೆಗೊಂಡ ವಿಜಯನಗರ ಸಾಮ್ರಾಜ್ಯ ಒಟ್ಟು ೨೫೦ ವರ್ಷಗಳವರೆಗೆ ಭವ್ಯ ಸಂಸ್ಕೃತಿಯನ್ನು ಬೆಳಗಿಸಿದ ಕೀರ್ತಿಗೆ ಪಾತ್ರವಾಗಿದೆ.

೨.೨. ಸಂಗಮ, ಸಾಳುವ, ಅರವೀಡು ವಂಶದ ರಾಣಿಯರ ಪರಿಚಯ

ಕರ್ನಾಟಕ ಅಥವಾ ಕನ್ನಡ ನಾಡು ಕನ್ನಡಿಗರ ಹೆಮ್ಮೆಯ ನಾಡಾಗಿದೆ. ಇಂಥ ನಾಡಿನಲ್ಲಿ ಪರಕೀಯರ ಸಂಸ್ಕೃತಿ ತನ್ನ ಕದಂಬ ಬಂಧು ಬಾಹುಗಳನ್ನು ದಕ್ಷಿಣ ಭಾರತದತ್ತ ಚಾಚುತ್ತಿದ್ದಾಗ ಅದನ್ನು ಶಕ್ತಿ ಸಾಮರ್ಥ್ಯಗಳ ಮೂಲಕ ಕನ್ನಡದ ಸಂಸ್ಕೃತಿಯನ್ನು ಉಳಿಸಿ ಬೆಳೆಸಿದ ಕೀರ್ತಿ ವಿಜಯನಗರಕ್ಕೆ ಸಲ್ಲುತ್ತದೆ. ಸಂಗಮ, ಸಾಳುವ, ತುಳುವ ಮತ್ತು ಅರವೀಡು ಒಟ್ಟು ನಾಲ್ಕು ಬೇರೆ ಬೇರೆ ವಂಶಗಳು ಆಳ್ವಿಕೆಯನ್ನು ನಡೆಸಿವೆ. ಈ ವಂಶಗಳ ಆಳ್ವಿಕೆ ನಡೆಸಿದ ಚಕ್ರವರ್ತಿಗಳು ತಮ್ಮದೇ ಆದ ಕೊಡುಗೆಗಳನ್ನು ಕನ್ನಡನಾಡಿಗೆ ನೀಡಿದ್ದಾರೆ. ಆದರೆ ಯಾವುದೇ ಸಾಮ್ರಾಜ್ಯವು ಅನೇಕ ಕೊಡುಗೆಗಳನ್ನು ನೀಡುವಾಗ ಕೇವಲ ಪುರುಷರ ಪಾತ್ರ ಮಾತ್ರ ಇರುವುದಿಲ್ಲ. ಅದರ ಜೊತಗೆ ಸ್ತ್ರೀಯರ ಪಾತ್ರವೂ ಸಹ ಬಹು ಮುಖ್ಯವಾಗಿರುತ್ತದೆ, ಆದರೆ ಅವರ ಕೊಡುಗೆಗಳನ್ನು ಬೆಳಕಿಗೆ ಬಂದಾಗ ಮಾತ್ರ ಅವರ ಪರಿಚಯ

ವಾಗುತ್ತದೆ. ಅದೇ ರೀತಿ ವಿಜಯನಗರ ಸಾಮ್ರಾಜ್ಯದಲ್ಲಿಯೂ ಸಹ ನಾಲ್ಕು ವಂಶಗಳ ರಾಣಿಯರು ತಮ್ಮದೇ ಆದ ಕೊಡುಗೆಯನ್ನು ನೀಡಿರುವುದು ಬಹುಮುಖ್ಯವಾಗಿದೆ. ಆದರೆ ಅದು ಚರಿತ್ರೆ ಪುಟಗಳಲ್ಲಿ ದಾಖಲಾಗಿಲ್ಲ. ಆ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದ ಮೂಲಕ ಬೆಳಕಿಗೆ ತರುವ ಉದ್ದೇಶವಿದೆ.

ಪ್ರಸ್ತುತ ಈ ಅಧ್ಯಯನವು ತುಳುವ ಅರಸರ ರಾಣಿಯರಿಗೆ ಸಂಬಂಧಿಸಿದ್ದಾಗಿದೆ. ಪ್ರಾಸಂಗಿಕವಾಗಿ ಸಂಗಮ, ಸಾಳುವ ಮತ್ತು ಅರವೀಡು ವಂಶದ ರಾಣಿಯರ ಪರಿಚಯವನ್ನು ಇಲ್ಲಿ ಸ್ಥೂಲವಾಗಿ ತಿಳಿಸಲಾಗಿದೆ. ಜೊತೆಗೆ ಅವರ ಕೊಡುಗೆಗಳನ್ನು ಸಹಾ ಇಲ್ಲಿ ಪಟ್ಟಿಮಾಡಲಾಗಿದೆ. ತುಳುವ ರಾಣಿಯರ ಬಗ್ಗೆ ಪ್ರತ್ಯೇಕ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

೨.೩. ಸಂಗಮ ವಂಶದ ರಾಣಿಯರು

ವಿಜಯನಗರ ಸಾಮ್ರಾಜ್ಯದಲ್ಲಿ ಇದು ಮೊಟ್ಟಮೊದಲ ವಂಶವಾಗಿದೆ. ಇಲ್ಲಿ ಒಟ್ಟು ಒಂಬತ್ತು ಅರಸರು ಕ್ರಿ.ಶ. ೧೩೩೬ ರಿಂದ ೧೪೮೫ರ ವರಗೆ ಒಟ್ಟು ೧೫೧ ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದಾರೆ. ಈ ವಂಶ ಸಂಗಮರ ಕಾಲದಿಂದ ಆರಂಭಗೊಂಡು ವಿರೂಪಾಕ್ಷ ರಾಯನ ಕಾಲದಲ್ಲಿ (೧೪೬೫-೮೫) ಸಂತತಿ ಕೊನೆಗೊಳ್ಳುತ್ತದೆ. ಇದರಲ್ಲಿ ಎರಡನೇ ದೇವರಾಯನು ಪ್ರಮುಖ ಅರಸರನಾಗಿದ್ದು, ಕಲೆಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದನು. ಈ ವಂಶದ ಚಕ್ರವರ್ತಿಗಳು ತಮ್ಮದೇ ಆದ ಕೊಡುಗೆಗಳನ್ನು ಈ ಸಾಮ್ರಾಜ್ಯಕ್ಕೆ ನೀಡಿದ್ದಾರೆ. ಅದರಂತೆಯೇ ಇವರೊಂದಿಗೆ ಸಾಮ್ರಾಜ್ಯದಲ್ಲಿದ್ದುಕೊಂಡು ಏಳು ಬೀಳುಗಳ, ದಿಗ್ವಿಜಯ, ದಂಡಯಾತ್ರೆ, ಧಾರ್ಮಿಕ ಮೊದಲಾದ ಕಾರ್ಯಕ್ರಮಗಳಲ್ಲಿ ರಾಣಿಯರು ಪಾಲ್ಗೊಳ್ಳುತ್ತಿದ್ದರು. ಸಾಮ್ರಾಜ್ಯದ ಉನ್ನತಿಗಾಗಿ ಶ್ರಮಿಸಿದ ಚಕ್ರವರ್ತಿಗಳಷ್ಟೇ ಅಲ್ಲದೆ, ಪಟ್ಟದ ಅರಸರು ತಮ್ಮದೇ ಆದ ಕೊಡುಗೆಗಳನ್ನು ನೀಡಿರುವುದು ಸ್ಪಷ್ಟವಾಗಿದೆ.

೧. ಕಾಮಾಂಬಿಕೆ

ಕಾಮಾಂಬಿಕೆ ಸಂಗಮನ ರಾಣಿ. ಸಂಗಮ ವಂಶದಲ್ಲಿಯೇ ಪ್ರಥಮ ರಾಣಿಯಾಗಿ ಗುರುತಿಸಿಕೊಂಡಿದ್ದಾಳೆ. ಈಕೆಗೆ ಹಲವು ಹೆಸರುಗಳಿಂದ ಕರೆದಿದ್ದಾರೆ. ಗೌರಾಂಬಿಕೆ, ದೇಮಾಂಬಿಕೆ, ಕಾಮಾಂಬಿಕೆ ಎಂಬ ಹೆಸರುಗಳಿದ್ದವೆಂದು ಗುರುತಿಸಿ, ಕಾಮಾಂಬಿಕೆ ಎಂಬುದೇ ನಿಜವಾದ ಹೆಸರಿರಬೇಕೆಂದು ಫಿಲಿಯೋಜಾರವರು[೨೧] ಅಭಿಪ್ರಾಯವಾಗಿದೆ. ಶಾರದೆ, ಮೀನಾಂಬಿಕೆ, ಗೌರಾಂಬಿಕೆ, ಕಾಮಾಕ್ಷಿ ಎಂಬ ರಾಣಿಯರು ಸಂಗಮನಿಗಿದ್ದರೆಂದು ರಾಘುವೇಂದ್ರರಾವ್‌ರವರ ಅಭಿಪ್ರಾಯವಾಗಿದೆ.[೨೨] ಈಕೆಯು ಕಂಪಿಲ ರಾಯನ ಮಗಳೆಂದು ಪ್ರೊ. ಒಡೆಯರ್ ಬಿ. ಹೆಗ್ಗಡೆಯವರ ಅಭಿಪ್ರಾಯವಾಗಿದೆ.[೨೩] ಕಾಮಾಂಬಿಕೆ ಮತ್ತು ಸಂಗಮನಿಗೆ ಕೆಲವು ಶಾಸನಗಳಲ್ಲಿ ಇವರಿಗೆ ಐದು ಜನ ಮಕ್ಕಳಿದ್ದರೆಂದು ತಿಳಿಸಲಾಗಿದೆ.[೨೪] ಆದರೆ ಈಕೆಯ ಹೆಸರು ತಿಳಿಸುವುದಿಲ್ಲ. ಮತ್ತೆ ಕೆಲವು ಕಡೆ ಪಂಚಪಾಂಡವರ ಸಮಾನರಾದ ಸಂಗಮನ ಮಕ್ಕಳು ಶಾರದಾ ಎಂಬ ರಾಣಿಯರ ಮಕ್ಕಳೆಂದು ತಿಳಿಸಿದೆ. ಕಾಮಾಂಬಿಕೆ ಹೆಸರಿನ ಕುರಿತು ಹಲವರು ಕೆಲವು ರೀತಿಯಲ್ಲಿ ಹೇಳಿದ್ದಾರೆ. ಕಾಮಾಂಬಿಕೆ ಒಬ್ಬಳೇ ರಾಣಿಯಾಗಿರಬಹುದು. ಅಥವಾ ಬೇರೆ ಬೇರೆ ಹೆಸರಿನ ರಾಣಿಯರಬಹುದೇ ಎಂಬ ಅನುಮಾನ ಬರುತ್ತದೆ. ಈಕೆಗೆ ಶಾರದಾದೇವಿ ಎಂಬುದು ವಿದ್ವತ್ತಿನ ಸಂಕೇತವಾಗಿರಬೇಕು. ಶಾರದಾ ಇದಕ್ಕೆ ಪ್ರತಿಯಾಗಿ ಸರಸ್ವತಿ ಎಂದು ಸಹಾ ಕೆಲವೊಂದು ಶಾಸನದಲ್ಲಿ

ಕರೆಯುತ್ತಿರುವುದು ಈಕೆ ಒಬ್ಬ ವಿದ್ವಾಂಸಳಾಗಿರಬಹುದು. ಜೊತೆಗೆ ಈಕೆಯನ್ನು ಹಲವು ಪರ್ಯಾಯ ಹೆಸರುಗಳಿಂದ ಗುರುತಿಸುತ್ತಿದ್ದರೆಂದು ತಿಳಿಯಬಹುದು.[೨೫]

೨. ಹೊನ್ನಮ್ಮ

ಬುಕ್ಕನ ಪ್ರಮುಖ ರಾಣಿ. ಈಕೆಗೆ ಹೊನ್ನಯಿ, ಗೌರಾಂಬಿಕೆ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು ಎಂದು ಸೂರ್ಯನಾರಾಯಣರಾವ್ ಅವರು ಅಭಿಪ್ರಾಯಪಡುತ್ತಾರೆ. ಈಕೆಯು ಸುಂದರಿಯೂ ಹಾಗೂ ಬುದ್ಧಿವಂತಳಾಗಿದ್ದಳೆಂದು, ಸರ್ವಶಾಸ್ತ್ರ ನಿಪುಣೆಯಾಗಿದ್ದಳೆಂದು, ಕಾಮಶಾಸ್ತ್ರದಲ್ಲಿ ರತಿಯ ಹಾಗೆ ಜ್ಞಾನವೇದಗಳ ಅರಿತಳೆಂದು ಕೃತಿಗಳಿಂದ ತಿಳಿಯುವುದರಿಂದ ಈಕೆ ಒಬ್ಬ ವಿದ್ವಾಂಸಳಾಗಿರಬಹುದು. ರಾಜನಿಗೆ ಬೇರೆಯರ ರಾಣಿಯಗಿಂತಲೂ ಇವಳಿಂದಲೇ ಸರ್ವಾಭೀಷ್ಟೆಗಳು ಸಿದ್ಧಿಸುತ್ತಿರಬೇಕು.[೨೬] ಈಕೆ ಪ್ರಮುಖಳು ಹಾಗೂ ನೆಚ್ಚಿನ ಪತ್ನಿಯಾಗಿದಳೆಂದು ಕಂಡುಬರುತ್ತದೆ. ಈಕೆಗೆ ೨ನೇ ಹರಿಹರನೆಂಬ ಮಗನಿದ್ದನು, ಈತನು ತನ್ನ ತಾಯಿಯ ಆತ್ಮಶಾಂತಿಗಾಗಿ ಬ್ರಾಹ್ಮಣರಿಗೆ ಒಂದು ಅಗ್ರಹಾರ ಕಟ್ಟಿಸಿ ಅದಕ್ಕೆ 'ಹೊನ್ನಲಾಪುರ'ವೆಂದು ತಾಯಿ ಹೆಸರಿನಲ್ಲಿ ದಾನ ಮಾಡಿದನೆಂದು ತಿಳಿದುಬರುತ್ತದೆ.[೨೭] ಗಂಗಾದೇವಿಯ 'ವಿರಚಿತ ಮಧುರ ವಿಜಯಂ'ನಲ್ಲಿ ಗೌರಾಂಬಿಕೆ ಮಗ ೨ನೇ ಹರಿಹರನೆಂದು ತಿಳಿದಿರುವುದರಿಂದಾಗಿ[೨೮] ಈಕೆಗೆ ಹೊನ್ನಯಿ ಗೌರಾಂಬಿಕೆ ಎಂದು ಎರಡು ಹೆಸರಿಟ್ಟರು. ಈ ಬಗ್ಗೆ ಸೂರ್ಯನಾರಾಯಣರಾವ್‌ರವರ ಅಭಿಪ್ರಾಯ ಇಲ್ಲಿ ಪ್ರಮುಖವಾಗಿದೆ.[೨೯]

೩. ದೇವಾಯಿ

ಬುಕ್ಕನ ಹಿರಿಯ ರಾಣಿ. ಈಕೆಯ ಕುರಿತು ಸಿಗುವ ಅಧಾರವೆಂದರೆ ಗಂಗಾದೇವಿ ರಚಿಸಿದ 'ಮಧುರ ವಿಜಯಂ'ನಲ್ಲಿ ದೇವಾಯಿ ಮತ್ತು ಬುಕ್ಕನು ನನ್ನ ಅತ್ತೆ ಮಾವನೆಂದು ಹೇಳಿ ವೀರ ಕಂಪಣನು ನನ್ನ ಪತಿಯೆಂದು ತಿಳಿಸಿರುವುದರಿಂದ ದೇವಾಯಿಯ ಮಗ ಎಂದು ತಿಳಿಯಬಹುದು.[೩೦] ಚಿತ್ರದುರ್ಗದ ಕೋಟೆಯಲ್ಲಿ ದೊರೆತ ಒಂದನೇ ಬುಕ್ಕರಾಯನ ಮಗ ವೀರಕಂಪರಾಯನ ಹೊಸ ಕಲ್ಬರಹದಲ್ಲಿಯೂ ಸಹ ದೇವಾಯಿಯ ಹೆಸರಿರುವುದನ್ನು ಕಾಣಬಹುದು.[೩೧]

೪. ಚೊಮ್ಮದೇವಿ

ಈಕೆ ಬುಕ್ಕರಾಯನ ರಾಣಿ. ವಿದ್ವಾಂಸರ ಅಭಿಪ್ರಾಯದ ಪ್ರಕಾರ ಈಕೆ ಪೆನ್ನಗೊಂಡ ರಾಜ್ಯದ ಬುಕ್ಕರಾಯನ ಮಗಳು ಎಂದಿದೆ.[೩೨] ಮತ್ತೆ ಕೆಲವರ ಪ್ರಕಾರ ಈಕೆಗೆ ಪದುಮಲದೇವಿ ಎಂತಲೂ ಕರೆಯುತ್ತಿದ್ದರು ಎಂದು ಹೇಳಿದ್ದಾರೆ. ಕೆಲವೊಂದು ಶಾಸನದಲ್ಲಿ ಇವರಿಬ್ಬರು ಒಬ್ಬಳೇ ರಾಣಿ. ಒಂದು ತವರು ಮನೆ ಹೆಸರಾದರೇ, ಒಂದು ಅತ್ತೆ ಮನೆ ಹೆಸರಾಗಿದೆ. ಆದರೆ ನಿಖರವಾದ ಮಾಹಿತಿ ಸ್ಪಷ್ಟವಾಗಿಲ್ಲ.[೩೩] ಅಂದು ರಾಣಿಯರು ಕೆರೆ ಕಟ್ಟಿಸುವಿಕೆ, ಭೂ ದಾನ ನೀಡುವಿಕೆ ಮುಂತಾದ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆಂದು ಅನೇಕ ಶಾಸನಗಳು ತಿಳಿಸುತ್ತವೆ. ಅದರಂತೆ ಕ್ರಿ.ಶ. ೧೩೬೭ರಲ್ಲಿ ರಾಣಿಯು ಪ್ರಜಾಕಲ್ಯಾಣಕ್ಕಾಗಿ ತಿರುಮಣಿಯೂರು ಎಂಬ ಗ್ರಾಮದಲ್ಲಿ ಒಂದು ಕೆರೆಗೆ ನೀರು ಹರಿದು ಬರಲು ಕಾಲುವೆಯನ್ನು ಅಗೆಸಬೇಕೆಂದು ಆಶಿಸಿ ತನ್ನ ಮಂತ್ರಿಗಳಾದ ನಾಗರಾಜ ಮತ್ತು ಮಾಯಾನಯನಿಗಳಿಗೆ ಆದೇಶಿಸುತ್ತಾಳೆ. ಯುವರಾಣಿಯ ನಿರೂಪದಂತೆ ಮಂತ್ರಿಗಳು ಪೆದ್ದ ಭೈರವೋಜ ಮತ್ತು ಪಿನ್ನ

ಭೋರವೋಜರೆಂಬ ಇಬ್ಬರು ಕರ್ಮಿಗಳಿಗೆ ಆ ಕೆಲಸವನ್ನು ವಹಿಸುತ್ತಾಳೆ. ಈ ಕಾರ್ಯವನ್ನು ಅವರಿಗೆ ವಹಿಸಿಕೊಡುವಾಗ ಕೆರೆಯ ನೀರು ನಾಲೆಯಲ್ಲಿ ಸರಿಯಾಗಿ ಅರಿಯಬೇಕೆಂದು ಷರತ್ತನ್ನು ವಿಧಿಸುತ್ತಾಳೆ. ಒಂದು ವೇಳೆ ಕೆರೆಯ ನೀರು ಸರಿಯಾಗಿ ಬಂದ ಪಕ್ಷದಲ್ಲಿ ಅವರುಗಳಿಗೆ ನೂರಾ ಮುವತ್ತು ಸ್ವರ್ಣನಾಣ್ಯಗಳನ್ನು (ಸಿಂಗೆಯ ಗದ್ಯಾಣ) ಭೂಮಿ ತೂಬಿನ ಹತ್ತಿರ ಮನೆ, ಬಂಗಾರದ ಕಡಗಗಳನ್ನು ನೀಡುವುದಾಗಿಯೂ, ಒಂದು ವೇಳೆ ಕೆಲಸವು ಅಸಮರ್ಪಕವಾದಲ್ಲಿ ಅವುಗಳನ್ನು ನೀಡುವುದಿಲ್ಲವೆಂದು ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ. ಆದರೆ ಆ ಕೆರೆಯನ್ನು ಅತ್ಯಂತ ಸಮರ್ಪಕವಾಗಿ ಕಟ್ಟಿ ಆ ಬಹುಮಾನಗಳನ್ನು ಅವರುಗಳು ಪಡೆಯುತ್ತಾರೆ ಎಂಬುದಾಗಿಯೂ ಕ್ರಿ.ಶ. ೧೪೭೭ ಶಾಸನವು ತಿಳಿಸುತ್ತದೆ. ಕೆಲವು ವಿಧಿವತ್ತಾದ ಧಾರ್ಮಿಕ ಆಚರಣೆಗಳ ನಂತರವೇ ಆ ಕೆರೆಯನ್ನು ಬಳಸಿಕೊಳ್ಳಲಾಯಿತ್ತೆಂದು ಈ ಶಾಸನವು ಉಲ್ಲೇಖಿಸುತ್ತದೆ. ಇದರಿಂದಾಗಿ ಸಾರ್ವಜನಿಕ ಕಾರ್ಯಗಳನ್ನು ಮಾಡುವಾಗ ಸಮರ್ಪಕವಾಗಿರ ಬೇಕೆಂದು ಇವರ ಯೋಜನೆಗಳು ಮೆಚ್ಚುತ್ತಕ್ಕದಾಗಿದೆ. ಜೊತೆಗೆ ಈಕೆಗೆ ವಿರೂಪಣನೆಂಬ ಮಗನಿದ್ದನೆಂದು ತಿಳಿದುಬರುತ್ತದೆ.[೪೪]

೫. ಗಂಗಾದೇವಿ

ಸಂಗಮರ ವಂಶದಲ್ಲಿ ಹೆಚ್ಚು ಪ್ರಮುಖವಾದ ಹೆಸರು ಗಂಗಾದೇವಿ. ಈಕೆ ವೀರ ಕಂಪಣನ ರಾಣಿ. ವಿಜಯನಗರ ಕಾಲದ ಕನ್ನಡಿಗರ ಹೆಮ್ಮೆಯ ಕವಿಯಿತ್ರಿ ಗಂಗಾದೇವಿ. ಇವಳ ಕಾಲನಿರ್ಣಯ ಸ್ಪಷ್ಟವಾಗಿಲ್ಲ. ಈಕೆಯು ವಿಜಯನಗರದ ಪ್ರಮುಖ ವಿದ್ವಾಂಸಳಾಗಿದ್ದಾಳೆ. ಈಕೆಯ ಕೃತಿಯಿಂದಲೇ ವಿಜಯನಗರದ ಬಗ್ಗೆ ಹಲವು ವಿಚಾರಗಳು ತಿಳಿದುಬರುತ್ತವೆ.

ಈಕೆ ರಚಿಸಿದ ಕೃತಿಯ ಹೆಸರು 'ವೀರಕಂಪರಾಯ ಚರಿತಂ' ಅಥವಾ 'ಮಧುರ ವಿಜಯಂ'. ಸಂಸ್ಕೃತದಲ್ಲಿ ರಚನೆಗೊಂಡ ಐತಿಹಾಸಿಕ ಕಾವ್ಯ. ಇದರಲ್ಲಿ ತನ್ನ ಪತಿಯ ವೀರ ಪರಾಕ್ರಮವನ್ನು ಹೊಗಳಿ ರಚಿಸಲಾಗಿದೆ. ಇಲ್ಲಿ ಕಂಪಣನು ತಂದೆಯ ಆದೇಶದಂತೆ ದಕ್ಷಿಣ ದೇಶಕ್ಕೆ ದಂಡೆತ್ತಿ ಹೋಗಿ ವನ್ನರಾಜರನ್ನು ರಾಜ ಗಂಭೀರ (ಪಡವೀಡು) ದುರ್ಗದಲ್ಲಿದ್ದ ಚಂಪರಾಯ(ಸಂಭಮಯ)ನನ್ನು ಮಧುರೆಯ ಮಹಮ್ಮದಿಯರನ್ನು ಸೋಲಿಸಿದ ಘಟನೆಯನ್ನು ಒಳಗೊಂಡಿದೆ.

ಈ ಕೃತಿಯಿಂದ ಚರಿತ್ರೆಯಲ್ಲಿ ದೊರೆಯದಿರುವ ಅನೇಕ ಸಂಗತಿಗಳನ್ನು ಈ ಕಾವ್ಯದಲ್ಲಿ ಗುರುತಿಸಬಹುದಾಗಿದೆ. ಮುಖ್ಯವಾಗಿ

೧. ವಿಜಯನಗರದವರು ಆಂಧ್ರದವರೋ/ಕನ್ನಡಿಗರೋ ಎಂಬ ಬಗ್ಗೆ ಬುಕ್ಕನ ಕರ್ಣಾಟ ಲೋಕನಯನೋತ್ಸವ ಪೂರ್ಣಚಂದ್ರನೆಂದು ವಿಶ್ಲೇಷಿಸಿದ್ದಾಳೆ.

೨. ವಿಜಯನಗರ ಸೇನೆಯನ್ನು ಕರ್ಣಾಟ ಸೇನೆಯೆಂದು ಕರೆದು ಅಲ್ಲಿ ಬಾಣಗಳ ವರ್ಣನೆಯಲ್ಲಿ ಆಂಧ್ರರೆಂಬ ಅಂಧಕಾರವನ್ನು ನಾಶಮಾಡುವ ಸೂರ್ಯನಂತಿರುವ ಬಾಣವಿರುವುದು ಎಂಬ ಅಂಶವು ಕನ್ನಡಿಗರ ಎಂಬ ಅಂಶಕ್ಕೆ ಪುಷ್ಠೀ ನೀಡುತ್ತದೆ.

೩. ವಿಜಯನಗರ ಅಂತಃಪುರದ ಸ್ತ್ರೀಯರನ್ನು ಕುಂತಳಸ್ತ್ರೀ ಎಂದು ಕರೆದರೆ, ತೆಲುಗು ಮೂಲದ ಸ್ತ್ರೀಯರನ್ನು 'ಕುಂತಳನಾರಿ' ಎಂದು ಕರೆದು ಇಲ್ಲಿ ತೆಲುಗು ಮೂಲದ ಸ್ತ್ರೀಯರನ್ನು 'ನಾರಿ' ಎಂದು

ಕರೆಯುತ್ತಿದ್ದರಿಂದಾಗಿ ವಿಜಯನಗರ ಸ್ತ್ರೀಯರು ಕನ್ನಡಿಗರು ಎಂಬುದಕ್ಕೆ ಈ ಕೃತಿ ಆಧಾರವಾಗಿದೆ. ಈಕೆ ಕಂಪಣನೊಡನೆ ಯುದ್ಧದಲ್ಲಿ ಭಾಗವಹಿಸಿ ಅಲ್ಲಿನ ಪ್ರಕೃತಿ ವರ್ಣನೆ, ಪತಿಯ ಪರಾಕ್ರಮತೆ ವರ್ಣನೆ ಜೊತೆಗೆ ಅಶ್ವವರ್ಣನೆ, ಋತುಗಳ, ವನಕೇರಿಗಳ ಪರಿಚಯ ಮಾಡಿರುವುದು ಶ್ಲಾಘನೀಯ. ವೈಯಕ್ತಿಕ ವಿಚಾರವಾಗಿ ಈಕೆಯ ತಂದೆತಾಯಿಗಳು ಯಾರು ಎಂಬ ವಿಚಾರ ಕಾವ್ಯ ಅಥವಾ ಬೇರೆ ಮೂಲದಿಂದ ದೊರಕುವುದಿಲ್ಲ. ಪತಿಯು 'ಲೋಚನಾ ನಂದಿನಿ' ಮತ್ತು ಸರೋಜಮುಖಿ ಎಂದು ನೆನಸಿಕೊಳ್ಳುವ 'ಕಮಲಮುಖಿ' ಎಂದು ಕರೆಯುತ್ತಿದ್ದರಿಂದ ಈಕೆ ಸುಂದರವಾಗಿರಬಹುದು. ಜೊತೆಗೆ ದೇವಿ ಎಂದಿರುವುದರಿಂದ ಉತ್ತಮ ಕುಲಭೂಷಿತೆ ಎಂದು ಹೇಳಬಹುದು. ಕೋಮಲ ಸ್ವಭಾವ, ರಾಜಕೀಯ ವಿದ್ಯಾಮಾನ ಅರಿತವಳು ಜೊತೆಗೆ ಶ್ರೇಷ್ಠ ಸಂಸ್ಕೃತ ಕವಯಿತ್ರಿ. ಧೈರ್ಯ ಸಾಹಸವನ್ನು ಪ್ರದರ್ಶಿಸಿರುವುದರಿಂದ ಈಕೆಯ ವ್ಯಕ್ತಿತ್ವದ ಪರಿಚಯ ನೀಡುತ್ತದೆ. ಕಲಾಯೊಬ್ಬನೆ ಪುಣ್ಯವಂತ, ವಿದ್ಯೆ, ಧರ್ಮ, ಪುಣ್ಯ ಎಲ್ಲವೂ ಹಾಳಾಗಿ ಹೋಗಿದೆ. ಗತವೈಭವ ಮರಳಿ ಸಂಪಾದಿಸಬೇಕೆಂದು ಬಯಸುವ ಅಂಶ ಕಾಣಬಹುದು.[೩೯]

ಈ ಕಾವ್ಯ ಕುರಿತು ಹಲವಾರು ವಿದ್ವಾಂಸರು ಇಪ್ಪತ್ತನೇ ಶತಮಾನದಲ್ಲಿ ಬೇರೆ ಟೀಕೆ ಮಾಡಿ ಇಂಥ ಉತ್ತಮ ಗ್ರಂಥ ಗಂಗಾದೇವಿಗೆ ರಚಿಸಲು ಸಾಧ್ಯವಿಲ್ಲ. ಯಾರೊ ಬರೆದು ಅವಳ ಹೆಸರಿನಲ್ಲಿ ಅಂಕಿತಗೊಳಿಸರಬಹುದೆಂದು ಹೇಳಿದ್ದನ್ನು ಹರಿಹರ ಶಾಸ್ತ್ರೀಯವರು ಖಂಡಿಸುತ್ತಾರೆ. ೧೪ನೇ ಶತಮಾನದ ಸಂಗಮರ ವಂಶದಲ್ಲಿ ಒಬ್ಬ ಸ್ತ್ರೀ ಕಾವ್ಯ ರಚಿಸಲು ಸಾಧ್ಯವಿಲ್ಲವೆಂದು ವಿರೋಧಿಸಿರುವುದು ನಿಜಕ್ಕೂ ಪುರುಷ ಕೇಂದ್ರಿತ ದೃಷ್ಟಿಯಿಂದಲೇ ಎಂದು ಹೇಳಬಹುದು. ಇಲ್ಲೂ ಸಹ ಮಹಿಳೆಯ ಏಳಿಗೆಯನ್ನು ಬಯಸದ ಪುರುಷ ಮೂಲವನ್ನು ಕಂಡುಕೊಳ್ಳಬಹುದು. ಕೆಲವೊಬ್ಬರು ಈಕೆ ಗಂಗಾದೇವಿಯೋ ಕಂಪಣನ ದಾಸಿಯೆಂದು ಹೇಳಿ ಕೆಲವರು ಕೆಲವು ಕಾರಣ ಮುಂದೊಡ್ಡಿ ಈಕೆಯನ್ನು ದಾಸಿ ಪರಂಪರೆಗೆ ಸೇರಿಸುವ ಅಂಶ ಕುರಿತು ಫಿಲಿಯೋಜಾರವರು ಕಟುವಾಗಿ ಟೀಕಿಸುತ್ತಾರೆ. ಜೊತೆಗೆ ಚಿತ್ರದುರ್ಗದ ಕೋಟೆಯಲ್ಲಿ (ಇತ್ತೀಚಿಗೆ) ದೊರೆತ ೧ನೇ ಬುಕ್ಕರಾಯನ ಮಗ ವೀರಕಂಪಣನ ಹೆಸರು ಹೊಸಕಲ್ಬರಹದಲ್ಲಿ ಬುಕ್ಕರಾಯನ ಅಳ್ವಿಕೆ ದೇವಾಯಿ ಮಗ ಕಂಪಣ ಹೆಂಡತಿ ಗಂಗಾದೇವಿ ಎಂದಿರುವುದರಿಂದ ಮೇಲಿನ ಅಂಶಕ್ಕೆ ಪುಷ್ಟೀ ನೀಡುತ್ತದೆ.[೪೦]

ಇದರಿಂದಾಗಿ ಹೆಚ್ಚಾಗಿ ಮಹಿಳೆಯ ಕುರಿತು ಕೆಳಮಟ್ಟದ ಅಥವಾ ಹೆಣ್ಣು ಕೇವಲ ದ್ವಿತೀಯ ದರ್ಜೆಯ ಪ್ರಜೆಯೆಂಬ ಭಾವನೆಯಿಂದ ನೋಡಲು ಬಯಸುತ್ತಾರೆಯೇ ಹೊರತು ಉನ್ನತ ಮಟ್ಟದಲ್ಲಿ ಬೆಳೆದರೂ ಸಹ ಆ ಬಗ್ಗೆ ಹೆಚ್ಚು ಮಹತ್ವ ನೀಡುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ.

೨. ರಾಮಾದೇವಿ

ಕಂಪಣನ ಮತ್ತೊಬ್ಬ ರಾಣಿ. ಈಕೆಯು ಸಹ ಗಂಗಾದೇವಿಯೊಂದಿಗೆ ಮಧುರೆಯ ವಿಜಯ ಯಾತ್ರೆಯಲ್ಲಿ ಪಾಲ್ಗೊಂಡಿದ್ದಳು. ಕಂಚಿಯಲ್ಲಿದ್ದಾಗ ಕಂಚಿಯ ಬಳಿ 'ಏನಾಡಿಸುಡೂರು' ಎಂಬಲ್ಲಿ ಒಂದು ಕೆರೆ ಕಟ್ಟಿಸಿ ಆ ಊರಲ್ಲಿ ಮತ್ತೆ ಜನ ಬಂದು ವಾಸಿಸುವಂತೆ ಮಾಡಿದಳಲ್ಲದೇ ಆ ಊರಿಗೆ 'ರಾಮಾಯಿನಲ್ಲೂರು' ಎಂಬ ಹೆಸರಿಟ್ಟಳು ಎಂದು ವಸುಂಧರಾ ಫಿಲಿಯೋಜಾರವರ ಅಭಿಪ್ರಾಯ ವಾಗಿದೆ.[೪೧]

೭. ಮುಲ್ಲಾದೇವಿ

೨ನೇ ಹರಿಹರನ ರಾಣಿ. ಈಕೆಯ ಮುಲ್ಲಾಂಬಿಕೆ ಎಂದು ಸಹಾ ಕರೆಯುತ್ತಾರೆ. ಈಕೆಯ ಯಾದವ ರಾಜನಾದ ರಾಮಾದೇವನ ವಂಶಕ್ಕೆ ಸೇರಿದವಳೆಂದು ರೈಸ್‌ರವರು ಅಭಿಪ್ರಾಯ ಪಡುತ್ತಾರೆ.[೩೮]

೮. ಬುಕ್ಕವ್ವೆ

ಸಂಗಮ ವಂಶದ ಪ್ರಮುಖ ರಾಣಿ. ಈಕೆಯು ೨ನೇ ಹರಿಹರನ ರಾಣಿ. ಕ್ರಿ.ಶ. ೧೩೯೭ರ ಶಾಸನದಲ್ಲಿ ಈಕೆಯ ಉಲ್ಲೇಖವಿದೆ. ಈಕೆಯು ಹಲವಾರು ದಾನ ದತ್ತಿಗಳನ್ನು ನೀಡಿರುವುದು ಹಲವು ಶಾಸನಗಳಿಂದ ಸ್ಪಷ್ಟಪಡುತ್ತದೆ. ಕ್ರಿ.ಶ. ೧೩೯೭ರ ಶಾಸನದಲ್ಲಿ ವೀರ ಹರಿಹರನ ರಾಣಿಯಾದ ಬುಕ್ಕವ್ವೆಯು ತನ್ನ ಗುರು ಭಾಸ್ಕರ ದೇವಯ್ಯನಿಗೆ ಪುಣ್ಯವಾಗಲೆಂದು ಜಡೆಯ ಶಂಕರ ದೇವರ ಮುಂದೆ ದೀಪಮಾಲೆ ಕಂಬವನ್ನು ಮಾಡಿಸಿದ್ದನ್ನು ಉಲ್ಲೇಖಿಸುತ್ತದೆ ಎಂಬ ವಿಚಾರ ತಿಳಿವುದರಿಂದ ಇವರು ಶಿಕ್ಷಣವನ್ನು ಪಡೆಯುತ್ತಿದ್ದರೆಂದು ಹಾಗೂ ತಮ್ಮ ಗುರುಗಳ ಶ್ರೇಯಸ್ಸು ಬಯಸುತ್ತಿದ್ದರೆಂಬ ಬಗ್ಗೆ ತಿಳಿದುಬರುತ್ತದೆ.[೩೯] ಇದಲ್ಲದೆ ಬುಕ್ಕವ್ವೆಯು ದಂಡನಾಯಕನಾದ ಈರುಗಪ್ಪನು ೧೩೯೭ರಲ್ಲಿ ರಾಜಧಾನಿಯಲ್ಲಿ ಕಟ್ಟಿಸಿದ ಬಸಿದಿಗೆ ಉದಾರದಾನ ಕೊಟ್ಟಿದ್ದಾಗಿ ತಿಳಿದುಬರುವುದರಿಂದಾಗಿ ಇವರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರೆಂಬ ವಿಚಾರ ತಿಳಿಯಬಹುದುದಾಗಿದೆ. ಸಂಗಮ ವಂಶದಲ್ಲಿ ಹೆಚ್ಚಾಗಿ ರಾಣಿಯರು ಜೈನ ಧರ್ಮಕ್ಕೆ ವಿಶೇಷತ ಪೋಷಣೆ ನೀಡುತ್ತಿದ್ದರೆಂದು ತಿಳಿಯಬಹುದು.[೪೦]

೯. ಬುಕ್ಕಾಂಬ

ಬುಕ್ಕಾಂಬ ರಾಮಚಂದ್ರನ ರಾಣಿ. ಈಕೆಯು ತನ್ನ ಪತಿಯೊಂದಿಗೆ ಯುದ್ಧದಲ್ಲಿ ಪಾಲ್ಗೊಂಡ ಅಂಶದ ಬಗ್ಗೆ ಕ್ರಿ.ಶ. ೧೪೧೫ ಫೆಬ್ರವರಿ ೧೪ರಲ್ಲಿ ಹೊರಡಿಸಿರುವ ಶಾಸನವು ತಿಳಿಸುತ್ತದೆ. ಅನಂತಪುರ ಜಿಲ್ಲೆಯ ಹಿಂದೂಪುರ ತಾಲೂಕಿನ ಗೋರಂಟ್ಲದ ಗ್ರಾಮದಲ್ಲಿ ೧ನೇ ದೇವರಾಯನ ಶಾಸನವು ಮುಖ್ಯವಾಗಿದೆ. ೧ನೇ ದೇವರಾಯನ ಆಜ್ಞೆಯಂತೆ ಅವನ ಮಗ ಯುವರಾಜ ರಾಮಚಂದ್ರನು ಆಂಧ್ರದೇಶಕ್ಕೆ ದಂಡೆತ್ತಿ ಹೋಗುವಾಗ ಮಧ್ಯೆದಲ್ಲಿ ಬರುವ ಶ್ರೀಶೈಲದಲ್ಲಿ ಈಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದ ಅವನ ಪತ್ನಿ ಬುಕ್ಕಾಂಬಳು ಪತಿಯ ಒಪ್ಪಿಗೆಯನ್ನು ಪಡೆದು ಕಂಚಿಕುಂಟ ಎಂಬ ಗ್ರಾಮವನ್ನು 'ಬುಕ್ಕಾಪುರ' ಎಂದು ಹೆಸರಿಸಿ ಸರ್ವಮಾನ್ಯ ಅಗ್ರಹಾರವಾಗಿ ಮಾಡಿ ಎಂಟು ಜನ ಬ್ರಾಹ್ಮಣರಿಗೆ ದಾನ ನೀಡಿದಳು. ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ಗ್ರಾಮಕ್ಕೆ ಒಬ್ಬ ಮಹಿಳೆಯ ಹೆಸರಿಟ್ಟಿರುವುದು ಗಮನಾರ್ಹ. ಆದರೆ ಈಕೆ ಸಾಮಾನ್ಯ ಸ್ತ್ರೀಯಾಗಿರದೆ ರಾಜಕುಮಾರನ ಪತ್ನಿ ಅಂದರೆ ಇಲ್ಲಿ ಆಕೆ ರಾಣಿಯೆಂಬುದು ನೆನಪಿಡಬೇಕಾಗುತ್ತದೆ.[೪೧]

೧೦. ಅಂಣಲಾದೇವಿ

ಒಂದನೇ ದೇವರಾಯನ ರಾಣಿ. ಈಕೆಯು ತನ್ನ ಪತಿಯ ಹೆಸರಿನಲ್ಲಿ ದಾನ ದತ್ತಿ ನೀಡಿದ ಅಂಶಗಳ ಕುರಿತು ಶಾಸನಗಳಿಂದ ತಿಳಿದುಬರುತ್ತದೆ. ಈಕೆಯು ತನ್ನ ಪತಿಗೆ ಪಂಪಾದೇವನು ರಕ್ಷಿಸಲಿ ಎಂದು ಹಾರೈಸಿ ಜೊತೆಗೆ ರಾಮಚಂದ್ರ ದೇವರಿಗೆ ಚಿನ್ನದ ಕರಗಳನ್ನು ನೀಡಿರುತ್ತಾಳೆ.[೪೨] ಕ್ರಿ.ಶ.

೧೪೧೬ರಲ್ಲಿ ಹಜಾರರಾಮಚಂದ್ರ ದೇವಾಲಯದ ಅದಿಷ್ಠಾನ ರಚನೆಯಾಗಿರಬೇಕೆಂದು ಏಕೆಂದರೆ ಈ ಅವಧಿಯ ಮುಂಚೆ ಈ ದೇವಾಲಯವು ಅಸ್ತಿತ್ವದಲ್ಲಿರಲಿಲ್ಲ. ದೇವಾಲಯದ ಅದಿಷ್ಠಾನದಲ್ಲಿ ದೇವಯಾನಿಗೆ ಸಂಬಂಧಿಸಿದಂತೆ ಶಾಸನ ಇರುವುದರಿಂದ ಈ ಕಾಲಕ್ಕೆ ಅಂದರೆ ೧೪೧೬ಕ್ಕೆ ಈ ದೇವಾಲಯ ರಚನೆಯಾಗಿರಬೇಕು. ಇದಲ್ಲದೇ ಇದೇ ಅದಿಷ್ಠಾನದಲ್ಲಿ ಅಂಣಲಾದೇವಿ ಚಿನ್ನದ ಅರಿವಾಣ ವನ್ನು ದೇವರಿಗೆ ನೀಡಿರುವಂತೆ ಶಾಸನ ತಿಳಿಸಿರುವುದರಿಂದ ದೇವಾಲಯ ಕಟ್ಟಿಸಿ ಆರಂಭದಲ್ಲಿ ಈ ವಸ್ತುಗಳನ್ನು ಅಂಣಲಾದೇವಿಯೇ ನೀಡಿರಬೇಕು. ಹಾಗಾಗಿ ೧ನೇ ದೇವರಾಯನ ಕಾಲದಲ್ಲಿ ಈ ದೇವಾಲಯವು ಕಟ್ಟಿರಬೇಕೆಂದು ಅಭಿಪ್ರಾಯಪಡುತ್ತಾರೆ.[೪೩]

೧ನೇ ದೇವರಾಯ ರೈತನೊಬ್ಬಳ ಮಗಳನ್ನು ರಾಣಿಯನ್ನಾಗಿ ಪಡೆಯಲು ಈತನ ಕೈಗೊಂಡ ಸಾಹಸದ ಕಥೆಯನ್ನು ಚರಿತ್ರಕಾರ ಫರಿಸ್ತಾ ದೀರ್ಘವಾಗಿ ವರ್ಣಿಸಿದ್ದಾನೆ. ಇದರಿಂದಾಗಿ ಇಲ್ಲಿ ರಾಣಿಯರನ್ನು ಮದುವೆ ಮಾಡಿಕೊಳ್ಳುವಾಗ ಇಲ್ಲಿ ರಾಜರು ಹೆಚ್ಚಾಗಿ ಸೌಂದರ್ಯಕ್ಕೆ ಮಹತ್ವ ನೀಡುತ್ತಿದ್ದರೆಂಬ ಅಂಶ ಸ್ಪಷ್ಟವಾಗುತ್ತದೆ. ಜೊತೆಗೆ ರಾಣಿಯರು ಧಾರ್ಮಿಕ ಕಾರ್ಯಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದರೆಂದು ತಿಳಿದುಬರುತ್ತದೆ.[೪೪]

೧೧. ಭೀಮಾದೇವಿ

ಸಂಗಮ ವಂಶದ ೧ನೇ ದೇವರಾಯನ ಮತ್ತೊಬ್ಬ ಪ್ರಮುಖ ರಾಣಿ. ಈಕೆಯು ಜೈನಧರ್ಮದ ಅನುಯಾಯಿಯಾಗಿದ್ದಳು. ಶ್ರವಣಬೆಳಗೊಳದ ಪಂಡಿತಾಚಾರ್ಯರ ಶಿಷ್ಯೆಯಾಗಿದ್ದಳು. ಮಂಗಾಯಿ ಬಸ್ತಿಯಲ್ಲಿ ಶಾಂತಿ ತೀರ್ಥಂಕರರ ಬಿಂಬದ ಮೇಲೆ ಶ್ರೀ ಮತ್ಪಂಚಿತಾಚಾರ್ಯ ಗುಡಿ ದೇವರಾಯ ಮಹಾರಾಯರ ರಾಣಿ ಭೀಮಾದೇವಿ ಮಾಡ್ಸಿದ ಶಾಸ್ತ್ರಿನಾಥ ಸ್ವಾಮಿ ಶ್ರೀ.... ಎಂಬ ಶಾಸನವಿದೆ. ಅಂದರೆ ಭೀಮಾದೇವಿ ಶ್ರವಣಬೆಳಗೊಳಕ್ಕೆ ತೀರ್ಥದರ್ಶನಕ್ಕಾಗಿ ಬಂದಿದ್ದು ಸ್ಪಷ್ಟವಾಗುತ್ತದೆ. ಮಂಗಾಯಿಬಸ್ತಿ ಶ್ರವಣಬೆಳಗೊಳದ ಪ್ರಮುಖ ಬಸ್ತಿಗಳಲ್ಲಿ ಒಂದು ಇದಕ್ಕೆ ತ್ರಿಭುವನ ಚೂಡಾಮಣಿ ಬಸ್ತಿಯೆಂದು ಹೆಸರೊಂದಿದೆ. ಕ್ರಿ.ಶ. ೧೪೧೦ರಲ್ಲಿ ಈಕೆ ಮಂಗಾಯಿ ಬಸ್ತಿಯಲ್ಲಿ ಶಾಂತಿನಾಥನ ವಿಗ್ರಹವನ್ನು ಪ್ರತಿಷ್ಠಾಪಿಸಿದಳು. ಈಕೆಯ ಪ್ರೇರಣೆಯ ಮೇರಿಗೆ ದೊರೆ ದೇವರಾಯನು ಅನೇಕ ಜೈನ ಗುರುಗಳಿಗೆ, ಬಸಿದಿಗಳಿಗೆ ಉದಾರವಾಗಿ ದಾನ ಕೊಟ್ಟಿರುವ ಉಲ್ಲೇಖಗಳಿವೆ. ಆದ್ದರಿಂದ ವಿಶೇಷತಃ ಜೈನ ಧರ್ಮವು ರಾಣಿಯರಿಂದ ಪೋಷಣೆ ಸಿಕ್ಕಿತು ಎಂಬ ಅಭಿಪ್ರಾಯ ಪಡಬಹುದು.[೪೫]

೧೩. ಸಿಂಹಳದೇವಿ

ಸಿಂಹಳದೇವಿ ಪತಿ ೨ನೇ ದೇವರಾಯ. ಇವರ ಮಗನೇ ವಿರೂಪಾಕ್ಷ. ಅಬ್ದುಲ್ ರಜಾಕನು ಸ್ಪಷ್ಟವಾಗಿ ಹೇಳಲ್ಪಟ್ಟಿರುವಂತೆ ೨ನೇ ದೇವರಾಯನ ಮೇಲೆ ಹತ್ಯಾ ಪ್ರಯತ್ನವು ನಡೆಯಿತೆಂಬುದನ್ನು ನಾವಿಲ್ಲಿ ಜ್ಞಾಪಿಸಿಕೊಂಡಾಗ ಆ ಸಮಯದಲ್ಲಿ ಆತನ ಮಂತ್ರಿ ಅಥವಾ ದಂಡನಾಯಕನು ಸಿಂಹಳದ ಕಡೆಗೆ ಹೋಗಿದ್ದನೆಂದು ತಿಳಿಸಲಾಗಿದೆ. ಬಹುಶಃ ೨ನೇ ದೇವರಾಯನಿಗೆ ಮದುವೆ ಹೆಣ್ಣನ್ನು ಗೊತ್ತು ಪಡಿಸಲು ಸಿಂಹಳ ದೇಶಕ್ಕೆ ಹೋಗಿದ್ದಿರಬೇಕು, ಆಕೆ ಸಿಂಹಳ ದೇಶದ ರಾಜಕುಮಾರಿಯಲ್ಲಿ ಒಬ್ಬಳಾಗಿರ ಬೇಕು ಸಿಂಹಳದೇವಿ ಎನ್ನುವುದು ಸಿಂಹಳ ದ್ವೀಪದಿಂದ ಬಂದಿರುವಳೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ.[೪೬]

೧೪. ಕಮಲಾದೇವಿ

ಕಮಲಾದೇವಿ ೨ನೇ ದೇವರಾಯನ ರಾಣಿ. ೨ನೇ ದೇವರಾಯ ಸಂಗಮದ ಪ್ರಮುಖ ದೊರೆ. ಕಲೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದನು. ರಾಣಿ ಈಕೆಯು ತುಮಕೂರು ಜಿಲ್ಲೆಯ ಬಿದಿರಿನ ಕಲ್ಲಿನಾಥ ದೇವರಿಗೆ ಭೂದಾನ ನೀಡಿದದನು ಶಾಸನವು ಉಲ್ಲೇಖಿಸುತ್ತವೆ. ಒಟ್ಟಿನಲ್ಲಿ ಸಂಗಮ ವಂಶದ ರಾಣಿಯರು ಸಹ ಸಾಮ್ರಾಜ್ಯದ ಅಭಿವೃದ್ಧಿಗಾಗಿ ಸಾರ್ವಜನಿಕ ಕಾರ್ಯಗಳಲ್ಲಿ, ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ಗುರುತಿಸಿಕೊಂಡ ಅಂಶವು ಪರಿಗಣನಾರ್ಹವಾದುದಾಗಿದೆ.[೪೭]

೨.೪. ಸಾಳುವ ವಂಶದ ರಾಣಿಯರು

ವಿಜಯನಗರ ಸಾಮ್ರಾಜ್ಯದಲ್ಲಿ ಸಾಳ್ವರ ಆಳ್ವಿಕೆ ೨ನೇ ಸಂತತಿಯಾಗಿದೆ. ಸಾಳುವರು ಪ್ರಾಚೀನ ಮತ್ತು ಪ್ರತಿಷ್ಠಿತ ಮನೆತನಕ್ಕೆ ಸೇರಿದವರು ಸಾಳುವ ವಂಶಜರು. ಸಂಗಮ ಅರಸರ ಕೈಕೆಳಗೆ ಸೇನೆಯಲ್ಲಿ ಸಾಳುವರು ಅಪ್ರತಿಮಾ ಸೇವೆಸಲ್ಲಿಸಿದ ನಾಯಕರಾಗಿದ್ದರು. ಸಾಳುವರು ಮಂಗಳ ಗಿರಿಯಿಂದ ಬಂದವರು. ಸಾಳ್ವ ವಂಶ ಮಂಗಿದೇವ ಎನ್ನುವವನು ಸಂಬುವರಾಯ ಮತ್ತು ಮಧುರೆಯ ಸುಲ್ತಾನ ವಿರುದ್ಧ ನಡೆದ ಯುದ್ಧದಲ್ಲಿ ರಾಜಕುಮಾರ ೨ನೇ ಕಂಪಣ್ಣನಿಗೆ ಸಹಾಯ ನೀಡಿದ್ದನು. ಸಾಳುವಾಭ್ಯುದಯಂ ಪ್ರಕಾರ ಸಾಳ್ವ ಪೂರ್ವಜರು ಕಲ್ಯಾಣಿಯಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಕ್ರಿ.ಶ. ೧೪೫೬ರಲ್ಲಿ ಸಾಳ್ವ ೩ನೇ ಗುಂಡನ ಮಗ ಸಾಳ್ವನರಸಿಂಹನು ಚಂದ್ರಗಿರಿಯ ರಾಜ್ಯದ ರಾಜ್ಯಪಾಲನಾಗಿ ಕಾರ್ಯನಿರ್ವಹಿಸುತ್ತಿದ್ದನು.[೪೮] ಇವರು ಯದುಕುಲ ಸಂಭೂತರಾದ ಸಾಳುವ ಮನೆತನದವರು. ತಲೆಮಾರೆಯಾಗಿ ಸಂಗಮ ಮನೆತನದ ಅರಸರುಗಳಲ್ಲಿ ಸೈನ್ಯಾಧಿಕಾರವನ್ನು ವಹಿಸುತ್ತಾ ಬಂದರು. ಶೌರ್ಯ, ಸಾಹಸದಿಂದ ಕಾದು 'ಕಠಾರಿ ಸಾಳುವ' ಎಂಬ ಬಿರುದನ್ನು ಪಡೆದಿದ್ದರು. ಇದರಿಂದಾಗಿ ಈ ಮನೆತನಕ್ಕೆ ಸಾಳುವ ಎಂಬ ಹೆಸರು ಬಂದಿದೆ.[೪೯]

ಈ ವಂಶವು ಕ್ರಿ.ಶ. ೧೪೮೫ ರಿಂದ ೧೪೯೧ ಎಂದು ಅಥವಾ ೧೫೦೩ರ ವರೆಗೆ ಆಳ್ವಿಕೆ ನಡೆಸಿದರು ಎಂದು ಅಂದಾಜಿಸಲಾಗಿದೆ. ಇಲ್ಲಿ ಮುಖ್ಯವಾಗಿ ಮೂವರು ಅರಸರು ಮಾತ್ರ ಕಂಡುಬರುತ್ತಾರೆ. ಮೊದಲ ಸ್ಥಾಪಕ ತಿಮ್ಮರಾಜ, ಸಾಳುವ ನರಸಿಂಹರಾಯ ಮತ್ತು ಇಮ್ಮಡಿ ಸಾಳುವ ನರಸಿಂಹ ಪ್ರಮುಖ ಅರಸರಾಗಿದ್ದಾರೆ.[೫೦] ಈ ಅರಸರ ಆಳ್ವಿಕೆ ಅಲ್ಪಾವಧಿಯಾಗಿದ್ದು ಈ ವಂಶದಲ್ಲಿ ಕಂಡುಬರುವ ಪ್ರಮುಖ ರಾಣಿಯರು ಹರಿಮಾ ಮತ್ತು ಶ್ರೀ ರಂಗಾಂಬಾದೇವಿ.

೧. ಹರಿಮಾ

ಹರಿಮಾ ತಿಮ್ಮರಾಜನ ರಾಣಿ. ಈಕೆಗೆ ಹರಿಮಾ, ಹರಿಣಾ ಇತ್ಯಾದಿ ಹೆಸರುಗಳಿಂದ ಕರೆಯಲಾಗಿದೆ. ಇವಳು ಸಂಗಮ ವಂಶದವಳು. ೨ನೇ ದೇವರಾಯನ ಸಹೋದರಿ. ಕೆಲವರು ಅಕ್ಕ ಇರಬಹುದೇಯೆಂದು ಅಭಿಪ್ರಾಯಪಡುತ್ತಾರೆ.[೫೧] ಇದಕ್ಕೆ ಆಧಾರವಾಗಿ ಕ್ರಿ.ಶ. ೧೪೩೧ರ ಶಾಸನವೊಂದರಲ್ಲಿ ೨ನೇ ದೇವರಾಯನಿಗೆ ಅಕ್ಕ ಇದ್ದಳೆಂದು ಚಂದ್ರವಂಶದ ಸಾಳುವ ತಿಪ್ಪರಾಜನೊಂದಿಗೆ ಆಕೆಯ ವಿವಾಹವು ನಡೆಯುತ್ತದೆಂದು ತಿಳಿದುಬರುತ್ತದೆ.[೫೨] ಹರಿಮಾಳು ತಮಿಳು ರಾಜ್ಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಳಲ್ಲದೆ, ಈಕೆ ವೀರಯೋಧೆಯಾಗಿ ಧೈರ್ಯ-ಸಾಹಸದಿಂದ ಕೂಡಿದ್ದಳೆಂಬುದು ಗಮನಾರ್ಹ.[೫೩]

೨. ಶ್ರೀ ರಂಗಾಂಬಾದೇವಿ

ಸಾಳುವ ವಂಶದ ಪ್ರಮುಖ ರಾಣಿಯರಲ್ಲಿ ಇವಳು ಒಬ್ಬಳು. ಈಕೆ ಸಾಳುವ ನರಸಿಂಹನ ರಾಣಿ. ಈಕೆಯು ತನ್ನ ಕಾಲಾವಧಿಯಲ್ಲಿ ಸಾರ್ವಜನಿಕ ಕಾರ್ಯಗಳನ್ನು ಮಾಡುತ್ತಿದ್ದಳೆಂದು ಅದಕ್ಕೆ ಆಧಾರವಾಗಿ ಕ್ರಿ.ಶ. ೧೪೬೭ರಲ್ಲಿ ದೇವಸ್ಥಾನದ ಒಂದು ಗ್ರಾಮದಲ್ಲಿ ಒಂದು ನೀರಾವರಿ ಕಾಲುವೆ ತೋಡಿಸಿದಳು ಎಂಬ ಅಂಶ ತಿಳಿದುಬರುತ್ತದೆ.[24]

ಇದರಿಂದಾಗಿ ರಾಣಿಯರು ಸಾಮ್ರಾಜ್ಯದಲ್ಲಿ ದೇವಸ್ಥಾನಗಳಿಗೆ, ವ್ಯವಸಾಯ ನೀರಾವರಿಗೆ ಹೆಚ್ಚಿನ ಪ್ರೋತ್ಸಾಹ ಮನ್ನಣೆಯನ್ನು ನೀಡಿದ್ದಾರೆಂಬುದು ಸ್ಪಷ್ಟ. ರಾಣಿಯು ಕ್ರಿ.ಶ. ೧೪೬೭ರಲ್ಲಿ ಶ್ರೀ ರಂಗಾಂಬಾದೇವಿಯಮ್ಮ ದೇವಸ್ಥಾನಕ್ಕೆ ಒಂದು ಹಳ್ಳಿಯನ್ನು ನೀರಾವರಿ ಕಾಲುವೆಯನ್ನು ಅಗೆಯಲು ದಾನ ನೀಡಿದಳು. ಇದೇ ಅವಧಿಯಲ್ಲಿ 'ಕಾಸಕ್ಕಾಲುವ್ಹೆ' ಎಂಬ ಕಾಲುವೆಯನ್ನು ಮಾವಂದೂರು ಇಲ್ಲಿ ನಿರ್ಮಿಸಿ ಇದು ಮಾವಂದೂರು ಬಳಿಯ ಚಿಲುವೆಯಿಂದ ಆದಿತ್ಯನ ಪಲ್ಲಿ ಜಮೀನುಗಳಿಗೆ ನೀರುಣಿಸಲೆಂದೆ ನಿರ್ಮಿಸಿದಳು.[25] ಈಕೆಯು ಕೆರೆ-ಕಾಲುವೆ ಅಭಿವೃದ್ಧಿಗಾಗಿ ಅನೇಕ ಸಾರ್ವಜನಿಕ ಕೆಲಸಗಳನ್ನು ಮಾಡಿರುವುದಲ್ಲದೆ, ಕೃಷಿಗೆ ಹೆಚ್ಚು ಪ್ರೋತ್ಸಾಹವನ್ನು ನೀಡಿದ್ದು ಶ್ಲಾಘನೀಯವೇ ಸರಿ.

೨.೫. ಅರವೀಡು ವಂಶದ ರಾಣಿಯರು

ವಿಜಯನಗರ ಸಾಮ್ರಾಜ್ಯದ ಕೊನೆಯ ವಂಶ ಇದಾಗಿದೆ. ಇವರು ಪ್ರಾಚೀನ ರಾಜವಂಶಕ್ಕೆ ಸೇರಿದವರೆಂಬ ವಾದವಿದೆ. ಆದರೆ ಸಂಗಮ, ಸಾಳುವ ಮತ್ತು ತುಳುವರೊಂದಿಗೆ ಖಚಿತ ಸಂಬಂಧವನ್ನು ನಿರ್ಣಾಯಕವಾಗಿ ಬಗೆಹರಿಸಲಾಗಿಲ್ಲ.[26] ಕ್ರಿ.ಶ. ೧೫೪೧ ರಿಂದ ೧೬೮೦ರ ವರೆಗೆ ಒಟ್ಟು ೧೧೫ ವರ್ಷಗಳ ದೀರ್ಘ ಆಳ್ವಿಕೆ ನಡೆಸಿದ ವಂಶ ಇದಾಗಿದೆ.[27] ಇದು ಕ್ರಿ.ಶ. ೧೬೮೦ರಲ್ಲಿ ಸಂಪೂರ್ಣವಾಗಿ ಅಂತ್ಯವನ್ನು ಕಂಡಿತು. ಇಲ್ಲಿ ಪ್ರಮುಖವಾಗಿ ಅಳಿಯರಾಮರಾಯ ತಿರುಮಲದೇವರಾಯ, ಶ್ರೀರಂಗರಾಯ ವೆಂಕಟಪತಿ, ರಂಗರಾಯ, ಪೆದ್ದವೆಂಕಟಪತಿರಾಯ ಇತರರು ಪ್ರಮುಖರಾಗಿದ್ದಾರೆ. ಇಲ್ಲಿ ಕಂಡುಬರುವ ರಾಣಿಯರಲ್ಲಿ ಇವರು ತಮ್ಮದೇ ಆದ ಕೊಡುಗೆಗಳನ್ನು ಅರವೀಡು ವಂಶಕ್ಕೆ ನೀಡಿದ್ದಾರೆ.

೧. ತಿರುಮಲಾಂಬಾ

ಇವಳು ಅಳಿಯರಾಮರಾಯನ ರಾಣಿ. ಇವರು ತೆಲುಗು ಮೂಲದವರು. ತಿರುಮಲಾಂಬಾ ತುಳುವ ವಂಶದ ರಾಜಕುಮಾರಿ. ಶ್ರೀ ಕೃಷ್ಣದೇವರಾಯ ಹಾಗೂ ತಿರುಮಲಾದೇವಿರವರ ಪುತ್ರಿ. ಅಳಿಯರಾಮರಾಯನಿಗಿಂತಲೂ ವಯಸ್ಸಿನಲ್ಲಿ ಬಹುಳಷ್ಟು ಅಂತರವಿತ್ತೆಂದು (ಚಿಕ್ಕವಳು) ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈಕೆ ಒಬ್ಬ ಕವಿಯಾತ್ರಿಯಾಗಿದ್ದಳು. ಸಂಸ್ಕೃತದಲ್ಲಿ 'ಮಾರೀಚಿ ಪರಿಣಯ' ಎಂಬ ಕಾವ್ಯರಚಿಸಿ ತುಳುವ ವಂಶದ ಬಗ್ಗೆ ಹಾಗೂ ಪತಿ ರಾಮರಾಯರ ಬಗ್ಗೆ ತಿಳಿಸಿದ್ದಾಳೆ.

೨. ವೇಂಗಲಾಂಬೆ

ತುಳುವ ವಂಶದ ರಾಜಕುಮಾರಿ ಶ್ರೀ ಕೃಷ್ಣದೇವರಾಯ ಹಾಗೂ ಚಿನ್ನಾದೇವಿಯ ಮಗಳು. ಈಕೆಯ ಪತಿ ತಿರುಮಲರಾಯನಾಗಿದ್ದಾನೆ.[28]

೩. ತಿಮ್ಮಾಜಿ

ಈಕೆಯ ಪತಿ ಶ್ರೀರಂಗರಾಜನಾಗಿದ್ದಾನೆ. ಈಕೆಗೆ ತಿರುಮಲರಾಜನೆಂಬ ಮಗನಿದ್ದನು. ಈಕೆಯ ಕುರಿತು ಸಿಗುವ ಆಧಾರವೆಂದರೆ ಕ್ರಿ.ಶ. ೧೬೫೧ರಲ್ಲಿ ತಿರುಮಲರಾಜನಿಗೆ ಮಹಾರಾಜಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರಸಿವಾಜಿ ರಾಜನು ಮಾಡುವ ಅನೇಕ ವಿಜ್ಞಾಪನೆಗಳು ನಿಮ್ಮ ತಂದೆಯಾದ ಶ್ರೀ ರಂಗರಾಜನ ರಾಜ್ಯವು ಅನ್ಯಕ್ರಾಂತವಾಗಿ ಆತನು ಪರಸ್ಥಳದಲ್ಲಿ ಮೃತನಾದ ಕಾರಣ ಇನ್ನು ಮುಂದೆ ನಿಮ್ಮ ಸಂರಕ್ಷಣಯಾಗಬೇಕೆಂದು ಮಾತುಶ್ರೀ ತಿಮ್ಮಾಜಿ ಅಮ್ಮನು ನಿನ್ನನ್ನು ಮತ್ತು ರಾಮರಾಯನನ್ನು ವಕೀಲ ವೆಂಕಟಕೃಷ್ಣಪ್ಪನ ಸಂಗಡ ನನ್ನ ಬಳಿಗೆ ಕಳುಹಿಸಿರುತ್ತಾರೆ. ಹೀಗಾಗಿ ಅಲ್ಲಿನ ಸಂಗತಿಗಳನ್ನೆಲ್ಲಾ ತಿಳಿದು ನಿಮ್ಮ ಸಂರಕ್ಷಣಾರ್ಥವಾಗಿ ಈ ಕೆಳಗೆ ನಮೂದಿಸಿರುವ ತಾಲೂಕುಗಳನ್ನು ನಿಮಗೆ ನೀಡಲಾಗಿದೆ. ಸಂಸ್ಥಾನ ಆನೇಗೋದಿ, ಗಂಗಾವತಿ ಪರಗಣ, ಕಂಪಲಿ ಮನೆತನ, ಕಮಲಾಪುರ, ತಕಲ್‌ಕೋಟೆ, ಹೊಸೂರು, ದರೋಜಿ, ಬಾಣರಾವಿ ಎನ್ನುವ ಸೀತಿ ಕೋಲ ಸಮತಗಳನ್ನು ನಿಮ್ಮ ಸ್ವಾಧೀನಕ್ಕೆ ನೀಡಲಾಗಿದೆ. ನೀವು ನಿಮ್ಮ ವಂಶ ಪಾರಂಪರ್ಯವಾಗಿ ಸ್ವಾಮಿ ಕ್ಷೇತ್ರವಾದ ತುಂಗಭದ್ರ ಸ್ಥಾನದಲ್ಲಿನ ದೇವರ ಸೇವೆ, ಧರ್ಮ ಮೊದಲಾದವುಗಳನ್ನು ಮಾಡುತ್ತಾ ಸುಖವಾಗಿರುವುದು. ಆ ಧರ್ಮಕ್ಕೆ ಯಾರಾದರೂ ಅಡ್ಡಿಪಡಿಸಿದರೆ ತನ್ನ ಕುಲದೈವ ತನ್ನ ಗುರುವಿನ ಆಣೆ ಚಂದು ೧೦ ಜಮಾದಿಲ ತಿಂಗಳ ಸಮಾನವಾದ ಹೇವಿಲಂಬಿ ಸಂವತ್ಸರ ವೈಶಾಖ ಶು. ೧೭, ಶಾ.ಶ. ೧೫೭೯ರಂದು ರುಜುಹಾಕಿದ ವಿಷಯ ತಿಳಿಯುತ್ತದೆ.[೨೯]

ಇದರಿಂದಾಗಿ ಪತಿಯು ಸತ್ತನಂತರ ಆಧಿಕಾರದ ಕೇಂದ್ರೀಕರಣವು ಪತ್ನಿಯಲ್ಲಿರುತ್ತದೆ. ಜೊತೆಗೆ ಇವರು ಸಹ ಆಡಳಿತದಲ್ಲಿ ಭಾಗವಹಿಸುತ್ತಿದ್ದರು ಎಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ.

೪. ಬಾಯಮ್ಮ

ಈಕೆ ವೆಂಕಟಪತಿಯ ರಾಣಿ. ಈಕೆಯನ್ನು ತ್ರಿವಿಕ್ರಮರರು ಓಬಾಂಬೆ ಎಂದು ಕರೆದರೆ, ಎಚ್.ಎಲ್. ನಾಗೇಗೌಡ ಹಾಗೂ ರಾಬರ್ಟ್ ಸಿವೆಲ್‌ರವರು ಈಕೆಯನ್ನು ಬಾಯಮ್ಮನೆಂದು ಕರೆದಿದ್ದಾರೆ. ಈ ರಾಜನಿಗೆ ಆರು ಜನ ರಾಣಿಯರಿದ್ದರು. ಇವರಲ್ಲಿ ಅತ್ಯಂತ ಪ್ರೀತಿ ಪಾತ್ರಳಾದವಳೆಂದರೆ ಬಾಯಮ್ಮ. ರಾಜನಿಗೆ ಮಕ್ಕಳಿರಲಿಲ್ಲದ ಕಾರಣ ಬಾಯಮ್ಮಳು ಮಗನನ್ನು ಹೇರಲು ಹಾತೊರೆದಳು ಮತ್ತು ಆ ಉದ್ದೇಶಕ್ಕಾಗಿ ಅವಳು ಯುಕ್ತ್ಯಾಯುಕ್ತಿ ಹಂಚಿಕೆಗಳನ್ನು ಬಳಸಿದಾಗ್ಯೂ ಅವಳಿಗೆ ಮಗ ಜನಿಸಲಿಲ್ಲ. ರಾಣಿಯ ತಂದೆಯ ಕುಟುಂಬದ ಬ್ರಾಹ್ಮಣ ಸ್ತ್ರೀಯೊಬ್ಬಳು ಮಗನನ್ನು ಪಡೆಯಲು ರಾಣಿಯ ಹಂಬಲ ಎಷ್ಟು ಜೋರಾಗಿತ್ತು ಎಂದರೆ ಈಕೆ ತಂದೆಯ ಕುಟುಂಬದ ಬ್ರಾಹ್ಮಣ ಸ್ತ್ರೀಯೊಬ್ಬಳು ಮಗನನ್ನು ಪಡೆಯಲು ರಾಣಿಯು ತಾನು ಒಂದು ತಿಂಗಳ ಗರ್ಭಿಣಿಯೆಂದು ಹೇಳಿ ರಾಜನಿಗೆ ತಾನೇ ಗರ್ಭಿಣಿಯಾಗಿ ಹೇಳಬೇಕೆಂದು ಅದನ್ನು ಎಲ್ಲಾ ಕಡೆಗೆ ಪ್ರಚಾರ ಮಾಡಬೇಕೆಂದು ಆ ಸ್ಥಿತಿಯಲ್ಲಿರುವಂತೆ ಹೇಳಬೇಕೆಂದೂ ತಾನು ಅಂದರೆ ಬ್ರಾಹ್ಮಣ ಸ್ತ್ರೀ ಜನ್ಮವಿತ್ತಾಗ ವಿಶ್ವಾಸಿಕನ ಮೂಲಕ ಕೂಸನ್ನು ಗೌಪ್ಯವಾಗಿ ಅರಮನೆಗೆ ಕಳಿಸಿದ ಕೂಡಲೇ ರಾಣಿ ಆ ಹುಡುಗ ತನ್ನ ಮಗನೇ ಎಂದು ಸಾಕಬೇಕೆಂದು ಸೂಚಿಸಿದಳು. ಈ ಸಲಹಾ ರಾಣಿಗೆ ಒಳ್ಳೆಯದೇನಿಸಿ ಗರ್ಭಿಣಿಯಾಗಿರುವಂತೆ ಸೋಗು ಹಾಕಿದಳು

ಮತ್ತು ಬ್ರಾಹ್ಮಣ ಸ್ತ್ರೀ ಮಗನಿಗೆ ಜನ್ಮವಿತ್ತ ಕೂಡಲೇ ಅವನನ್ನು ಅರಮನೆಗೆ ಕಳಿಸಿದಳು ಮತ್ತು ರಾಣಿ ಬಾಯಮ್ಮ ಮಗನಿಗೆ ಜನ್ಮವಿತ್ತಳೆಂಬ ಸುದ್ದಿ ಹರಡಿತು.[೬೦] ಇದೆಲ್ಲ ಗೊತ್ತಿದ್ದರೂ ರಾಜ ರಾಣಿಗಾಗಿ ತನಗಿದ್ದ ಪ್ರೀತಿಯಿಂದ ಮತ್ತು ವಿಷಯ ಬೆಳಕಿಗೆ ಬರಬಾರದೆಂದು ಮರೆಮಾಚಿದ ಸಿಂಹಾಸನದ ವಾರಸುದಾರರಿಗೆ ನೀಡಲಾಗುತ್ತಿದ್ದ ಚಿಕ್ಕರಾಯ ನೆಂಬ ಹೆಸರು ಹುಡುಗನಿಗೆ ಕೊಟ್ಟ.[೬೧] ಈತನು ವಯಸ್ಸಿಗೆ ಬಂದಾಗ ಮಗನೆಂಬ ಪ್ರತೀತಿಯಿದ್ದ ಮಗನನ್ನು ಕೈಬಿಟ್ಟು ಮತ್ತೊಬ್ಬರಿಗೆ ಉತ್ತರಾಧಿಕಾರಿಯೊಬ್ಬ ರಾಜಮುದ್ರೆ ನೀಡಿದನು. ಈ ಘಟನೆ ನಡೆದು ಮೂರು ದಿನಗಳ ನಂತರ ರಾಜನು ಮರಣಿಸಿದನು. ಇವನನ್ನು ತಮ್ಮ ತೋಪವರಲ್ಲಿಯೆ ಗಂಧ ಸುವಾಸನೆ ಕಟ್ಟಿಗೆ ತತ್ತಳಿಗಳಿಂದ ಸುಡಲಾಯಿತು. ಈ ಸಂದರ್ಭದಲ್ಲಿ ಮೂರು ಜನ ರಾಣಿಯರು ಸಹ ಅಗ್ನಿಗೆ ಅರ್ಪಣೆ ಮಾಡಿಕೊಂಡರು. ಒಬ್ಬ ರಾಣಿ ರಾಜನಷ್ಟೇ ವಯಸ್ಸಿನವಳು. ಇನ್ನಿಬ್ಬರು ೩೫ ವರ್ಷ ವಯಸ್ಸಿನವರಾಗಿದ್ದರು.[೬೨]

ಈ ಮೇಲಿನ ಅಂಶದಿಂದ ತಿಳಿದುಬರುವುದೇನೆಂದರೆ ಬಹುಪತ್ನಿತ್ವ ಸಾಮಾನ್ಯವಾಗಿತ್ತು. ಕೆಲವೊಂದು ವಿಚಾರದಲ್ಲಿ ರಾಣಿಯರು ಸ್ವಾತಂತ್ರ್ಯರಾಗಿದ್ದರು. ಸತಿಪದ್ಧತಿ ರಾಣಿವರ್ಗದಲ್ಲಿ ಕಡ್ಡಾಯವಾಗಿತ್ತು. ಜೊತೆಗೆ ಇದು ಗೌರವದ ವಿಚಾರವೆಂದು ಕಾಣುತ್ತದೆ. ವಿಜಯನಗರ ಅರವೀಡು ಮನೆತನದಲ್ಲಿ ವೆಂಕಟಪತಿರಾಯನಿಗೆ ಆರು ಜನ ರಾಣಿಯರಿದ್ದರು ಎಂದು ತಿಳಿಸಿರುವುದರಿಂದ ಮೂವರು ರಾಣಿಯರು ಇಲ್ಲಿ ಅಗ್ನಿ ಪ್ರವೇಶ ಮಾಡಿ ಉಳಿದ ಮೂವರು ಅಗ್ನಿ ಪ್ರವೇಶ ಮಾಡಲಿಲ್ಲವೇ ಅಥವಾ ಅವರು ಈ ಸಂದರ್ಭದಲ್ಲಿ ಇರಲಿಲ್ಲವೇ ಎಂಬ ಪ್ರಶ್ನೆ ಕಾಡುತ್ತವೆ. ಈ ಕುರಿತು ಹೆಚ್ಚಿನ ಬೆಳಕು ಬೀರುವ ಅಗತ್ಯವಿದೆ.

ವೆಂಕಟಪತಿರಾಯನ ಮರಣ ನಂತರ ಮುಮ್ಮಡಿ ಶ್ರೀರಂಗರಾಯನು ಅಧಿಕಾರಕ್ಕೆ ಬರುತ್ತಾನೆ. ಆದರೆ ಇಲ್ಲಿ ರಾಣಿ ವಾಸದಲ್ಲಿ ಅಸಮಾಧಾನ ಪಿತೂರಿಗಳು ಹೆಚ್ಚಾಗಿ ಬಾಯಮ್ಮಳು ತನ್ನ ಸಾಕು ಮಗ ಚಿಕ್ಕರಾಯನಿಗೆ ಸಿಂಹಾಸನದ ಉತ್ತರಾಧಿಕಾರಿ ಎಂದು ಘೋಷಿಸಿದಳು. ಇಲ್ಲಿಯೇ ಒಳಜಗಳಗಳಾಗಿ ಶ್ರೀ ರಂಗರಾಯನಿಗೆ ಯಾವುದೇ ದಕ್ಷತೆ ಇರಲಿಲ್ಲ. ಈ ಸಂದರ್ಭದಲ್ಲಿ ಸಹೋದರನಾದ ವೆಂಕಟಪತಿ ರಾಯ ಮಾವನಾಥ ಗೊಬ್ಬೂರಿ ಓಬದಾಯನ ಮಗ ಜಗರಾಯ. ಜಗರಾಯನು ಸರ್ವಾಧಿಕಾರಿಯಾಗಿ ವರ್ತಿಸಿ ಶ್ರೀ ರಂಗರಾಯನನ್ನು ಸೆರೆಮನೆಗೆ ತಳ್ಳಿದನು. ಆದರೆ ರಾಯನ ೨ನೇ ಮಗನಾದ ರಾಮದೇವನು ೧೨ ವರ್ಷದ ಹುಡುಗನೊಬ್ಬ ಮಾತ್ರ ಸ್ವಾಮಿ ನಿಷ್ಟೆಯುಳ್ಳ ಒಬ್ಬ ಹೆಂಗಸಿನ ಸಹಾಯದಿಂದ ಸೆರೆಮನೆಂದ ಪಾರಾದರು. ಇದರಿಂದಾಗಿ ಜಗರಾಯನು ಕೆಂಡಮಂಡಲನಾಗಿ ಸಂಗಮ ಮನೆತನ ನಿರ್ಮೂಣ ಮಾಡುವ ಪಣ ತೊಟ್ಟನು. ಅರಮನೆಯಲ್ಲಿ ಹೊತ್ತು ಮಂಡವನ್ನೇ ನಡೆಸುವಾಗ ಶ್ರೀ ರಂಗರಾಯನು ತನ್ನ ರಾಣಿ ಮಕ್ಕಳನ್ನು ತನ್ನ ಕೈಯಿಂದಲೇ ಸಂಹಾರಮಾಡಿ ತಾನೇ ಇರಿದುಕೊಂಡು ಪ್ರಾಣ ಬಿಟ್ಟನು.[೬೩]

ಈ ಮೇಲಿನ ಅಂಶದಿಂದ ಸಾಕಷ್ಟು ರಾಜಕೀಯ ಸಮಸ್ಯೆ ಎದ್ದು ಕಾಣುತ್ತದೆ. ಇಲ್ಲಿ ಅಧಿಕಾರದ ಸೂತ್ರ ಹಿಡಿಯಲು ತಮ್ಮಲ್ಲಿ ಬಹಳಷ್ಟು ಪಿತೂರಿಗಳು ನಡೆಯುತ್ತಿದ್ದವು. ಹೆಚ್ಚಾಗಿ ಇದು ರಾಣಿಯರ ಮೂಲಕ ತಮ್ಮ ಮಕ್ಕಳೇ ಅಧಿಕಾರರೂಢರಾಗಬೇಕೆಂಬ ಹಂಬಲ ಹೆಚ್ಚಾಗಿತ್ತು. ಇದು ಇವರಲ್ಲಿಯೇ ಅನೇಕ ಅಸಮಾಧಾನಕ್ಕೆ ಹುಡುಕಿಕೊಟ್ಟು ತಮ್ಮ ಅವನತಿಗೆ ಪರೋಕ್ಷವಾಗಿ ರಾಣಿಯರು ಕಾರಣರಾದರೆಂದರೆ

ತಪ್ಪಾಗಲಾರದು. ಈ ವಂಶದ ಕುರಿತು ಹೆಚ್ಚಿನದಾಗಿ ಮಾಹಿತಿಯ ಕೊರತೆ ಇದ್ದರೂ ಮೇಲಿನ ಸಂಗತಿಗಳು ಪ್ರಮುಖವಾಗಿ ಹೊಸ ಸಂಗತಿಗಳ ಬಗ್ಗೆ ಬೆಳಕು ಚೆಲ್ಲುತ್ತವೆ.

ಟಿಪ್ಪಣಿಗಳು

೧. ಸಿ. ಮಹದೇವ ಇತರರು, ಹೊಸಪೇಟೆ ತಾಲೂಕು ದರ್ಶನ, ಪು. ೫

೨. ಡಾ. ಬಸವರಾಜ ಮಲಶೆಟ್ಟಿ, ೧೯೮೧, ಹಂಪೆ ಒಂದು ಪರಿಚಯ, ಪು. ೫

೩. ಎಸ್. ಶ್ರೀನಿವಾಸಚಾರ್, ಹಂಪಿ ವಿಜಯನಗರ ಸಾಮ್ರಾಜ್ಯದ ಪ್ರಖ್ಯಾತ ರಾಜಧಾನಿ

೪. ಪ್ರೊ. ವಿ. ರಾಘವೇಂದ್ರರಾವ್, ವಿಜಯನಗರ, ಪು. ೧೦-೧೧

೫. ಕೆ. ಶಿವಣ್ಣ, ಕರ್ನಾಟಕ ಚರಿತ್ರೆ, ಸಂ.೩, ಪು. ೧೧

೬. ಇತಿಹಾಸ ರಚನಾ ಶಾಸ್ತ್ರ, ಪು. ೩೦

೭. ಪ್ರೊ. ವಿ. ರಾಘವೇಂದ್ರರಾವ್, ವಿಜಯನಗರ, ಪು. ೧೧

೮. ರಾಬರ್ಟ್ ಸಿವೆಲ್, ಅನು. ಸದಾನಂದ ಕನವಳ್ಳಿ, ೧೯೯೨, ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ, ಪು. ೪-೫

೯. ಪ್ರೊ. ಸ.ಶಿ. ಭೂಸನೂರಮಠ, ವಿಜಯ ಕಲ್ಯಾಣ, ಪು. ೧೪-೧೫

೧೦. ಸಿ. ಮಹದೇವ, ಇತರರು, ಹೊಸಪೇಟೆ ತಾಲೂಕು ದರ್ಶನ, ಪು. ೩೦-೩೧

೧೧. ಕೆ.ಎಸ್. ಶಿವಣ್ಣ, ಕರ್ನಾಟಕ ಚರಿತ್ರೆ, ಸಂ. ೩, ಪು. ೧೩-೧೪

೧೨. ಕೆ. ಕುಶಾಲಪ್ಪಗೌಡ, ಮಧುರಾ ವಿಜಯಂ, ಪು. ೯

೧೩. ಅದೇ, ಸಂ. ೩, ಪು. ೧೫-೧೬

೧೪. ಡಾ. ಬಸವರಾಜ ಮಲಶೆಟ್ಟಿ, ಹಂಪೆ ಒಂದು ಪರಿಚಯ, ಪು. ೮

೧೫. ಡಾ. ಎಚ್. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೧೩೮

೧೬. ಅದೇ, ಸಂ.೩, ಪು. ೩೩

೧೭. ಅದೇ, ಸಂ. ೩, ೨೬

೧೮. ಅದೇ, ಸಮೀಕ್ಷೆ, ಪು. ೧೪೦-೧೪೨

೧೯. ಅದೇ, ಸಂ.೩, ಪು. ೩೩-೩೪

೨೦. ಅದೇ, ಸಮೀಕ್ಷೆ, ಪು ೧೪೩-೧೪೪

೨೧. ವಸುಂಧರಾ ಫಿಲಿಯೋಜಾ, ಅಳಿದುಳಿದ ಹಂಪೆ, ಪು. ೧೮

೨೨. ಪ್ರೊ. ರಾಘವೇಂದ್ರರಾವ್, ವಿಜಯನಗರ, ಪು. ೧

೨೩. ಪ್ರೊ. ಒಡೆಯರ್ ಡಿ. ಹೆಗ್ಗಡೆ, ಹಕ್ಕಬುಕ್ಕ, ಪು. ೩೨

೨೪. ದೇವರಕೊಂಡಾರೆಡ್ಡಿ, ಸಂ.೩, ಹಂಪಿ ಶಾಸನಗಳು, ಪು.

೨೫. ವಿಜಯನಗರ ಅಧ್ಯಯನ, ಸಂ.೩, ಪು. ೧೦೪

೨೬. ಸೂರ್ಯನಾರಾಯಣರಾವ್, ಮರೆಯಲಾಗದ ಮಹಾಸಾಮ್ರಾಜ್ಯ ವಿಜಯನಗರ, ಪು. ೧೮೦

೨೭. ಎಂ.ವಿ. ಪದ್ಮ, ವಿಜಯನಗರ ಅಧ್ಯಯನ, ಸಂ. ೧, ಪು. ೭೭

೨೮. ಕೆ. ಕುಶಾಲಪ್ಪಗೌಡ, ಮಧುರ ವಿಜಯಂ, ಪು. ೭

೨೯. ಸೂರ್ಯನಾರಾಯಣ, ಪು. ೨೦೮

೩೦. ಕೆ. ಕುಶಾಲಪ್ಪಗೌಡ, ಮಧುರ ವಿಜಯಂ, ಪು. ೭-೧೪

೩೧. ಲಕ್ಷ್ಮಣ್ ತೆಲಗಾವಿ, ಶಾಸನ ಅಧ್ಯಯನ, ಪು. ೨೨-೨೩

೩೨. ಸಿ.ಎಸ್. ವಾಸುದೇವನ್, ಹಂಪಿ ಪರಿಸರದ ಕೆರೆಗಳು, ಪು. ೮೧

೩೩. ವಸುಂಧರಾ ಫಿಲಿಯೋಜಾ, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಪು. ೩೦

೩೪. ಸಿ.ಎಸ್. ವಾಸುದೇವನ್, ಹಂಪಿ ಪರಿಸರದ ಕೆರೆಗಳು, ಪು. ೧೨೪

೩೫. ಕೆ. ಕುಶಾಲಪ್ಪಗೌಡ, ಮಧುರಾ ವಿಜಯಂ, ಪು. ೭-೧೬

೩೬. ಕಾಶಿವಿಶ್ವನಾಥ ಶೆಟ್ಟಿ, ಕನ್ನಡ ಕವಿಯಿತ್ರಿಯರು

೩೭. ವಸುಂಧರಾ ಫಿಲಿಯೋಜಾ, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಪು. ೩೩

೩೮. ಪ್ರೊ. ಸಿ.ಆರ್. ರಂಗಸ್ವಾಮಯ್ಯ, ಕರ್ನಾಟಕ ಸಂಕ್ಷಿಪ್ತ ಚರಿತ್ರೆ

೩೯. ಸೂರ್ಯನಾರಾಯಣರಾವ್, ಪು. ೨೬೦

೪೦. ದೇವರಕೊಂಡಾರೆಡ್ಡಿ, ಹಂಪಿ ಶಾಸನಗಳು, ಸಂ. ೩, ಪು. ೪೯

೪೧. ಸಿ.ಎಸ್. ವಾಸುದೇವನ್, ಹಂಪಿ ಪರಿಸರದ ಕೆರೆಗಳು

೪೨. ದೇವರಕೊಂಡಾರೆಡ್ಡಿ, ಹಂಪಿ ಶಾಸನಗಳು, ಸಂ.೩, ಪು. ೧೫

೪೩. ಅದೇ, ಪು. ೩೬

೪೪. ಸೂರ್ಯನಾರಾಯಣರಾವ್, ಪು. ೨೭೨-೭೩

೪೫. ಪ್ರೊ. ವಸಂತಕುಮಾರಿ, ಇತಿಹಾಸದ ಹಾದಿಯಲ್ಲಿ,ಪು. ೩೦-೩೧

೪೬. ಎಂ.ವಿ. ಪದ್ಮ, ವಿಜಯನಗರ ಅಧ್ಯಯನ, ಸಂ. ೧, ಪು.

೪೭. ಎಸ್. ಸರಸ್ವತಿ, ದಿ ಪೊಜಿಷನ್ ಆಫ್ ವುಮನ್ ಡ್ಯೂರಿಂಗ್ ವಿಜಯನಗರ ಪಿರಿಯಡ್, ಪು. ೧೦೫

೪೮. ಸೀತಾರಾಮ್ ಜಾಗೀರ್‌ದಾರ್, ವಿಜಯನಗರ ಅಧ್ಯಯನ, ಸಂ. ೩, ಪು. ೧೦೦

೪೯. ಕೆ. ಸತೀಶ್, ವಿಜಯನಗರ ಕಾಲದ ಶೈವ ದೇವಾಲಯಗಳು, ಪು. ೨೮

೫೦. ಪ್ರೊ. ಸ.ಶಿ. ಭೂಸನೂರಮಠ, ವಿಜಯ ಕಲ್ಯಾಣ, ಪು. ೧೯೧

೫೧. ಕರ್ನಾಟಕದ ಇತಿಹಾಸ ದರ್ಶನ, ಪು. ೩೬೬

೫೨. ಸೂರ್ಯನಾರಾಯಣರಾವ್, ಮರೆಯಲಾಗದ ಮಹಾಸಾಮ್ರಾಜ್ಯ, ಪು. ೩೦೧

೫೩. ಎಸ್.ವೈ. ಸೋಮಶೇಖರ್, ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ, ಪು. ೩೯

೫೪. ಡಾ. ಎ.ವಿ. ವೆಂಕಟರತ್ನಂ, ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ, ಪು. ೧೬೭

೫೫. ಸಿ.ಟಿ.ಎಂ. ಕೊಟ್ರಯ್ಯ, ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಪು. ೮೬-೧೧೪

೫೬. ರಾಬರ್ಟ್ ಸಿವೆಲ್, ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು. ೨೩೧ –

೫೭. ಎನ್. ಚಿನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ, ಪು. ೨೭

೫೮. ಕುಂ. ವೀರಭದ್ರಪ್ಪ, ಶ್ರೀ ಕೃಷ್ಣದೇವರಾಯ, ಪು. ೨೧-೨೨

೫೯. ದೇವರಕೊಂಡಾರೆಡ್ಡಿ, ಕೊಪ್ಪಳ ಜಿಲ್ಲೆ ಶಾಸನ, ಸಂಪುಟ. ೨, ಪು. ೩೩೮

೬೦. ಬಿ.ಎ. ವಿವೇಕ ರೈ, ಪ್ರವಾಸಿ ಕಂಡ ವಿಜಯನಗರ, ಪು. ೨೧೧-೨೧೨

೬೧. ತ್ರಿವಿಕ್ರಮ, ವಿಜಯನಗರದ ಅರವೀಡು ಮನೆತನ, ಪು. ೨೮

೬೨. ರಾಬರ್ಟ್ ಸಿವೆಲ್, ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು. ೨೪೪

೬೩. ತ್ರಿವಿಕ್ರಮ, ವಿಜಯನಗರದ ಅರವೀಡು ಮನೆತನ, ಪು. ೩೦-೩೨

ಅಧ್ಯಾಯ ೩

ವಿಜಯನಗರದ ತುಳುವ ವಂಶದ ಚಾರಿತ್ರಿಕ ಹಿನ್ನೆಲೆ

೩.೧. ತುಳುವ ವಂಶದ ಅರಸರು

ವಿಜಯನಗರದ ತುಳುವ ವಂಶದ ಚಾರಿತ್ರಿಕ ಹಿನ್ನೆಲೆ

೩.೧. ತುಳುವ ವಂಶದ ಚಾರಿತ್ರಿಕ ಹಿನ್ನೆಲೆ

ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕು ವಂಶಗಳಲ್ಲಿ 'ತುಳುವ' ಅತ್ಯಂತ ಪ್ರಖ್ಯಾತಿಗಳಿಸಿದ ವಂಶವಾಗಿದೆ. 'ತುಳುವ' ಎಂದರೆ ತುಳು ದೇಶದವ ಎಂದರ್ಥ. ಈ ತುಳುವ ಎಂಬ ಪದವು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಶಾಸನಗಳಲ್ಲಿ ಸಾಹಿತ್ಯಗ್ರಂಥಗಳಿಂದಲೂ ಇದರ ಉಲ್ಲೇಖ ಸಿಗುತ್ತದೆ. ಕ್ರಿ.ಶ. ೩ನೇ ಶತಮಾನದ ತಮಿಳಿನ ಸಂಗಂ ಸಾಹಿತ್ಯ ಕೃತಿ 'ಮಾಮೂಲನಾರ್' ಎಂಬ ಗ್ರಂಥದಿಂದ, ಹಾಗೂ ದಕ್ಷಿಣ ಕನ್ನಡದ ವೆನ್ನುವೆಲ್ಲಿಯಲ್ಲಿ 'ಕೇರಳೊತ್ಪತ್ತಿ' ಎಂಬ ಪುರಾಣದಲ್ಲಿ ಕ್ರಿ.ಶ. ೭ನೇ ಶತಮಾನದ ಶಾಸನದಿಂದಲೂ ತುಳುವಿನ ಪದದ ಬಳಕೆ ಕಂಡುಬರುತ್ತದೆ.

'ತುಳುವ' ಎಂಬ ಪದವು ಒಂದು ನಾಡು, ಪ್ರದೇಶ, ದೇಶಗಳ ಜನರಿಗೆ ತುಳುವರೆಂದು ಅನ್ವಯಿಸುತ್ತದೆ. ಈ ಪ್ರದೇಶವು ದಕ್ಷಿಣ ಕನ್ನಡ ಭಾಗ, ತುಳುವ ನಾಡನ್ನು ಕದಂಬರು, ಆಳುಪರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು ಮೊದಲಾದವರ ಆಳ್ವಿಕೆಗೊಳಪಟ್ಟ ಪ್ರದೇಶವಾಗಿತ್ತು.[೧]

ವಿಜಯನಗರ ಸಾಮ್ರಾಜ್ಯದಲ್ಲಿಯೇ ಏಕೆ ಕರ್ನಾಟಕದ ಚರಿತ್ರೆಯಲ್ಲಿ ತುಳುವ ವಂಶ ಅತ್ಯಂತ ಪ್ರಸಿದ್ಧವಾದದ್ದು. ಈ ವಂಶದ ಹಿನ್ನೆಲೆಯನ್ನು ಗಮನಿಸಿದಾಗ ಪೌರಾಣಿಕವಾಗಿ ತುಳುವ ಎಂದರೆ ತುಳು ನಾಡಿನವ ಎಂಬರ್ಥವನ್ನು ಸೂಚಿಸುತ್ತದೆ. ತುಳು ದೇಶದ ಪ್ರಜೆಗಳನ್ನು ತುಳುವ ಎಂದು ಕರೆಯುವುದು ವಾಡಿಕೆ. ಇವರ ಆವಾಸ ಸ್ಥಾನ ತುಳುವಾನ್ವಯ ಎಂದು ತುಳುವರು ಪರಿಚಿತರಾಗಿದ್ದಾರೆ ಎಂದು ಆಂಧ್ರದ ಇತಿಹಾಸಕಾರ ಎಂ. ರಾಮ್‌ರಾವ್‌ರವರ ಅಭಿಪ್ರಾಯವಾಗಿದೆ.[೨]

ಮತ್ತೊಂದು ಅಭಿಪ್ರಾಯದ ಪ್ರಕಾರ ರತ್ನಾಕರವರ್ಣಿ ಎಂಬ ತುಳುನಾಡಿನ ಕವಿ ತನ್ನ ಭರತೇಶ ವೈಭವ ಕಾವ್ಯವನ್ನು ಪ್ರಾಶಸ್ತ್ಯವನ್ನು ಹೊಗಳಿಕೊಳ್ಳುವಾಗ ಅಯ್ಯಯ್ಯ ಎಂಚಿ, ಪೊರ್ಲಾಂಡು ಎಂದು 'ತುಳುವರು ವೈರ್ಯ್ಯಬ್ಬಿ ಕೇಳಬೇಕಣ್ಣ' ಎಂದು ಹೇಳಿರುವುದನ್ನು ಸ್ಮರಿಸಿಕೊಳ್ಳಬಹುದು. ಇವರು ತುಳು ನಾಡಿನಿಂದ ಹೊರಟು ವಿಜಯನಗರ ಸೈನ್ಯವನ್ನು ಸೇರಿ ಅಲ್ಲಿ ಅಧಿಕಾರ ಸ್ಥಾನಕ್ಕೇರಿ ಕ್ರಮೇಣ ದಂಡನಾಯಕರಾಗಿ ರಾಜ್ಯವನ್ನು ಆಕ್ರಮಿಸಿಕೊಂಡರೆಂದು ಶ್ರೀ ಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ ಕೃತಿಯಲ್ಲಿ ಟಿ. ವೆಂಕಟರಾಮಪ್ಪನವರ ಅಭಿಪ್ರಾಯವಾಗಿದೆ.[೩]

ಕುಂ.ವೀರಭದ್ರಪ್ಪನವರು ತನ್ನ 'ಶ್ರೀಕೃಷ್ಣದೇವರಾಯ' ಕೃತಿಯಲ್ಲಿ ತುಳುವರು ಚಂದ್ರವಂಶದ ಕ್ಷತ್ರಿಯರ ಪೈಕಿ. ತುರ್ವಸು ವಂಶದವರು ಕ್ರಮೇಣ ತುಳುವರೆಂದೇ ಪ್ರಸಿದ್ಧಿಗೆ ಬಂದರು. ಇವರ

ಪೂರ್ವಿಕರ ನೆಲೆ ಕರ್ನಾಟಕದ ದಕ್ಷಿಣ ಕನ್ನಡವಾಗಿತ್ತು. ಯಾವ ಕಾರಣಕ್ಕೆ ತುಳು ದೇಶ ತೊರೆದರೋ ತಿಳಿಯದು. ಇವರು ಬಾಡಿಗೆ ಯೋಧರಾಗಿ ಅನೇಕ ರಾಜ ಮಹಾರಾಜರ ಬಳಿ ಸೇವೆ ಸಲ್ಲಿಸುತ್ತಿದ್ದರು. ಅನೇಕ ಯುದ್ಧಗಳಲ್ಲಿ ಪಾಲ್ಗೊಂಡು ಧೈರ್ಯ ಸಾಹಸ ಪ್ರದರ್ಶಿಸಿ ಪ್ರಭುಗಳಿಂದ ಮೆಚ್ಚುಗೆ ಪಡೆದವರು. ಇವರು ಅಂತಿಮವಾಗಿ ತಿರುಪತಿ ಸಮೀಪದ ಚಂದ್ರಗಿರಿಯನ್ನು ಆಳುತ್ತಿದ್ದ ಸಾಳ್ವರ ಬಳಿ ನೆಲೆ ನಿಂತರು. ಆನಂತರ ಇವರು ತಮ್ಮನ್ನು ತಾವು ಸಾಳುವರೆಂದು ಕರೆದುಕೊಂಡು ನಂತರ ತಮ್ಮನ್ನು ಪ್ರತ್ಯೇಕಿಸಿಕೊಳ್ಳಲು ತುಳುವರಾಗಿ ಮಾರ್ಪಟ್ಟಿರಬೇಕು.

ತುಳುವರ ಬಗ್ಗೆ ಸೂರ್ಯನಾಥ ಕಾಮತ್‌ರವರು ತಮಿಳುನಾಡಿನ ಕೃಷಿಕರಲ್ಲಿ ಹಲವು ಪಂಗಡ ಗಳಿದ್ದು, ಪ್ರಮುಖ ಪಂಗಡಗಳನ್ನು ವೆಲ್ಲಾಳರೆಂದು ಕರೆಯುತ್ತಿದ್ದರು. ಇ.ಎಲ್. ಥರ್‌ಸ್ಟನ್ ಇವರು ವೆಲ್ಲಾಳರ ಬಗ್ಗೆ ಬರೆದ ಭಾಗದಲ್ಲಿ ವೆಲ್ಲಾಳರಲ್ಲಿ ಇದ್ದ ವಿವಿಧ ಗುಂಪುಗಳಲ್ಲಿ ಪ್ರಮುಖವಾದುದು ತುಳುವ ವೆಲ್ಲಾಳರೆಂದು ಹೆಸರಿಸಿದ್ದಾರೆ. ಈ ವೆಲ್ಲಾಳರು (ಕೃಷಿಕರು) ಉತ್ತರ, ದಕ್ಷಿಣ ಆರ್ಕಾಟ್ ಹಾಗೂ ಚಂಗಲ್ಪಟ್ಟು ಜಿಲ್ಲೆಗಳಲ್ಲಿ ವಿಶೇಷವಾಗಿ ವಾಸಿಸುತ್ತಾರೆ. ಇವರ ಬಗ್ಗೆ ಕಾರ್ ಎಂಬ ವಿದ್ವಾಂಸರು ಬರೆದ 'ಡಿಸ್ಕ್ರಿಪಟಿವ್ ಕ್ಯಾಟಲಾಗ್ ಅಂಡ್ ಹಿಸ್ಟಾರಿಕಲ್ ಪೇಪರ್ಸ್ ರಿಲೇಟಿಂಗ್ ಟು ದಿ ಸೆವೆನ್ ಪಗೋಡಾಸ್' ಎಂಬ ಕೃತಿಯಲ್ಲಿ ವೆಲ್ಲಾಳರ ಕುರಿತು ಉಲ್ಲೇಖಿಸುತ್ತಾ ಈ ತುಳುವ ವೆಲ್ಲಾಳರು ತುಳುವ ದಿಂದ ಎಂದರೆ ನಾರ್ಥ್ ಕೆನರಾದಿಂದ ಬಂದವರೆಂಬ ವಿಚಾರವನ್ನು ಗುರುತಿಸುವರೆಂದು ಥರ್‌ಸ್ಟನ್ ಹೇಳುತ್ತಾನೆ. ಇದಲ್ಲದೆ ಕಾಂಚಿಯಲ್ಲಿರುವ ನಾಟ್ಟಾರ್ ಎಂಬ ಶಬ್ದ ನಾಡವರು ಎಂಬ ಶಬ್ದದಿಂದ ಬಂದಿರಬೇಕೆಂದು ಉತ್ತರ ಕನ್ನಡದಲ್ಲಿ ನಾಡವರು ಎಂಬ ಕೃಷಿಕ ವರ್ಗವಿದೆ. ಇವರಲ್ಲಿ ನಾಯಕ ಎಂಬ ಅಡ್ಡ ಹೆಸರು ಸಾಮಾನ್ಯ. ಕೃಷ್ಣದೇವರಾಯನ ತಂದೆಗೆ ನರಸನಾಯಕ ಎಂಬ ಹೆಸರು ಇರುವುದನ್ನು ಗುರ್ತಿಸಬಹುದು. ತುಳುವ ವಂಶದ ಮೂಲ ಜಟಿಲವಾದುದು. ಇಲ್ಲಿ ತಳವಾರ ವೃತ್ತಿಯನ್ನು ನಾಯಕ ಎಂಬ ಅಭಿದಾನವನ್ನು ಪರಿಶೀಲಿಸಬೇಕಾಗಿದೆ.

ಕರ್ನಾಟದಲ್ಲಿಯೂ ವಿವಿಧ ಒಕ್ಕಲಿಗ ಜಾತಿಗಳಲ್ಲಿ ಹಲವು ಒಳಪಂಗಡಗಳು ಇರುವಂತೆ ತಮಿಳುನಾಡಿನ ವೆಲ್ಲಾಳ ಕೃಷಿಕರಲ್ಲಿ ಒಂದು ಭಾಗವಾಗಿರುವ ತುಳುವ ವೆಲ್ಲಾಳ ಅಥವಾ ಒಕ್ಕಲಿಗರು ವಿಶೇಷವಾಗಿ ತಮಿಳುಸಾಡಿನ ಜಿಲ್ಲೆಗಳಲ್ಲಿ ಒಂದಾದ ಉತ್ತರ ಆರ್ಕಾಟಿಗೆ ದೇವಿಕಾಪುರಂ ಸೇರಿದೆ. ನರಸನಾಯಕನು ಅವರ ಹಿರಿಯರು ೨-೩ ತಲೆಮಾರುಗಳಿಂದ ನೆಲೆಸಿದ್ದ ಸ್ಥಳವೆಂದು ಶಾಸನಗಳು ತಿಳಿಸುತ್ತವೆ. ಹಂಪಿಗೆ ಬರುವ ಪೂರ್ವದಲ್ಲಿ ದೇವಿಕಾಪುರಂನಲ್ಲಿ ನೆಲೆಸಿದ್ದರೆಂಬ ವಿಚಾರದ ಬಗ್ಗೆ ದೇವಿಕಾಪುರಂನ ಬೃಹದಾಂಬಾ ದೇವಾಲಯದ ಶಾಸನಗಳಿವೆ ಎಂದು ಓ.ರಾಮಚಂದ್ರನವರ ಅಭಿಪ್ರಾಯವಾಗಿದೆ. ರಾಮರಾವ್‌ರ ಪ್ರಕಾರ ತುಳುವ ವಂಶಜರೆಂದರೆ ತುಳುವನಾಡಿನವರೇ ಎಂಬುದು ಖಚಿತ. ಏಕೆಂದರೆ ಶಾಸನದಲ್ಲಿ ಉಲ್ಲೇಖಿಸಿದ ಉತ್ತರ ಕನ್ನಡ ತುಳುವ (ಇದನ್ನು ತುಳುವ ಹೈಗ ಅಥವಾ ಹೈವೆ ಹಾಗೂ ಕೊಂಕಣ) ಎಂದು ಜೊತೆ ಜೊತೆಯಾಗಿ ಈ ಕಾಲದ ಶಾಸನಗಳಲ್ಲಿ ಉಲ್ಲೇಖಿಸಿವೆ. ಇವರು ತುಳುವರೆಂಬುದಕ್ಕೆ ಆಧಾರಗಳು ದೊರಕುತ್ತವೆ."

ಹುಲ್ಷ್ ಅವರು ೧೯೬೨ರ ವಾರ್ಷಿಕ ವರದಿಯಲ್ಲಿಯೂ ತುಳುವರು ದೇವಿಕಾಪುರಂಗೆ ವಲಸೆ ಹೋಗಿರಬೇಕೆಂದು ತಿಳಿಸಿ ತುಳುವರೆಂಬ ಅಂಶಕ್ಕೆ ಪುಷ್ಟಿ ದೊರಕುತ್ತದೆ. ಅದೇ ರೀತಿ ಟಾಮ್ ಪೀರೇಸ್ ಎನ್ನುವ ಪೋರ್ಚ್‌ಗೀಸ್ ಲೇಖಕರು ದಿ ಸುಮಾ ಓರಿಯೆಂಟಲ್ ಎನ್ನುವ ಪ್ರವಾಸ ಕಥನವನ್ನು ಕ್ರಿ.ಶ. ೧೫೧೨-೧೩ರಲ್ಲಿ ಬರೆದನು. ಈತನು ತನ್ನ ಬರವಣಿಗೆಯಲ್ಲಿ ವಿಜಯನಗರ ಸಾಮ್ರಾಜ್ಯದ ಬಗ್ಗೆ ಉಲ್ಲೇಖವನ್ನು ನೀಡಿರುವನು. ಅದರಲ್ಲಿ ಪೀರೇಸ್‌ನು ನರಸಿಂಗ ಎನ್ನುವ ಭಾಗದಲ್ಲಿ ಕೃಷ್ಣದೇವರಾಯ ಮತ್ತು ಅವನ ಆಸ್ಥಾನದ ಬಗ್ಗೆ ಬರೆದಿರುವನು. ಕೃಷ್ಣದೇವರಾಯನು ಕೆನರಾ ಅಥವಾ ತಮಿಳುನಾಡಿನವರು ಎಂಬ ಅಭಿಪ್ರಾಯವಾಗಿದೆ. ಅವನ ಸಹಜವಾದ ಭಾಷೆ ಕನ್ನಡ. ಆದರೆ ತೆಲುಗಿನ ವ್ಯಾಮೋಹದಿಂದ ಈತ ಆಂಧ್ರದವನೆಂದು ಅನೇಕ ವಿದ್ವಾಂಸರು ಗುರ್ತಿಸಿದ್ದಾರೆ. ಆದರೆ ಇವರು ತುಳುವರೆಂಬ ಆಧಾರ ಖಚಿತ ಮಾಹಿತಿ ಇದೆ ಎನ್ನಬಹುದು.

ಕ್ರಿ.ಶ. ೧೩೯೨ರ ಪೂರ್ವದಲ್ಲಿ ದಕ್ಷಿಣ ಕನ್ನಡದಲ್ಲಿ ಗೇರ್‌ಸೊಪ್ಪೆ ಸಾಳುವರ ಮತ್ತು ಆಳುವ (ಹಾಡುವಳ್ಳಿ ಸಾಳುವರು) ಎಂಬ ಎರಡು ವರ್ಗಗಳಿದ್ದು ಇಬ್ಬರ ನಡುವೆ ಭಿನ್ನಾಭಿಪ್ರಾಯ ಮೂಡಿ ಸಂಗಮ ಅರಸರ ಕಾಲದಲ್ಲಿ ಕ್ರಿ.ಶ. ೧೪೯೨ರಲ್ಲಿ ಸಂಗಮ ಚಕ್ರವರ್ತಿ ವಿರೂಪಾಕ್ಷನ ವಿರುದ್ಧ ಯುದ್ಧವಾಯಿತು. ಇದರ ನಂತರ ಇವರಿಬ್ಬರು ತಮ್ಮ ದೇಶಭಾವ ಮರೆತು ಒಟ್ಟಿಗೆ ಕ್ರಿ.ಶ. ೧೫೦೨ರಲ್ಲಿ ಧಾರೇಶ್ವರನಿಗೆ ದಾನ ನೀಡಿದರು. ತುಳುವ ವಂಶದ ಬಗ್ಗೆ ಇದ್ದ ಅಭಿಮಾನವನ್ನು ತಮ್ಮ ವಂಶದ ಒಬ್ಬ ರಾಜಪುತ್ರನಿಗೆ ಕೃಷ್ಣದೇವರಾಯನ ಹೆಸರಿಟ್ಟ(ಕ್ರಿ.ಶ. ೧೫೪೮ರ ಶಾಸನ)ರು. ಹೀಗಾಗಿ ಗೇರುಸೊಪ್ಪೆ, ಹಾಡುವಳ್ಳಿಯ ಅರಸರು ವಿಜಯನಗರ ತುಳುವರು ಒಂದೇ ಮೂಲದವರೆಂಬ ಕ್ರಿ.ಶ. ೧೮೦೧ ಫ್ರಾನ್ಸಿಸ್ ಬುಕಾನಾನ್ ಕೂಡ ತಾನು ಉತ್ತರ ಕರ್ನಾಟಕದಲ್ಲಿ ಸಂಚರಿಸುವಾಗ ಹೇಳಿರುವುದರಿಂದಾಗಿ ಮೇಲಿನ ಎಲ್ಲಾ ಅಂಶಗಳೂ ಸಹ ವಿಜಯನಗರದ ಮೂರನೇ ವಂಶವಾದ ತುಳುವ ವಂಶವು ದಕ್ಷಿಣ ಕನ್ನಡ ನಾಡಿನವರು ಎಂಬ ಅಂಶಕ್ಕೆ ಸ್ಪಷ್ಟ ಹಾಗೂ ಖಚಿತ ಮಾಹಿತಿಯನ್ನು ಒದಗಿಸಿಕೊಡುತ್ತದೆ.

ಒಟ್ಟಿಯಲ್ಲಿ ವಿಜಯನಗರದ ೩ನೇ ರಾಜವಂಶವಾದ ತುಳುವ ಮನೆತನದವರ ಮೂಲ ಕರ್ನಾಟಕದ ದಕ್ಷಿಣ ಕೆನರಾ ಎಂದು ಅವರು ತುಳುವ ವಂಶದವರೆಂಬುದು ಖಚಿತವಾಗಿದೆ. ಹೀಗಾಗಿ ಅವರ ವಂಶಾವಳಿಯನ್ನು ಈ ಕೆಳಗಿನಂತೆ ಗುರುತಿಸಿವುದುಂಟು.

ತುಳುವರ ವಂಶಾವಳಿ

ತಿಮ್ಮ

ಹೆಂ-ದೇವಕಿ

|

ಈಶ್ವರ

ಹೆಂ-ಬುಕ್ಕಮ್ಮ

|

ನರಸ ಅಥವಾ ನರಸಿಂಹನಾಯಕ

(ಮೂವರು ಹೆಂಡತಿಯರು)

- ತಿಪ್ಪಾಂಬೆ
  - ವೀರನರಸಿಂಹ (ಮಗ) (ಕ್ರಿ.ಶ. ೧೫೦೫ ಹತ್ತು ವರ್ಷಗಳ ಕಾಲ)
- ನಾಗಲಾದೇವಿ
  - ಶ್ರೀ ಕೃಷ್ಣದೇವರಾಯ (ಮಗ) (ಮೂವರು ರಾಣಿಯರು)
    - ೧. ತಿರುಮಲಾದೇವಿ
    - ೨. ಚಿನ್ನಾದೇವಿ
    - ೩. ಜಗನ್ಮೋಹಿನಿ
    - ೧. ತಿರುಮಲಾಂಬೆ (ಮಗಳು) — ಅಳಿಯ ರಾಮರಾಯ (ಪತ್ನಿ)
    - ೨. ವೆಂಗಳಾಂಬೆ (ಮಗಳು) — ತಿರುಮಲರಾಯ (ಪತ್ನಿ)
    - ೩. ತಿರುಮಲಾರಾಯ (ರಾಜಕುಮಾರ) ಅಕಾಲ ಮರಣ
- ಓಬಾಂಬಿಕೆ
  - ರಂಗರಾಯ (ಮಗ)
  - ಅಚ್ಯುತರಾಯ (ಮಗ) (ಹೆಂಡತಿಯರು)
    - ೧. ವರದಾದೇವಿ
    - ೨. ಓದುವತಿರುಮಲಮ್ಮ

ತುಳುವ ವಂಶದ ಸ್ಥಾಪನೆ

ನರಸನಾಯಕನೇ ತುಳುವ ವಂಶದ ಸ್ಥಾಪಕ. ಈತನ ತಂದೆ ಈಶ್ವರನಾಯಕನು ಸಾಳುವ ವಂಶದ ನರಸಿಂಹನಿಗೆ ಸೇನಾಪತಿಯಾಗಿ, ಬಲಗೈ ಬಂಟನಾಗಿದ್ದನು.[೯] ಈತನ ಮಗ ನರಸನಾಯಕನು ಸಹ ಸಾಳುವ ವಂಶದವರಿಗೆ ರಾಜಪ್ರತಿನಿಧಿಯಾಗಿ ನಂಬಿಕಸ್ಥ ಮಂತ್ರಿ, ಸೇನಾನಿ ಹಾಗೂ ಅಳಿಯನಾಗಿದ್ದನು. ಸಾಳುವ ನರಸಿಂಹ ತನ್ನ ಅವಸಾನದ ಕಾಲದಲ್ಲಿ ತನ್ನ ಇಬ್ಬರು ಮಕ್ಕಳು ಚಿಕ್ಕವರಾಗಿದ್ದ ಕಾರಣ ಆಡಳಿತವನ್ನು ಅಳಿಯನಾದ ನರಸನಾಯಕನ ಕೈಗಿತ್ತನು.[೧೦] ವೀರನರಸಿಂಹನು ತೀರಿದ ಬಳಿಕ ನರಸನಾಯಕನು ಸ್ವಾತಂತ್ರ್ಯವಾಗಿ ರಾಜ್ಯಭಾರವನ್ನು ಮಾಡಿ ತುಳುವ ವಂಶದ ಸ್ಥಾಪಕನಾದನು.[೧೧] ನರಸ ನಾಯಕನ ಆಳ್ವಿಕೆಯೂ ಕ್ರಿ.ಶ. ೧೪೯೦ರಲ್ಲಿ ಎಂದು ಬರ್ನೆಲ್ ಅಭಿಪ್ರಾಯಪಟ್ಟಿದ್ದಾನೆ. ಹಿಸ್ಟರಿ ಆಫ್ ತಿನ್‌ವೆಲ್ ಕರ್ತೃ ಬಿಷಪ್‌ಕಾಲ್ಡ್‌ವೆಲ್ ಅವರು ಕ್ರಿ.ಶ. ೧೪೮೭ಎಂದು ಅಭಿಪ್ರಾಯಪಡುತ್ತಾರೆ.[೧೨] ಆಮುಕ್ತಮಾಲ್ಯದಲ್ಲಿಯೂ ಸಹ ಕ್ರಿ.ಶ. ೧೪೯೦ ಎಂದು ಅಭಿಪ್ರಾಯಪಡಲಾಗಿದೆ.[೧೩]

ಒಟ್ಟಿನಲ್ಲಿ ತುಳುವ ವಂಶದ ಆಳ್ವಿಕೆಯು ಕ್ರಿ.ಶ. ೧೪೯೦ ಅಕ್ಟೋಬರ್ ೧೪ರಿಂದ ೧೪೯೭ರ ನವೆಂಬರ್ ೨೮ರ ನಡುವೆ ನರಸಿಂಹನು ಮರಣಹೊಂದಿದನೆಂಬ ಅಭಿಪ್ರಾಯದಿಂದಾಗಿ[೧೪] ಈ ಅವಧಿಯಲ್ಲಿ ನರಸನಾಯಕನು ಅಧಿಕಾರ ರೂಢನಾದ, ಭಾರತದ ಇತಿಹಾಸದಲ್ಲೇ ಸುಮಾರು ೭೦ ವರ್ಷಗಳ ಕಾಲ ಅತ್ಯಂತ ವೈಭೋಗದಿಂದ ಉತ್ತುಂಗ ಶಿಖರವನ್ನು ತಲುಪಿ ವಿಜಯನಗರದ ಕೀರ್ತಿ ವೈಭೋಗವನ್ನು ದಶದಿಕ್ಕುಗಳಿಗೂ ಮೊಳಗುವಂತೆ ಮಾಡಿದ ಕೀರ್ತಿ ವಿಜಯನಗರದ 'ತುಳುವ' ವಂಶಕ್ಕೆ ಸಲ್ಲುತ್ತದೆ.

ವೀರನರಸಿಂಹ

ತುಳುವ ವಂಶದ ಮೊಟ್ಟಮೊದಲ ದೊರೆಯಾಗಿ ಆಳ್ವಿಕೆಗೆ ಬಂದನು. ಕ್ರಿ.ಶ. ೧೫೦೫ರಿಂದ ೧೫೦೯ರ ವರೆಗೆ ಕೇವಲ ೪ ವರ್ಷಗಳ ಮಾತ್ರ ಇವನು ಆಳ್ವಿಕೆ ನಡೆಸಿದನು. ಈತನಿಗೆ ಭುಜಬಲರಾಮ

ನೆಂಬ ಮತ್ತೊಂದು ಹೆಸರಿತ್ತು.[೧೫] ನ್ಯೂನಿಜ್‌ನ ಪ್ರಕಾರ ವೀರನರಸಿಂಹ ಬುಸ್ಸಲರಾವ್ ಎಂಬ ಮತ್ತೊಬ್ಬ ಮಗನಿದ್ದನೆಂದು ಹೇಳಿದ್ದಾನೆ.[೧೬] ವೀರನರಸಿಂಹನು ತನ್ನ ಆಡಳಿತಾವಧಿಯಲ್ಲಿ ಅನೇಕ ಸಾಮಂತರ ವಿರೋಧ ಎದುರಿಸಬೇಕಾಯಿತು.[೧೭] ಸುತ್ತಮುತ್ತಲ ಅರಸರ ಒತ್ತುವರಿ ಉಪಟಳ ಮೊದಲಾದವರು ಸಾಮ್ರಾಜ್ಯದಲ್ಲಿ ತುಂಬಿದ್ದವು. ಈತನು ಸೈನ್ಯದಲ್ಲಿ ಅನೇಕ ಸುಧಾರಣೆಗಳನ್ನು ತರಲು ಹಾಗೂ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಲು ತನ್ನಿಂದ ಸಾಧ್ಯವಾದಷ್ಟು ಶ್ರಮಿಸಿದನು. ಆದರೂ ಆ ಪ್ರಯತ್ನ ಗಮನಾರ್ಹವಾದಷ್ಟು ಸಫಲವಾಗಲಿಲ್ಲ. ಕ್ರಿ.ಶ. ೧೫೦೮ರ ಸುಮಾರಿನಲ್ಲಿ ತೀರ ಅಸ್ವಸ್ಥನಾದನು.[೧೮] ಈ ಸಂದರ್ಭದಲ್ಲಿ ನರಸಿಂಹನು ತನ್ನ ಮಗನನ್ನು ಸಿಂಹಾಸನಕ್ಕೆ ತರಲು ಪ್ರಯತ್ನಿಸಿದನು ಹಾಗೂ ತನ್ನ ತಮ್ಮನಾದ (ಮಲಸಹೋದರ) ಕೃಷ್ಣದೇವರಾಯನನ್ನು ಕೊಲ್ಲಿಸಲು ಪ್ರಯತ್ನಿಸಿದನೆಂದು (ಇದಕ್ಕೆ ಹುರುಳಿಲ್ಲ). ಕೊನೆಗೆ ಪ್ರಧಾನಮಂತ್ರಿ ತಿಮ್ಮರಸನಿಂದ ಈ ಫಲ ಕೈಕೊಟ್ಟು ಮಲಸಹೋದರ ಕೃಷ್ಣನು ಅಧಿಕಾರಕ್ಕೆ ಬಂದನು. ೧೫೦೯ರಲ್ಲಿ ವೀರನರಸಿಂಹನು ಮರಣ ಹೊಂದಿದನು.

ಶ್ರೀಕೃಷ್ಣದೇವರಾಯ

ತುಳುವ ವಂಶದಲ್ಲಿ ಶ್ರೀಕೃಷ್ಣದೇವರಾಯನ ಆಳ್ವಿಕೆಯು ಅತ್ಯಂತ ಮಹತ್ವಪೂರ್ಣವಾದದ್ದು. ತುಳುವ ವಂಶದ ಪ್ರಖ್ಯಾತ ಚಕ್ರವರ್ತಿ ಕ್ರಿ.ಶ. ೧೫೦೯ ರಿಂದ ೧೫೨೯ ಅಥವಾ ಕ್ರಿ.ಶ. ೧೫೩೦ವರೆಗೆ ಆಳ್ವಿಕೆ ನಡೆಸಿದ್ದಾನೆ. ಅಂದರೆ ಕ್ರಿ.ಶ.೧೫೦೯ ಆಗಸ್ಟ್ ೮ರಂದು ತಾರೀಕು ಶ್ರೀ ಜಯಂತಿಯ ಕೃಷ್ಣಜನ್ಮಾಷ್ಟಮಿ ಪವಿತ್ರದಿನದಂದು ಅಭಿಷೆಕ್ತನಾಗಿ ಆಳ್ವಿಕೆ ಪ್ರಾರಂಭಿಸಿದನು.[೧೯] ಅಧಿಕಾರಕ್ಕೆ ಬಂದಾಗ ಸಾಮ್ರಾಜ್ಯದಲ್ಲಿ ಸುಭದ್ರಸ್ಥಿತಿ ಇರಲಿಲ್ಲ. ಓರಿಸ್ಸಾದ ದೊರೆಯಾದ ಪ್ರತಾಪರುದ್ರನು ಗೋಲ್ಕೊಂಡ ಮೊದಲಾದ ಮುಸ್ಲಿಂ ದೊರೆಗಳೊಂದಿಗೆ ದುರುದ್ದೇಶದಿಂದ ಅನೇಕ ವಿಜಯನಗರದ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದನು.[೨೦] ಸಾಮಂತ ದೊರೆಗಳನ್ನು ಸೋಲಿಸಿ ತನ್ನ ವಿಜಯನಗರದ ಸಾಮ್ರಾಜ್ಯದ ಗಡಿಯನ್ನು ತುಂಗಭದ್ರೆಯಿಂದ ದಕ್ಷಿಣಕ್ಕೆ ಇದ್ದ ದೇಶವನ್ನೆಲ್ಲಾ ಆವರಿಸಿತು. ಈ ಬಲಿಷ್ಠ ಸಾಮ್ರಾಜ್ಯದ ಪ್ರಭಾವ ದಕ್ಷಿಣದಲ್ಲಿ ಶ್ರೀಲಂಕದವರೆಗೂ ಈಶಾನ್ಯದಲ್ಲಿ ತೆಲಂಗಾಣ/ಒರಿಯಾದವರೆಗೆ ಹರಡಿತ್ತು.[೨೧] ಈತನ ಪೂರ್ವಿಕರು ಆಡಳಿತ ವೆಚ್ಚ, ರಕ್ಷಣಾ ವೆಚ್ಚ, ಅರಮನೆ ವೆಚ್ಚ ಇತ್ಯಾದಿ ಅಧಿಕ ವೆಚ್ಚದಲ್ಲಿ ತೆರಿಗೆ ವಿಧಿಸಿದ್ದರು. ವೀರನರಸಿಂಹನು ಹಲವು ತೆರಿಗೆ ಮನ್ನಾ ಮಾಡಿದನು. ಉದಾಹರಣೆಗೆ ವಿವಾಹದ ತೆರಿಗೆ, ಆದರೆ ಕೃಷ್ಣದೇವರಾಯನು ಅನೇಕ ಸುಂಕ ರದ್ದುಗೊಳಿಸಿ ಭೂಮಿಯನ್ನು ಉಳುಮೆಮಾಡಿ ಭೂಕಂದಾಯವು ಅಧಿಕವಾಗಿ ಬರುವಂತೆ ಮಾಡಿದನು. ಈತನು ಕಾಲದಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿತ್ತು.[೨೨]

ಈತನು ಪರಾಕ್ರಮಿ ದೊರೆಯಷ್ಟೆ ಆಗಿರದೆ ಸ್ವತಃ ಸಂಸ್ಕೃತ, ತೆಲುಗು ಭಾಷೆಗಳ ಪ್ರಸಿದ್ಧ ವಿದ್ವಾಂಸನಾಗಿದ್ದನು. ತೆಲುಗಿನಲ್ಲಿ 'ಅಮುಕ್ತಮಾಲ್ಯದ' ಸಂಸ್ಕೃತದಲ್ಲಿ 'ಜಾಂಬವತೀ ಕಲ್ಯಾಣ' ಎಂಬ ಕೃತಿ ರಚಿಸಿದನು. ಆಸ್ಥಾನದಲ್ಲಿ ಅನೇಕ ವಿದ್ವಾಂಸರಿಗೆ ಆಶ್ರಯ ನೀಡಿದನು. ಅಷ್ಟದಿಗ್ಗಜರೆಂಬ ಎಂಟು ಜನ ಪ್ರಸಿದ್ಧ ತೆಲುಗು ಕವಿಗಳಿದ್ದರು ಜೊತೆಗೆ ಧರ್ಮಶ್ರದ್ಧೆಯುಳ್ಳವನಾಗಿದ್ದನು. ಅನೇಕ ದೇವಸ್ಥಾನಗಳ ಜೀರ್ಣೋದ್ಧಾರ ನೂತನ ದೇವಾಲಯಗಳ ನಿರ್ಮಾಣ, ದಾನ-ದತ್ತಿ ನೀಡಿದನು. ತನ್ನ ತಾಯಿ, ಹೆಂಡತಿ,

ಮಕ್ಕಳ ಹೆಸರಿನಲ್ಲಿ ಅನೇಕ ದಾನದತ್ತಿಗಳನ್ನು ನೀಡಿ, ಇವರ ಹೆಸರಿನಲ್ಲಿ ಪಟ್ಟಣ ನಿರ್ಮಿಸಿದನು. ಜೊತೆಗೆ ವಿದೇಶಿ ಪ್ರವಾಸಿಗರಾದ ನ್ಯೂನೀಜ್, ಪಯಾಸ್, ಬಾರ್ಬೋಸ್ ಇತರರು ಈತನ ಆಳ್ವಿಕೆಯಲ್ಲಿ ಭೇಟಿ ನೀಡಿ ಇಲ್ಲಿನ ರಾಜನ ಉಚ್ಛ ಆದರ್ಶಗಳನ್ನು ಕುರಿತು ತಿಳಿಸಿದ್ದಾರೆ. ಈತನ ಕಾಲದಲ್ಲಿ ನಾನಾ ವಿಧದ ಉತ್ಸವಗಳಿಗಾಗಿ ಮನೋರಂಜನೆ ಕಾರ್ಯಕ್ರಮಗಳಿಗಾಗಿ ವಿಶೇಷ ಖ್ಯಾತಿಗಳಿಸಿದೆ. ನವರಾತ್ರಿ ಹಬ್ಬದ ಅದ್ದೂರಿಯಂತೆ ಅನೇಕ ಕಲೆ/ವಾಸ್ತುಶಿಲ್ಪದಲ್ಲಿಯೂ ಸಹ ವಿಶೇಷ ಮಹತ್ವ ನೀಡಿದನು.[೨೩]

ಒಟ್ಟಿನಲ್ಲಿ ಕೃಷ್ಣದೇವರಾಯನ ಆಡಳಿತಾವಧಿಯು ಮಧ್ಯಯುಗದ ದಕ್ಷಿಣ ಭಾರತ ಹಾಗೂ ಕರ್ನಾಟಕ ಇತಿಹಾಸದಲ್ಲಿ ಅಷ್ಟೇ ಅಲ್ಲ ಭಾರತೀಯ ಇತಿಹಾಸದಲ್ಲಿ ಅತ್ಯಂತ ಉಜ್ವಲವಾದ ಅವಧಿ, ಬೇರೆ ಯಾವ ಚಕ್ರವರ್ತಿಯು ಇವನಷ್ಟು ಸಮರ್ಥನೂ, ಪ್ರಖ್ಯಾತಿಯೂ ಆಗಿರಲಿಲ್ಲ.[೨೪] ಇವನ ಕೀರ್ತಿ ಭಾರತದಲ್ಲಿ ಅಲ್ಲದೆ ಹೊರ ದೇಶಗಳಿಗೂ ಹರಡಿಕೊಂಡಿದ್ದು, ಇವನ ವ್ಯಕ್ತಿತ್ವದ ಪರಿಚಯ ನೀಡುತ್ತದೆ.[೨೫] ಒಟ್ಟಿನಲ್ಲಿ ಕೃಷ್ಣದೇವರಾಯನು ವೈವಿಧ್ಯಮಯವಾದ ವ್ಯಕ್ತಿತ್ವ ಹೊಂದಿದ್ದನು. ಕೃಷ್ಣದೇವರಾಯನು ಕುಹು ರೋಗದಿಂದ[೨೬] ಕ್ರಿ.ಶ. ೧೫೨೯ ಅಥವಾ ಕ್ರಿ.ಶ. ೧೫೩೦ರಲ್ಲಿ ಮರಣ ಹೊಂದಿದನು.

ಅಚ್ಯುತರಾಯ

ಕ್ರಿ.ಶ. ೧೫೩೦ ರಿಂದ ೧೫೪೨ರ ವರೆಗೆ ಇವನು ಆಳ್ವಿಕೆ ನಡೆಸಿದನು. ಈತನ ಕಾಲದಲ್ಲಿ ಅಂತಃ 'ಕಲಹಗಳು ಹೆಚ್ಚಾಗಿದ್ದವು. ೧೫ ಆಗಸ್ಟ್ ೧೫೩೦ರಂದು ಅಚ್ಯುತನು ಆಳ್ವಿಕೆ ಪ್ರಾರಂಭಿಸಿದನು.[೨೭] ಕೃಷ್ಣದೇವರಾಯನು ಮರಣಪೂರ್ವದಲ್ಲಿಯೇ ಅಚ್ಯುತರಾಯ ತನ್ನ ಉತ್ತರಾಧಿಕಾರಿ ಎಂದು ಹೆಸರಿಸಿದ್ದನು. ಆದರೆ ಅಳಿಯ ರಾಮರಾಯನು ಶಿಶುಪ್ರಾಯದ ಮಗನ ಹಕ್ಕನ್ನು ಎತ್ತಿಹಿಡಿದು ಇಲ್ಲಿ ತಾನೇ ಸಿಂಹಾಸನಕ್ಕೆ ಬರಬೇಕೆಂಬ ಆಸೆಯಿತ್ತು.[೨೮] ಇದರಿಂದಾಗಿ ಅಧಿಕಾರಕ್ಕೆ ಬರುವ ಪೂರ್ವದಲ್ಲಿಯೇ ಅಚ್ಯುತನು ರಾಮರಾಯನೊಡನೆ ಒಪ್ಪಂದ ಮಾಡಿಕೊಂಡು ಈ ಪ್ರಕಾರ ಆಡಳಿತದ ಅಧಿಕಾರವನ್ನು ರಾಮರಾಯನಿಗೆ ನೀಡಿದನು. ಈ ಮಧ್ಯೆ ದಂಗೆಯೆದ್ದ ನರಸಿಂಗರಾಜನನ್ನು (ದಂಡನಾಯಕ ಕೃಷ್ಣದೇವರಾಯನ ಕೊನೆಯ ಕಾಲದಲ್ಲಿ ಪ್ರದಾನ ಮಂತ್ರಿಯಾಗಿ ಆಯ್ಕೆಯಾಗಿದ್ದನು) ಸೋಲಿಸಿ ಸೆರೆಮನೆಯಲ್ಲಿಟ್ಟರು. ಈ ಅವಧಿಯಲ್ಲಿಯೇ ಕೃಷ್ಣದೇವರಾಯನ ಮತ್ತೊಬ್ಬ ಮಗ ರಾಮಚಂದ್ರ ಮೃತನಾದನು. ಇದು ಅಚ್ಯುತನಿಗೆ ಕಂಟಕ ತಪ್ಪಿದಂತಾಯಿತು. ಆದರೂ ಸಹ ರಾಮರಾಯ ಅಚ್ಯುತರಾಯ ನೊಂದಿಗೆ ವಿವಾದ ಮುಂದುವರೆಯುತ್ತಲೇ ಇತ್ತು. ಇವರ ವಿವಾದ ಬಗೆಹರಿಸಲು ಬಿಜಾಪುರದ ಇಸ್ಮಾಯಿಲ್‌ನನ್ನು ಅಹ್ವಾನಿಸಿದರು. ಆದರೆ ಇದಕ್ಕೆ ಮುಂಚೆ ಇಸ್ಮಾಯಿಲ್‌ನು ಇಮದ್-ಉಲ್-ಮುಲ್ಕನೊಡನೆ ಸೇರಿ ಮದುಗಲ್ ಮತ್ತು ರಾಯಚೂರು ಕೋಟೆಗಳನ್ನು ವಶಪಡಿಸಿಕೊಂಡಿದ್ದನು. ಆದ್ದರಿಂದ ವೈರಿಗಳನ್ನು ರಾಜ್ಯಕ್ಕೆ ಪ್ರವೇಶ ನೀಡಿದಂತೆ ಆಯಿತು. ಈ ಮಧ್ಯೆ ಇಸ್ಮಾಯಿಲ್‌ನು ಮರಣ ಹೊಂದಿದನು. ಮಗ ಇಬ್ರಾಹಿಂನು ಬಿಜಾಪುರದ ಸಿಂಹಾಸನವನ್ನು ಏರಿದನು. ಈ ವೇಳೆಯಲ್ಲಿ ಅಚ್ಯುತನು ಹಿಂದೆ ವಶಪಡಿಸಿಕೊಂಡಿದ್ದ ಮುದುಗಲ್ ಮತ್ತು ರಾಯಚೂರು ಕೋಟೆಗಳನ್ನು ಪುನಃ ತನ್ನ ರಾಜಧಾನಿಗೆ ಸೇರಿಸಿಕೊಂಡನು. ಈ ಗೆಲುವಿನ ಕಾರಣ ಅಚ್ಯುತನ ತಿರುಪತಿಗೆ ಭೇಟಿ ನೀಡದನು. ಈ ಸಂದರ್ಭವನ್ನು ಉಪಯೋಗಿಸಿಕೊಂಡ ರಾಮರಾಯ ಅಚ್ಯುತನ ನಿಷ್ಠಾವಂತ ಅಧಿಕಾರಿಗಳನ್ನು ತೆಗೆದು

ಹಾಕಿ ತನ್ನ ಬಂಧು ಮಿತ್ರರನ್ನು ನೇಮಿಸಿಕೊಂಡನು. ಈ ಅಧಿಕಾರಿಗಳ ಬಿಜಾಪುರದ ಸೈನ್ಯದಲ್ಲಿ ಸೇರಿಕೊಂಡರು. ಹಿಂದಿರುಗಿದ ಅಚ್ಯುತನನ್ನು ಸೆರೆಮನೆಯಲ್ಲಿ ತಳ್ಳಿದರು. ಈ ಸಂದರ್ಭದಲ್ಲಿ ಮುಖ್ಯ ನಾಯಕರು ವಿರೋಧಿಸಿದರು. ನಂತರ ತಿರುಮಲನ ನೆರವಿನಿಂದ ಸೆರೆಮನೆಯಿಂದ ಬಿಡುಗಡೆಗೊಂಡು ಪುನಃ ಅಧಿಕಾರಕ್ಕೆ ಬಂದನು.

ಅಚ್ಯುತನ ಕಾಲದಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿದನು. ಕಲೆ ಮತ್ತು ವಾಸ್ತುಶಿಲ್ಪ ಇತರೆ ಕ್ಷೇತ್ರಗಳಿಗೆ ಉದಾರವಾಗಿ ಪೋಷಣೆ ನೀಡಿದನು. ಈತನೂ ಸಹ ಮಡದಿ ಮಕ್ಕಳಿಗಾಗಿ ದಾನ ದತ್ತಿಗಳನ್ನು ನೀಡಿ, ರಾಣಿಯರ ಹೆಸರಿನಲ್ಲಿ ಕೆರೆ, ಪಟ್ಟಣ ಇತರೆ ನಿರ್ಮಾಣಕ್ಕೆ ಕಾರಣಕರ್ತನಾದನು. ಒಟ್ಟಿನಲ್ಲಿ ಅಚ್ಯುತನ ಆಳ್ವಿಕೆಯು ಅನೇಕ ಅಡೆತಡೆಗಳಿಂದ ಕೂಡಿತ್ತು. ಕೊನೆಕೊನೆಗೆ ಇವನು ವೈಭೋಗ ಜೀವನದಲ್ಲಿ ಕಾಲಕಳೆದನು.[೮] ನ್ಯೂನಿಜ್‌ನ ಅಭಿಪ್ರಾಯದ ಪ್ರಕಾರ ಅಚ್ಯುತನು ಹೇಡಿಯಾಗಿದ್ದನು. ವ್ಯಸನಿ, ಪುಕ್ಕಲು, ಅಪ್ರಮಾಣಿಕ ಈ ಕಾರಣದಿಂದಾಗಿ ಸಾಮ್ರಾಜ್ಯ ನುಚ್ಚುನೂರಾಗಲು ಸಾಧ್ಯವಾಯಿತು. ಆದರೆ ಸೂರ್ಯನಾಥ್ ಕಾಮತ್‌ನವರ ಪ್ರಕಾರ ಅಚ್ಯುತನು ಧೀರ, ಪ್ರಮಾಣಿಕನೆಂದು ಕರೆದಿದ್ದಾರೆ. ಒಟ್ಟಿನಲ್ಲಿ ಅಚ್ಯುತರಾಯನ ಆಡಳಿತದಲ್ಲಿ ತಮ್ಮತಮ್ಮಲ್ಲಿಯೇ ಒಳಜಗಳ, ಪಿತೂರಿ, ಅಧಿಕಾರ ಆಸೆಗಾಗಿ ವೈರಿಗಳನ್ನೆ ಒಪ್ಪಂದ ರಾಜಿಗಳಿಗೆ ಆಹ್ವಾನಿಸಿದ್ದು ವಿಜಯನಗರದ ಅವನತಿಗೆ ಕಾರಣಮಾಡಿಕೊಟ್ಟನು. ಈ ಮೂಲಕ ತುಳುವ ವಂಶದ ಅಧಿಕಾರವು ಅರವೀಡು ವಂಶಕ್ಕೆ ವರ್ಗಾಯಿಸಲ್ಪಟ್ಟಿತು. ಒಟ್ಟಿನಲ್ಲಿ ತುಳುವ ವಂಶದ ಆಡಳಿತಾವಧಿಯು ಇಡೀ ದಕ್ಷಿಣ ಭಾರತದ ಇತಿಹಾಸದಲ್ಲಿಯೇ ಅತ್ಯಂತ ಮಹತ್ವ ಪಡೆದ ವಂಶವಾಗಿದ್ದು, ಇವರು ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಧಾರ್ಮಿಕ ಮತ್ತು ಸಾಮಾಜಿಕ ಹೀಗೆ ಹಲವು ವಿಚಾರಗಳಿಗೆ ಕೊಡುಗೆಗಳನ್ನು ನೀಡಿ ಶ್ರೀಮಂತಿಕೆ ಮೆರೆದಿರುವುದು ಈ ವಂಶದ ಮಹಾಸಾಧನೆಯಾಗಿದೆ.

ಟಿಪ್ಪಣಿಗಳು

೧. ಡಾ. ಶೈಲಾ ಟಿ. ವರ್ಮ, ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೬

೨. ಸೂರ್ಯನಾಥ ಕಾಮತ್, ವಿಜಯನಗರ ಅಧ್ಯಯನ, ಸಂ. ೨, ಪು. ೧೧೮

೩. ಕೆ. ವೆಂಕಟರಾಮಪ್ಪ, ಶ್ರೀಕೃಷ್ಣದೇವರಾಯನ ಕಾಲದ ಕರ್ನಾಟಕಾಂಧ್ರ ಸಾಹಿತ್ಯ ಸಮೀಕ್ಷೆ, ಪು. ೭-೮

೪. ಕು. ವೀರಭದ್ರಪ್ಪ, ಶ್ರೀ ಕೃಷ್ಣದೇವರಾಯ, ಪು. ೫

೫. ಸೂರ್ಯನಾಥ ಕಾಮತ್, ವಿಜಯನಗರ ಅಧ್ಯಯನ, ಸಂ. ೨, ಪು. ೧೧೮-೧೧೯

೬. ಕೆ. ಮಹೇಶ್, ಶ್ರೀ ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು, ಪು. ೧೯

೭. ಸೂರ್ಯನಾಥ ಕಾಮತ್, ವಿಜಯನಗರ ಅಧ್ಯಯನ, ಸಂ. ೨, ಪು. ೧೧೮-೧೨೦

೮. ಸದಾನಂದ ಕಾನವಳ್ಳಿ, ಮರೆತು ಹೋದ ಮಹಾಸಾಮ್ರಾಜ್ಯ, ಪು. ೧೯೫

೯. ಎಂ.ವಿ. ಕೃಷ್ಣರಾವ್, ಎಂ. ಕೇಶವಭಟ್ಟ, ಕರ್ನಾಟಕದ ಇತಿಹಾಸ ದರ್ಶನ, ೧೯೭೦, ಪು.

೧೦. ಸೀತಾರಾಮ ಜಾಗೀರ್‌ದಾರ್, ವಿಜಯನಗರ ಅಧ್ಯಯನ, ಸಂ. ೩, ಪು. ೩೭೨

೧೧. ಕೆ. ಸತೀಶ್, ವಿಜಯನಗರ ಕಾಲದ ಶೈವ ದೇವಾಲಯಗಳು, ಪು. ೨೫

೧೨. ಕು. ವೀರಭದ್ರಪ್ಪ, ಶ್ರೀ ಕೃಷ್ಣದೇವರಾಯ, ಪು. ೫

೧೩. ನಿರೂಪಮ, ಆಮುಕ್ತಮೌಲ್ಯದ, ಪು. ೭-೮

೧೪. ಕೆ. ಶಿವಣ್ಣ, ಕರ್ನಾಟಕ ಚರಿತ್ರೆ, ಸಂ. ೩, ಪು. ೩೮

೧೫. ಕೆ. ಮಹೇಶ್, ಕರ್ನಾಟಕ ಇತಿಹಾಸ ಪರಂಪರೆ, ಸಂ. ೭, ಪು. ೩೨

೧೬. ಅದೇ, ಸಂ. ೩, ಪು. ೩೯

೧೭. ಸಿ. ಮಹದೇವ, ಹೊಸಪೇಟೆ ತಾಲ್ಲೂಕು ದರ್ಶನ, ಪು. ೪೫

೧೮. ಕೆ. ಸತೀಶ್, ವಿಜಯನಗರ ಕಾಲದ ಶೈವ ದೇವಾಲಯಗಳು, ಪು. ೨೫

೧೯. ಅಡಪ ರಾಮಕೃಷ್ಣರಾವ್, ಕೃಷ್ಣದೇವರಾಯ ಪು. ೭

೨೦. ಸಿ. ಮಹದೇವ, ಹೊಸಪೇಟೆ ತಾಲ್ಲೂಕು ದರ್ಶನ, ಪು. ೪೬

೨೧. ಶ್ರೀನಿವಾಸಚಾರ್, ಹಂಪಿ ಪ್ರಖಾತ ರಾಜಧಾನಿ

೨೨. ಪ್ರೊ. ಬಾ.ರಾ. ಗೋಪಾಲ್, ಕರ್ನಾಟಕ ಚರಿತ್ರೆ, ಸಂ. ೩, ಪು. ೪೦

೨೩. ತಿಪ್ಪೆರುದ್ರಸ್ವಾಮಿ, ಕರ್ಣಾಟಕ ಸಂಸ್ಕೃತಿ ಸಮೀಕ್ಷೆ, ಪು. ೧೪೫-೧೪೭

೨೪. ಪ್ರೊ. ಬಾ.ರಾ. ಗೋಪಾಲ್, ಕರ್ನಾಟಕ ಚರಿತ್ರೆ, ಸಂ.೩, ಪು. ೪೪

೨೫. ಶ್ರೀನಿವಾಸಚಾರ್, ಹಂಪಿ ಪ್ರಖ್ಯಾತ ರಾಜಧಾನಿ

೨೬. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೧೪೮

೨೭. ಸದಾನಂದ ಕನವಳ್ಳಿ, ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ, ಪು. ೧೮೩

೨೮. ಅದೇ, ಪು. ೧೭೮

೨೯. ಹಾರಾಳು ಮಹಾಬಲೇಶ್ವರ, ಇತಿಹಾಸ ರಚನಾ ಶಾಸ್ತ್ರ ಬಳ್ಳಾರಿ ಪ್ರದೇಶದ ಮೇಲಿನ ಅಧ್ಯಯನ, ಪು. ೪೬-೪೯

ಅಧ್ಯಾಯ ೪

ತುಳುವ ವಂಶದ ರಾಣಿಯರು

ತುಳುವ ಅರಸರ ರಾಣಿಯರು

ರಾಣಿಯರೆಂದರೆ ರಾಜನ ಪತ್ನಿ. ಪಟ್ಟಮಹಿಷಿ, ರಾಣಿ, ಮಹಾರಾಣಿ ಎಂದೆಲ್ಲಾ ಗುರುತಿಸಿಕೊಂಡು ರಾಜನ ಮೂಲಕ ರಾಣಿಯರನ್ನು ನೋಡುವುದು ಪ್ರಾಚೀನ ಕಾಲದಿಂದಲ್ಲೂ ಸಹ ನಡೆದು ಬಂದ ಒಂದು ಮುಖ್ಯ ಸಂಗತಿ. ರಾಣಿಯರು ಹೆಚ್ಚಾಗಿ ಬಹುಪತ್ನಿತ್ವದವರಾಗಿ ಎಲ್ಲಾ ರಾಜಕುಟುಂಬದಲ್ಲಿಯೂ ಗೋಚರಿಸುವುದು ಸ್ಪಷ್ಟ. ತುಳುವ ವಂಶದಲ್ಲಿಯೂ ಸಹ ಈ ಪದ್ಧತಿಯೂ ರೂಢಿಯಲ್ಲಿತ್ತು. ಅದರಂತೆ ಇಲ್ಲಿ ನರಸನಾಯಕನಿಗೆ ಮೂವರು ರಾಣಿಯರು, ಕೃಷ್ಣದೇವರಾಯನಿಗೆ ಮೂವರು ರಾಣಿಯರಿದ್ದರು. ಅಚ್ಯುತರಾಯನಿಗೆ ಇಬ್ಬರೂ ರಾಣಿಯರನ್ನು ಇಲ್ಲಿ ಗುರುತಿಸಲಾಗಿದ್ದು, ಜೊತೆಗೆ ಇಬ್ಬರು ರಾಜಪುತ್ರಿಯರ ಕುರಿತು ಸಹ ಇಲ್ಲಿ ವಿವರಿಸಲಾಗಿದ್ದು, ಒಟ್ಟು ಹನ್ನೊಂದು ಜನ ಅರಸಿಯರು ಪ್ರಮುಖವಾಗಿ ಗುರುತಿಸಲ್ಪಟ್ಟಿದ್ದು, ತುಳುವವಂಶದ ಆಳ್ವಿಕೆಯ ಮಹಾಪರಿವರ್ತನೆಗಳಲ್ಲಿ ರಾಣಿಯರ ಪಾತ್ರವನ್ನು ಪ್ರಸ್ತುತತೆಯನ್ನು ಹಾಗೂ ಅವರ ಮೂಲಚರಿತ್ರೆಯನ್ನು ಬೆಳಕಿಗೆ ತರುವುದು ಮುಖ್ಯಸಂಗತಿಯಾಗಿದೆ.

ವಿಜಯನಗರದ ತುಳುವ ರಾಣಿಯರು ರಾಜಪ್ರಭುತ್ವದ ಆಡಳಿತ ವ್ಯವಸ್ಥೆಯ ಆಗುಹೋಗುಗಳಿಗೆ ಕಾರಣೀಭೂತರಾಗಿದ್ದರು. ಸಾಂಸ್ಕೃತಿಕ ಚರಿತ್ರೆಗಳಷ್ಟೇ ಮೀಸಲಾಗಿರದೆ, ರಾಜಕೀಯ ಚರಿತ್ರೆಯಲ್ಲಿಯೂ ರಾಣಿಯರು ನಿರ್ಣಾಯಕ ಪಾತ್ರವಹಿಸಿದ್ದರು ಎಂಬ ವಿಚಾರದ ಕುರಿತು ಸಮಕಾಲೀನ ಕನ್ನಡ, ಸಂಸ್ಕೃತ, ಸಾಹಿತ್ಯ ಕೃತಿಗಳು, ಶಾಸನ, ಶಿಲ್ಪ ಇತರೇ ಆಕರಗಳಲ್ಲಿಯೂ ಸಹ ಹೊಸವಿಚಾರದ ಬಗ್ಗೆ ಬೆಳಕೆ ಚೆಲ್ಲುತ್ತದೆ. ಅಲ್ಲದೆ ಮೌಖಿಕ ಆಕರ ಹಾಗೂ ವಿದೇಶಿ ಯಾತ್ರಿಕರ ಬರಹಗಳಲ್ಲಿಯೂ ರಾಣಿಯರ ಪ್ರಸ್ತಾಪ ಇರುವುದನ್ನು ಇಲ್ಲಿ ವಿಶ್ಲೇಷಿಸಲಾಗಿದ್ದು, ತುಳುವ ರಾಣಿಯರು ವಿಜಯನಗರ ಸಾಮ್ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಸಂಗತಿಗಳನ್ನು ಇಲ್ಲಿ ವಿಶ್ಲೇಷಿಸಲಾಗಿದ್ದು ಆ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಇವರು ವಹಿಸಿದ ಪಾತ್ರವನ್ನು ಇಲ್ಲಿ ಗುರುತಿಸಲಾಗಿದೆ.

ಬುಕ್ಕಾಂಬೆ

ಬುಕ್ಕಾಂಬೆ ತುಳುವ ವಂಶದ ಪ್ರಸಿದ್ಧ ರಾಣಿ. ಈಕೆ ತಿಮ್ಮಾಭೂಪತಿ ಹಾಗೂ ದೇವಕಿ ಅವರ ಪುತ್ರನಾದ ಈಶ್ವರನಾಯಕನ ಪತ್ನಿ. ಈಶ್ವರನಾಯಕನು ಸಾಳುವ ನರಸಿಂಹನಿಗೆ ಸೇನಾಪತಿಯಾಗಿದ್ದು ಆತನ ಬಲಗೈ ಬಂಟನಾಗಿದ್ದು ಪ್ರಮುಖನಾಗಿದ್ದನು. ಬುಕ್ಕಾಂಬೆಗೆ ನರಸನಾಯಕನೆಂಬ ಮಗನಿದ್ದನು. ಈತನು ಸಾಳುವ ವಂಶದಿಂದ ತುಳುವ ವಂಶದ ಸ್ಥಾಪನೆಗೆ ಕಾರಣಕರ್ತನಾದನು.[೧] ತಿಪ್ಪಾಂಬೆ ಕುರಿತು ವಿರೂಪಾಕ್ಷ ದೇವಾಲಯದ ರಂಗಮಂಟಪದ ಶಾಸನದಲ್ಲಿ ಕ್ರಿ.ಶ. ೧೫೧೦ರಲ್ಲಿ ಕೃಷ್ಣದೇವರಾಯನ ಪಟ್ಟಾಭಿಷೇಕದ ನೆನಪಿಗಾಗಿ ಹೊರಡಿಸಿದ ಈ ಶಾಸನದಲ್ಲಿ ತುಳುವ ವಂಶದ ಮೂಲ ಇತಿಹಾಸ,

ಈಶ್ವರನಾಯಕ ಹಾಗೂ ಬುಕ್ಕಮ್ಮಳ ವಿವರಗಳನ್ನು ಹೊಂದಿದೆ.[೨] ಹಾಗೆಯೇ ತಿರುಮಲಾಂಬೆಯು ತನ್ನ ಕೃತಿ 'ವರದಾಂಬಿಕ ಪರಿಣಯ'ದಲ್ಲಿಯೇ ತುಳುವ ವಂಶದ ಪೂರ್ವ ಇತಿಹಾಸವೆಂಬುದು ಈಶ್ವರನಾಯಕ ಆತನ ರಾಣಿ ಬುಕ್ಕಾಂಬೆಯ ಉಲ್ಲೇಖವಿದೆ.[೩]

ಬುಕ್ಕಾಂಬೆಯ ಹೆಸರಿನಲ್ಲಿ ಹೊರಡಿಸಿದ ದಾನ ಶಾಸನ ಹಾಗೂ ದಾನ ನೀಡಿದ ಶಾಸನಗಳಲ್ಲಿ ಈಕೆಯ ಬಗ್ಗೆ ತಿಳಿದುಬರುತ್ತದೆ. ಕ್ರಿ.ಶ. ೧೫೨೪ರ ಹಾವಿನಹಾಳ, ವೀರಾಪುರ ಶಾಸನದಲ್ಲಿ ಅಚ್ಯುತರಾಯನು ತಮ್ಮ ತಾತ ಈಶ್ವರನಾಯಕ ಅಜ್ಜಿ ಬುಕ್ಕಾಂಬೆ ಅಮ್ಮನವರ ನೆನಪಿನಲ್ಲಿ ವಿರೂಪಾಕ್ಷ ದೇವಾಲಯದಿಂದ ಪಶ್ಚಿಮಕ್ಕೆ ಬುಕ್ಕೇಶ್ವರನನ್ನು ಪ್ರತಿಷ್ಠಾಪಿಸಿ ದೊಂಡವಿಟಿಯನ್ನು ನಾಲ್ಕು ದಿಕ್ಕುಗಳಿಗೆ ಲಿಂಗಮುದ್ರೆ ಹಾಕಿ ತಾಮ್ರ ಶಾಸನವನ್ನು ಬರೆಯಿಸಿ ಸರ್ವಮಾನ್ಯವಾಗಿ ಮಾಡಿ ವ್ಯಕ್ತಿತ್ವವನ್ನು ನಿರ್ವಹಿಸುವ ರಾಮಚಂದ್ರ ದೀಕ್ಷಿತರಿಗೆ ಇದನ್ನು ಕೊಡಲಾಯಿತು.[೪] ಜೊತೆಗೆ ಬುಕ್ಕಾಂಬೆ ಅಮ್ಮನವರ ಬಗೆಗೆ ಶಾಸನಗಳಲ್ಲಿ ಈ ಕೆಳಗಿನಂತೆ ಉಲ್ಲೇಖಗಳಿವೆ. ಕ್ರಿ.ಶ. ೧೫೧೦ ನರಸನಾಯಕ ಮತ್ತು ಬುಕ್ಕಾಂಬಮ್ಮ ಮುಠ್ಠನ್ನಯ ಹಳ್ಳಿಯಲ್ಲಿ ಭೂಮಿಯನ್ನು ಕೊಂಡು ವಿರೂಪಾಕ್ಷ ದೇವರ ದಿನನಿತ್ಯದ ಸೇವೆಗೆ ಹಂಪೆಯ ತಿರುಮಲ ಭಟ್ಟರ ಮಗ ಸಾಯಿಭಟ್ಟರಿಗೆ ದಾನವಾಗಿ ಕೊಟ್ಟಳು ಎಂದು ತಿಳಿಸುತ್ತದೆ.[೫] ಹಾಗೆಯೇ ಕ್ರಿ.ಶ. ೧೫೧೦ರಲ್ಲಿ ನರಸನಾಯಕನ ತಾಯಿ ಹಾಗೂ ಕೃಷ್ಣದೇವರಾಯನ ಅಜ್ಜಿಯಾದ ಬುಕ್ಕಜ್ಜಮ್ಮಳು ವಿರೂಪಾಕ್ಷ ದೇವರ ನೈವೇದ್ಯಕ್ಕೆ ಭೂಮಿ ದಾನ ಮಾಡಿದಳು[೬] ಎಂದಿದೆ. ಈ ಬಗೆಯ ದಾನ ದತ್ತಿ ಕಾರ್ಯಗಳನ್ನು ರಾಣಿ ಮಾಡಿರುವ ಉಲ್ಲೇಖ ತುಳುವ ಅರಸರ ಮಟ್ಟಿಗೆ ಮೊದಲನೆಯದಾಗಿದೆ. ಇದೇ ರೀತಿ ಕಾಲಗಟ್ಟಹಾಳು ಗ್ರಾಮದ ಆಂಜನೇಯ ದೇವಾಲಯ ಜೀರ್ಣವಾಗಿದೆ. ಸಮೀಪದ ಗುಂಡಿನ ಶಾಸನವು ಚಿಕ್ಕ ಒಡೆಯರು ತಮ್ಮ ತಾಯಿ ಬುಕ್ಕಾಜಿ ಅಮ್ಮನವರಿಗೆ ತಂದೆ ಈಶ್ವರನಾಯಕರಿಗೂ ಪುಣ್ಯವಾಗಬೇಕೆಂದು ಶ್ರೀ ವಿಠಲದೇವರಿಗೆ ಗೋಪಿಸೆಟ್ಟಿ ಹಳ್ಳಿಯ ಗ್ರಾಮವನ್ನು ಮಾನ್ಯವಾಗಿ ಕೊಟ್ಟಿರುವ ಸಂಗತಿಗಳು ತಿಳಿದುಬರುತ್ತವೆ.[೭]

ಹಾಗೆಯೇ ಮತ್ತೊಂದು ಕ್ರಿ.ಶ. ೧೫೩೪ ಅರಸ ಅಚ್ಯುತರಾಯನು ತಾತ ಈಶ್ವರ ನಾಯಕ ಹಾಗೂ ಅಜ್ಜಿ ಬುಕ್ಕಾಂಬೆ ಅಮ್ಮನವರಿಗೂ ಪುಣ್ಯವಾಗಲೆಂದು ವಿರೂಪಾಕ್ಷ ದೇವರ ದೇವಸ್ಥಾನದ ಪಶ್ಚಿಮಕ್ಕೆ ಸೋಮಣ್ಣನಾಯಕನ ಗೋಪುರ, ಬುಕ್ಕೇಶ್ವರ ದೇವರ ಸಿಂಹಾಸವನನ್ನು ಸ್ಥಾಪಿಸಿ ದೇವರ ಸೇವೆಗೆ ದೊಂಡವಟಿ ಗ್ರಾಮವನ್ನು ದಾನಮಾಡಿದನೆಂದು ತಿಳಿದುಬರುತ್ತವೆ. ಒಂದು ತಾಮ್ರ ಪಟವನ್ನು ಕೊಟ್ಟು ಊರಿನ ಮೇರೆಗಳಲ್ಲಿ ಲಿಂಗಮುದ್ರೆ ಮತ್ತು ನಂದಿ ಕಲ್ಲುಗಳನ್ನು ನಿಲ್ಲಿಸಿದ್ದನ್ನು ಇಲ್ಲಿ ತಿಳಿಸುತ್ತವೆ.[೮] ಇದು ತಮ್ಮ ವಂಶದ ಹಿರಿಯರ ಬಗ್ಗೆ ಇರುವ ಗೌರವ, ಧಾರ್ಮಿಕ ಭಾವನೆಯನ್ನು ಮೇಲಿನ ಶಾಸನ ಸಂಕೇತಿಸುತ್ತದೆ. ಜೊತೆಗೆ ರಾಯಗೋಪುರ ಮಂಟಪದ ಪಶ್ಚಿಮ ದಿಕ್ಕಿನಲ್ಲಿ ರಂಗಮಂಟಪ, ಪೂರ್ವದ ಗೋಡೆಯ ಮೇಲೆ ಬುಕ್ಕಮ್ಮ ದೇವಿಯ ಶಿಲಾಶಾಸನವಿದೆ. ಇದು ನಂದಿ ನಾಗರಲಿಪಿಯಲ್ಲಿದೆ. ಶಾಸನ ಅಚ್ಯುತರಾಯನ ಕಾಲದ್ದು ಇವಳು ಈಶ್ವರನಾಯಕನ ಹೆಂಡತಿ, ಅಚ್ಯುತರಾಯನ ಅಜ್ಜಿ ಎಂಬ ಉಲ್ಲೇಖವಾಗಿದೆ. ಇದರಿಂದಾಗಿ ವಿಜಯನಗರದ ತುಳುವ ವಂಶದ ರಾಣಿಯ ಹೆಸರಿನಲ್ಲಿ ದಾನ ಮಾಡಿದ ಶಾಸನಗಳು ಇತ್ಯಾದಿ ಕುರಿತು ಅವರು ಹಿರಿಯರಿಗೆ ನೀಡುತ್ತಿದ್ದಂತಹ ಭಕ್ತಿ, ಗೌರವವನ್ನು ಸೂಚಿಸುತ್ತದೆ. ಬುಕ್ಕಾಂಜಿ ಅಮ್ಮ, ಬುಕ್ಕಳಾಂಬೆ, ಬುಕ್ಕಾಂಬೆ ಎಂದು ಶಾಸನಗಳಲ್ಲಿ ಉಲ್ಲೇಖಿತ

ವಾಗಿರುವುದು ಸ್ಪಷ್ಟ. ಈ ಹೆಸರು ತುಳುವ ಅರಸ ಮೂಲ ಚರಿತ್ರೆ ಪರಂಪರೆಗೆ ಸೇರಿದ ರಾಣಿ ಬುಕ್ಕಾಂಬೆ ಹೊರತು ಬೇರೆ ಅಲ್ಲ. ಇವಳು ಈಶ್ವರನಾಯಕನ ರಾಣಿಯಾಗಿ ವಿಜಯನಗರ ಸಾಮ್ರಾಜ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾಳೆ. ವಿಶೇಷವಾಗಿ ಇವಳು ಧಾರ್ಮಿಕ ಕ್ಷೇತ್ರಕ್ಕೆ ಕೊಟ್ಟ ಪ್ರೋತ್ಸಾಹ ಇಲ್ಲಿ ಪರಿಗಣನಾರ್ಹ. ತುಳುವ ವಂಶದ ರಾಣಿಯರಲ್ಲಿ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಚಿಂತಿಸಿದವರಲ್ಲಿ ಮೊದಲನೆ ರಾಣಿ ಇವಳು. ಹೀಗಾಗಿ ಇವಳು ತುಳುವ ರಾಣಿಯರ ಅಗ್ರಪಂಕ್ತಿಗೆ ಸೇರಿದ್ದು ಒಂದು ರಾಜಕೀಯ ಧಾರ್ಮಿಕ ವಿವಿಧ ಕ್ಷೇತ್ರಗಳಿಗೆ ಆಸ್ತಿಭಾರವನ್ನು ಹಾಕುತ್ತಾಳೆ ಇವಳು ನೀಡಿದ ಕೊಡುಗೆಗಳು ಅಪಾರ. ಆದರೆ ಇವಳ ಸ್ಫೂರ್ತಿಯಿಂದ ಈಶ್ವರನಾಯಕನ ಸಂತತಿ ರಾಜಕೀಯವಾಗಿ ಪ್ರಗತಿಪಥಕ್ಕೆ ಬರಲು ನಾಂದಿಯಾಯಿತು.

ತಿಪ್ಪಾಂಬೆ

ವಿಜಯನಗರದ ತುಳುವ ಅರಸರ ರಾಣಿಯರಲ್ಲಿ ತಿಪ್ಪಾಂಬೆ ಒಬ್ಬಳು. ನರಸನಾಯಕನ ಮೂವರು ರಾಣಿಯರಲ್ಲಿ ಇವಳು ಹಿರಿಯ ರಾಣಿ. ೧೫೧೦ರಲ್ಲಿ ಹೊರಡಿಸಿದ ವಿರೂಪಾಕ್ಷ ದೇವಾಲಯದಲ್ಲಿರುವ ಕೂಟ ಶಾಸನದಲ್ಲಿ ತಿಪ್ಪಾಂಬೆ ನರಸನಾಯಕನ ಮೊದಲನೆಯ ರಾಣಿ ಎಂದು ತಿಳಿಸಲಾಗಿದೆ.[೯]

ಹಾಗೆಯೇ ಶ್ರೀ ಕಾಂಚಿ ಕಾಮಕೋಟಿ ಶಂಕರಚಾರ್ಯರ ಬಳಿ ಇರುವ ತಾಮ್ರ ಶಾಸನವೊಂದರಲ್ಲಿ ಉದ್ಧೃತವಾಗಿರುವ ಸಂಸ್ಕೃತ ಪದ್ಯದಲ್ಲೂ ಸಹ ದಶರಥನ ಪತ್ನಿಯಾದ ಕೌಶಲ್ಯ ಸುಮಿತ್ರರಂತೆಯೇ ನರಸಿಂಹನಿಗೆ ತಿಪ್ಪಾಂಬೆ, ನಾಗಲಾಂಬೆರೆಂಬೀರ್ವರು ಎಂಬ ಇಬ್ಬರು ಪತ್ನಿಯರಿದ್ದಾರೆಂದೂ ಅವರಿಗೆ ರಾಮಲಕ್ಷ್ಮಣರಂತ ಭುಜಬಲರಾಮ ಮತ್ತು ಕೃಷ್ಣದೇವರಾಯರೆಂಬ ಪುತ್ರರಿದ್ದರೆಂದು ಉಲ್ಲೇಖವಿದೆ.[೧೦] ಮೇಲಿನ ವಿವರಗಳಿಗೆ ಪುಷ್ಠಿ ನೀಡುವಲ್ಲಿ ಕ್ರಿ.ಶ. ೧೫೩೧ ಅಚ್ಯುತರಾಯ ಹೊರಡಿಸಿದ ಶಾಸನದಲ್ಲಿಯೂ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಇದರಿಂದಾಗಿ ಇವರೆಲ್ಲರೂ ಸಾಮರಸ್ಯದಿಂದ ಜೀವನ ನಡೆಸುತ್ತಿದ್ದರೆಂದು ತಿಳಿದುಬರುತ್ತದೆ. ಈಕೆಗೆ ಓರ್ವ ಪುತ್ರ ಭಜಬಲರಾಯ ಅಥವಾ ನರಸಿಂಹರಾಯ ಇದ್ದನು. ಈತನು ಕ್ರಿ.ಶ.೧೫೦೫ ರಿಂದ ೧೫೦೯ರ ವರೆಗೆ ಆಳ್ವಿಕೆ ನಡೆಸಿ ಬಹುಬೇಗನೆ ಮೃತನಾದನು.[೧೧] ಕವಿ ಮುಕ್ಕುತಿಮ್ಮನು ತನ್ನ ಒಂದು ಪದ್ಯದಲ್ಲೂ ಕೂಡ ಪುಣ್ಯ ಚರಿತಳು ತಿಪ್ಪಾಂಬೆ ನಾಗಲಾಂಬೆಯಲ್ಲಿರುವುದು ಎಂದು ಪ್ರಸ್ತಾಪಿಸಿರುತ್ತಾನೆ.[೧೨] ಆದರೆ ಕೇವಲ ಒಬ್ಬ ರಾಣಿ ಮಾತ್ರವಾಗಿರುವಳು, ಮತ್ತೊಬ್ಬ ರಾಣಿಯೊಂದಿಗೆ ಅನ್ಯೋನ್ಯತೆ ಹೊಂದಿರುವಳೆಂದು ತಿಳಿದುಬರುತ್ತದೆ. ವಿನಃಹ ಈಕೆಯ ಮೂಲವಿಚಾರದ ಬಗ್ಗೆ ಸಾಮ್ರಾಜ್ಯದಲ್ಲಿ ಈಕೆಯ ಪಾತ್ರದ ಬಗ್ಗೆ ಇತರೇ ಯಾವುದೇ ವಿಚಾರದ ಕುರಿತು ಸ್ಪಷ್ಟವಾದ ಮಾಹಿತಿಯ ಕೊರತೆಯಿದೆ. ಈ ಹಿನ್ನೆಲೆಯಲ್ಲಿ ತಿಪ್ಪಾಂಬೆ ಒಬ್ಬ ರಾಣಿಯಾಗಿ ಸಾಧಿಸಿದ ವಿವರಗಳು ವಿಜಯನಗರ ಸಾಮ್ರಾಜ್ಯಕ್ಕೆ ಮಹತ್ವ ಬಂದಿರುವಲ್ಲಿ ಸಾಕ್ಷೀಕರಿಸುತ್ತವೆ.

ನಾಗಲಾದೇವಿ

ಈಕೆಗೆ ನಾಗಾಂಬೆ, ನಾಗಾಜೀ, ನಾಗಲಾಂಬೆ, ನಾಗಮಾಂಬಾ, ನಾಗಲಾದೇವಿ, ನಾಗಾಜೀಯಮ್ಮ ಎಂಬ ಹೆಸರುಗಳಿಂದ ಕರೆಯುತ್ತಾರೆ. ತುಳುವ ವಂಶದಲ್ಲಿಯೇ ನಾಗಲಾದೇವಿಗೆ ವಿಶಿಷ್ಟವಾದ ಸ್ಥಾನವಿದೆ. ಕರ್ನಾಟಕದ ಇತಿಹಾಸದಲ್ಲಿ ಮಹಾನ್ ಚಕ್ರವರ್ತಿ ಕೃಷ್ಣದೇವರಾಯನ ಜನ್ಮದಾತೆ. ತುಳುವ ವಂಶದ ಸ್ಥಾಪಕ ನರಸನಾಯಕ ಅಥವಾ ನರಸಿಂಹನಾಯಕನ ದ್ವಿತೀಯ ರಾಣಿ.

ನಾಗಲಾದೇವಿ ವಿಜಯನಗರದಲ್ಲಿ ವಹಿಸಿದ ಪಾತ್ರದ ಬಗ್ಗೆ ವಿಶೇಷಣೆ ಮಾಡಿದಂತೆ ಈಕೆಯ ಬಗ್ಗೆ ಚರಿತ್ರೆಕಾರರಲ್ಲಿ ದ್ವಂದ್ವದ ನಿಲುವು ಮೂಡುತ್ತದೆ. ಈಕೆಯ ಮೂಲ, ಪರಿಣಿತಿ, ಸಮುದಾಯ ಇತ್ಯಾದಿ ಸಂಗತಿಗಳು ಮಸುಕಾಗಿದೆ. ಈಕೆಯು ಕೃಷ್ಣದೇವರಾಯನ ತಾಯಿಯೆಂಬುದು ನಿಜ. ಈಕೆ ಕನ್ನಡಿಗಳೇ, ಆಂಧ್ರದವಳೇ ಎಂಬ ಬಗ್ಗೆ ಜಿಜ್ಞಾಸೆಗಳಿವೆ. ಈಕೆಯನ್ನು ಉನ್ನತ ಮೂಲದ ರಾಜವಂಶ ದವಳೆಂದು ಹೇಳಲಾಗುತ್ತದೆ. ಅಂದರೆ ಈಕೆಯೂ ಸಾಳುವ ವಂಶದ ಮಗಳೆಂದು ಅಭಿಪ್ರಾಯಪಡಲಾಗಿದೆ. ಇನ್ನೊಂದು ಸ್ಥಳಿಯ ಮೂಲದ ಪ್ರಕಾರ ಬೇಡ ಜನಾಂಗದಳೆಂದು, ದಾಸಿ ಪರಂಪರೆಗೆ ಸೇರಿದವಳೆಂದು (ಹುಲಗಿ ಪರಿಸರದಲ್ಲಿ) ಹೇಳಲಾಗುತ್ತದೆ. ವಾಸ್ತವವಾಗಿ ಇದು ಆಂಧ್ರ ಕರ್ಣಾಟಕದ ಭಾಗದ ಬೇಡ ಪಂಗಡಕ್ಕೆ ಸೇರಿದ್ದು, ಧಾರ್ಮಿಕ ಮಹಾತ್ವಾಂಕ್ಷೆಯನ್ನು ಇಟ್ಟುಕೊಂಡವಳೆಂದು ಹೇಳಲಾಗುತ್ತದೆ.[೧೩]

ಈಕೆಯು ಕೃಷ್ಣದೇವರಾಯನಿಗೆ ಶಕ ಸಂವತ್ಸರದ ೧೩೯೩ ವಿಕೃತಿ ಸಂವತ್ಸರ ಪುಷ್ಯ ಬಹುಳ ದ್ವಾದಶಿ ಶುಕ್ರವಾರದಂದು ಇದಕ್ಕೆ ಸರಿಯಾಗಿ ಕ್ರಿ.ಶ. ೧೪೭೧ ರಂದು ರಾಯನ ಜನ್ಮ ದಿನವೆಂದು ಕೃಷ್ಣರಾಯನ ಮಗಳು ಮೋಹನಾಂಗಿ ಬರೆದಿರುವ 'ಮರೀಚಿಪರಿಣಯಮ್' ಕಾವ್ಯದಿಂದ ಜನ್ಮದಿನವೆಂದು ಪರಿಗಣಿಸಿದ್ದಾರೆ.[೧೪] ಮತ್ತೊಂದು ಆಧಾರದ ಪ್ರಕಾರ ಕ್ರಿ.ಶ. ೧೫೧೦ ಹಂಪಿ ಶಾಸನ(೩೪)ದಲ್ಲೂ ಸಹ ನಾಗಲಾದೇವಿ ಗರ್ಭದಿಂದ ಕೃಷ್ಣದೇವರಾಯನು ಜನಿಸಿದನೆಂಬ ವರ್ಣನೆಯು ಈ ಶಾಸನ ಒಳಗೊಂಡಿದೆ.[೧೫]

ಹೀಗಾಗಿ ಚಾರಿತ್ರಿಕವಾಗಿ ನಾಗಲಾದೇವಿ ಕೃಷ್ಣದೇವರಾಯನ ತಾಯಿ ಮತ್ತು ನರಸನಾಯಕನ ರಾಣಿಯೆಂಬುದು ಸ್ಪಷ್ಟ. ಕಾಲಾಂತರದಲ್ಲಿ ಹುಟ್ಟಿಕೊಂಡ ಜನಪದ ಕಥೆ ಮತ್ತು ಚರಿತ್ರೆಕಾರರ ದ್ವಂದ್ವ ನಿಲುವುಗಳಿಂದ ನಾಗಲಾದೇವಿಯ ಬಗೆಗಿನ ಅಭಿಪ್ರಾಯಗಳು ಭಿನ್ನವಾಗಿ ಕಂಡುಬಂದಿವೆ. ನರಸನಾಯಕನಿಗೆ ರಾಜ್ಯಭಾರ ಮಾಡುವಾಗ ಎಷ್ಟು ವರ್ಷವಾದರೂ ಮಕ್ಕಳಾಗಲಿಲ್ಲ. ಹೋಗಿ ಬ್ರಾಹ್ಮಣರನ್ನು ಕೇಳಿದಾಗ ಈ ರಾಜ್ಯವನ್ನು ಪರಿಪಾಲನೆ ಮಾಡುವಂತಹ ಪುತ್ರನು ಆಗುವ ಹಾಗೇ ಜಪ-ತಪ ಅನುಷ್ಠಾನವನ್ನು ಮಾಡಿ ಪುತ್ರೋತ್ಸವ ಹಾಗುವ ಮರಿಮಾದಿ ಹೇಳುತ್ತ ಇದ್ದವೆಂದು ಹೇಳಿದರು. ಅದೇ ರೀತಿಯಾಗಿ ಒಂದು ನಕ್ಷತ್ರ ಸಮಯವನ್ನು ತಿಳಿಸಿದರು. ಅವರು ಹೇಳಿದ ವೇಳೆಯಲ್ಲಿ ಆ ಪಟ್ಟದ ಹೆಂಡತಿಯದಂತಾಕಿ ಆ ಸಮಯಕ್ಕೆ ಅನುಕೂಲಿಸಿದ ಕಾರಣ ನಾಗಲಾದೇವಿಯೆಂಬ ಸ್ತ್ರೀಯಳು (ದಾಸಿಯು) ಅನುಕೂಲಿಸಿದಳು. ಈಕೆಯ ಗರ್ಭದಲ್ಲಿ ಕೃಷ್ಣದೇವರಾಯನೆಂಬುವ ಹೆಸರುಳ್ಳವನು ಜನಿಸಿದನು. ಆ ನಕ್ಷತ್ರವಿರಹಿತಾ ಅದೇ ದಿನದಲ್ಲಿ ಗರ್ಭವುತ್ಪನ್ನವಾಗಿ ಪಟ್ಟದರಸಿ ಗರ್ಭದಲ್ಲಿ ಅಚ್ಯುತರಾಯವೆಂಬುವಂತಾವ ಜನಿಸಿದನು. ಹೀಗೆ ವಾಸ್ತವ್ಯಕ್ಕೆ ತೀರ ಭಿನ್ನವಾದ ಸಂಗತಿಗಳನ್ನು ಗಮನಿಸಬೇಕಾಗುತದೆ. ಕ್ಷತ್ರೀಯಗೆ ಜಾತಿ ಭೇದವಿಲ್ಲದ ಕಾರಣ ಸುಂದರ ಕನ್ಯೆಯನ್ನು ವಿವಾಹವಾಗಿರಲೂಬಹುದು. ವ್ಯಾಪಕವಾಗಿ ನೆಲೆಸಿ, ನರ್ತನ, ನಾಟ್ಯ, ಸಂಗೀತ ಇತರ ಸೇವೆಗಳಲ್ಲಿ ತೊಡಗಿಕೊಂಡಿದ್ದು ಬೇಡರಲ್ಲಿ ನಾಗಲಾದೇವಿ ಬಹುವೈವಿಧ್ಯ ಮಯವಾದ ವ್ಯಕ್ತಿತ್ವವನ್ನು ಬೆಳೆಸಿಕೊಂಡಿರಬೇಕು. ದಾಸಿ ಎಂಬ ಮಾತ್ರಕ್ಕೆ ಈಗಿನಂತೆ ನೀಚಾರ್ಥವಿರಲಿಲ್ಲ. ಏನ್ನೆಲ್ಲಾ ಅಭಿಪ್ರಾಯಗಳಿದ್ದರೂ ನಾಗಲಾದೇವಿ ಚೆಂಚು ಅಥವಾ ಬೇಡ ಬುಡಕಟ್ಟಿನ ಪಾಮುಡ್ಡಾರು ಗೋತ್ರಕ್ಕೆ ಸೇರಿರಬೇಕು. ಈ ಪಾಮುಡ್ಡಾರು ಗೋತ್ರದವರು ಹಂಪಿ-ಬಳ್ಳಾರಿ ಜಿಲ್ಲೆಯಲ್ಲಿ ವ್ಯಾಪಕವಾಗಿ ನೆಲೆಸಿದ್ದರು.

ಚಿತ್ರದುರ್ಗ, ಸುರಪುರದ ಇತರ ಪಾಳೆಯಗಾರರ ಮನೆತನಗಳಲ್ಲಿ ಈ ಗೋತ್ರಕ್ಕೆ ಸಂಬಂಧಿಸಿದವರು ಇರಬೇಕು. ಅಕ್ಕ ನಾಗಮ್ಮ, ನಾಗಿಣಿ, ನಾಗಾದೇವಿ, ನಾಗವಿಗ್ರಹಗಳಿಗೆ ಪೂಜಿಸುವವರು ಇವರನ್ನು ಅಷ್ಟು ದೈವತ್ವಕ್ಕೆ ಏರಿಸಿಲ್ಲ. ನರಸನಾಯಕ ಬೇಡ ಸಮುದಾಯಕ್ಕೆ ಸೇರಿದ್ದು ನಾಗಲಾದೇವಿಯು ಸಹ ಅದೇ ವಂಶದ ಸಂಬಂಧಿ ಎಂದು ಈ ಹಿನ್ನೆಲೆಯಲ್ಲಿ ಹೇಳುವುದು ಒಂದು ಅಭಿಪ್ರಾಯವಾಗಿದೆ.[೧೬]

ಮತ್ತೊಂದು ಅಭಿಪ್ರಾಯದ ಪ್ರಕಾರ ನಾಗಲಾದೇವಿ ತೆಲುಗು ಮೂಲದವಳು ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರಕುತ್ತದೆ. ಈಕೆಯು ಒಬ್ಬ ದಾಸಿಯೆಂದು ಹೇಳಲಾಗುತ್ತದೆ. ನರಸನಾಯಕನ ಮಂತ್ರಿ ತಿಮ್ಮರಸನು ತೆಲುಗು ಮೂಲದವ ಈ ಮಂತ್ರಿ ತಿಮ್ಮರಸನಿಗೂ ನರಸನಾಯಕನ ರಾಣಿ ನಾಗಲಾದೇವಿಯ ತಂತ್ರಗಾರಿಕೆಯಿಂದ ನರಸನಾಯಕನ ಮೂವರು ಖಾಸ ಮಕ್ಕಳನ್ನು ದೂರವಿಟ್ಟು ತೆಲುಗು ತಾಯಿಯ ಮಗ ಕೃಷ್ಣದೇವರಾಯನಿಗೆ ಪಟ್ಟಕಟ್ಟಿದ ಈಗ ದಾಸಿಪುತ್ರನಾದ ಕೃಷ್ಣದೇವರಾಯನ ಕಣ್ಣು ಕೀಳಿಸಲು ನಡೆದ ಪ್ರಯತ್ನ ಇತ್ಯಾದಿಗಳಲ್ಲಿ ಮಂತ್ರಿ ತಿಮ್ಮರಸನ ತಂತ್ರಕ್ಕೆ ಖಾಸ ಮಕ್ಕಳು ತೋರಿದ ಪ್ರತಿ ತಂತ್ರದ ಚಟುವಟಿಕೆಗಳೇ ಆಗಿವೆ. ಬಹುಶಃ ಮುಂದುವರೆದ ಈ ತಂತ್ರ ಪ್ರತಿತಂತ್ರ ವ್ಯೂಹಕ್ಕೆ ಕೃಷ್ಣದೇವರಾಯನ ಇದ್ದೊಬ್ಬ ಮಗ ತಿರುಮಲದೇವ (ತಿರುಮಲದೇವಿಯ ಉದರ ಸಂಜಾತ) ಎಳೆಯ ವಯಸ್ಸಿನಲ್ಲಿ ಬಲಿಯಾದ ಎಂದು ಹೇಳಲಾಗುತ್ತದೆ.

ಭಾಷಿಕವಾಗಿ ಹೇಳುವುದಾದರೆ ಧರ್ಮಪತ್ನಿಯ ಮಕ್ಕಳಿಗೆ ತಂದೆಯ ಭಾಷೆ ಉಪಪತ್ನಿಯ ಮಕ್ಕಳಿಗೆ ತಾಯಿಯ ಭಾಷೆ ಮಾತೃಭಾಷೆಯಾಗುತ್ತದೆ. ಹೀಗಾಗಿ ಕನ್ನಡಿಗನ ತಂದೆಯ ಮಗನಾಗಿ ಕನ್ನಡ ಸಿಂಹಾಸನದ ಮೇಲೆ ಕುಳಿತರೂ ಕೃಷ್ಣನು ತೆಲುಗು ತಾಯಿಯ ಭಾಷೆಯಾದ ತೆಲುಗನೇ ಮಾತೃಭಾಷೆಯಾಗಿ ಸ್ವೀಕರಿಸಿದಂತಿದೆ. ಈತ ಸ್ವತಃ 'ಅಮುಕ್ತಮಾಲ್ಯದ'ವೆಂಬ ತೆಲುಗು ಕೃತಿ ರಚಿಸಿದ್ದನು. ಅಷ್ಟದಿಗ್ಗಜ ಹೆಸರಿನಲ್ಲಿ ಎಂಟು ಜನ ಮಹತ್ವದ ಕವಿಗಳಿಗೆ ಆಶ್ರಯ ನೀಡಿದ ಕವಿ ಅಲ್ಲಸಾನಿ ಪೆದ್ದನ್ನನಿಗೆ 'ಆಂಧ್ರ ಕವಿ' ಪಿತಾಮಹಾ ಬಿರುದು ನೀಡಿ ತನ್ನ ಕೈಯಾರೆ ಕಾಲಿಗೆ ಪಾದಪೆಂಡೆಯ ತೊಡಿಸಿ ಪಲ್ಲಕ್ಕಿಗೆ ಹೆಗಲು ಕೊಟ್ಟು ಮೆರೆಸಿದನು. ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ಕೃಷ್ಣದೇವರಾಯನ ಯುಗ ಸುವರ್ಣಯುಗ ನಿರ್ಮಾಣವಾಯಿತು. ಇದೆಲ್ಲವೂ ತಾಯಿಯ ಪ್ರಭಾವದಿಂದಾಗಿ ಎಂದು ಹೇಳಲಾಗುತ್ತದೆ. 'ಕನ್ನಡ ರಾಜ್ಯರಮರಣ'ನೆಂದು ಎಂದೆನಿಸಿದರೂ 'ಆಂಧ್ರಭೋಜ'ನೆಂದು ಕೀರ್ತಿತನಾದ ಈತ ದೇಶ ಭಾಷೆಗಳಲ್ಲಿ ತೆಲುಗು ಭಾಷೆ (ದೇಶ ಭಾಷಲಂತು ತೆಲುಗು ಲೆಸ್ಸ) ಲೇಸು ಎಂದು ಹೇಳಿಕೊಂಡ. ಜೊತೆಗೆ ಸಂಸ್ಕೃತದಲ್ಲಿ 'ಜಾಂಬವತೀ ಕಲ್ಯಾಣ' ನಾಟಕ ರಚಿಸಿದ. ಆದರೆ ಈತನ ಕಾಲಾವಧಿಯಲ್ಲಿ ಕನ್ನಡ ಕೃತಿ ತಿಮ್ಮಣ್ಣನಿಂದ ಒಂದೆ ಒಂದು ಕೃತಿ 'ಪರಿಜಾತಾಪಹರಣಮು' ರಚಿತವಾಯಿತು.

ಧಾರ್ಮಿಕ ಕ್ಷೇತ್ರದಲ್ಲೂ ಕೃಷ್ಣದೇವರಾಯನು ತಾರತಮ್ಯತೆ ಅನುಸರಿಸಿದಂತಿದೆ. ಆಂಧ್ರದ ಧಾರ್ಮಿಕ ಯಾತ್ರೆ, ಸ್ಥಳಗಳಿಗೆ ಯಾತ್ರೆ, ತೀರ್ಥಯಾತ್ರೆ ಕೈಗೊಂಡಿದ್ದು ಇಲ್ಲಿ ವಿಚಾರಣೀಯ ಸಂಗತಿಯಾಗಿದೆ. ಕಂಚಿ, ಶ್ರೀಶೈಲ, ಅರುಣಾಚಲ, ತಿರುಮಲೆ, ಸಿಂಹಾಚಲ, ಶ್ರೀಕಾಕುಲಂ, ಧರಣಿಕೋಟೆ, ಅಮರೇಶ್ವರ, ಅಹೋಬಲ, ಕಾಳಾಹಸ್ತಿ, ತಿರುಪತಿಗಳಿಗೆ ಭೇಟಿ ನೀಡಿದ ಉಲ್ಲೇಖ ಇಲ್ಲಿ ಕಂಡುಬರುತ್ತದೆ. ಜೊತೆಗೆ ತನ್ನ ಇಬ್ಬರು ಹೆಣ್ಣುಮಕ್ಕಳಿಗೂ ಸಹ ತೆಲುಗು ಮೂಲದವರಿಗೆ ಧಾರೆ ಎರೆದಿದ್ದನ್ನು

ಗಮನಿಸಬಹುದು. ಒಟ್ಟಿನಲ್ಲಿ ಕೃಷ್ಣದೇವರಾಯನ ಮೇಲೆ ನಾಗಲಾದೇವಿಯ ಪ್ರಭಾವವು ಹೆಚ್ಚು ಎಂದು ತಿಳಿದುಬರುತ್ತದೆ.[೧೬] ನಾಗಲಾದೇವಿಯ ಉಲ್ಲೇಖಗಳು ಕೃಷ್ಣನು ಹೊರಡಿಸಿದ ಶಾಸನಗಳಿಂದ ಧಾರ್ಮಿಕ, ಚಾರಿತ್ರಿಕ ಸಂಗತಿಗಳನ್ನು ತಿಳಿಸುತ್ತದೆ. ಕೃಷ್ಣದೇವರಾಯನ ತಾಯಿ ನಾಗಲಾದೇವಿಯ ಮತ್ತು ತಂದೆ ನರಸನಾಯಕನಿಗೆ ಪುಣ್ಯವಾಗಲೆಂದು ಅನೇಕ ಶಾಸನಗಳನ್ನು ನೀಡಿರುವುದು ಕಂಡುಬರುತ್ತದೆ.[೧೮] ಮುಖ್ಯವಾಗಿ ಕ್ರಿ.ಶ. ೧೫೧೩ರಲ್ಲಿ ತಾಯಿ ನಾಗಲಾದೇವಿ ತಂದೆ ನರಸನಾಯಕನಿಗೆ ಪುಣ್ಯವಾಗಲೆಂದು ಹೊಸವೂರು ಮಾಗಣಿಯ ಹರಿಹರಪುರದ ವಿರೂಪಾಪುರ ಗೋಪಿಗಟ್ಟಮ್ಮನಹಳ್ಳಿ ಈ ಮೂರು ಗ್ರಾಮ ಗೋರಿ ಕೆಳಗಿದ್ದ ಗದ್ದೆಗಳನ್ನು ವಿಠಲ ದೇವಾಲಯಕ್ಕೆ ದಾನ ನೀಡಿದ ಕುರಿತು ಉಲ್ಲೇಖವಿದೆ.[೧೯] ಹಾಗೆಯೇ ಕ್ರಿ.ಶ. ೧೫೧೩ರಲ್ಲಿ ಕಡ್ಡಿರಾಂಪುರದ ಬಳಿ ಶಾಸನವು ವಿರೂಪಾಕ್ಷ ಪೂಜೆಗೆ ಕನ್ನಕಿಯಕಟೆ ಗ್ರಾಮವನ್ನು ದಾನ ಮಾಡಿದನು. ಹಾಗೆಯೇ ೧೫೧೬ರಲ್ಲಿಯು ತಂದೆ ತಾಯಿಗೆ ಧರ್ಮವಾಗಬೇಕೆಂದು ವರದರಾಜ ಸ್ವಾಮಿ ದೇವಾಲಯದ ಪುಣ್ಯಕೋಟಿ ವಿಮಾನಕ್ಕೆ ಲೋವಿಯಿಂದ ಕಳಸದವರೆಗೆ ಅಪರಂಜಿ ಚಿನ್ನದಲ್ಲಿ ಹೊದಿಕೆ ಹಾಕಿಸಿದನು. ಹಾಗೆಯೇ ಕಂಚಿಯ ಬಳಿ ಕಾಂಜೀವರ ಶಾಸನದಲ್ಲಿಯೂ ಸಹ ಕೃಷ್ಣನು ತನ್ನ ತಾಯಿ ಹಾಗೂ ತನ್ನ ತಂದೆಯ ಹೆಸರಿನಲ್ಲಿ ದತ್ತಿ ನೀಡಿದ ಉಲ್ಲೇಖವಿದೆ.

ಕ್ರಿ.ಶ. ೧೫೧೩ರಲ್ಲಿ ತಂದೆ ತಾಯಿಗೆ ಪುಣ್ಯವಾಗಲೆಂದು ಈ ಗ್ರಾಮದ ನಿಲೂದರು. ಕಾಡಾರರು ತಳವಾರಿಕೆ ಸುಂಕ ಜೋಡಿಬಿರಾಡ ಸಕಲಸುವರ್ಣದ ಆದಾಯ ಭತ್ತದ ಆದಾಯ ಎಲ್ಲವನ್ನು ನೀಡಿದ ಉಲ್ಲೇಖವಿದೆ. ಹಾಗೆಯೇ ಕ್ರಿ.ಶ. ೧೫೧೫ರ ಬಾಲಕೃಷ್ಣದೇವರ ಪ್ರತಿಷ್ಠಾನದಲ್ಲಿ ದೇವರ ಅಮೃತಪಡಿ, ಅಂಗರಂಗಭೋಗ, ಚೈತ್ರಮಾಸದ ರಥೋತ್ಸವ, ದೀಪೋತ್ಸವ, ಪುಣ್ಯದಿನಗಳು ವಿನಹ ಪಕ್ಷ ಮಾಸಗಳಲ್ಲಿ ಉತ್ಸವಗಳ ವೆಚ್ಚಕ್ಕಾಗಿ ಹುಲಿಗೆಯ ಮಾಗಣಿಯಲ್ಲಿನ ಅತ್ತಿವಟ್ಟಿ ಎನ್ನುವ ಗ್ರಾಮವನ್ನು ತಂದೆತಾಯಿಗಳಿಗೆ ಧರ್ಮವಾಗಲೆಂದು ದೇವರಿಗೆ ಅರ್ಪಿಸಿದನು.

ಕ್ರಿ.ಶ. ೧೫೧೩ರಲ್ಲಿ ಅರಸರು ತಂದೆತಾಯಿ ನಾಗಾಜಿ ಅಮ್ಮನವರಿಗೆ ಪುಣ್ಯವಾಗಲೆಂದು ಅನೇಕ ಗ್ರಾಮಗಳನ್ನು, ನದಿ ದಾಟಲು, ಹರಿಗೋಲುಗಳನ್ನು ದೇವರ ಸೇವೆಗೆ ಬಿಟ್ಟನೆಂದು ತಿಳಿಸುತ್ತದೆ. ಕ್ರಿ.ಶ. ೧೫೧೩ ಮಾರ್ಚ್ ೧೨ ರಂದು ರಾಮಚಂದ್ರ ದೇವರ ಸೇವೆಗೆ ಕಳಸಾಪುರ ಮಾಗಣಿಯಲ್ಲಿ ವೊಳಕೋಟೆ ಗ್ರಾಮ, ಕೊಂಡೂರು ಸೀಮೆಯಲ್ಲಿ ತಾಳೂರು ಗ್ರಾಮ, ನಾರೀಯ ಸೀಮೆಯಲ್ಲಿನ ಜಾಯನೂರ ಗ್ರಾಮಗಳನ್ನು ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ದಾನ ನೀಡಿದನು.[೨೦] ಕ್ರಿ.ಶ. ೧೫೧೨ರಂದು ಸಹ ನಾಗಲಾದೇವಿ ಅಮ್ಮನವರಿಗೆ ಪುಣ್ಯವಾಗಬೇಕೆಂದು ವಿಠಲದೇವರ ಅನೇಕ ವಿಧದ ಪೂಜೆಗಳಿಗೆ ಹೊಸವೂರ ಮಾಗಣಿಯ ವಿರೂಪಾಪುರವನ್ನು ಸೂರ್ಯಗ್ರಹಣದಂದು ದಾನ ನೀಡಿದ ಬಗ್ಗೆ ತಿಳಿಸುತ್ತದೆ.[೨೧]

ಕ್ರಿ.ಶ. ೧೫೨೩ ಜೂನ್ ೨೪ ಕೃಷ್ಣರಾಯನ ಅಪೂರ್ಣವಾದ ಶಾಸನವಾಗಿದೆ. ಆದರೆ ಕಲ್ಲಿನ ಕೊನೆಯ ಭಾಗ ಒಡೆದಿದೆ. ರಾಮದೇವರ ದೇವಸ್ಥಾನಕ್ಕೆ ನೀಡಿದ ದಾನದ ಬಗ್ಗೆ ತಿಳಿಸುತ್ತದೆ. ಜೊತೆಗೆ ಇದರಲ್ಲಿ ನಾಗಲಾದೇವಿಯ ಉಲ್ಲೇಖವಿದೆ.[೨೨] ಕ್ರಿ.ಶ. ೧೫೧೩ ಜೂನ್ ೮ ರಂದು ನಾಗಲಾದೇವಿ, ನರಸನಾಯಕನಿಗೆ ಪುಣ್ಯವಾಗಬೇಕೆಂದು ವಿರೂಪಾಕ್ಷ ದೇವರ ಪಕ್ಷೋತ್ಸವ, ಮಹೋತ್ಸವ, ಸಂವತ್ಸರೋತ್ಸವ ಗಳಿಗೆ ಪ್ರತಿನಿತ್ಯದ ಪೂಜೆಗೆ ಚಿನ್ನಿನಾಯಕನಹಳ್ಳಿ, ಕಾಳಗಟ್ಟೆ, ಡಣಾಯಕನಪುರ, ರಾಮಚಂದ್ರಪುರ,

ಕಂಚುಮಟಿನ ಕುಪೆ, ಅಯೋದಿ ಹೊನ್ನಾಪುರ, ಮಂಡನಾರು, ದಮ್ಮರು, ಭಯಿರದೇವರಹಳ್ಳಿ, ಕಲ್ಲುಕಂಭ ಗೋನಹಾಳ, ಗುಂಡೆಗನೂರು, ಪಾತಿರಾಳ, ಮರದಗೆರೆ ಗ್ರಾಮಗಳನ್ನು ದಾನ ಮಾಡಿದನು. ಅಲ್ಲದೇ ಅಮೂಲ್ಯ ಮಣಿಗಳಿಂದ ಅಲಂಕೃತಗೊಂಡ ಚಿನ್ನದ ಒಡವೆಗಳನ್ನು ಚಿನ್ನದ ತಟ್ಟೆ, ಬೆಳ್ಳಿಯ ಚಿನ್ನದ ಅಂಣಿಗಳನ್ನು ದಾನವಾಗಿ ಕೊಟ್ಟನು. ಈ ದಾನಗಳು ಕೃಷ್ಣದೇವರಾಯನು ತನ್ನ ತಾಯಿಯ ಮೇಲೆ ಇರುವ ಭಕ್ತಿಗೌರವವನ್ನು ಸೂಚಿಸುತ್ತದೆ. ಈ ರೀತಿ ತಾಯಿ ಹೆಸರಿನಲ್ಲಿ ನೀಡಿದ ದಾನ ನಿಜಕ್ಕೂ ಅಶ್ಚರ್ಯವೇ ಸರಿ. ಜೊತೆಗೆ ಅಂದಿನ ಆರ್ಥಿಕತೆ ಪರಿಚಯವು ಆಗುತ್ತದೆ. ದೇವರಿಗೆ ಆಹಾರ ನೈವೇದ್ಯವನ್ನು ತಾಯಿಯ ಹೆಸರಿನಲ್ಲಿ ನೀಡಿರುವುದು ಶಾಸನದಿಂದ ತಿಳಿಯಬಹುದು. ತಂದೆ ತಾಯಿಯರಿಗೆ ಪುಣ್ಯವಾಗಲೆಂದು ಕಾಳಹಸ್ತೀಶ್ವರ ದೇವರಿಗೆ ನವರತ್ನ ಖಚಿತವಾದ ಚಿನ್ನದ ಪ್ರಭಾವಳಿಯನ್ನು ಸಮರ್ಪಿಸಿ ಒಂದು ದಿನದ ನೈವೇದ್ಯಕ್ಕೆ ೨ ಹರಿವಾಡ ಅಪ್ಪ, ೫೧ ಅತಿರಸ, ೫೧ ಸುಖಿಯನ, ೫೧ ವೊಡೆ, ೫೧ ಅಕ್ಕಾಳಿ ಮಡೆಗಳನ್ನು ಅರ್ಪಿಸಬೇಕೆಂದು ಕಟ್ಟಳೆ ಮಾಡಿದನು.[೨೩]

ಜೊತೆಗೆ ಕೃಷ್ಣದೇವರಾಯನು ತಾಯಿ ನಾಗಲಾದೇವಿಗಾಗಿ ಮತ್ತು ತಂದೆ ನರಸನಾಯಕರಿಗೆ ಪುಣ್ಯವಾಗಲೆಂದು ಹೊಸವೂರು ಮಾಗಣೆಯೊಳಗಡಿ ವಿರೂಪಾಪುರ ಗ್ರಾಮವನ್ನು ದಾನ ಬಿಟ್ಟಿದ್ದನು. ವಿರೂಪಾಕ್ಷ ದೇವರ ಪಕ್ಷೋತ್ಸವ, ಮಾಸೋತ್ಸಾವ, ಸಂವತ್ಸರೋತ್ಸಹಗಳಿಗೆ ಪ್ರತಿನಿತ್ಯದ ಪೂಜೆಗೆ ಚಿನ್ನದ ನಾಯಕನಹಳ್ಳಿ, ಡಣಾಯನಹಳ್ಳಿ, ರಾಮಚಂದ್ರಪುರ, ಕಂಚುಮಂತಿನ ಕುಂಟೆ, ಅಯೋಧಿ, ಹೊನ್ನಾಪುರ, ಮಂಡನೂರು, ದಮ್ಮೂರು, ಭಯಿರದೇವನಹಳ್ಳಿ, ಕಲುಕುಂಭ, ಗೋನಹಾಳ, ಗುಂಡೇನ ನೂರು, ಪಾಡಿರುಳ ಮತ್ತು ಮುದಗಲ್ ಗ್ರಾಮಗಳನ್ನಲ್ಲದೆ ಚಿನ್ನದಮಣಿ ಇತರ ವಸ್ತುಗಳನ್ನು ದಾನ ಮಾಡುತ್ತಾರೆ.[೨೪]

ನಾಗಲಾದೇವಿ ಒಬ್ಬ ಅಸಮಾನ್ಯ ಸ್ಥಾನ-ಮಾನ ಹೊಂದಿರುವುದಕ್ಕೆ ಆಕೆಯ ಹೆಸರಿನಲ್ಲಿ ನಾಗಸಮುದ್ರಕೆರೆ, ನಾಗಪಟ್ಟಣ, ನಾಗೇಶ್ವರ ದೇವಾಲಯ, ನಾಗಲಾದೇವಿಪುರವೆಂಬ ಗ್ರಾಮಗಳೇ ಸಾಕ್ಷಿ. ಕೃಷ್ಣದೇವರಾಯನು ತನ್ನ ತಾಯಿ ಹೆಸರಿನಲ್ಲಿ ನಿರ್ಮಿಸಿದನು ಎಂಬುದಕ್ಕೆ ಅನೇಕ ಶಾಸನಗಳು ಆಧಾರವಾಗಿವೆ. ಕ್ರಿ.ಶ. ೧೫೧೬ ನವೆಂಬರ್ ೯ ಮತ್ತು ಕ್ರಿ.ಶ. ೧೫೧೬ ನಾಗೇನಹಳ್ಳಿ ಶಾಸನ ರಂಗನಾಥ ದೇವಾಲಯದ ಮಂಟಪದ ಎಡಕ್ಕಿರುವ ಗೋಡೆಯ ಕಲ್ಲಿನ ಮೇಲಿನ ನಕಾಶೆಯಲ್ಲಿದೆ. ೧೫೧೬ ನವೆಂಬರ್ ೯ರಂದು ವತ್ಸ ಗೋತ್ರದ ನಂಜಿನಾಥ ಭಟ್ಟರ ಮಗ ರಂಗನಾಥ ದೀಕ್ಷಿತನು ಅರಸ ನಿಂದ ನಾಗಲಾದೇವಿಪುರ ಗ್ರಾಮವನ್ನು ಪಡೆದುಕೊಂಡು ನಾಗಲಾದೇವಿ ಹೆಸರಿನಲ್ಲಿ ನಾಗಸಮುದ್ರವೆಂಬ ಕೆರೆಯನ್ನು ನಾಗೇಶ್ವರವೆಂಬ ಶಿವದೇವಾಲಯವನ್ನು ನಾಗೇಂದ್ರಶಯನವೆಂಬ ವಿಷ್ಣುದೇವಾಲಯವನ್ನು ಕಟ್ಟಿಸಿದನೆಂದು ಮತ್ತು ಆತನು ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ವೃತ್ತಿಗಳನ್ನು ಕೊಟ್ಟನೆಂದು ತಿಳಿಸುತ್ತದೆ.[೨೫]

ಮೇಲಿನ ಎರಡು ಶಾಸನಗಳಲ್ಲಿ ಅಯೋದಿ ಮತ್ತು ನಾಗಾಂಬಿಕಾ ಸಮುದ್ರಗಳು ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಗೌರಸಮುದ್ರ ಮತ್ತು ಮೊಳಕಾಲ್ಮೂರು ತಾಲ್ಲೂಕಿನ ನಾಗಸಮುದ್ರ ಗ್ರಾಮಗಳೆಂದು ಹೇಳಬಹುದು. ಅಲ್ಲದೇ ಬಳ್ಳಾರಿ ಜಿಲ್ಲೆ ಮತ್ತು ಹಂಪೆ ಪರಿಸರದಲ್ಲಿ ಅನೇಕ

ಹಳ್ಳಿಗಳಿಗೆ ನಾಗಲಾಪುರವೆಂಬ ಹೆಸರುಗಳಿವೆ. ಇವಳ ಪ್ರಭಾವವೇ ಇರಬೇಕು.[೨೬] ಜೊತೆಗೆ ಕೃಷ್ಣದೇವ ರಾಯನು ೭ ಬಾರಿ ತಿರುಮಲೆ ಯಾತ್ರೆ ಕೈಗೊಂಡಿದ್ದರು ಸಹ ಕ್ರಿ.ಶ. ೧೫೧೩ ಜೂನ್ ೧೩ರಂದು ೩ನೇ ಬಾರಿ ತಿರುಪತಿಗೆ ಹೋಗಿದ್ದನು. ಇದರ ಉದ್ದೇಶ ತಂದೆ ನರಸನಾಯಕ ತಾಯಿ ನಾಗಲಾದೇವಿ ಅಮ್ಮನವರಿಗೆ ಧರ್ಮವಾಗಲೆಂದು ತಿರುವೆಂಗಡ ದೇವರಿಗೆ ನವರತ್ನ ಖಚಿತವಾದ ವಸ್ತುಗಳನ್ನು ದಾನಮಾಡಿ ತಂದೆ ತಾಯಿ ಹೆಸರಿನಲ್ಲಿ ತ್ರೈಮಾಸವಾತ್ಸರೋತ್ಸವ ನಡೆಸುವಂತೆ ಮಾಲೆಗಳನ್ನು ದಾನ ಮಾಡಿಬಿಟ್ಟನು. ಇವರು ತಮ್ಮ ಹಿರಿಯರ ಬಗ್ಗೆ ಇರುವ ಗೌರವವನ್ನು ಮೆಚ್ಚತಕ್ಕ ವಿಚಾರವಾಗಿದೆ.[೨೭] ಅಲ್ಲದೇ ರಾಜಾಪುರದ ಶಾಸನದಲ್ಲಿ ೧೫೨೩ರಂದು ಸಹ ನಾಗಲಾದೇವಿ ಹೆಸರಿನಲ್ಲಿ ರಾಮದೇವರ ದೇವಸ್ಥಾನಕ್ಕೆ ದಾನಬಿಟ್ಟ ಸಂಗತಿ ಗಮನಾರ್ಹವಾದುದಾಗಿದೆ.[೨೮] ಇಲ್ಲಿ ಗಮನಿಸುವ ಅಂಶವೆಂದರೆ ನಾಗಲಾದೇವಿಯ ಹೆಸರಿನಲ್ಲಿ ಅನೇಕ ದಾನ ದತ್ತಿಗಳನ್ನು ಶಾಸನಗಳನ್ನು ಕೃಷ್ಣದೇವರಾಯನು ಹಾಕಿಸಿದರು ಸಹ ನಾಗಲಾದೇವಿಯು ನೇರವಾಗಿ ಯಾವುದೇ ದಾನದತ್ತಿ ನೀಡಿದ ಬಗೆಯಾಗಲಿ ಅಥವಾ ಇತರೇ ಕ್ಷೇತ್ರಗಳಲ್ಲಿ ಪಾಲ್ಗೊಂಡ ಬಗೆಯಾಗಲಿ ಕಂಡುಬರುವುದಿಲ್ಲ. ಇದರ ಉದ್ದೇಶ ನರಸನಾಯಕನು ಕ್ರಿ.ಶ. ೧೫೦೫ರ ಸುಮಾರಿಗೆ ಮರಣ ಹೊಂದಿದನು. ಅದೇ ರೀತಿ ನಾಗಲಾದೇವಿಯು ಆಗಿನ ಸಂಪ್ರದಾಯದಂತೆ ಸ್ತ್ರೀಯರು ಗಂಡಸತ್ತರೆ ಅಮಂಗಲೆಯರೆಂದು ಭಾವಿಸಲಾಗುತ್ತಿದ್ದರಿಂದಾಗಿ ಈಕೆ ನೇರವಾಗಿ ಯಾವುದೇ ಕ್ಷೇತ್ರದಲ್ಲಿ ಪಾಲ್ಗೊಂಡಿರಲಾರಳು. ಇಲ್ಲದಿದ್ದರೆ ಈಕೆ ಬಹುಬೇಗನೆ ಮರಣ ಅಥವಾ ಸತಿಪದ್ಧತಿಯನ್ನು ಅನುಸರಿಸಬೇಕು. ಅಂದರೆ ಇಲ್ಲಿ ಆಕೆಯು ರಾಯನಿಗೆ ಪಟ್ಟ ಕಟ್ಟಿದ ನಂತರೆ ೧೫೦೯ರ ಸುಮಾರಿಗೆ ಮರಣಿಸಿರಬಹುದೇ ಎನ್ನುವ ಪ್ರಶ್ನೆ ಬರುತ್ತದೆ. ನಾಗಲಾದೇವಿ ತುಳುವ ವಂಶದಲ್ಲಿ ವಿಶೇಷವಾದ ಸ್ಥಾನಮಾನ ಪಡೆದಿದ್ದರು ಸಹ ಆಕೆಯ ಉಲ್ಲೇಖವು ಕೃಷ್ಣನ ಪೂರ್ವದಲ್ಲಿನ ಶಾಸನಗಳಲ್ಲಿ ಸಿಗುವುದು ವಿರಳ. ಆಂಧ್ರದಲ್ಲಿ ಕೃಷ್ಣದೇವರಾಯನಿಗೆ ಆಂಧ್ರಭೋಜ, ಭೋಯ ಎಂದು ಬೇಡನೆಂದು ಕರೆದಿದ್ದಾರೆ. ಮಹಾದೈವಭಕ್ತನಾದ ಕೃಷದೇವರಾಯನ ಯಾತ್ರೆ ಭಕ್ತಿ ದಾನ ಮಾಡುವುದರ ಮೂಲಕ ವೈಷ್ಣವ ಶೈವ ಪಂಥದವರಿಗೆ ಅಚ್ಚು ಮೆಚ್ಚಿನವನಾಗಿದ್ದನು. ನಾಗಲಾದೇವಿ ಹೆಸರಿನಲ್ಲಿ ಅನೇಕ ಹಳ್ಳಿಗಳಿದ್ದವು. ಅವಳ ಮೂಲನೆಲೆ ಒಂದೇ ಆಗಿರುತ್ತದೆ. ಇಂದಿಗೂ ಆಂಧ್ರದವರು ಕೃಷ್ಣದೇವರಾಯ ಆತನ ಪರಿವಾರವನ್ನು ಬೇಡವೆಂದೇ ಪರಿಗಣಿಸಿದ್ದು ಕಂಡುಬರುತ್ತದೆ.[೨೯]

ಒಟ್ಟಾರೆ ಹೇಳುವುದಾದರೆ ನಾಗಲಾದೇವಿಯು ಸಾಳುವ ವಂಶದ ಮೂಲದವಳೆಂದು ಹೇಳುತ್ತಾರೆ. ಮತ್ತೊಂದು ಅಭಿಪ್ರಾಯ ಪ್ರಕಾರ ಕನ್ನಡ ನಾಡಿನ ಗಿರಿಜನರ ಮಧ್ಯಮ ಕುಟುಂಬದಿಂದ ಬಂದವಳೆಂದು ಇನ್ನೊಂದು ಅಭಿಪ್ರಾಯದ ಪ್ರಕಾರ ಈಕೆ ತೆಲುಗು ಮೂಲದಿಂದ ಬಂದವಳೆಂದು ಅಭಿಪ್ರಾಯಪಡಲಾಗಿದೆ. ವಿಜಯನಗರದ ಸಾಮ್ರಾಜ್ಯಕ್ಕೆ ಪರಿವರ್ತನೆ ಮತ್ತು ಪ್ರಗತಿಯನ್ನು ತಂದುಕೊಡುವ ಮಗನನ್ನು ಹೆತ್ತವಳೆಂದು ಅವಳಿಂದಲೇ ವಿಜಯನಗರ ಸಾಮ್ರಾಜ್ಯಕ್ಕೆ ಹೊಸ ತಿರುವು ಸಿಕ್ಕಿತೆಂದು ತಿಳಿದುಬರುತ್ತದೆ. ಇಲ್ಲಿ ಕೃಷ್ಣದೇವರಾಯನ ತನ್ನ ತಾಯಿ ನಾಗಲಾದೇವಿ ಗೌರವಾರ್ಥವಾಗಿ ಅನೇಕ ದೇವಾಲಯ, ಕೆರೆ, ಪಟ್ಟಣ, ಗ್ರಾಮ ಇತ್ಯಾದಿ ನಿರ್ಮಿಸಿರುವುದು ತಾಯಿಯ ಮೇಲಿನ ಗೌರವವನ್ನು ಸೂಚಿಸುತ್ತದೆ. ಇಲ್ಲಿ ನಾಗಲಾದೇವಿಯ ಪುತ್ರ ವಾತ್ಸಲ್ಯವು ಹೆಚ್ಚು ಅರ್ಥಪೂರ್ಣವಾಗಿದೆ ಎಂದು ಭಾವಿಸಬಹುದು.

ಓಬಾಂಬೆ

ನರಸನಾಯಕನ ತೃತೀಯ ರಾಣಿ. ಕ್ರಿ.ಶ. ೧೫೩೦ರ ಕಾಲಕ್ಕೆ ಸೇರಿದ ಶಾಸನದಲ್ಲಿ ಓಬಾಂಬಿಕಾ ಮತ್ತು ನರಸನಾಯಕ ಬಗ್ಗೆ ತಿಳಿಸುತ್ತದೆ. ಇವರ ಮಗ ಅಚ್ಯುತರಾಯ ಎಂದು ತಿಳಿಸುತ್ತದೆ.[೬೦] ಇವನು ಕೃಷ್ಣದೇವರಾಯನ ಮಲತಾಯಿ ಮಗ ಎಂದಿದೆ. ಮತ್ತೊಂದು ಕಮಲಾಪುರ ಹಂಪಿ ರಸ್ತೆಯ ಕುದುರೆ ಕಲ್ಲು ಗುಂಡಿನ ಎದುರು ಬಾಗಿಲಲ್ಲಿ ಇರುವ ಶಾಸನದಲ್ಲಿ ಓಬಾಂಬಿಕಾ ಮತ್ತು ನರಸನಾಯಕನ ಮಗನಾದ ಅಚ್ಯುತರಾಯನ ಉಲ್ಲೇಖವಿದೆ. ಇದರಿಂದಾಗಿ ಈಕೆಗೆ ಅಚ್ಯುತರಾಯನು ಮಗನಾಗಿದ್ದನೆಂದು ತಿಳಿದುಬರುತ್ತದೆ. ಮತ್ತೊಬ್ಬ ಮಗ ರಂಗರಾಯ. ಒಟ್ಟು ಇಬ್ಬರು ಗಂಡುಮಕ್ಕಳು ಈಕೆಗಿದ್ದರು.

ಈಕೆಯ ಕುರಿತು ಹೆಚ್ಚಿನ ಆಧಾರಗಳು ಸಿಗುವುದಿಲ್ಲವಾದರೂ ಕೆಲವು ಸಾಹಿತ್ಯ ಕೃತಿಗಳಲ್ಲಿ ಶಾಸನಗಳಲ್ಲಿ ಈಕೆಯನ್ನು ನಿರ್ಲಕ್ಷಿಸಿರುವುದು ಸ್ಪಷ್ಟ. ಇದಕ್ಕೆ ನಿದರ್ಶನವೆಂಬಂತೆ ಕು.ವೀರಭದ್ರಪ್ಪನವರ ಶ್ರೀ ಕೃಷ್ಣದೇವರಾಯನ ಕೃತಿಯಲ್ಲಿ ಸಿಗುವ ಮಾಹಿತಿ ಎಂದರೆ ಶ್ರೀ ಕಂಚಿಕಾಮಕೋಟಿ ಶಂಕರಾಚಾರ್ಯರ ಬಳಿ ಇರುವ ತಾಮ್ರಶಾಸನವೊಂದರಲ್ಲಿ ಉದ್ಧೃತವಾಗಿರುವ ಸಂಸ್ಕೃತ ಪದ್ಯವನ್ನು ಪ್ರಸ್ತಾಪಿಸಿರುವುದು. ಅದೆಂದರೆ

> ತಿಪ್ಪಾಂಬೆ ನಾಗಲಾದೇವ್ಯೋ ಕೌಸಲ್ಯಾ ಸುಮಿತ್ರಯೋಃ
> ದೇವ್ಯೋರಿವ ನೃಸಿಹೇಂದ್ರಸ್ತಸ್ಮಾತ್ಪಂಕ್ತಿ ರಥಾದಿವ
> ವೀಕೌ ವಿನಯಿನಾ ರಾಮಲಕ್ಷ್ಮಣಾ ವಿವನಂದನೆ
> ಜಾತಾ ವೀರ ನೃಸಿಂಗೇನ್ದ್ರಃ ಕೃಷ್ಣರಾಯ ಮಹೀಪತಿಃ

ದಶರಥನ ಪತ್ನಿಯರಾದ ಕೌಸಲ್ಯ ಸುಮಿತ್ರಂತೆಯೇ ನರಸಿಂಹರಾಯನಿಗೆ ತಿಪ್ಪಾಂಬೆ ನಾಗಲಾಂಬೆಯರೆಂಬೀರ್ವರು ಪತ್ನಿಯರಿದ್ದರೆಂದು, ಅವರಿಗೆ ರಾಮಲಕ್ಷ್ಮಣರಂಥ ಭುಜಬಲರಾಯ ಕೃಷ್ಣದೇವರಾಯರೆಂಬ ಪುತ್ರರಿದ್ದರೆಂಬ ಅರ್ಥ ಮೇಲಿನ ಶ್ಲೋಕವು ಕೊಡುತ್ತದೆ. ಅನೇಕ ಕಡೆ ಓಬಾಂಬೆಯ ಮತ್ತು ಈಕೆಯ ಪುತ್ರರಾದ ಅಚ್ಯುತರಂಗರಾಯನನ್ನು ಪ್ರಸ್ತಾಪದಿಂದ ವಂಚಿಸಲಾಗಿದೆ.[೬೧] ಶಾಸನಗಳಲ್ಲಿ ಮತ್ತು ಕಾವ್ಯ ಕೃತಿಗಳ ರಚನಾಸಂದರ್ಭದಲ್ಲಿ ಅವರು ಜನಿಸಿಲ್ಲದಿರಬಹುದು. ಅಲ್ಲಸಾನಿ ಪೆದ್ದಣನು ತನ್ನ ಮನುಚರಿತದಲ್ಲಿ ಓಬಾಂಬೆಯನ್ನಾಗಲೀ ಆಕೆಯ ಗರ್ಭಸಂಜಾತರನ್ನಾಗಲೀ ಪ್ರಸ್ತಾಪಿಸಿರುವ ಗೊಡವೆಗೆ ಹೋಗಿಲ್ಲ. ಇನ್ನೋರ್ವ ಪ್ರಮುಖ ಕವಿ ಮುಕ್ಕುತಿಮ್ಮನು ಕೂಡ ಒಂದು ಪದ್ಯದಲ್ಲಿ ಪುಣ್ಯಚರಿತಮು ತಿಪ್ಪಾಂಬಾ, ನಾಗಲಾಂಬಿಕಾ ಎಂಬ ಪ್ರಸ್ತಾಪ ಇರುದನ್ನು ಹೊರತುಪಡಿಸಿದರೆ ಅಪ್ಪಿತಪ್ಪಿಯೂ ಓಬಾಂಬೆಯ ಬಗ್ಗೆ ಚಕಾರವೆತ್ತಿಲ್ಲ.[೬೨] ಈ ವಿಚಾರದಿಂದಾಗಿ ಎರಡು ಅಂಶಗಳ ಮೂಲಕ ಇಲ್ಲಿ ಚರ್ಚಿಸಬಹುದು. ಒಂದು ಕ್ರಿ.ಶ. ೧೫೧೦ರಲ್ಲಿ ಕೃಷ್ಣದೇವರಾಯನು ಹೊರಡಿಸಿದ ಪಟ್ಟಾಭಿಷೇಕದ ತನ್ನ ಪೂರ್ವಿಕರ ಕುರಿತು ವಂಶಾವಳಿಯನ್ನ ನೀಡಿದ್ದಾನೆ. ಇಲ್ಲಿ ಪೂರ್ವತಿಹಾಸದಿಂದ ಆರಂಭಿಸಿ ಚಂದ್ರ ಅವನ ಮಗ ಬುಧ, ಅವನ ಮಗ ಪುರೂರವ, ಅವನ ಮಗ ಆಯು, ಅವನ ಮಗ ನಹುಷ, ಅವನ ಮಗ ಯಯಾತಿ ಎಂದು ಹೇಳಿದೆ. ಈ ಯಯಾತಿ ಪತ್ನಿ ದೇವಯಾನಿ ಗರ್ಭದಲ್ಲಿ ತುರ್ವಸು. ಉದಿಸಿದ ಈ ತುರ್ವಸುವಿನ ವಂಶದಲ್ಲಿ ತುಳುವ ವಂಶದ ಪ್ರಖ್ಯಾತನಾದ ತಿಮ್ಮ ಎಂಬುವವನು ಉದಿಸಿದ ಇವನ

ಪತ್ನಿ ದೇವಕಿ. ಇವರ ಮಗ ಈಶ್ವರ ಇವನ ಪತ್ನಿ ಬುಕ್ಕಮ್ಮ ಇವನ ಮಗ ನರಸನಾಯಕ ಇವನಿಗೆ ಇಬ್ಬರು ಪತ್ನಿಯರು ಮೊದಲ ಪತ್ನಿ ತಿಪ್ಪಾಂಬೆ ಗರ್ಭದಲ್ಲಿ ವೀರನರಸಿಂಹನು ಎರಡನೇ ಪತ್ನಿ ನಾಗಲಾದೇವಿ ಗರ್ಭದಲ್ಲಿ ಶ್ರೀಕೃಷ್ಣದೇವರಾಯ ಎಂದಿದೆ. ಮುಂದೆ ಓಬಾಂಬೆಯ ಬಗೆಯಾಗಲಿ ಆಕೆಯ ಮಕ್ಕಳ ಬಗ್ಗೆಇಲ್ಲಿ ಹೆಸರಿಸಿರುವುದಿಲ್ಲ.[೩೩]

ವಿರೂಪಾಕ್ಷ ದೇವಾಲಯದ ಎಡಗಡೆ ನಿಲ್ಲಿಸಿದ ಕೂಟ ಶಾಸನದಲ್ಲಿ ನರಸನಾಯಕ ಮತ್ತು ಓಬಾಂಬೆಯಲ್ಲಿ ಹುಟ್ಟಿದವನೇ ಅಚ್ಯುತರಾಯನು ಎಂದು ಅಚ್ಯುತರಾಯನ ರಾಣಿ ಕವಿಯಿತ್ರಿ ತಿರುಮಲಾಂಬೆ ತನ್ನ ಕೃತಿ 'ವರದಾಂಬಿಕೆ ಪರಿಣಯ'ದಲ್ಲಿ ತಿಳಿಸುತ್ತಾಳೆ. ತುಳುವ ವಂಶದ ಪೂರ್ವತಿಹಾಸವನ್ನು ಚಂದ್ರವಂಶದಿಂದ ಹಿಡಿದು ಈಶ್ವರನಾಯಕ ಹಾಗೂ ಪತ್ನಿ ಬುಕ್ಕಾಂಬೆಯ ಮಗನೇ ನರಸನಾಯಕ, ನರಸನಾಯಕ ಓಬಾಂಬೆಯಲ್ಲಿ ಹುಟ್ಟಿದವನು ಅಚ್ಯುತರಾಯ ಎಂದು ತಿಳಿಸಿದ್ದಾಳೆ. ಇಲ್ಲಿ ನರಸನಾಯಕನ ಆಳ್ವಿಕೆ ಅಚ್ಯುತರಾಯನ ರಾಜ್ಯಾಳ್ವಿಕೆಯ ವರ್ಣನೆ ಇದೆ, ಹೊರತು ಅಚ್ಯುತರಾಯನಿಗಿಂತ ೨೦ ವರ್ಷಗಳ ಕಾಲ ರಾಜ್ಯಾವಾಳಿದ ಕೃಷ್ಣರಾಯನ ಉಲ್ಲೇಖ ಕೃತಿಯಲ್ಲಿಲ್ಲ.[೩೪]

ಇವೆರಡು ಅಂಶಗಳನ್ನು ನೋಡಿದರೆ ಇಲ್ಲಿ ಹಲವು ರಾಜಕೀಯ ಕಾರಣಗಳಿಂದಾಗಿ ವೈಮನಸ್ಸ ನಿಂದಾಗಿ ಉಲ್ಲೇಖ ಮಾಡಿಲ್ಲ ಎನ್ನಬಹುದು.[೩೫] ಇಲ್ಲಿ ಓಬಾಂಬೆಯು ನರಸನಾಯಕನ ಕುಲಸತಿಯಾಗಿದ್ದಳೆಂದು. ಮತ್ತೊಂದು ಅಭಿಪ್ರಾಯದ ಪ್ರಕಾರ ಈಕೆ ಭೋಗಸ್ತ್ರೀ ಆಗಿರಬಹುದೆಂದು ಹೇಳಲಾಗುತ್ತದೆ. ಈಕೆ ಭೋಗಸ್ತ್ರೀ ಆದ ಪಕ್ಷದಲ್ಲಿ ಕೃಷ್ಣದೇವರಾಯನ ಮರಣಾನಂತರ ಅಚ್ಯುತರಾಯ ಸಿಂಹಾಸನ ವನ್ನೇರುತ್ತಿರಲಿಲ್ಲ ಎಂದು ಅಭಿಪ್ರಾಯ ಪಡಲಾಗಿದೆ.[೩೬] ಕೃಷ್ಣದೇವರಾಯನು ತನ್ನ ಆಳ್ವಿಕೆಯಲ್ಲಿ ಅನೇಕ ದಾನ ಶಾಸನಗಳನ್ನು ನೀಡಿದ್ದಾನೆ. ಅದರಲ್ಲಿ ತನ್ನ ತಾಯಿ ತಂದೆ ಪೂರ್ವಿಕರ ಹೆಸರಿನಲ್ಲಿ ದಾನದತ್ತಿ ನೀಡಿದ್ದಾನೆ. ಹೊರತು ಯಾವುದೇ ಶಾಸನ ಸಾಹಿತ್ಯ ಕೃತಿಗಳಲ್ಲಿ ಅಚ್ಯುತರಾಯ ಹಾಗೂ ತನ್ನ ತಂದೆಯ ತೃತೀಯ ರಾಣಿ ಓಬಾಂಬೆಯ ಪ್ರಸ್ತಾಪ ನೀಡಿರುವುದಿಲ್ಲ. ಇದರಿಂದಾಗಿ ರಾಣಿಯರಲ್ಲಿಯೇ ತಮ್ಮ ಪುತ್ರರು ಅಧಿಕಾರಕ್ಕೆ ಬರಬೇಕೆಂಬ ಇಚ್ಛೆ ಪಡುತ್ತಿದ್ದರು. ಹಾಗೂ ರಾಜಪುತ್ರರು ಹೆಚ್ಚಾಗಿ ತಾಯಿಯ ಪ್ರಭಾವಕ್ಕೆ ಒಳಗಾಗಿದ್ದರು ಎಂದು ತಿಳಿದುಬರುತ್ತದೆ. ಇಲ್ಲಿ ಗಮನಿಸುವ ಅಂಶವೆಂದರೆ ಇವರ ಬಗ್ಗೆ ಯಾವುದೇ ಸಣ್ಣ ಪುಟ್ಟ ವಿಚಾರವನ್ನು ಸಹ ತಿಳಿಸಿಲ್ಲ. ಹಿರಿಯ ಸಹೋದರ ವೀರನರಸಿಂಹನು ಚಿಕ್ಕವಯಸ್ಸಿನಲ್ಲಿಯೇ ಅಕಾಲ ಮೃತ್ಯುವಾದನು. ಆತನ ಹಾಗೂ ಅತನ ತಾಯಿ ಕುರಿತು ಅನೇಕ ಶಾಸನ ಸಾಹಿತ್ಯ ಕೃತಿಗಳಲ್ಲಿ ವಿವರಣೆ ನೀಡಿದ್ದಾನೆ ಹೊರತು ಓಬಾಂಬೆ ಹಾಗೂ ಮಕ್ಕಳ ಬಗ್ಗೆ ತಿಳಿಸಿರುವುದಿಲ್ಲ. ಇದರಿಂದಾಗಿ ಇವರಿಬ್ಬರ ಮಧ್ಯೆ ಅಧಿಕಾರದ ವೈಮನಸ್ಸು ಮೂಡಿರಬಹುದು ಎಂಬ ಅಂಶ ಇಲ್ಲಿ ಎದ್ದುಕಾಣುತ್ತದೆ.

ಹಾಗೆಯೇ ಪುತ್ರ ಅಚ್ಯುತರಾಯನು ತನ್ನ ಆಳ್ವಿಕೆಯ ಕಾಲಾವಧಿಯಲ್ಲಿ ತಾಯಿ ಹೆಸರಿನಲ್ಲಿ ದಾನ ನೀಡಿದನು. ಅದರಲ್ಲಿ ಮುಖ್ಯವಾಗಿ ಕ್ರಿ.ಶ. ೧೫೪೦ರ ನವೆಂಬರ್ ೧೧ ರಂದು ಹೊರಡಿಸಿದ ಶಾಸನ ದಲ್ಲಿ ತಂದೆ ನರಸನಾಯಕ ಹಾಗೂ ತಾಯಿ ಓಬಾಂಬೆ ಅಮ್ಮನವರಿಗೆ ಪುಣ್ಯವಾಗಲೆಂದು ಜಂಬುನಾಥ ದೇವರ ಪೂಜೆಗೆ ತಿರುಮಲಾದೇವಿ ಅಮ್ಮನವರ ಪಟ್ಟಣದ ಉಪಗ್ರಾಮವಾದ ಕಲ್ಲಹಳ್ಳಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.[೩೭]

ಹಾಗೆಯೇ ಕ್ರಿ.ಶ. ೧೫೩೪ರಲ್ಲಿ ಅರಸ ಅಚ್ಯುತದೇವರಾಯನು ತಾಯಿ ಪುಣ್ಯಸ್ಮರಣೆಗೆಂದೇ ಓಬವ್ವಚ್ಚಯಮ್ಮ ಓಬಾಂಬಿಕಾ ಎಂಬ ಹಳ್ಳಿಯನ್ನೇ ನಿರ್ಮಿಸಿದ, ಮತ್ತು ಅದಕ್ಕೆ ಪುನಃ ನಾಮಕರಣ ಮಾಡಿ 'ಓಬಚ್ಚಯಮ್ಮನ ಸಮುದ್ರ' ಎಂದು ಕರೆದನು. ಓಬಾಂಬಿಕೆಯ ಹೆಸರಿನಲ್ಲಿ ಹಳ್ಳಿಯನ್ನು ಹಾಗೂ ಸಮುದ್ರವನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಈ ಸ್ಥಳದಲ್ಲಿ ಈಗಲೂ ಸಹ ಅದೇ ಹೆಸರಿನ ಒಂದು ಕೆರೆಯು ಇದ್ದಂತೆ ಹೇಳಲಾಗುತ್ತದೆ.[೩೮]

ಪುತ್ರ ಅಚ್ಯುತರಾಯನು ತಾಯಿ ಮೇಲಿನ ಭಕ್ತಿ ಗೌರವವನ್ನು ಸೂಚಿಸುತ್ತದೆ. ಓಬಾಂಬೆಯ ನರಸನಾಯಕನ ರಾಣಿಯಾಗಿದ್ದರು ಸಹ ಆಕೆಯನ್ನು ಹಲವು ಶಾಸನ ಕೃತಿಗಳಲ್ಲಿ ನಿರ್ಲಕ್ಷಿಸಿರುವುದು ಇಲ್ಲಿ ಪರಿಶೀಲನೆ ಮಾಡಬಹುದು.

ತಿರುಮಲಾದೇವಿ

ಕೃಷ್ಣದೇವರಾಯನ ಪ್ರಸಿದ್ಧ ರಾಣಿ ಮತ್ತು ಪಟ್ಟದರಸಿ. ಈಕೆಯನ್ನು ತಿರುಮಲಾಂಬೆ, ತಿರುಮಲಾ ದೇವಿ, ತಿರುಮಲಾಮ್ಮನವರೆಂದು ಕರೆಯಲಾಗಿದೆ. ಈಕೆ ರಾಜಕುಟುಂಬದ ಸ್ತ್ರೀ ಎಂಬುದಾಗಿ ಶಾಸನಗಳು, ಸಾಹಿತ್ಯಕೃತಿಗಳು ಸಮರ್ಥಿಸುತ್ತವೆ.[೩೯] ಈಕೆಯು ರಾಯನ ಹಿರಿಯ ರಾಣಿ ಎಂಬುವುದರಲ್ಲಿ ಎರಡು ಮಾತಿಲ್ಲ. ಈಕೆಯ ವಿವಾಹವು ರಾಯನು ಪಟ್ಟಕ್ಕೆ ಬರುವ ಪೂರ್ವದಲ್ಲಿಯೇ ಆಗಿತ್ತು ಎಂಬುದಾಗಿ ಸಮಕಾಲೀನ ಕವಿಯೂ, ವಾರಿಗೆಯವನೂ ಆಗಿದ್ದ ಅಲ್ಲಸಾನ್ನಿ ಪೆದ್ದನ್ನನು 'ಮನುಚರಿತ' ಕಾವ್ಯದಲ್ಲಿ ಅನುಮೋದಿಸಿರುತ್ತಾನೆ. ಹಾಗೆಯೇ ಕ್ರಿ.ಶ. ೧೪೯೮ರಲ್ಲಿಯೇ ಇವರ ವಿವಾಹವೆಯಾಯಿತ್ತೆಂದು ಶಾಸನದಿಂದ ತಿಳಿದುಬರುತ್ತದೆ.[೪೦] ತಿರುಮಲಾದೇವಿಯ ತವರೂರು ಶ್ರೀರಂಗಪಟ್ಟಣವೆಂದು ಒಂದು ಅಭಿಪ್ರಾಯವಾಗಿದೆ. ಮತ್ತೊಂದು ಅಭಿಪ್ರಾಯದ ಪ್ರಕಾರ ಉಮ್ಮತ್ತೂರಿನ ಗಂಗರಾಜನ ಪುತ್ರಿ ಎಂದು ಸಹ ಅಭಿಪ್ರಾಯವಿದೆ. ಉಮ್ಮತ್ತೂರಿನ ಮಹಾಸ್ವಾಭಿಮಾನಿ ದೊರೆಯಾದ ಗಂಗರಾಜನ ಪೂರ್ವದಿಂದಲೂ ವಿಜಯನಗರದ ಅರಸನೊಂದಿಗೆ ರಾಜಕೀಯ ಸಂಘರ್ಷಗಳು ನಡೆಯುತ್ತಲೆ ಇದ್ದವು. ಇದರಿಂದಾಗಿ ರಾಯನ ಕಾಲದಲ್ಲಿ ಸಾಮ್ರಾಜ್ಯಶಾಹಿ ದಾಸ್ಯವನ್ನು ಹೋಗಲಾಡಿಸಲು ವೈವಾಹಿಕ ಸಂಬಂಧ ಏರ್ಪಡಿಸಲಾಯಿತು ಎನ್ನಲಾಗುತ್ತದೆ. ಉಮ್ಮತ್ತೂರು ಕೋಟೆ ಅಭೇದ್ಯವಾಗಿತ್ತು. ಈ ಅಭೇದ್ಯತೆ ಮುರಿಯಲು ರಾಯನು ಮಗಳನ್ನು ತಂದು ಕೊಂಡಿರಬೇಕು ಅಥವಾ ಮದುವೆ ಕೂಡ ರಾಜಕಾರಣದ ತಂತ್ರಗಳ ಪೈಕಿ ಎಂದು ಒಂದು ಅಭಿಮತವಿದೆ. ಇಲ್ಲಿ ಕೊನೆಗೂ ಕೃಷ್ಣದೇವರಾಯನ ಕಾಲದಲ್ಲಿ ಈ ಕೋಟೆಯು ವಿಜಯನಗರಕ್ಕೆ ಮಣಿಯಿತು ಎನ್ನಲಾಗಿದೆ.

ಆದರೆ, ಡೋಮಿಂಗೊ ಪಾಯಸ್‌ನು ತನ್ನ ಬರವಣಿಗೆಯಲ್ಲಿ ರಾಜಕುಮಾರಿಯ ಬಗ್ಗೆ ತಿಳಿಸುತ್ತಾನೆ. ಇಲ್ಲಿ ಹಬ್ಬದ ಉತ್ಸವದ ಸಂದರ್ಭದಲ್ಲಿನ ದೃಶ್ಯವನ್ನು ಹೇಳುತ್ತಾ ರಾಜನು ತನ್ನ ಸ್ಥಾನದಲ್ಲಿ ಆಸೀನವಾದ ತಕ್ಷಣ ತನ್ನ ಕುಲಕ್ಕೆ ಸೇರಿದ ಸ್ವತಃ ರಾಜನಾಗಿದ್ದ ಮತ್ತು ತನ್ನ ಹೆಂಡತಿಯರ ತಂದೆಗಳಾದ ಮೂವರು ಅಥವಾ ನಾಲ್ವರನ್ನು ತನ್ನೊಂದಿಗೆ ಕುಳ್ಳಿರಲು ಹೇಳುತ್ತಾನೆ. ಇದರಲ್ಲಿ ಪ್ರಮುಖವಾದವರೆಂದರೆ ಸಿರಂಗಪವಾಬ ಮತ್ತು ಇತರರು ಎಂದಿದೆ.[೪೧]

ಹಾಗೆಯೇ ಶ್ರೀರಂಗಪಟ್ಟಣದ ಕುಮಾರವೀರ್ಯ (ಕುಮರವೀರಯ್ಯ) ಸಮಕಾಲೀನ ಪುತ್ರಿಯು

ಕೃಷ್ಣನ ರಾಣಿಯಾಗಿದ್ದಳೆಂದು ಪಾಯಸ್‌ನು ಉಲ್ಲೇಖಿಸಿದ್ದಾನೆ. ರಾಜನು ಹಾಗೂ ಶ್ರೀರಂಗಪಟ್ಟಣದ ದೊರೆಗಳು ಅನೇಕ ದಂಡಯಾತ್ರೆ ಸೈನ್ಯದ ನೇತೃತ್ವವಹಿಸಿದರೆಂದು ನ್ಯೂನಿಜ್ ಅಭಿಪ್ರಾಯ ಪಡುತ್ತಾನೆ.[೪೨]

ತುಳುವ ಅರಸರು ಪಟ್ಟಣವನ್ನು ನಿರ್ಮಿಸುವ ಸಂದರ್ಭದಲ್ಲಿ ರಾಣಿಯರ ತವರು ಮನೆಗೆ ಹೋಗುವ ಮಾರ್ಗದಲ್ಲಿ ನಿರ್ಮಿಸುತ್ತಿದ್ದರು ಎಂಬುದಾಗಿ ತಿಳಿದು ಬರುವುದರಿಂದಾಗಿ ತಿರುಮಲಾದೇವಿ ಪಟ್ಟಣವು ಇಂದಿನ ಹೊಸಪೇಟೆ ಆಕೆಯ ತವರು ಶ್ರೀರಂಗಪಟ್ಟಣಕ್ಕೆ ಹೋಗುವ ಮಾರ್ಗದಲ್ಲಿತ್ತು ಎಂಬುದನ್ನು ಇಲ್ಲಿ ಗಮನಿಸಬಹುದು.[೪೩] ಈ ಸಂಗತಿಗಳಿಂದಾಗಿ ತಿರುಮಲಾದೇವಿಯ ತವರೂರು ಶ್ರೀರಂಗಪಟ್ಟಣವೆಂದು ಹೇಳಬಹುದು ಒಂದು ಪಕ್ಷ ಈಕೆ ಉಮ್ಮತ್ತೂರು ರಾಜಪುತ್ರಿಯಾಗಿದ್ದರೆ ರಾಜಕುಟುಂಬದೊಂದಿಗೆ ಅನ್ಯೋನ್ಯತೆಯಿಂದ ಇರಲು ಸಾಧ್ಯವೇ ಎಂಬ ಪ್ರಶ್ನೆ ಕಾಡುತ್ತದೆ. ಇದರಿಂದಾಗಿ ಈಕೆ ಶ್ರೀರಂಗಪಟ್ಟಣದ ವೀರ ಚಾಮರಾಜರ ರಾಜಕುಮಾರಿ ಎಂಬುದಕ್ಕೆ ಸಾಕಷ್ಟು ಸಾಕ್ಷಿಗಳು ಅನುಮೋದಿಸುತ್ತೇವೆ.[೪೪]

ಈಕೆಯ ಬಗ್ಗೆ ಕೃಷ್ಣರಾಯನು ನೀಡಿರುವ ಸ್ಥಾನದ ಕುರಿತು ಕವಿ ಮುಕ್ಕುತಿಮ್ಮನ 'ಪಾರಿಜಾತಪಹರಣಮು' ಮಹಾಪ್ರಬಂಧದಲ್ಲಿ ತಿರುಮಲದೇವಿ ವಲ್ಲಭ ತಿರುಮಲ ದೇವಿ ಹೃದಯೇಶ ಎಂದು ಹೇಳಿದ್ದಾನೆ.[೪೫] ಹಾಗೆಯೇ ಶ್ರೀಕೃಷ್ಣದೇವರಾಯನು ಸ್ವತಃ ಬರೆದ 'ಅಮುಕ್ತಮಾಲ್ಯದ' ಪದ್ಯದಲ್ಲಿ

> ಆವಿಭುನ ನಂತರಂಬಧ
>
> ರಾವಲಯಮು ಬೂನಿತೀವು ಹರಿಮೈದಿರುಮು ॥
>
> ಲ್ದೇವಿಯನು ನನ್ನ ಪೂರ್ನಾ
>
> ದೇವಿಯು ಗಮಲಾಬ್ಜ ಮುಖಿಯು ದೇವೇರುಲುಗಾನ್ ॥

ಇಲ್ಲಿಯೂ ಸಹ ಮೊದಲ ಹೆಸರು ತಿರುಮಲದೇವಿಯದಾಗಿದೆ. ಜೊತೆಗೆ ಈಕೆಯ ಕುರಿತು ಕಮಲದಂತಹ ಮುಖವುಳ್ಳ ತಿರುಮಲದೇವಿ ಎಂದಿರುವುದರಿಂದಾಗಿ ಈಕೆ ಸುಂದರವಾಗಿದ್ದಳು ಎಂದು ತಿಳಿದುಬರುತ್ತದೆ.[೪೬]

ಈ ಬಗ್ಗೆ ತಿರುಮಲಾಂಬೆ ಅಥವಾ ಮೋಹನಾಂಗಿ ರಚಿಸಿದ 'ಮಾರೀಚಿ ಪರಿಣಯ'ದಲ್ಲಿ ತನ್ನ ತಂದೆ ಕೃಷ್ಣರಾಯನು ತಿರುಮಲದೇವಿಯ ಹೃದಯಪ್ರಿಯನೆಂದು ಕರೆದು ತನ್ನನ್ನೂ ತಿರುಮಲಾಂಬೆಯಲ್ಲೂ ತನ್ನ ತಂದೆ ಪಡೆದನೆಂದು ತಿಳಿಸಿದ್ದಾಳೆ. ಇದರಿಂದಾಗಿ ಈಕೆ ಅರಸರ ಪ್ರೀತಿಗೆ ಪಾತ್ರಳಾಗಿದ್ದಳು ಎಂದು ಕಂಡುಬರುತ್ತದೆ. ಅಲ್ಲದೇ 'ಕೃಷ್ಣರಾಜವಿಜಯ' ಕಾವ್ಯದಲ್ಲಿ ದಂಡಯಾತ್ರೆಯಿಂದ ರಾಜಧಾನಿಗೆ ಮರಳಿದ ರಾಯನನ್ನು ಧೂಪದಾರತಿ ಮುತ್ತಿನಾರತಿಗಳಿಂದ ಬೆಳಗಿ ಸ್ವಾಗತಿಸುವ ತಿರುಮಲಾಂಬೆ ಹೊರತು ಚಿನ್ನಾಂಬೆಯಲ್ಲ ಎಂದಿರುವುದರಿಂದ ಈಕೆ ಸಾಮಾಜಿಕವಾಗಿ ಗೌರವಕ್ಕೆ ಪಾತ್ರಳಾದ ಹಿರಿಯ ರಾಣಿ ಎನ್ನಬಹುದು.[೪೭]

ತಿರುಮಲಾಂಬೆಯು ಅನೇಕ ತೀರ್ಥಯಾತ್ರೆ ಧಾರ್ಮಿಕ ಕಾರ್ಯಗಳಲ್ಲಿ ರಾಜನೊಂದಿಗೆ ಪಾಲ್ಗೊಳ್ಳುತ್ತಿದ್ದಳು ಎಂಬುದಕ್ಕೆ ಅನೇಕ ಶಾಸನ ಆಧಾರಗಳನ್ನು ಅವಲೋಕಿಸಬಹುದಾಗಿದೆ. ತುಳುವ ಅರಸ ಕೃಷ್ಣರಾಯನು ತಿರುಪತಿಗೆ ೭ ಬಾರಿ ಯಾತ್ರೆ ಕೈಗೊಂಡಿದ್ದು ತಿಳಿದಿರುವ ವಿಚಾರ ಇಷ್ಟು ಬಾರಿ

ಯಾವ ಕರ್ನಾಟಕದ ದೊರೆಯು ಸಹಾ ಹೋಗಿಲ್ಲವೆಂದು ಕಂಡುಬರುತ್ತದೆ. ಇಲ್ಲಿ ಇವನೊಂದಿಗೆ ತಿರುಮಲಾದೇವಿಯು ಸಹಾ ಕೆಲವು ಬಾರಿ ಯಾತ್ರಿಯಲ್ಲಿ ಪಾಲ್ಗೊಂಡಿದ್ದಳು ಎಂಬುದಾಗಿ ತಿಳಿದು ಬರುತ್ತದೆ.[೪೮] ಕ್ರಿ.ಶ. ೧೫೧೩ರಲ್ಲಿ ಪಟ್ಟವೇರಿದ ೪ ವರ್ಷಗಳ ನಂತರ ಮೊದಲ ಬಾರಿಗೆ ತಿರುಪತಿಗೆ ಭೇಟಿ ನೀಡಿದನು. ಆಗ ತಿರುಮಲದೇವಿ ಹಾಗೂ ಚಿನ್ನಾದೇವಿಯರು ಜೊತೆಗಿದ್ದರು.[೪೯] ದೇವರ ದರ್ಶನ ಪಡೆದು ನವರತ್ನ ಖಚಿತ ಕಿರೀಟವನ್ನು ೨೫ ಬೆಳ್ಳಿಯ ಆರತಿ ತಟ್ಟೆಗಳನ್ನು ರಾಯನು ಕಾಣಿಕೆಯಾಗಿ ನೀಡಿದರೆ ರಾಣಿಯರು ಬಂಗಾರದ ಹಾಲಿನ ಬಟ್ಟಲನ್ನು ದಾನವಾಗಿತ್ತರು. ಕ್ರಿ.ಶ. ೧೫೧೪ ಜುಲೈ ೭ರಂದು ಎರಡನೇ ಕೃಷ್ಣನಿಗೆ ೪ನೇ ಬಾರಿಗೆ ರಾಣಿಯರಿಬ್ಬರು ತಿರುಪತಿಗೆ ಬಂದರು. ಇದು ಗಜಪತಿ ಮೇಲೆ ದಂಡೆತ್ತಿ ಹೋಗಿ ಕೊಂಡವೀಡುವರೆಗೆ ಓಡಿಸಿ ಉದಯಗಿರಿ ದುರ್ಗವನ್ನು ವಶಪಡಿಸಿಕೊಂಡ ನೆನಪಿಗಾಗಿ ವೆಂಕಟೇಶ್ವರನಿಗೆ ೩೦,೦೦೦ ವರಹಗಳಿಂದ ಕನಕಾಭಿಷೇಕ ಮಾಡಿದರೆ, ರಾಣಿಯರು ಚಿನ್ನದ ತೋರಣಗಳನ್ನು ಕಾಣಿಕೆಯಾಗಿತ್ತರಲ್ಲದೆ ಎರಡು ಹಳ್ಳಿಗಳನ್ನು ದೇವರ ಸೇನಾಕಾರ್ಯಕ್ಕೆ ದಾನವಾಗಿತ್ತರೂ.[೫೦]

ಕ್ರಿ.ಶ. ೧೫೧೮ ಅಕ್ಟೋಬರ್ ೧೬ ರಂದು ೬ನೇ ಬಾರಿ ಯಾತ್ರೆಕೈಗೊಂಡನು. ಈ ಸಂದರ್ಭದಲ್ಲಿ ತನ್ನ ಪಟ್ಟಮಹಿಷಿಯಾದ ತಿರುಮಲಾದೇವಿ ಗಂಡು ಮಗು ತಿರುಮಲರಾಯ ಜನನವಾಗಿತ್ತು. ಈ ಯಾತ್ರೆಯ ಉದ್ದೇಶ ಬಹುಶಃ ಮೇಲಿನ ಸಂಗತಿಯಾಗಿರಬೇಕು. ತಿರುಮಲಾದೇವಿಯ ಬಂದುದನ್ನು ಈ ಶಾಸನಗಳು ಉಲ್ಲೇಖಿಸುತ್ತವೆ.

ಕ್ರಿ.ಶ. ೧೫೨೧ ಫೆಬ್ರುವರಿ ೧೭ ರಂದು ೭ನೇ ಬಾರಿ ಯಾತ್ರೆ ಅಂದು ತಿರುಮಲೆಯ ತಿರುವೆಂಗಳನಾಥ ದೇವರಿಗೆ ದರ್ಶಿಸಿ ಆ ದೇವರಿಗೆ ನವರತ್ನ ಖಚಿತವಾದ ಪೀತಾಂಬರವನ್ನು ೧ ಮಾಣಿಕ್ಯ ಪಚ್ಚೆ ಕುಲ್ಲಾಯ ಚಾಮರ ಇತ್ಯಾದಿ ತನ್ನ ರಾಣಿ ತಿರುಮಲಾದೇವಿಯೊಂದಿಗೆ ಸಮರ್ಪಿಸಿದನ್ನು ತಿಳಿದು ಬರುತ್ತದೆ. ಇಲ್ಲಿ ತಿರುಮಲಾದೇವಿಯು ಕ್ರಿ.ಶ. ೧೫೧೩, ೧೫೧೪, ೧೫೧೮, ೧೫೨೧ ಒಟ್ಟು ನಾಲ್ಕು ಬಾರಿ ತಿರುಮಲಾದೇವಿಯ ತಿರುಮಲೆ ಯಾತ್ರೆ ಮಾಡಿದನ್ನು ಗಮನಿಸಬಹುದು. ಜೊತೆಗೆ ಕ್ರಿ.ಶ. ೧೫೨೧ರ ತಿರುಪತಿ ಭೇಟಿ ನೀಡುವಾಗ ತನ್ನ ಹಾಗೂ ರಾಣಿಯರು ಶ್ರೀ ವೆಂಕಟೇಶ್ವರನು ಕರುಣೆಗೆ ಸದಾ ಕೃತಜ್ಞರಾಗಿರುವುದಾಗಿ ಹಾಗೂ ತಾವು ಅವನ ಸೇವಗೈಯುತ್ತಿರುವುದನ್ನು ಸಂಕೇತಿಕವಾಗಿ ನಿರೂಪಿಸಲು ಇಬ್ಬರು ರಾಣಿಯರೊಂದಿಗೆ ರಾಯನ ಕಂಚಿನ ಪ್ರತಿಮೆಗಳನ್ನು ನಿಲ್ಲಿಸಿದ ಅಂಶವು 'ರಾಯವಾಚಕಮು' ಕರ್ತೃ ದಿನಚರಿಯಲ್ಲಿ ಉಲ್ಲೇಖಿಸಿದೆ. ಈ ಪ್ರತಿಮೆಗಳು ೧೫೨೧ರಲ್ಲಿ ಪ್ರತಿಷ್ಠಾಪಿಸಲ್ಪಟ್ಟವೆಂದು ತಿಳಿದುಬರುತ್ತದೆ.[೫೧]

ಕ್ರಿ.ಶ. ೧೫೧೩ರಲ್ಲಿ ವಿಠಲದೇವಾಲಯದ ಸಭಾಮಂಟಪದ ಪ್ರವೇಶದ ಬಾಗಿಲ ಬಲಕ್ಕಿರುವ ಈ ಶಾಸನದಲ್ಲಿ ಸೂರ್ಯಗ್ರಹಣದಂದು ಕೃಷ್ಣರಾಯನು ಶ್ರೀ ವಿಠ್ಠಲೇಶ್ವರ ದೇವರಿಗೆ ಅನೇಕ ಪೂಜಾಪರಿಕರಗಳನ್ನು ನೀಡಿದನು. ಚಿನ್ನಾದೇವಿ, ತಿರುಮಲಾದೇವಿಯರು ವಿಠಲ ಗೋಪುರವನ್ನು ಕಟ್ಟಿಸಿ ದೇವರ ನೈವೇದ್ಯದ ವೇಳೆಗೆ ಬೇಕಾಗುವ ಒಂದು ಚಿನ್ನದ ಹರಿವಾಣ ೯ ಬೆಳ್ಳಿಯ ನಿರಾಂಜನದ ಹಲಗೆ ಎಂಟು, ಹಿರಿಯ ಆರತಿ, ಒಂದು ಪುರುಷಾ ಮೃಗದ ಆರತಿ, ಮೂರು ನಾಗಾರತಿ, ಒಂದು ಧೂಪಾರತಿಸ ಎರಡು ಕಬಡಿಬರ್ತಿ, ಒಂದು ಪ್ರತುಮೆ ಆರತಿಯನ್ನು ದೇವರಿಗೆ ಸಮರ್ಪಿಸಿದರು. ಅಲ್ಲದೇ ದೀಪಾರಾಧನೆಗಾಗಿ ೨೦೦ ಹಸುಗಳನ್ನು ನೀಡಿದರು. ಇದರಿಂದ ಇವರ ಧಾರ್ಮಿಕ ಭಕ್ತಿಯನ್ನು ತಿಳಿಯಬಹುದು.[೫೨] ಕ್ರಿ.ಶ.

[illegible]

೧೫೩೦ ಮಾರ್ಚ್ ೧೧ ಅರಸರು ತಂದೆ ತಾಯಿಗೆ ಪುಣ್ಯವಾಗಲೆಂದು ಹಲವು ಗ್ರಾಮಗಳನ್ನು ವಿಠಲ ದೇವರಿಗೆ ದಾನಕೊಟ್ಟನು. ಜೊತೆಗೆ ಆತನ ರಾಣಿಯರಾದ ಚಿನ್ನಾದೇವಿ ತಿರುಮಲದೇವಿಯರು ವಿಠಲ ದೇವಸ್ಥಾನದ ಗೋಪುರವನ್ನು ಕಟ್ಟಿಸಿ ಚಿನ್ನದ ತಟ್ಟೆ ೧೨೫ ಬೆಳ್ಳಿಯ ಆರತಿಗಳನ್ನು ಕೊಟ್ಟರು.[೫೩]

ಕ್ರಿ.ಶ. ೧೫೧೦ ಜನವರಿ ೨೪ ರಂದು ಪಟ್ಟಾಭಿಷೇಕನಾದ ಕೃಷ್ಣನು ರಾಣಿಯಾದ ಚಿನ್ನಾದೇವಿ, ತಿರುಮಲದೇವಿಯರು ಕ್ರಿ.ಶ. ೧೫೧೩ರಲ್ಲಿ ವಿಠಲದೇವಾಲಯದ ಗೋಪುರ ಕಟ್ಟಿಸಿದನು.[೫೪] ಕಮಲಾಪುರ ಗ್ರಾಮದ ವಾಯುವ್ಯಕ್ಕೆ ಕುಂಬಾರ ಕುಂಟೆಯ ಹತ್ತಿರವಿರುವ ಗುಡಿಯ ಮೇಲೆ ಕ್ರಿ.ಶ. ೧೫೧೮ ಅಕ್ಟೋಬರ್ ೩೦ ಶನಿವಾರ ತಿರುಮಲರಾಯ ಮಹಾರಾಯನಿಗೆ ಪುಣ್ಯವಾಗಲೆಂದು ಅರಸನ ರಾಣಿ ತಿರುಮಲದೇವಿಯ ವಿಜಯನಗರದಲ್ಲಿಯ ಅಂಜನಗಿರಿಯ ಕರಿಯ ತಿರುವೆಂಗಳನಾಥ ದೇವರಿಗೆ ವಿಜಯನಗರದ ಹತ್ತಿರವಿರುವ ಕುಮ್ಮರಗುಂಟೆ ಎಂಬ ಭೂಮಿಯನ್ನು ರಾಮಾನುಜಮುನಿಯನ್ನು ಉಲ್ಲೇಖಿಸುತ್ತದೆ.

ಕ್ರಿ.ಶ. ೧೫೧೨ರ ಶಾಸನದಲ್ಲಿ ಕೃಷ್ಣರಾಯನು ಹಾನಗಲ್ಲು, ಅಮನೂರು, ರಾಯಚೂರು, ಮಾಗಡೆದುರ್ಗಗಳನ್ನು ಗೆದ್ದು ಕೃಷ್ಣ ಭೀಮಾನದಿ ಸಂಗಮದಲ್ಲಿ ರತ್ನಧೇನು ಮಹಾದಾನವನ್ನು ಮಾಡಿ ತನ್ನ ಹೆಂಡತಿ ಚಿನ್ನಾದೇವಿ ಕೈಲಿ ಗೋದಾನವನ್ನು ತಿರುಮಲದೇವಿ ಕೈಲಿ ಕನಕದಾನವನ್ನು ಮಾಡಿಸಿದ ಉಲ್ಲೇಖವಿದೆ. ಮಾನುವೆ ಸೀಮೆಯ ಚಪಲಪರಮಾರನ್ನು ತಿರುವೆಂಗಳನಾಥನಿಗೆ ದಾನ ನೀಡಿರುತ್ತಾನೆ. ಎಂದಿದೆ.[೫೫] ತಿರುಮಲಾದೇವಿಗೂ ಅಗ್ರಸ್ಥಾನಮಾನ ಇತ್ತು ಎಂದು ಮೇಲಿನ ಅಂಶಗಳಿಂದ ತಿಳಿಯುತ್ತದೆ. ಕೃಷ್ಣದೇವರಾಯನ ರಾಣಿ ತಿರುಮಲದೇವಿಯು ತಿರುವೆಂಗಳನಾಥ ದೇವರ ಸೇವೆಗೆ ಅನೇಕ ಆಭರಣಗಳನ್ನು ಮಾಡಿಸಿಕೊಟ್ಟಳೆಂದೂ ಚೋಳಿಂಗವರ ಪಟ್ಟವರ ಪಿರಾತಿಕೊಳತೂರ್ ಎಂಬ ಗ್ರಾಮವನ್ನು ದತ್ತಿಯಾಗಿ ನೀಡಿದಳೆಂದೂ ಇದರಲ್ಲಿ ಹೇಳಲಾಗಿದೆ.[೫೬]

ಕ್ರಿ.ಶ. ೧೫೧೫ರ ಅಕ್ಟೋಬರ್ ೨೫ರಲ್ಲಿ ಯವನರಾಜ್ಯ ಸ್ಥಾಪನಾಚಾರ್ಯನಾದ ಕೃಷ್ಣರಾಯನು ಉದಯಗಿರಿ ದುರ್ಗವನ್ನು ಗೆದ್ದು ತಿರುಮಲಕಾಂತ ರಾಯಮಹಾಪಾತ್ರನನ್ನು ಸೆರೆಹಿಡಿದು ಅದ್ದಂಕಿ, ವಿನುಕೊಂಡೆ, ಬೆಲ್ಲಕೊಂಡೆ, ನಾಗಾರ್ಜುನಕೊಂಡೆ ತಂಗೇಡ ಕೇತವರು ಮೊದಲಾದ ಪ್ರದೇಶಗಳನ್ನು ಕೊಂಡವೀಡು ದುರ್ಗವನ್ನು ಗೆದ್ದು ಪ್ರತಾಪರುದ್ರ ಗಜಪತಿಯ ಮಗ ವೀರಭದ್ರರಾಯ ನರಹರಿದೇವು ರಾಜೂರಿನ ಮಲ್ಲೂರರನ ಮೊದಲಾದವರನ್ನು ಸೆರೆಹಿಡಿದು ಅಭಯರಾಜ ಮಾಡುತ್ತಿದ್ದನು ಎಂದು ಇಲ್ಲಿ ಹೇಳಿಕೆ ಅಲ್ಲಿರುವ ಧರಣಿಕೋಟೆ ಅಮರೇಶ್ವರಕ್ಕೆ ಬಂದು ಅಮರೇಶ್ವರ ದೇವರ ಸನ್ನಿಧಿಯಲ್ಲಿ ತನ್ನ ರಾಣಿಯರಾದ ಚಿನ್ನಾದೇವಿ ಅಮ್ಮ, ತಿರುಮಲದೇವಿ ಅಮ್ಮನವರ ಜೊತೆಗೆ ತುಲಾಪುರುಷ ಮಹಾದಾನವನ್ನು ಮಾಡುತ್ತಾನೆ ಎನ್ನಲಾಗಿದೆ. ಇಲ್ಲಿ ರಾಣಿ ತಿರುಮಲದೇವಮ್ಮನು ಅಲ್ಲಿಯೇ ಸಪ್ತಸಾಗರ ಮಹಾದಾನ ಮಾಡಿಕೊಡುತ್ತಾಳೆ. ಈ ರೀತಿ ಹಲವು ದಾನ ಶಾಸನಗಳಿಂದ ಇವಳ ಧಾರ್ಮಿಕ ಕಾರ್ಯದ ಬಗ್ಗೆ ತಿಳಿಯ ಬಹುದು.

ತಿರುಮಲಾದೇವಿ ಹೆಸರಿನಲ್ಲಿ ಪಟ್ಟಣವನ್ನು ನಿರ್ಮಿಸಲಾಗಿತ್ತು ಎಂಬುದಕ್ಕೆ ಪರ್ಷಿಯ ದೇಶದ ರಾಯಭಾರಿ ಅಬ್ದುಲ್‌ರಜಾಕ್‌ನಿಂದ ತಿಳಿಯಬಹುದು. ಕ್ರಿ.ಶ. ೧೪೪೩ ಏಪ್ರಿಲ್ ತಿಂಗಳ ಕೊನೆಯಿಂದ

ಡಿಸೆಂಬರ್ ೫ರ ವರೆಗೆ ವಿಜಯನಗರಕ್ಕೆ ತಲುಪುವವರೆಗಿನ ವಿವರಗಳನ್ನು ಆಧರಿಸಿ ಸಿವೆಲ್‌ರವರು ಈ ರೀತಿ ಊಹೆ ಮಾಡುತ್ತಾರೆ. ಪ್ರವಾಸಿ ನೈರುತ್ಯದಿಂದ ಬಳಿ ಸಾರಿದ ಮತ್ತು ಅವನು ನೋಡಿದ ಗೋಡೆಯ ಪ್ರಥಮ ಸುತ್ತು ಹೊಸಪೇಟೆಯ ನೈರುತ್ಯಕ್ಕಿರುವ ಎರಡು ಗುಡ್ಡಗಳ ಮಧ್ಯವಿರುವ ಭೂಕಂಠದ ಮೇಲಿರುವುದಾಗಿರಬೇಕು. ಈ ಬಾಹ್ಯ ರಕ್ಷಣಾ ಕಾವ್ಯವು ಕರಾವಳಿಯಿಂದ ಬಂದ ಪ್ರವಾಸಿಗರಿಗೆಲ್ಲ ಮೊಟ್ಟಮೊದಲು ಕಣ್ಣಿಗೆ ಬೀಳುವಂಥದೆಂದು ಡೊಮಿಂಗೋಪಾಯಸ್ ಕೂಡ ವರ್ಣಿಸಿದ್ದಾನೆ. ಈ ಪ್ರವೇಶ ದ್ವಾರದಲ್ಲಿ ಬರಮಾಡಿಕೊಳ್ಳಲಾದ ರಜಾಕ್ ಸಾಗುವಳಿ ಮಾಡಿದ ಜಮೀನುಗಳು ಮನೆಗಳು ಮತ್ತು ಉದ್ಯಾನಗಳ ಮಾರ್ಗವಾಗಿ ಕೆಳಗೆ ಹೊಸಪೇಟೆಯ ದ್ವಾರ ತಲುಪಿರಬೇಕು. ಅಲ್ಲಿ ಕೋಟೆಯು ಎರಡು ಸುತ್ತು ಅಡ್ಡಗಟ್ಟಿತು. ಅ ಪಟ್ಟಣ ಆಗ ಜನಸಾಮಾನ್ಯವಾಗಿರಲಿಲ್ಲ ಅವನು ನಗರ ಎತ್ತರ ಬದಿಯಲ್ಲಿರುವ ಮೂರನೆಯ ಸುತ್ತಿನ ಗೋಡೆ ವಾಲುವವರೆಗೆ ಅದೇ ಲಕ್ಷಣಗಳು ಅವನ ಕಣ್ಣಿಗೆ ಬೀಳುತ್ತವೆ.[೫೭]

ಈ ವಿವರಣೇಯಲ್ಲಿ ಬರುವ ಎರಡು ಮತ್ತು ಮೂರನೆಯ ಸುತ್ತಿನ ನಡುವಿನ ಪಟ್ಟಣದ ಉಲ್ಲೇಖ ಮತ್ತು ಅದು ಅಷ್ಟೇನು ಜನಸಾಂದ್ರವಾಗಿರಲಿಲ್ಲ ಎಂಬ ಸಿವೇಲ್‌ನ ಊಹೆ ನಿಜವಾಗಿದ್ದಲ್ಲಿ ಆ ಪಟ್ಟಣ ಈಗಿನ ಸಣ್ಣಕ್ಕಿ ವೀರಭದ್ರ ದೇವಾಲಯದ ಪರಿಸರದಲ್ಲಿತ್ತು. ಆದರೆ ಅದರ ಹೆಸರು ತಿಳಿದು ಬರುವುದಿಲ್ಲ. ಮುಂದೆ ವಿಜಯನಗರದ ತುಳುವ ಮನೆತನವ ಶ್ರೀ ಕೃಷ್ಣನು ಇದೆ. ಸ್ಥಳದಲ್ಲಿ ತನ್ನ ಪಟ್ಟಮಹಾದೇವಿಯದ ತಿರುಮಲಾದೇವಿಯ ಹೆಸರಿನಲ್ಲಿ ತಿರುಮಲಾದೇವಿಯ ಪಟ್ಟಣವನ್ನು ನಿರ್ಮಿಸಿ ಅಲ್ಲಿ ತಿರುವೆಂಗಳನಾಥನ ದೇವಾಲಯವನ್ನು ಕಟ್ಟಿಸಿದನು. ಕ್ರಿ.ಶ. ೧೫೧೩ರ ಕೃಷ್ಣದೇವರಾಯನ ಶಾಸನವೊಂದು ಮುದಲಾಪುರವನ್ನು ಇಂದಿನ ಹೊಸಪೇಟೆಗೆ ಹೊಂದಿಕೊಂಡಿರುವ ಮುದ್ದಾಪುರ ತಿರುಮಲದೇವಿಯವರ ಪಟ್ಟಣದ ಮಾಗಣೆಗೆ ಸೇರಿಸಿ ಹಂಪೆಯ ಕೃಷ್ಣಸ್ವಾಮಿ ದೇವರಿಗ ಸಮರ್ಪಿಸಿದನೆಂದು ತಿಳಿಸುತ್ತದೆ. ಸಣ್ಣಕ್ಕಿ ವೀರಭದ್ರ ದೇವಾಲಯದ ಸಮೀಪವಿರುವ ಶಾಸನವೊಂದು ತಿರುಮಲದೇವಿಯರ ಪಟ್ಟಣದ ಗೌರೇಶ್ವರ ದೇವರನ್ನು ಪ್ರಸ್ತಾಪಿಸುತ್ತದೆ. ಇದೇ ಪ್ರದೇಶದ ಮತ್ತೊಂದು ಶಾಸನವು ಅಯ್ಯಾವಳಿ ಮುಖ್ಯವಾದ ತಿರುಮಲದೇವಿಯ ಪಟ್ಟಣದ ಸೆಟ್ಟಿಪಟ್ಟಣ ಸ್ವಾಮಿಗಳ ಸಮ್ಮುಖದಲ್ಲಿ ಪ್ರಧಾನ ತಿರುಮಲರಾಜನ ಪ್ರತಿನಿಧಿಯಿಂದ ಅಬ್ಬರಾಜ ತಿಮ್ಮಪ್ಪನು ಕೆಲವು ಗ್ರಾಮಗಳ ಮೂಲ ವೀಸವನ್ನು ಅಲ್ಲಿಯ ತಿರುವೆಂಗಳನಾಥ ದೇವರಿಗೆ ದತ್ತಿ ಬಿಡುತ್ತಾನೆಂದು ಹೇಳುತ್ತಾರೆ.

ಈ ಮೇಲಿನ ಶಾಸನಗಳಿಂದ ತಿರುಮಲದೇವಿಯರ ಪಟ್ಟಣದ ಪ್ರಾಮುಖ್ಯತೆ ಅರಿವಾಗುತ್ತದೆ. ಹಾಗಾಗಿ ಕೃಷ್ಣದೇವರಾಯನ ರಾಣಿಯಾಗಿ ತನ್ನ ಶಕ್ತ್ಯಾನುಸಾರ ವಿಜಯನಗರ ಸಾಮ್ರಾಜ್ಯಕ್ಕೆ ತನ್ನ ಕಾಣಿಕೆ ನೀಡಿದ್ದಾಳೆ ತಿರುಮಲಾದೇವಿ.

ಚಿನ್ನಾದೇವಿ

ತುಳುವ ವಂಶದ ಪ್ರಮುಖ ರಾಣಿ. ಶ್ರೀ ಕೃಷ್ಣದೇವ ರಾಯನ ಪಟ್ಟಾದರಸಿ. ಈಕೆ ಕೃಷ್ಣರಾಯನ ಪ್ರೀತಿ ಪಾತ್ರಳು. ಒಲುಮೆ ರಾಣಿಯಾಗಿದ್ದಳು. ನ್ಯೂನಿಜ್ ಪ್ರಕಾರ ಈಕೆ ಒಬ್ಬ ಅಸ್ಥಾನದ ವೇಶ್ಯೆ ಎಂದು[೫೮] ವಸುಂಧರಾ ಫಿಲಿಯೋಜಾ ಪ್ರಕಾರ ಕ್ರಿ.ಶ. ೧೫೧೮ರ ತಾಡಪತ್ರಿ ತಾಲೂಕಿನ ಶಿಲಾಶಾಸನದಲ್ಲಿ

ಚಿನ್ನಾದೇವಿ ಡೊಂಬರವಳು ಕೊಟ್ಟ ದಾನದ ಉಲ್ಲೇಖವಿದೆ ಎಂದು ಅಲ್ಲದೇ ಅದೇ ತಾಡಪತ್ರಿ ತಾಲ್ಲೂಕಿನ ೧೫೧೭ರ ಶಿಲಾಶಾಸನದಲ್ಲಿ ಚಿನ್ನಾದೇವಿಯು ಅರಸನ ರಾಣಿ ಎಂಬ ಹೆಸರು ಸಿಗುವುದರಿಂದಾಗಿ ಈಕೆ ಡೊಂಬರವಳಾಗಿರಬೇಕೆಂದು ಅಭಿಪ್ರಾಯವಿದೆ.[೫೯] ಮತ್ತೆ ಕೆಲವು ವಿದ್ವಾಂಸರ ಪ್ರಕಾರ ಚಿನ್ನಾದೇವಿ ಸತ್ಕುಲಜಳೂ ಸುಸಂಸ್ಕೃತಳಾಗಿದ್ದಳೆಂದು ಅಭಿಪ್ರಾಯವಾದರೆ[೬೦] ಸಮಕಾಲೀನ ಕವಿಯು ವಾರಿಗೆಯವನೂ ಆದ ಅಲ್ಲಸಾನಿ ಪೆದ್ದನ್ನನು ಕವಿ ತನ್ನ ಮನುಚರಿತದಲ್ಲಿ ಚಿನ್ನಾದೇವಿ ಒಬ್ಬ ನರ್ತಕಿಯೂ ಭುವನೈಕ್ಯ ಸುಂದರಿಯಾಗಿದ್ದಳೆಂದು ವಿವಾಹದ ಪೂರ್ವದಲ್ಲಿಯೇ ಇವರಿಬ್ಬರು ಪ್ರೀತಿಸುತ್ತಿದ್ದರೆಂದು ಅವಳಲ್ಲಿ ಅವನಿಗೆ ಬಹಳ ಪ್ರೀತಿ ಇತ್ತೆಂದು ಮುಂದೆ ರಾಜನಾದಗಲೂ ಸಹ ಮದುವೆಯಾಗುವುದಾಗಿ ಮಾತುಕೊಟ್ಟಿದನ್ನು ಗುಪ್ತವಾಗಿ ಇವಳ ಮನೆಗೆ ಹೋಗುವಾಗ ರಾಜನ ಮಂತ್ರಿ ಜೊತೆಗೆ ತಂದೆ ಸಮಾನ ತಿಮ್ಮರಸನು ನೋಡಿ ಬಹಳ ಬೈದು ಮರಳಿ ಮನೆಗೆ ಕರೆತಂದನೆಂದು, ಆದರೂ ಕೃಷ್ಣರಾಯನ ಅಚಲ ಮನಸ್ಸಿನಿಂದಾಗಿ ಮದುವೆಯಾಗುವುದಾಗಿ ಪಟ್ಟು ಹಿಡಿದನು. ಮೊದಲು ರಾಜಮನೆತನದ ಉತ್ತಮ ಕುಲದ ಸ್ತ್ರೀಯನ್ನು ವಿವಾಹ ಮಾಡಿಕೊಂಡ ನಂತರ ಈಕೆಯನ್ನು ಸಹ ವಿವಾಹವಾದನೆಂದು ಅರಮನೆಯ ಪಕ್ಕದಲ್ಲಿಯೇ ಪ್ರತ್ಯೇಕ ಭವನವನ್ನು ನಿರ್ಮಿಸಿದನೆಂದು ಅಲ್ಲಿ ಅವಳನ್ನು ಇಟ್ಟನೆಂದು ತಿಳಿದುಬರುತ್ತದೆ.[೬೧]

ಇವಳಿಗೆ ಆರಂಭದಲ್ಲಿ ಅನ್ನಪೂರ್ಣದೇವಿ ಎಂಬ ಹೆಸರಿತ್ತೆಂದು ಕೃಷ್ಣರಾಯನ 'ಅಮುಕ್ತಮಾಲ್ಯದ' ದಲ್ಲೂ[೬೨] ಮೋಹನಾಂಗಿಯ 'ಮಾರೀಚಿ ಪರಿಣಯ'ದಿಂದ ತಿಳಿದುಬರುತ್ತದೆ.[೬೩] ಚಿನ್ನಾದೇವಿ ಎಂಬುದು ಇಟ್ಟ ನಾಮಕರಣ ಮಾಡಿದ ಹೆಸರಾಗಿದ್ದು 'ಚಿನ್ನ' ಎಂಬುದು ಆಕೆಯ ಅಡ್ಡ ಹೆಸರು, ಮುದ್ದಿನ ಹೆಸರು. ತೆಲುಗಿನಲ್ಲಿ 'ಚಿನ್ನ' ಎಂದರೆ ಕನ್ನಡದಲ್ಲಿ 'ಚಿಕ್ಕ' ಎಂದರ್ಥ. ಕನ್ನಡದ ಚಿನ್ನ ಮುದ್ದಿನ ಅಮೂಲ್ಯವಾದ ಪ್ರೀತಿಪಾತ್ರಳಾದವಳು ಎಂದು ತಿಳಿಯಬಹುದು.[೬೪] ಚಿನ್ನವೇ ಚಿನ್ನಾಂಬೆಯಾಗಿ ರಾಣಿಯಾದ ಮೇಲೆ ಚಿನ್ನಾದೇವಿ ಆಯಿತು. ಈ ಹೆಸರೇ ಹೆಚ್ಚು ಪ್ರಚಲಿತವಾಯಿತೆಂದು ತಿಳಿದುಬರುತ್ತದೆ.[೬೫] ಪೋರ್ಚ್‌ಗೀಸ್ ಪ್ರವಾಸಿ ನ್ಯೂನಿಜ್‌ನು ಕೃಷ್ಣರಾಜನ ಕಿರಿಯ ರಾಣಿಗೆ ನಾಗಲಾದೇವಿ ಎಂಬ ಹೆಸರು ಇತ್ತೆಂದು ಹೇಳಿ ಗೊಂದಲ ಮೂಡಿಸುತ್ತಾನೆ. ಇಲ್ಲಿ ನಾಗಲಾದೇವಿ ಕೃಷ್ಣರಾಯನ ತಾಯಿ ಹೆಸರು, ಚಿನ್ನಾದೇವಿಯ ಅತ್ತೆ.[೬೬]

ಚಿನ್ನಾದೇವಿಯು ರಾಯನ ಒಲವಿನ ರಾಣಿಯಾಗಿದ್ದು, ರಾಯನ ಪ್ರೀತಿ ಸಂಪಾದಿಸಬೇಕಾದರೆ ಈಕೆ, ಸುಸಂಸ್ಕೃತಳು, ಉತ್ತಮ ಕುಲಸ್ತ್ರೀಯಾಗಿದ್ದುದರಿಂದಾಗಿ ಮಾತು ಕೊಟ್ಟಿದ್ದಂತೆ ಚಿನ್ನಾಂಬೆಯನ್ನು ಮದುವೆಯಾದನೆಂದು ಈಕೆ ವೇಶ್ಯೆಯಲ್ಲದೆ ಹೋದರೂ ನರ್ತಕಿಯಾಗಿದ್ದು ಸುಂದರಿಯಾಗಿದ್ದರಿಂದಾಗಿ ರಾಯನೇ ಈಕೆಯನ್ನು ವಿವಾಹವಾಗಿರಬಹುದು. ರಾಯರೊಂದಿಗೆ ಈಕೆಯ ವಿವಾಹವು ಕ್ರಿ.ಶ. ೧೪೯೭ರಲ್ಲಿ ನಡೆಯಿತೆಂದು ತಿಳಿದುಬರುತ್ತದೆ. ಸಮಕಾಲೀನ ಕವಿಗಳಾದ ಮುಕ್ಕುತಿಮ್ಮನ್ನು ಪೆದ್ದನ್ನರವರು ಈಕೆಯ ಹಾಗೂ ರಾಯನ ಕುರಿತು ಅವರಲ್ಲಿ ಹೊಗಳಿ ಬರೆದಿರುವುದು ಕಾಣಬಹುದು. ಮುಕ್ಕುತಿಮ್ಮನ 'ಪಾರಿಜಾತಾಪಹರಣಮು' ಪ್ರಬಂಧದಲ್ಲಿ ಚಿನ್ನಮದೇವಿ ಜೀವಿತನಾಯಕ ನೆಂದಿದ್ದಾರೆ. ಇಲ್ಲಿ ಈಕೆ ಎಷ್ಟು ಪ್ರಮುಖಳಾಗಿದ್ದಳೆಂದು ತಿಳಿಯಬಹುದು. ತಿಮ್ಮನ್ನನು ಕೃಷ್ಣರಾಯನನ್ನು ಸಾಕ್ಷಾತ್ ಕೃಷ್ಣನೆಂದೂ, ಚಿನ್ನಾದೇವಿಯನ್ನು ಸತ್ಯಭಾಮೆಯೆಂದೂ ಭಾವಿಸಿ ಅದೃಷ್ಟಿಯನ್ನಿಟ್ಟುಕೊಡು ಪಾರಿಜಾತಾಪಹರಣದಲ್ಲಿ ವ್ಯಕ್ತಪಡಿಸಿರುವುದರಿಂದ ಇಲ್ಲಿ ಇವರ ಅನ್ಯೂನ್ಯತೆಯ ಬಗ್ಗೆ ವ್ಯಕ್ತವಾಗುತ್ತದೆ.[೬೭]

ಇದುವರೆಗೆ ದೊರಕಿರುವ ಶಾಸನಗಳಲ್ಲಿ ಈಕೆಯ ಇತಿಹಾಸವಾಗಲಿ ಈಕೆಯ ತಂದೆ ತಾಯಿ ಬಗ್ಗೆ ತಿಳಿದುಬರುವುದಿಲ್ಲ. ಆಮುಕ್ತಮಾಲ್ಯದಲ್ಲಿ ದೊರಕುವ ಮಾಹಿತಿ ಪ್ರಕಾರ ಈಕೆಯ ತವರೂರು ವಿಜಯನಗರಕ್ಕೆ ತೀರಾ ಸಮೀಪದಲ್ಲೆಲ್ಲೋ ಇದ್ದಿರಬೇಕೆಂದೂ ಕಮಲಾಪುರವೇ ಆಗಿರಬಹುದೆಂದು ಕುಂ. ವೀರಭದ್ರಪ್ಪನವರ ಅಭಿಪ್ರಾಯವಾಗಿದೆ.[೬೮]

ಚಿನ್ನಾದೇವಿಗೆ ಒಬ್ಬ ಮಗಳಿದ್ದಳೆಂದು ಅವಳ ಹೆಸರು ವೇಂಗಳಾಂಬೆ. ಈಕೆಯನ್ನು ಅರವೀಡು ವಂಶದ ತಿರುಮಲರಾಯನಿಗೆ ವಿವಾಹ ಮಾಡಿಕೊಟ್ಟಿದ್ದರು.[೬೯] ಚಿನ್ನಾದೇವಿಯು ಹಲವಾರು ಭಾರಿ ತೀರ್ಥಯಾತ್ರೆಗಳನ್ನು ಹಾಗೆಯೇ ಹಲವು ದೇವಾಲಯಗಳಿಗೆ ದಾನದತ್ತಿ ನೀಡಿರುತ್ತಾರೆ. ಅವುಗಳಲ್ಲಿ ಮುಖ್ಯವಾಗಿ ಕೃಷ್ಣರಾಯ ಪತಿ ಹಾಗೂ ತಿರುಮಲದೇವಿಯರೊಂದಿಗೆ ಚಿನ್ನಾದೇವಿಯು ಎರಡು ಬಾರಿ ತಿರುಮಲೆ ಯಾತ್ರೆಯನ್ನು ಮಾಡಿರುತ್ತಾರೆ. ರಾಣಿಯು ಕ್ರಿ.ಶ. ೧೫೧೩ರಲ್ಲಿ ಮೊದಲನೇ ಬಾರಿ ತಿರುಮಲದೇವರ ದರ್ಶನ ಪಡೆದು ದೇವರಿಗೆ ನವರತ್ನ ಖಚಿತ ಕಿರೀಟವನ್ನು ೨೫ ಬೆಳ್ಳಿಯ ಆರತಿ ತಟ್ಟೆಗಳನ್ನು ಕಾಣಿಕೆಯಾಗಿ ನೀಡಿದರೆ ರಾಣಿಯರು ಬಂಗಾರದ ಹಾಲಿನ ಬಟ್ಟಲನ್ನು ಈ ಸಂದರ್ಭದಲ್ಲಿ ದಾನ ನೀಡಿದರು.

ಚಿನ್ನಾದೇವಿಯು ೨ನೇ ಬಾರಿ ಕ್ರಿ.ಶ. ೧೫೧೪ರಂದು ಮತ್ತೊಮ್ಮೆ ವೆಂಕಟೇಶ್ವರನನ್ನು ಆರಾಧಿಸಿ ರಾಯನು (೪ನೇ ಭೇಟಿಯಾಗಿತ್ತು ರಾಯನಿಗೆ) ವರಹಗಳಿಂದ ಕನಕಾಭಿಷೇಕವನ್ನು ಮಾಡಿಸಿದ ಚಿನ್ನಾದೇವಿ ಜೊತೆಗೆ ತಿರುಮಲದೇವಿಯರಿಬ್ಬರು ಚಿನ್ನದ ತೋರಣಗಳನ್ನು ಕಾಣಿಕೆಯನಿತ್ತರಲ್ಲದೆ ಎರಡು ಹಳ್ಳಿಗಳನ್ನು ದೇವರ ಸೇವಾ ಕಾರ್ಯಕ್ಕೆ ದಾನವಾಗಿತ್ತರು. ಚಿನ್ನಾದೇವಿಯು ತಿರುಪತಿಗೆ ೧೫೧೪ರಲ್ಲಿ ಕೊನೆಯ ಭೇಟಿ ಯಾಗಿರುತ್ತದೆ. ದಿನಾಂಕ ೧೧.೩.೧೫೧೩ ರಂದು ಶುಕ್ರವಾರ ಅರಸನು ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ವಿಠಲ ದೇವರಿಗೆ ಮೂರು ಗ್ರಾಮಗಳನ್ನು ಬಾನವಾಗಿ ಕೊಟ್ಟನೆಂದು ಈ ಸಂದರ್ಭದಲ್ಲಿ ಚಿನ್ನಾದೇವಿಯು ತಿರುಮಲದೇವಿಯರು ವಿಠಲ ದೇವಸ್ಥಾನದ ಗೋಪುರವನ್ನು ಕಟ್ಟಿಸಿ ದೇವರ ಆರೋಗಣೆಗೆ ಒಂದು ಚಿನ್ನದ ಹರಿವಾಣ ೯ ಬೆಳ್ಳಿಯ ನಿಲಾಂಜನದ ಹರಿಗೆ, ಎಂಟು ಹಿರಿಯ ಆರತಿ, ಒಂದು ಪುರುಷಾಮೃಗದ ಆರತಿ, ಮೂರು ನಾಗಾರತಿ ಒಂದು ಧೂಪಾರತಿ, ಎರಡು ಕಖಡಿ ಬರ್ತಿ ಒಂದು ಪ್ರತುಮೆ ಆರತಿಯನ್ನು ದೇವರಿಗೆ ಸಮರ್ಪಿಸಿದರು. ನೈವೇದ್ಯದ ವೇಳೆಗೆ ಬೇಕಾಗುವ ಹರಿವಾಣ ಆರತಿ ಜೊತೆಗೆ ೨೦೦ ಹಸುಗಳನ್ನು ನೀಡಿದ್ದರು.[೭೦]

ಕ್ರಿ.ಶ.೧೫೧೪ರಲ್ಲಿ ದೊರೆಯು ಗಜಪತಿಯನ್ನು ಸೋಲಿಸಿದ ನೆನಪಿಗಾಗಿ ತಿರುವೇಂಗಳನಾಥ ದೇವರ ದರ್ಶನ ಮಾಡಿದನು. ಜೊತೆಯಲ್ಲಿದ್ದ ಚಿನ್ನಾದೇವಿಯೂ ದೇವರಿಗೆ ಅನೇಕ ಆಭರಣಗಳನ್ನು ದೇವರ ಸೇವೆಗೆ ನೀಡಿ ಬ್ರಾಹ್ಮಣರಿಗೆ ಸತ್ರದಲ್ಲಿ ಭೋಜನಕ್ಕೆ ತೋಂಟ ಮಂಡಳದ ಮಡಿವಲೂರು ಗ್ರಾಮಗಳನ್ನು ದತ್ತಿಯಾಗಿ ನೀಡಿದುದನ್ನು ತಿಳಿಸುತ್ತದೆ. ಇಲ್ಲಿ ರಾಣಿಯರು ಯಾವುದೇ ಯುದ್ಧದಲ್ಲಿ ಯಶಸ್ಸಿಗಳನ್ನು ಅಪೇಕ್ಷಿಸುತ್ತಿದ್ದರು ಎಂಬುದು ಸ್ಪಷ್ಟ.[೭೧]

ಕ್ರಿ.ಶ. ೧೫೧೫ ಜುಲೈ ೨೩ ರಂದು ಚಂದ್ರಗ್ರಹಣವಿದ್ದು ಪತಿ ಕೃಷ್ಣರಾಯನು ಪೂರ್ವದಿಗ್ವಿಜಯ ಯಾತ್ರೆಯನ್ನು ಒಳಗೊಂಡಿದ್ದನು. ಈ ನೆನಪಿಗಾಗಿ ರಾಣಿ ಚಿನ್ನದೇವಮ್ಮನು ಧರಣಿಕೋಟೆ ಅಮರೇಶ್ವರದ

ಕೃಷ್ಣವೇಣಿ ನದಿ ತೀರದಲ್ಲಿ ರತ್ನಧೇನು ಮಹಾದಾನ ಕೊಡುತ್ತಾಳೆ. ಜೊತೆಗೆ ತಿರುಮಲಾದೇವಿಯು ಜೊತೆಗಿದ್ದು ಆಕೆಯು ಸಪ್ತಸಾಗರ ಮಹಾದಾನ ನೀಡುತ್ತಾಳೆ.[೬೨]

ದಿನಾಂಕ ೧೫.೭.೧೫೨೧ರ ಕೃಷ್ಣರಾಯನು ರಾಯಚೂರು, ಅಲ್ಲಂಪೂರು, ಮಾನವೆ, ಹಾನಗಲ್ಲು, ಮಾಗಡೆದುರ್ಗಗಳನ್ನು ಗೆದ್ದು ಕೂಡಲೂರು ಸಂಗಮಕ್ಕೆ ಬಂದ ಆ ಸಂಗಮವು ಕೃಷ್ಣವೇಣಿ/ಭೀಮನದಿಯ ಸಂಗಮವಾಗಿದ್ದು ಅಲ್ಲಿನ ಸಂಗಮದಲ್ಲಿ ರತ್ನಧೇನು ಮಹಾದಾನವನ್ನು ಮಾಡಲು ಬಯಸಿ ತನ್ನ ಪತ್ನಿಯಿಂದ ಚಿನ್ನಾದೇವಿಯ ಕೈಯಲ್ಲಿ ಗೋದಾನವನ್ನು ತಿರುಮಲದೇವಿ ಕೈಯಲ್ಲಿ ಕನಕದಾನವನ್ನು ಮಾಡಿದ ಮಾನುವೆ ಸೀಮೆಯ ಚೀಕಲಪರ ಮರನ್ನು ತಿರುವೇಂಗಳನಾಥನಿಗೆ ದಾನ ನೀಡುತ್ತಾರೆ.[೬೩]

ಈ ದಾನಗಳೆಲ್ಲವೂ ಸಹ ಹೆಚ್ಚಾಗಿ ದಿಗ್ವಿಜಯದ ನೆನಪಿಗಾಗಿ ಮಾಡಿದಂತಹ ದಾನಗಳಾಗಿವೆ. ಇಲ್ಲಿ ಚಿನ್ನಾದೇವಿ ಹಾಗೂ ತಿರುಮಲದೇವಿಯರು ಒಟ್ಟಿಗೆ ಹಲವು ದಾನ ನೀಡುವುದು ಅವರಲ್ಲಿನ ಹೊಂದಾಣಿಕೆಯ ಬಗ್ಗೆ ತಿಳಿಯಬಹುದು. ಧಾರ್ಮಿಕ ಕಾರ್ಯಗಳಲ್ಲಿ ಜನೋಪಯೋಗಿ ಕಾರ್ಯಗಳನ್ನು ಮಾಡುತ್ತಿದ್ದರು ಎಂಬುದಕ್ಕೆ ನಿದರ್ಶನವಾಗಿ ರಾಮಚಂದ್ರಪುರ ಎಂಬ ಅಗ್ರಹಾರವನ್ನು ಕಟ್ಟಿಸಿ ಬಾವಿ ತೋಡಿಸಿದ ರಾಣಿ ಚಿನ್ನಾಮಾಂಬ ಇದರಿಂದಾಗಿ ರಾಣಿಯ ಸಾರ್ವಜನಿಕೋಪಯೋಗಿ ಕೆಲಸ ಮಾಡುತ್ತಿದ್ದರೆಂದು ತಿಳಿಯಬಹುದು.[೬೪] ಕೃಷ್ಣರಾಯನು ತನ್ನ ತಾಯಿ ನಾಗಲಾದೇವಿ ಹೆಸರಿನಲ್ಲಿ 'ನಾಗಲಾದೇವಿ ಪಟ್ಟಣ', ಹಿರಿಯರಾಣಿ ಹೆಸರಿನಲ್ಲಿ 'ತಿರುಮಲಾದೇವಿ ಪಟ್ಟಣ', ಮಗನ ಹೆಸರಿನಲ್ಲಿ 'ತಿರುಮಲಾರಾಯ ಪಟ್ಟಣ' ಕಟ್ಟಿಸಿದಂತೆ ಚಿನ್ನಾದೇವಿ ಹೆಸರಿನಲ್ಲೂ ಸಹ ಪಟ್ಟಣವನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ.

ಪಾಯಸ್ ಕೊಡುವ ವಿವರಣೆ ಎಂದರೆ ಕ್ರಿ.ಶ. ೧೫೧೩ರ ವೇಳೆಗಾಗಲೇ ಕೃಷ್ಣರಾಯನು ತನ್ನ ವಾರಾಂಗನೆ ಪತ್ನಿಯಾದ ಚಿನ್ನಾದೇವಿಯ ಹೆಸರಿನಲ್ಲಿ ತಿರುಮಲಾದೇವಿಯ ಪಟ್ಟಣದ ಪೂರ್ವಕ್ಕೆ ನಗರವೊಂದನ್ನು ನಿರ್ಮಿಸಿ ನಾಗಲಾಪುರವೆಂದು ಕರೆದನು. ನ್ಯೂನಿಜ್‌ನು ಸಹ ಗಚ್ಚು ಗಾರೆಗಳಿಂದ ಕಟ್ಟಿದ ಮನೆಗಳು, ಉದ್ದ ವಿಶಾಲ ರಸ್ತೆ ನಗರ ಸುತ್ತ ಗೋಡೆಯೊಂದನ್ನು ಅರಮನೆಯನ್ನು ಕಟ್ಟಿಕೊಳ್ಳುವಂತೆ ಆಯ್ಕೆ ಮಾಡಿದ ಅದನ್ನೇ ನಾಗಲಾಪುರವೆಂದು ಕರೆದನು. ಇಲ್ಲಿ ನ್ಯೂನಿಜ್ ಪಾಯಸ್‌ರವರು[೬೫] ಗೊಂದಲ ಮೂಡಿಸುತ್ತಾರೆ. ಆದರೆ ಕ್ರಿ.ಶ. ೧೫೧೩ರ ಸಂಕ್ಲಾಪುರದ ಶಾಸನವು ಸಂಕ್ಲಾಪುರದ ಪಶ್ಚಿಮಕ್ಕೆ ನಾಗಲಾಪುರವಿತ್ತೆಂದು ತಿಳಿಸುತ್ತಾನೆ.[೬೬] ಕೃಷ್ಣರಾಯನು ನಾಗಮಂಗಲ ತಾಲ್ಲೂಕಿನ ೧೫೧೨ರ ದೊಡ್ಡ ಜಾತಕ ತಾಮ್ರ ಶಾಸನದ ಪ್ರಕಾರ ಕೃಷ್ಣರಾಯನು ಓರಿಜತ್ತಿಗ ಗ್ರಾಮ ಮತ್ತು ಪರಿಸರದ ನಾಲ್ಕು ಉಪಗ್ರಾಮಗಳನ್ನು ಸೇರಿ ಅದಕ್ಕೆ ಚಿನ್ನಾದೇವಿಪುರವೆಂದು ಹೆಸರಿಟ್ಟು ತನ್ನ ಅಚ್ಚುಮೆಚ್ಚಿನ ರಾಣಿಯಾದ ಚನ್ನಾದೇವಿಯ ಹೆಸರಿನಲ್ಲಿ ದಾನ ಮಾಡಿದನು.[೬೭] ಪ್ರಾರಂಭದಲ್ಲಿ ೧೬ನೇ ಶತಮಾನದಲ್ಲಿ ಹೊರಡಿಸಿದ ಶಿಲಾಶಾಸನವು ಈ ಭಾಗವನ್ನು 'ಚಿಕ್ಕವಾಡಿ' ಎಂದು ಕರೆಯಲಾಗುತ್ತದೆ. ಆರಂಭದಲ್ಲಿ 'ಚಿನ್ನಾದೇವಿವಾಡಾ' ಆಗಿದ್ದು ಕಾಲಕ್ರಮೇಣ ಜನರ ಉಚ್ಚಾರಣೆಯಲ್ಲಿ 'ಚಿನ್ನದೇವಿವಾಡ', 'ಚಿಕ್ಕದೇವವಾಡ', 'ಚಿಕ್ಕವಾಡ', ಚಿಕ್ಕವಾಡಿಯಾಗಿ ಮಾರ್ಪಟಾಗಿಬೇಕು. ಈಗ ಇದು ಚಿತ್ತವಾಡ್ಗಿಯಾಗಿ ಉಳಿದುಬಂದಿದೆ. ಈಗಿನ ಚಿತ್ತವಾಡ್ಗಿಯು ಮುಖ್ಯ ವ್ಯಾಪಾರ ಕೇಂದ್ರವಾಗಿ ಪ್ರಚಲಿತಕ್ಕೆ ಬಂದಿದೆ.[೬೮] ಇಲ್ಲಿ ಪ್ರಮುಖ ಹಿರಿಯ ರಾಣಿಗೆ ನೀಡಿದ ಮರ್ಯಾದೆಯನ್ನು ಚಿನ್ನಾದೇವಿಗೂ ನೀಡಿರುವುದು ಹೆಚ್ಚು ಔಚಿತ್ಯಪೂರ್ಣವಾಗಿದೆ.

ಇವಳು ಲಲಿತಕಲೆಯಲ್ಲಿಯೂ ಸಹಪರಿಣಿತಳಾಗಿರಳೆಂದು ತಿಳಿಯಲಾಗುತ್ತದೆ. ಹಂಪೆಯ ವಿರೂಪಾಕ್ಷ ದೇವಾಲಯದ ಪ್ರಸಿದ್ಧ ನರ್ತಕಿಯಾಗಿದ್ದಳೆಂದು ಜೊತೆಗೆ ಅತ್ಯುತ್ತಮ ವೀಣಾ ವಿದುಷಿ ಯಾಗಿದ್ದಳೆಂದು ತಿಳಿಯಬಹುದು.[೭೯] ಕ್ರಿ.ಶ. ೧೫೧೨ರಲ್ಲಿ ಕೃಷ್ಣರಾಯನು ತಿರುಪತಿಯಲ್ಲಿ ತನ್ನ ಇಬ್ಬರು ಮಡದಿಯರಾದ ಚಿನ್ನಾದೇವಿ ಬಲಭಾಗದಲ್ಲಿ, ತಿರುಮಲದೇವಿಯು ಎಡಭಾಗದಲ್ಲಿದ್ದು ಮಧ್ಯದಲ್ಲಿ ಕೃಷ್ಣರಾಯನು ನಿಂತಿರುವ ಕಂಚಿನ ಪ್ರತಿಮೆಯನ್ನು ೧೫೨೧ರಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ. ಇದು ತಾವು ಶ್ರೀ ವೆಂಕಟೇಶ್ವರನ ಕರುಣೆಗೆ ಸದಾ ಕೃತಜ್ಞರಾಗಿರುವುದಾಗಿ ಹಾಗೂ ತಾವು ಅವನ ಸೇವೆಗೈಯುವುದರ ಸಂಕೇತವಾಗಿ ಪ್ರತಿಷ್ಠಾಪಿಸಲ್ಪಟ್ಟಿದೆ.[೮೦] ಜೊತೆಗೆ ಚಿನ್ನಾದೇವಿಯು ತಿರುಮಲದೇವಿಯರಿಬ್ಬರಿಗೂ ಸಹ ಇಲ್ಲಿನ ಸಮಾನವಾದ ಸ್ಥಾನಮಾನ ನೀಡಲಾಗಿತ್ತು ಎಂದು ತಿಳಿದುಬರುತ್ತದೆ.

ಇಲ್ಲಿ ಗಮನಿಸುವ ಅಂಶವೆಂದರೆ ವಸುಂಧರಾ ಫಿಲಿಯೋಜಾ ಪ್ರಕಾರ ಚಿನ್ನಾದೇವಿ ಡೊಂಬರವಳು ಎಂಬುದನ್ನು ನ್ಯೂನಿಜ್ ಪಾಯಸ್ ಪ್ರಕಾರ ವೇಶ್ಯೆ ಎಂದು ಮತ್ತೆ ಕೆಲವರು ಕುಲೀನ ಮನೆತನದವಳೆಂದು ಹೇಳುವುದರಿಂದ ಈಕೆ ಮೂಲ ಕುರಿತು ವಿಚಾರದ ಬಗ್ಗೆ ಹೆಚ್ಚು ದ್ವಂದ್ವಗಳಿವೆ. ಹೀಗೆ ಏನೆಲ್ಲಾ ವಾದ ವಿವಾದಗಳು ಈಕೆಯ ಬಗೆಗಿದ್ದರೂ, ಒಬ್ಬ ರಾಣಿಯಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ಹೊಸ ಪರಿವರ್ತನೆ, ಸಂಸ್ಕೃತಿ ನಿರ್ಮಾಣಕ್ಕೆ ನಾಂದಿ ಹಾಡಿರುತ್ತಾಳೆ. ಶ್ರೀಮಂತ ಮನೆತನ, ರಾಣಿಯ ಪಟ್ಟವಿಲ್ಲದೆ, ಒಬ್ಬ ಸಾಮಾನ್ಯ ಮಹಿಳೆಯಾಗಿ ಚಿನ್ನಾದೇವಿ ಕೃಷ್ಣದೇವರಾಯನಿಗೆ ಸ್ಫೂರ್ತಿ ಮತ್ತು ಪ್ರೇರಣೆ ನೀಡಿದ್ದು ಸಾಮ್ರಾಜ್ಯದ ಅಭಿವೃದ್ಧಿಗೆ ಕಾರಣವಾಯಿತು. ಹಾಗಾಗಿ ರಾಣಿಯರಲ್ಲಿ ಇವಳು ತನ್ನ ಇತಿಮಿತಿಯಲ್ಲಿ ಮಹಾಸಾಧ್ವಿ ಶಿರೋಮಣಿ ಆಗಿರುತ್ತಾಳೆ.

ಜಗನ್ಮೋಹಿನಿ

ಜಗನ್ಮೋಹಿನಿ ಕೃಷ್ಣದೇವರಾಯನ ಮೂರನೇ ರಾಣಿ. ಒರಿಸ್ಸಾ ದೇಶದ ರಾಜಕುಮಾರಿ. ಗಜಪತಿ ಪ್ರತಾಪರುದ್ರನ ಮಗಳು. ಈಕೆಗೆ ಲಕ್ಷ್ಮೀ, ಅನ್ನಪೂರ್ಣ, ಜಗನ್ಮೋಹಿನಿ, ತುಕ್ಕಾದೇವಿ ಎಂದು ಬೇರೆ ಬೇರೆ ಹೆಸರುಗಳಿಂದ ಗುರುತಿಸುತ್ತಿದ್ದರು ಎಂದು ಎಂ. ರಾಮರಾವ್ ಅವರ ಅಭಿಪ್ರಾಯ.[೮೧] ಈ ಅಂಶಕ್ಕೆ ಆಧಾರವಾಗಿ ಈಕೆಯ ಹೆಸರು ರಾಯವಾಚಕ ಪ್ರಕಾರ 'ಮೋಹಿನಿ' ಎಂದೂ ಕುಮಾರದೂರ್ಜಟಿಯ ಕೃಷ್ಣರಾಜ ವಿಜಯಮ ಪ್ರಕಾರ 'ತುಖ್ಖಾರಮಣಿ', ನಾದಿಂಡ್ಲ ಗೋಪಮಂತ್ರಿಯ ಪ್ರಭೋದ ಚಂದ್ರೋದಯ ವ್ಯಾಖ್ಯಾನದ ಪೀಠಿಕಾ ಭಾಗದಲ್ಲಿ ಈಕೆಯ ಹೆಸರು 'ಭದ್ರಾ' ಎಂದಿದೆ. ಕೃಷ್ಣನ ಮಗಳು ಮೋಹನಾಂಗೀಯು ಈಕೆಯ ಹೆಸರು 'ಲಕ್ಷ್ಮೀ' ಎಂದು ಮಾರೀಚಪರಿಣಯದಲ್ಲಿ ಹೇಳುತ್ತಾಳೆ.[೮೨]

ಡೋಮಿಂಗೊ ಪಾಯೇಸ್‌ನು ಕೊಡುವ ವಿವರಣೆ ಎಂದರೆ ಒರಿಯಾ ದೇಶದ ರಾಜನೊಂದಿಗೆ ಯುದ್ಧ ಮಾಡಿ ಅವರೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದರು. ಆಕೆ ಈಗ ರಾಜನ ಹೆಂಡತಿಯರಲ್ಲಿ ಒಬ್ಬಳು. ಇವರಲ್ಲಿ ಜಗನ್ಮೋಹಿನಿ ಪಟ್ಟಮಹಿಷಿರಲ್ಲಿ ಒಬ್ಬಳು ಎಂದು ಅಭಿಪ್ರಾಯ ಪಡುತ್ತಾನೆ.[೮೩] ನ್ಯೂನಿಜ್ ಸಹ ನಾಲ್ಕು ಜನ ರಾಣಿಯರು ಎಂಬ ಅಂಶಕ್ಕೆ ಆದ್ಯತೆ ನೀಡಿದ್ದಾನೆ. ತೃತೀಯ ಪತ್ನಿ ಬಗ್ಗೆ ಗುರುಜಾಡ ರಾಮಚಂದ್ರಮೂರ್ತಿಯವರೂ ರಾಯರ ತೃತೀಯ ಪತ್ನಿಯ ಹೆಸರು ತುಖ್ಖಾದೇವಿಯೋ ರುಚಿದೇವಿಯೋ ಅಥವಾ ವರದರಾಜಮ್ಮನೋ ಆಗಿರಬೇಕೆಂದು ಅಭಿಪ್ರಾಯಪಟ್ಟಿರುವರು. ಕೃಷ್ಣದೇವ

ವಿಜಯಮು ಇದನ್ನು ಅನುಮೋದಿಸಿದೆ, ಬೇರೆ ಬೇರೆ ಗ್ರಂಥಗಳಲ್ಲಿ ಈಕೆಯ ಹೆಸರು ಲುಖಿ..... ಭದ್ರಾ..... ಎಂದಿದೆ. ಲಕ್ಷ್ಮೀ ಎಂಬ ಹೆಸರಿನ ತದ್ಭವರೂಪ ಇದಾಗಿದೆ ಎನ್ನಬಹುದು.[೮೪]

ಕ್ರಿ.ಶ. ೧೫೧೩ನೇ ಇಸ್ವಿ ಜನವರಿ ಮಹೆಯಿಂದ ಒರಿಸ್ಸಾದ ಮೇಲೆ ರಾಯನು ದಂಡಯಾತ್ರೆ ಕೈಗೊಂಡು ಕ್ರಿ.ಶ. ೧೫೧೮ರ ಅವಧಿಯಲ್ಲಿ ಕಟಕ್‌ಸೋಲಿಸಿ, ಶಾಂತಿ ಸಂಧಾನ ನಡೆಸಿದನು.[೮೫] ಈ ಸಂಧಾನದ ಮೂಲಕ ಕೃಷ್ಣದೇವರಾಯನು ಕೃಷ್ಣ ನದಿಯ ಪಶ್ಚಿಮ ಭಾಗವನ್ನು ಪ್ರತಾಪರುದ್ರನಿಗೆ ಬಿಟ್ಟು ಕೊಟ್ಟುದಲ್ಲದೇ, ಜಗಪತಿ ಮಗಳನ್ನು ವಿವಾಹವಾದನು. ಕೃಷ್ಣದೇವರಾಯನು ಈ ಸಂದರ್ಭದಲ್ಲಿ ಗಜಪತಿ ಪ್ರತಾಪ ರುದ್ರನಿಗೆ ೧೬ ಬಗೆಯ ಒಡವೆಗಳನ್ನು ಕಳುಹಿಸಿದನು. ಈ ಬಗ್ಗೆ ಶ್ರೀಕೃಷ್ಣದೇವರಾಯ ದಿನಚರಿಯಲ್ಲಿ ಉಲ್ಲೇಖವಿದೆ. ಅವು ಬೆಣ್ಣೆಯ ಮುದ್ದೆ ಕಂಠಮಾಲೆ, ನವರತ್ನ ಖಚಿತ ಗಿಳಿ ತಾಳಿ ತುಂಬಿದ ತಾಳಿ, ವೈಡೂರ್ಯತಾಳಿ, ವಜ್ರದ ಸರಪಣಿ, ಪಚ್ಚೆಯ ಕಡಗ, ಹುರುಮುಂಜಿಯ ಮುತ್ತಿನ ಪಚ್ಚೆಯ ಸರ, ಇಂದ್ರನೀಲ ಮುಕುಟ, ವಜ್ರದ ಉಡಿದಾರ, ಕೆಂಪುಗಳ ಜವದಾಡೆ, ಮುತ್ತಿನಕಾಲಘೆಂಡೆಯ, ವಜ್ರೂಳ ಬಾಹುಪುರಿ ದೊಡ್ಡ ಮುತ್ತುಗಳ ಅಡ್ಡಗತ್ತಿ, ನವರತ್ನದ ಹರಿಗೆ, ನವರತ್ನದ ಸಿಂಹಟಲಾರಾ ಮುತ್ತುಗಳ ಮೊಗರಂಬ ಇವುಗಳನ್ನು ಕಳುಹಿಸಿದನು. ಇವು ರಾಣಿಯರು ಧರಿಸುವಂತಹ ಆಭರಣಗಳಾಗಿದ್ದು ಇದನ್ನು ಜಗಮ್ಮೋಹಿನಿಗಾಗಿ ಕಳುಹಿಸಿರಬೇಕು. ಅಂದು ಇವುಗಳ ಬೆಲೆಯ ಮೊತ್ತ ೬೪ ಲಕ್ಷ ಎಂದು ತಿಳಿಸಲಾಗಿದೆ, ಒಡವೆಗಳನ್ನು ತಯಾರಿಸುವ ಕಲೆ ಕರ್ನಾಟಕದಲ್ಲಿ ಯಾವ ಮಟ್ಟದಲ್ಲಿತ್ತು ಎಂಬುದಕ್ಕೆ ಇವು ಸಹಾಯಕವಾಗಿದೆ. ಜೊತೆಗೆ ಅಂದಿನ ಆರ್ಥಿಕ ಸ್ಥಿತಿಗತಿಗಳನ್ನು ಉನ್ನತ ಮಟ್ಟದಲ್ಲಿತ್ತು ಎಂಬುದಾಗಿ ತಿಳಿಯಬಹುದು. ಅಂದು ರಾಜರು ವಿವಾಹದ ಪೂರ್ವದಲ್ಲಿ ಕನ್ಯಾಶುಲ್ಕ ಕೊಡುವ ಪದ್ಧತಿ ಇರಬಹುದೇನೋ ಎಂಬುದು ಊಹಿಸಬಹುದು.

ಆದರೂ ಸಹ ಕೃಷ್ಣದೇವರಾಯನು ಮತ್ತು ಜಗಮ್ಮೋಹಿನಿ ವಿವಾಹವನ್ನು ರಾಜಕೀಯ ವಿವಾಹವೆಂದು ಗುರುತಿಸಬಹುದು.[೮೬] ಜಗಮ್ಮೋಹಿನಿಯು ಒಬ್ಬ ವಿದ್ವಾಂಸಳಾಗಿದ್ದಳೆಂದು ತಿಳಿದುಬರುತ್ತದೆ. ಈಕೆಯು ಕೆಲವು ಪದ್ಯಗಳನ್ನು ಬರೆದಂತೆ ಮುಕುಲನ ಅಭಿದಾವೃತ್ತ ಮಾತೃಕೆಯಿಂದ ವಲ್ಲಭದೇವನ ಸುಭಾಷಿತಾವಳಿಯರು ಎಂದು ತಿಳಿದುಬರುತ್ತದೆ. ಈಕೆ ಐದು ಶ್ಲೋಕಗಳನ್ನು ಬರೆದಿದ್ದಾಳೆ. ಅದು 'ಭೃಂಗಪಂಚಕ ಅಥವಾ ತುಕ್ಕಾಪಂಚಕ'ವೆಂದು ಪ್ರಸಿದ್ಧವಾಗಿದೆ. ಕೆಲವರು ಇವು ಅವಳದಲ್ಲವೆಂದು ಪುರುಷಕೃತವೆಂದು ಹೇಳುತ್ತಾರೆ. ಆದರೆ ಅದಕ್ಕೆ ಆಧಾರವಿಲ್ಲ. ಇದರಿಂದಾಗಿ ಈಕೆ ಒಬ್ಬ ಸಾಹಿತಿ ಎಂದು ತಿಳಿದುಬರುತ್ತದೆ.[೮೭] ಇದಲ್ಲದೆ ಜಗಮ್ಮೋಹಿನಿಯು ಆಡಳಿತದಲ್ಲಿಯೂ ಸಹ ಪಾಲ್ಗೊಳುತ್ತಿದ್ದಳು ಎಂಬುದಕ್ಕೆ ಈಕೆಯು ಆಂಧ್ರಪ್ರದೇಶದ ಉಸ್ತುವಾರಿಯನ್ನು ವಹಿಸಿಕೊಂಡಿದ್ದಳೆಂದು ಹೇಳಲಾಗುತ್ತದೆ.[೮೮] ಆದರೂ ಸಹ ಕೃಷ್ಣರಾಯನ ಮೂವರು ಪಟ್ಟದರಸಿಯರಲ್ಲಿ ತಿರುಮಲದೇವಿ, ಚಿನ್ನಾದೇವಿ ಅವರಿಗೆ ನಿಡಿರುವಂತಹ ಸ್ಥಾನಮಾನ ಈಕೆಗೆ ಲಭಿಸಿಲ್ಲವೆಂದು ತಿಳಿದುಬರುತ್ತದೆ. ಈಕೆಯೊಂದಿಗೆ ಯಾವುದೇ ಧಾರ್ಮಿಕ ಕಾರ್ಯದಲ್ಲಿ ಆಡಳಿತದಲ್ಲಿ ಇತರೇ ಯಾವುದೇ ಕಾರ್ಯದಲ್ಲಿಯೂ ಸಹ ಈಕೆಯೊಂದಿಗೆ ಪಾಲ್ಗೊಂಡ ಬಗೆಯಾಗಲಿ ತಿಳಿದುಬರುವುದಿಲ್ಲ. ಇಲ್ಲಿ ಗಮನಿಸುವ ಅಂಶವೆಂದರೆ ಈಕೆ ಅಭೇದ್ಯ ಕೋಟೆ ರಾಜ್ಯವಾದ ಒರಿಸ್ಸಾದ ರಾಜಕುಮಾರಿ ಹಾಗೂ ವೈಭವದಿಂದ ಮೆರೆದ ತುಳುವ ವಂಶದ

ಪ್ರಖ್ಯಾತ ಚಕ್ರವರ್ತಿಯ ಮಡದಿ, ಇಂಥ ಸಂದರ್ಭದಲ್ಲಿ ಈಕೆಯ ಕುರಿತು ಯಾವುದೇ ಶಾಸನಗಳಲ್ಲಿ ಹಾಗೂ ಇತರೇ ಆಧಾರಗಳಿಂದ ಹೆಚ್ಚಾಗಿ ಮಾಹಿತಿಯೂ ಲಭ್ಯವಾಗುವುದಿಲ್ಲ.

ಇವರ ವಿವಾಹವು ಒಪ್ಪಂದದ ಮೇರೆಗೆ ಶಾಂತಿ ಸಂಧಾನದಲ್ಲಿ ಅಪಾರ ಕಾಣಿಕೆಯೊಂದಿಗೆ ರಾಜಕುಮಾರಿಯನ್ನು ವಿವಾಹವಾಗಿದ್ದು ಕೇವಲ ಕೀರ್ತಿಗೋಸ್ಕರ ಹೊರತು ಬೇರೆ ಕಾರಣಗಳಿಗಲ್ಲಾ, ಜೊತೆಗೆ ಇಲ್ಲಿ ಕೃಷ್ಣರಾಯನಾಗಲಿ ಅಥವಾ ರಾಜಕುಮಾರಿಯಾಗಲಿ ಒಪ್ಪಿಗೆಯ ಮೇರೆಗೆ ವಿವಾಹವಾಗದೆ ಕೇವಲ ರಾಜಕೀಯ ತಂತ್ರ. ಇದು ಜಗಮ್ಮೋಹಿನಿ ಅಸಂತೃಪ್ತಿಗೆ ಕಾರಣ ಮಾಡಿಕೊಟ್ಟಿರಬೇಕು. ಇಲ್ಲ ಈಕೆಯ ಅರಸನೊಂದಿಗೆ ರಾಜಕುಮಾರನೊಂದಿಗೆ ಹೊಂದಾಣಿಕೆ ಮಾಡಿಕೊಂಡಿರಲಾರಳೆ ಎಂಬ ಅನುಮಾನ ಮೂಡುತ್ತದೆ. ಕೆಲವೊಂದು ಕೃತಿಗಳಲ್ಲಿ ಈಕೆ ತನ್ನ ಕೊನೆಗಾಲದಲ್ಲಿ ಸನ್ಯಾಸಿನಿಯಾಗಿ ಜೀವನ ನಡೆಸಿದಳು ಎಂದು ಮತ್ತೊಂದು ಅಭಿಪ್ರಾಯದ ಪ್ರಕಾರ ಪತಿಯ ಬಗ್ಗೆ ಅಪಾರ ಪ್ರೀತಿ ಇಟ್ಟುಕೊಂಡಿದ್ದಳು. ಅವನ ನೆನಪಿನಲ್ಲಿಯೇ ಜೀವನ ನಡೆಸಿದಳು ಎಂದು ತಿಳಿದುಬರುತ್ತದೆ. ಮತ್ತೊಂದು ಅಭಿಪ್ರಾಯ ನೋಡಿದರೆ ಕೃಷ್ಣದೇವರಾಯನು ತನ್ನ ಇಬ್ಬರು ಹೆಂಡತಿಯರು ಹೆಸರಿನಲ್ಲಿ ಅನೇಕ ದಾನದತ್ತಿ ನೀಡಿದ್ದಾನೆ. ಅಲ್ಲದೆ ಅವರಿಬ್ಬರ ಕಂಚಿನ ಮೂರ್ತಿಯನ್ನು ತಿರುಪತಿಯಲ್ಲಿ ಪ್ರತಿಷ್ಠಾಪಿಸಿದ್ದಾನೆ. ಆದರೆ ಈಕೆಗೆ ಆ ರೀತಿಯ ಸ್ಥಾನಮಾನ ಜಗಮ್ಮೋಹಿನಿಗೆ ಲಭಿಸಿಲ್ಲದಿರುವುದು ಅಚ್ಚರಿಯ ಸಂಗತಿಯೇ. ಒಟ್ಟಿನಲ್ಲಿ ಜಗಮ್ಮೋಹಿನಿಯು ರಾಯನ ಪ್ರೀತಿ ಪಾತ್ರಳಾಗಿಲ್ಲದಿರುವುದು ಸ್ಪಷ್ಟ.

ಮೋಹನಾಂಗಿ ಅಥವಾ ತಿರುಮಲಾಂಬೆ

ಈಕೆಯು ತಿರುಮಲದೇವಿ ಹಾಗೂ ಕೃಷ್ಣದೇವರಾಯನ ಹಿರಿಯ ಮಗಳು. ಈಕೆಯ ಹೆಸರು ತಿರುಮಲಾಂಬೆ ವೈಷ್ಣವ ಧರ್ಮದವರಾದ ತುಳುವ ವಂಶದ ಕೃಷ್ಣನು ವೆಂಕಟೇಶ್ವರ ಭಕ್ತನಾಗಿದುದರಿಂದ ಮಗಳಿಗೆ ತಿರುಮಲಾಂಬೆ ಎಂದು ಹೆಸರಿಟ್ಟನು. ಆದರೆ ತನ್ನ ಮಡದಿಯ ಹೆಸರು ತಿರುಮಲದೇವಿ ಎಂದು ಇರುವುದರಿಂದಾಗಿ ಈಕೆಯನ್ನು ಪ್ರೀತಿಯಿಂದ ಮೋಹನಾಂಗಿ ಎಂದು ಕರೆಯುತ್ತಿದ್ದನೆಂದು ಮಗಳು ತಿರುಮಲಾಂಬೆ ತಿಳಿಸುತ್ತಾಳೆ.

ತಿರುಮಲದೇವಿಯೊಂದಿಗೆ ರಾಯನ ವಿವಾಹವು ೧೪೯೮ರಂದು ನಡೆಯಿತ್ತೆಂದು, ೧೪೯೯ರಲ್ಲಿ ಮೋಹನಾಂಗಿಯ ಜನನವಾಯಿತ್ತೆಂದು ತಿಳಿದುಬರುತ್ತದೆ.[೮೯] ಮೋಹನಾಂಗಿಯು ಒಬ್ಬ ಸಂಸ್ಕೃತ ಕವಿಯಿತ್ರಿಯಾಗಿದ್ದಳು. ಈಕೆ ರಚಿಸಿದ ಮಾರೀಚಿಪರಿಣಯಮ್ ಕಾವ್ಯದಲಿ ತನ್ನ ವಂಶದ ಇತಿಹಾಸ ತಿಳಿಸುತ್ತಾಳೆ. ಇದರಲ್ಲಿ ತನ್ನ ತಂದೆ ಕೃಷ್ಣರಾಯನು ಹುಟ್ಟಿದ್ದು ಶಕ ಸಂವತ್ಸರ ೧೩೯೩ ವಿಕೃತಿ ಸಂವತ್ಸರ ಕ್ರಿ.ಶ. ೧೪೭೧ ಜನವರಿ ೧೭ ರಾಯನ ಹುಟ್ಟಿದ ದಿನವೆಂದು ತಿಳಿಸುತ್ತಾಳೆ. ಜೊತೆಗೆ ತಂದೆ ಕೃಷ್ಣರಾಯನು ತಿರುಮಲದೇವಿ ಹೃದಯಪ್ರಿಯ ಚಿನ್ನಮಾಂಬಾ ಮನೋಹರ, ನರಸಿಂಹದೇವರಾಯನ ಪ್ರಿಯನಂದನ, ನಾಗಮಾಂಬಾ ತನೂಜ ಎಂದು ಹೇಳಿ, ಮುಂದೆ ತಿರುಮಲಾಂಬೆ ಅನ್ನಪೂರ್ಣಾದೇವಿಯರ ಗುಣಾವಳಿಗಳನ್ನು ಚಿತ್ರಿಸಿ ವಿಷ್ಣುವಿನಂತಿದ ತನ್ನ ತಂದೆ ಕೃಷ್ಣರಾಯನ ರಾಣಿಯಾಗಿದ್ದರೆಂದು ತಿಳಿಸುತ್ತಾಳೆ. ತನ್ನನ್ನು ತಿರುಮಲಾಂಬೆಯಲ್ಲಿ ತಂದೆ ಪಡೆದನೆಂದು ಹೇಳುತ್ತಾಳೆ. ತನ್ನ ತಂದೆಗೆ ಮತ್ತೊಬ್ಬ ಮಡದಿ ಇದ್ದಳೆಂದು ಒರಿಸ್ಸಾ ದೇಶದ ರಾಣಿ ಕುರಿತು ಆಕೆಯ ಹೆಸರು ಲಕ್ಷ್ಮೀ ಎಂಬ ವಿವರಣೆ ನೀಡುತ್ತಾಳೆ.

ಜೊತೆಗೆ ತನ್ನ ಪತಿ ಅಳಿಯರಾಮರಾಯ ಎಂದು ಹೇಳಿ ಆತನ ಶೌರ್ಯ ಪರಾಕ್ರಮದ ಬಗ್ಗೆ ವರ್ಣನೆ ಇದೆ. ಜೊತೆಗೆ ಮೋಹನಾಂಗಿ ತಂದೆಯೊಡನೆ ಚದುರಂಗದ ಆಟದಲ್ಲೂ ಸಂಗೀತ ಸಾಹಿತ್ಯ ಪ್ರಕ್ರಿಯೆಗಳಲ್ಲೂ ತೊಡಗಿರುತ್ತಿದ್ದಳಂತೆ. ರಾಯನು ತನ್ನ ಅಪರ ವಯಸ್ಸಿನಲ್ಲಿ ಹುಟ್ಟಿದ ಮಗನಲ್ಲೂ ಅಪಾರ ವಾತ್ಸಲ್ಯವುಳ್ಳವನಾಗಿ ಅವನೇ ತನ್ನ ಉತ್ತರಾಧಿಕಾರಿಯಾಗಬೇಕೆಂದು ಉತ್ಪ್ರೇಕ್ಷೆಯಿಂದ ಪಟ್ಟಾಭಿಷೇಕವನ್ನು ಮಾಡಿದನು. ಮಗನ ಅಕಸ್ಮಾತ್ತಾದ ಅಕಾಲ ಮರಣದಿಂದ ಭಗ್ನಹೃದಯರಾಗಿದ್ದನೆಂದು ತಿಳಿದುಬರುತ್ತದೆ. ರಾಯನು ಆಶುಕವಿತ್ವದಲ್ಲಿಯು ಸಮಸ್ಯಾಪೂರಣದಲ್ಲಿಯೂ ತನ್ನೊಂದಿಗೆ ತೊಡಗಿರುತ್ತಿದ್ದನೆಂದು ತಾನು ಬರೆದ ಚಿತ್ರಗಳನ್ನು ರಾಗಾಲಾಪನೆಗಳನ್ನೂ ಮೆಚ್ಚುತ್ತಿದ್ದನೆಂದೂ ಮಗಳು ಮೋಹನಾಂಗಿ ತಿಳಿಸುತ್ತಾಳೆ. ರಾಯನು ಮಗಳೊಂದಿಗೆ ಚತುರಂಗವನ್ನು ಆಡುತ್ತಿದ್ದನೆಂದು ತಿಳಿದು ಬರುವುದರಿಂದಾಗಿ ಮೋಹನಾಂಗಿಗೆ ಇರುವಂತಹ ಆಸಕ್ತಿ ಅಭಿರುಚಿಯನ್ನು ಗಮನಿಸಬಹುದು.

ಈಕೆಯ ಪತ್ನಿ ಅಳಿಯರಾಮರಾಯನು ಅರವೀಡು ವಂಶದ ಬುಕ್ಕರಾಯನ ಮರಿಮೊಮ್ಮಗನು ಶ್ರೀರಂಗರಾಜುವಿನ ಪುತ್ರರು ಇವನು ತೆಲುಗು ಮೂಲದವ. ಮೋಹನಾಂಗಿಯ ವಿವಾಹದ ಕುರಿತು ಹಲವು ಗೊಂದಲಗಳಿವೆ. ಏಕೆಂದರೆ ರಾಮರಾಯ ಹಾಗೂ ಮೋಹನಾಂಗಿಯವರ ನಡುವೆ ವಯಸ್ಸಿನ ಅಂತರವಿತ್ತೆಂದು ಹೇಳಲಾಗುತ್ತದೆ. ಅಂದರೆ ಅಳಿಯರಾಮರಾಯನು ಸಾಕಷ್ಟು ಹಿರಿಯವನಾಗಿದ್ದನೆಂದು ಮಾವನಿಗೆ ಹಾಗೂ ಅಳಿಯನಿಗೆ ಇರುವ ವಯಸ್ಸಿನ ಅಂತರ ೧೦-೧೫ ವರ್ಷಗಳಿದ್ದಿರಬಹುದೆಂದು ಅಭಿಪ್ರಾಯವಾಗುತ್ತದೆ.[೧೦]

ರಾಮರಾಯನು ಪ್ರಖ್ಯಾತ ಅರಸನಾಗಿದ್ದಾನೆ. ಏಕೆಂದರೆ ರಾಯನ ಮರಣ ನಂತರ ಅಚ್ಯುತರಾಯ ಸದಾಶಿವರಾಯನ ಕಾಲದಲ್ಲಿ ಅವನತಿಯ ಹಾದಿಯಲ್ಲಿದ್ದ ವಿಜಯನಗರ ಸಾಮ್ರಾಜ್ಯವನ್ನು ಸ್ವಸಾಮರ್ಥದಿಂದ ಎತ್ತಿ ನಿಲ್ಲಿಸಿದರು. ಇದೆಲ್ಲದರ ಜೊತೆಗೆ ನಡಿಮಿದೊಡ್ಡಿಪಾಳಾ ಕೈಫಿಯತ್ತಿನ ಪ್ರಕಾರ ರಾಯರ ಮರಣನಂತರ ರಾಣಿ ತಿರುಮಲದೇವಿಯವರು ತಮ್ಮ ಮಗಳು ತಿರುಮಲಾಂಬೆಯನ್ನು ರಾಮರಾಯನಿಗೆ ಕೊಟ್ಟು ವಿವಾಹ ಮಾಡಿದರು. ರಾಮರಾಯನ ವಿವಾಹವು ಕ್ರಿ.ಶ. ೧೫೩೦ ಅಥವಾ ೧೫೧೫ರಲ್ಲಿ ನಡೆದಿರಬಹುದೆಂದು ಕೂಟೋ ಅಭಿಪ್ರಾಯ. ಅವರ ಪ್ರಕಾರ ರಾಮರಾಯನ ವಯಸ್ಸು ನಲವತ್ತೈದು ವರ್ಷ ಪ್ರೌಢವಯಸ್ಸಿನ ರಾಮರಾಯನಿಗೆ ಶಿಶುಪ್ರಾಯದ ಮಗಳು ತಿರುಮಲಮ್ಮಳನ್ನು ಕೊಟ್ಟು ವಿವಾಹ ಮಾಡಲಾಗಿತ್ತು ಎಂಬ ನ್ಯೂನಿಜ್ ಅಭಿಪ್ರಾಯವನ್ನು ಸಿವೆಲ್‌ನೂ ಅನುಮೋದಿಸಿರುವುದು ಅಚ್ಚರಿ ಸಂಗತಿಯಾಗಿದೆ. ಏಕೆಂದರೆ ಇಲ್ಲಿ ಗಮನಿಸುವ ಅಂಶವೆಂದರೆ ಕ್ರಿ.ಶ. ೧೫೪೫ರಲ್ಲಿ ತಿರುಮಲಾಂಬೆ ಜನಿಸಿದಳೆಂದು ಒಂದು ಅಭಿಪ್ರಾಯವಾದರೆ ರಾಮರಾಯನು ಕ್ರಿ.ಶ. ೧೪೭೦ ಜನಿಸಿದನು ಎಂದು ಹೇಳಲಾಗುತ್ತದೆ. ಈ ಅಂಶದಿಂದ ಇವರಿಬ್ಬರ ನಡುವೆ ೭೫ ವರ್ಷ ಅಂತರವಿದ್ದಿತ್ತೆಂದು ಹೇಳಬಹುದು. ಸಿವೆಲ್ ನ್ಯೂನಿಜ್‌ರ ಅಭಿಪ್ರಾಯದಂತೆ ಶಿಶುಪ್ರಾಯದ ತಿರುಮಲಮ್ಮಲನ್ನು ವಿವಾಹ ಮಾಡಿರುವುದರ ಉದ್ದೇಶ ಇದು ರಾಜಕೀಯ ತಂತ್ರವಾಗಿರುತ್ತದೆ. ರಾಯನಿಗೆ ತೆಲುಗು ಮೂಲದವರಿಂದಲೇ ಆಳ್ವಿಕೆ ನೀಡಬೇಕೆಂಬ ಯೋಜನೆ ಇರಬಹುದು.

ಇವರಿಬ್ಬರ ಜನನದ ವರ್ಷಕ್ಕೂ ವಿವಾಹಿತ ವರ್ಷದ ಬಗ್ಗೆ ಕ್ಯೂಟೋ ಪ್ರಕಾರ ವಿವಾಹವು

೧೫೧೫ ಅಥವಾ ೧೫೩೦ ಎಂದು ಭಾವಿಸಿದ್ದರೆ, ರಾಮರಾಯನಿಗೆ ವಿವಾಹ ಸಂದರ್ಭದಲ್ಲಿ (ಜನನ ೧೪೭೦) ೪೫ ವರ್ಷ ಅಥವಾ ೬೦ ವರ್ಷಗಳಾಗಿರುತ್ತವೆ. ಹಾಗೆಯೇ ತಿರುಮಲಾಂಬೆ ವಯಸ್ಸು ಜನನ ೧೪೯೯ ಎಂದು ಭಾವಿಸಿದರೆ ವಿವಾಹ ಸಂದರ್ಭದಲ್ಲಿ ವಯಸ್ಸು ೧೬ ಅಥವಾ ೩೦ ವರ್ಷವಾಗುತ್ತದೆ. ಆದ್ದರಿಂದಾಗಿ ಇಲ್ಲಿ ಗೊಂದಲ ಸ್ಪಷ್ಟವಾಗಿದೆ. ಇಲ್ಲಿ ರಾಮರಾಯನು ಇಷ್ಟು ವರ್ಷಗಳವರೆಗೆ ಅವಿವಾಹಿತನಾಗಿದ್ದನೋ ಎಂಬುದು ಯೋಚಿಸಬೇಕಾಗುತ್ತದೆ. ಜೊತೆಗೆ ಈ ಎಲ್ಲಾ ಸಂಗತಿ ಗಮನಿಸಿದರೆ ಇಲ್ಲಿ ಹಲವು ಸಂಗತಿಗಳು ಗೊಂದಲಗಳು ಸ್ಪಷ್ಟ. ಜೊತೆಗೆ ಅಧಿಕಾರಕ್ಕಾಗಿ ಇಲ್ಲಿ ರಾಜತಾಂತ್ರಿಕ ಕೃತ್ಯಗಳು ನಡೆಯುತ್ತಿದ್ದವು ಎಂಬುದು ಸ್ಪಷ್ಟ.[೯೧]

ಇಲ್ಲಿ ಮೋಹನಾಂಗಿಯು ಹಿರಿಯ ಪತ್ನಿಯೇ ಅಥವಾ ದ್ವಿತೀಯ ಪತ್ನಿ ಇರಬಹುದೇ ಎಂಬುದು ಸ್ಪಷ್ಟವಾಗಿಲ್ಲ. ಈಕೆಗೆ ಬಾಲ್ಯದಲ್ಲಿಯೇ ಹಲವು ರೀತಿಯ ಶಿಕ್ಷಣವನ್ನು ಪಡೆದಿದ್ದಳು ಎಂದು ತಿಳಿಯಬಹುದು. ತನ್ನ ತಂದೆಯೊಂದಿಗೆ ಅತ್ಮೀಯಳಾಗಿದ್ದುವುದರಿಂದ ತನ್ನ ತಂದೆಯೊಂದಿಗೆ ಅನೇಕ ಮನೋರಂಜನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಳು. ಈಕೆ ವಿವಾಹ ಶಿಶುಪ್ರಾಯದಲ್ಲಿ ಆಗಿರದೇ, ಪ್ರೌಢವಯಸ್ಸಿನಲ್ಲಿ ಆಗಿರಬಹುದು ಜೊತೆಗೆ ಇಲ್ಲಿ ರಾಜಪುತ್ರಿಯರಿಗೆ ಹೆಚ್ಚು ಪ್ರಾಮುಖ್ಯತೆ ನೀಡಿರಲಿಲ್ಲವೆಂಬ ಸಂಗತಿ ಪ್ರಮುಖವಾಗಿದೆ. ಈಕೆಯು ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಿದ ಅಂಶಗಳು ಗೋಚರಿಸುವುದಿಲ್ಲ. ಕೃಷ್ಣರಾಯ ಹಾಗೂ ರಾಣಿಯರು ಹಲವು ಬಾರಿ ತೀರ್ಥಯಾತ್ರೆ ದಾನ ದತ್ತಿ ನೀಡಿದ ಅಂಶ ಸ್ಪಷ್ಟ ಆದರೆ ಮಗಳೊಂದಿಗೆ ಯಾವುದೇ ಯಾತ್ರೆಗಳನ್ನು ಮಾಡಿರಲಾರರು.

ಈ ಎಲ್ಲಾ ಸಂಗತಿಗಳಿಂದ ತಿರುಮಲಾಂಬೆಯ ಚರಿತ್ರೆಯು ಮಸುಕಾಗಿದೆ. ಈಕೆಯ ಕುರಿತು ಸಿಕ್ಕಿರುವ ಮಾಹಿತಿಗಳು ಸತ್ಯ ಸಂಗತಿಗಳಿಗೆ ದೂರವಿದೆ. ಇವಳ ಬಗ್ಗೆ ಹೆಚ್ಚಿನ ಅಧ್ಯಯನದ ಅಗತ್ಯವಿದೆ. ಇಲ್ಲಿ ಈಕೆಗೆ ಯಾವುದೇ ಪ್ರಾಮುಖ್ಯತೆ ನೀಡಿರಲಿಲ್ಲವೆಂಬುದು ಸ್ಪಷ್ಟ.

ವೇಂಗಳಾಂಬೆ

ಈಕೆ ತುಳುವ ವಂಶದ ರಾಜ ಪುತ್ರಿ. ಇವಳಿಗೆ ಮೋಹನಾಂಗಿ ಎಂಬ ಅಕ್ಕ ಇದ್ದಳು. ಅವಳು ರಚಿಸಿದ ಮಾರೀಚಿ ಪರಿಣಯಮ್‌ದಲ್ಲಿ ಹೇಳಿರುವಂತೆ ತನ್ನ ತಂಗಿ ವೇಂಗಳಾಂಬೆಯನ್ನು ಅನ್ನಪೂರ್ಣ ದೇವಿಯಲ್ಲೂ ತನ್ನ ತಂದೆ ಪಡೆದನೆಂದು ತಿಳಿಸುತ್ತಾಳೆ. ಇಲ್ಲಿ ಅನ್ನಪೂರ್ಣದೇವಿ ಎಂದರೆ ಚಿನ್ನಾದೇವಿಯ ಪರ್ಯಾಯ ಹೆಸರು. ವೇಂಗಳಾಂಬೆ ತಾಯಿ ಶ್ರೀಕೃಷ್ಣದೇವರಾಯ ಈಕೆಯ ತಂದೆ ಎಂದು ತಿಳಿದು ಬರುತ್ತದೆ.[೯೨]

ಈಕೆಯನ್ನು ತೆಲುಗು ಮೂಲದ ಅರವೀಡು ವಂಶದ ತಿರುಮಲರಾಯನೊಂದಿಗೆ ಇವಳ ವಿವಾಹ ಮಾಡಿಕೊಡಲಾಗುತ್ತದೆ.[೯೩] ಕ್ರಿ.ಶ. ೧೬೫೭ರ ಶಾಸನದ ಪ್ರಕಾರ ತಿರುಮಲರಾಜನಿಗೆ (ಶ್ರೀ ರಾಜಪರಮೇಶ್ವರ, ಶ್ರೀ ವೀರ ಪ್ರತಾಪ, ಶ್ರೀ ವೀರಸಿವಾಜಿ ರಾಜನು ಮಾಡುವ ವಿಜ್ಞಾಪನೆಗಳು. ನಿಮ್ಮ ತಂದೆಯಾದ ಶ್ರೀ ರಂಗರಾಜನ ರಾಜ್ಯವು ಆತನು ಪರಸ್ಥಳದಲ್ಲಿ ಮೃತನಾದ ಕಾರಣ ಇನ್ನೂ ಮುಂದೆ ನಿಮ್ಮ ಸಂರಕ್ಷಣೆ ಯಾಗಬೇಕೆಂದು ಮಾತುಶ್ರೀ ತಿಮ್ಮಾಜೀ ಅಮ್ಮನು ನಿನ್ನನ್ನೂ ಮತ್ತು ರಾಮರಾಯನನ್ನು ವಕೀಲ ವೆಂಕಟಕೃಷ್ಣಪ್ಪನ ಸಂಗಡ ನನ್ನ ಬಳಿಗೆ ಕಳುಹಿಸಿರುತ್ತಾರೆ. ಹೀಗಾಗಿ ಅನೇಕ ತಾಲ್ಲೂಕುಗಳನ್ನು ನೀಡಿ

ಅವುಗಳನ್ನು ಹೆಸರನ್ನು ಹೇಳಲಾಗಿದೆ.) ಈ ಶಾಸನದ ಮೂಲಕ ಶ್ರೀರಂಗರಾಜನು ಹಾಗೂ ತಿಮ್ಮಾಜೀ ಅಮ್ಮನು ವೇಂಗಳಾಂಬೆಯ ಅತ್ತೆ ಮಾವನವರೆಂದು ತಿಳಿದುಬರುತ್ತದೆ.[೧೪]

ಇಲ್ಲಿ ವೇಂಗಲಾಂಬೆ ಕುರಿತು ಮಾಹಿತಿ ಕೊರತೆ ಇರುವುದು ಸ್ಪಷ್ಟ. ಏಕಂದರೆ ಈಕೆಯ ಕುರಿತು ಶಾಸನಗಳಲ್ಲಿ ಯಾವುದೇ ಸಾಹಿತ್ಯ ಕೃತಿಗಳಲ್ಲಿ ಮಾಹಿತಿ ಇಲ್ಲ. ಇದರಿಂದಾಗಿ ಈಕೆಯು ಚರಿತ್ರೆಯ ಪುಟದಲ್ಲಿ ಮಸುಕಾಗಿರುವುದು ಸ್ಪಷ್ಟವಾಗುತ್ತದೆ.

ಓದುವ ತಿರುಮಲಾಂಬೆ

ತಿರುಮಲಾಂಬೆ ವಿಜಯನಗರದ ರಾಜಮನೆತನಕ್ಕೆ ಸೇರಿದ ರಾಣಿ. ಕ್ರಿ.ಶ. ೧೫೩೦-೧೫೪೨ರ ವರೆಗೆ ಆಳಿದ ವಿಜಯನಗರದ ಅರಸ ಅಚ್ಯುತದೇವರಾಯನ ರಾಣಿ. ಅಚ್ಯುತರಾಯನ ಕೆಲವು ಪತ್ನಿಯರಲ್ಲಿ ಈಕೆಯು ಒಬ್ಬಳು. ಈಕೆಯ ಬಗ್ಗೆ ಹೆಚ್ಚಿನ ಮಾಹಿತಿ ದೊರಕುವುದಿಲ್ಲ. ಈಕೆಯ ರಚಿಸಿದ ಕಾವ್ಯದಿಂದ ಹಾಗೂ ಶಿಲಾಶಾಸನದಿಂದಾಗಿ ಈಕೆ ಒಬ್ಬ ಸಂಸ್ಕೃತ ವಿದ್ವಾಂಸಳೆಂಬುದು ತಿಳಿದುಬರುತ್ತದೆ. ವರದಾಂಬಿಕಾ ಪರಿಣಯ ಎಂಬ ಚಂಪೂ ಕಾವ್ಯ ಬರೆದ ಪ್ರಥಮ ಕವಿಯಿತ್ರಿ ಎಂದು ಇವಳಿಗೆ ಹೇಳಬಹುದು.[೧೫]

ಈಕೆ ಅಚ್ಯುತರಾಯನ ರಾಜ ಮಹಿಷಿ ಹಾಗೂ ಅತ್ಯಂತ ಪ್ರೀತಿ ಪಾತ್ರಳಾದ ರಾಣಿಯಾಗಿದ್ದಳು. ಈಕೆಗೆ ಓದುವ ತಿರುಮಲಮ್ಮ ಎಂಬ ಹೆಸರು ಬರಲು ಕಾರಣವೇನೆಂದರೆ ಕ್ರಿ.ಶ. ೧೫೩೦ರಲ್ಲಿ ಸುವರ್ಣ ಮೇರುದಾನ ಸಂದರ್ಭದಲ್ಲಿ ಅಚ್ಯುತದೇವರಾಯನು ಹಾಕಿಸಿದ ಶಾಸನದಲ್ಲಿನ ಸಂಸ್ಕೃತ ಶ್ಲೋಕಕ್ಕೆ ಓದುವ ತಿರುಮಲಾಂಬ ಎಂಬ ಕವಿಯಿತ್ರಿಯ ಹೆಸರು ಕಂಡುಬರುತ್ತದೆ. ಆಕೆಯು ಬೇರೆ ಒಬ್ಬ ಸ್ತ್ರೀ ಎಂದು ಅಭಿಪ್ರಾಯವಾದರೆ ಓದುವ ತಿರುಮಲಮ್ಮನ ಅಚ್ಯುತರಾಯನ ರಾಣಿ ಎಂದು ವರದಾಂಬಿಕ ಪರಿಣಯದಿಂದ ಸ್ಪಷ್ಟವಾಗುತ್ತದೆ.[೧೬] ಹಾಗೂ ಶ್ರೀ ರಂಗಮ್‌ದಲ್ಲಿನ ತಮಿಳು ಶಾಸನದಲ್ಲಿ ಓದುವ ತಿರುಮಲ್ಲಮ್ಮ ಅಚ್ಯುತರಾಯನ ರಾಜ ಮಹಿಷಿ ಎಂದಿದ್ದಾರೆ. ಕ್ರಿ.ಶ. ೧೫೩೩ರ ಶಾಸನದ ಪ್ರಕಾರ ಓಡ್ರ ಸಂಸ್ಕೃತ ಭಾಷೆಯಾಗಿರುವುದರಿಂದ ಓಡ್ರ ಭಾಷೆಯಲ್ಲಿ ಈ ಪದಕ್ಕೆ 'ಓದುವ' ಎಂದೇ ಅರ್ಥವಾಗುತ್ತದೆ. ಅದರಿಂದಾಗಿ ಅವಳು ಓಡ್ರ ದೇಶದವಳೆಂದೂ ಅಂಧ್ರಪ್ರದೇಶವಳೆಂದೂ ಅಭಿಪ್ರಾಯವಿದೆ. ಮತ್ತೆ ಕೆಲವರ ಪ್ರಕಾರ ಓದುವ ಪದವು ಅಚ್ಚ ಕನ್ನಡವಾಗಿದ್ದು ಅವಳು ಕನ್ನಡದ ಒಬ್ಬ ಶಾಸನ ಕವಿಯಿತ್ರಿಯೆಂಬುದಾಗಿ ಹೇಳಲಾಗುತ್ತದೆ.[೧೭] ಆದರೆ ಓಡ್ರಿಯ ಎಂಬುದು ಕಳಿಂಗ ಎಂದು ಕರೆಯಲ್ಪಡುತ್ತಿದ್ದ ಓರಿಸ್ಸಾವನ್ನು ಮೊದಲು ಒಡ್ರಿಯ ಎಂದು ಕರೆಯುತ್ತಿದ್ದರು. ಅದರಿಂದಾಗಿ ಈಕೆ ಒರಿಸ್ಸಾ ದೇಶದವಳಿರಬೇಕು. ಇಲ್ಲ ಇವಳ ಪೂರ್ವಿಕರು ಒರಿಸ್ಸಾದಿಂದ ವಲಸೆ ಬಂದು ಅವರ ಕುಲಕ್ಕೆ ಒಡ್ರಿಯ ಹೆಸರು ಬಂದಿರಬೇಕು. ನಂತರ ಓಡ್ರಿಯ ಹೋಗಿ ಜನರ ಉಚ್ಚಾರಣೆಯಿಂದ ಓದುವ ಆಗಿರಬಹುದು. ಜೊತೆಗೆ ಈಕೆಯು ಹಲವು ಸಂಸ್ಕೃತ ಶ್ಲೋಕಗಳನ್ನು ರಚಿಸುತ್ತಿದ್ದರಿಂದಾಗಿ ಓದುವ ಪದವೇ ರೂಢಿಯಲ್ಲಿರಬೇಕು ಎಂದು ಅಭಿಪ್ರಾಯಪಡಬಹುದು.[೧೮]

ತಿರುಮಲಾಂಬೆಯ ಕಾವ್ಯ, ನಾಟಕ, ಪುರಾಣಗಳ ಬಗ್ಗೆ ತಿಳುವಳಿಕೆವುಳ್ಳವಳೆಂದು ಬುದ್ಧಿವಂತಳೆಂದು ಗ್ರಹಣಶಕ್ತಿ ಹೆಚ್ಚುವುಳವಳೆಂದು, ಅನೇಕ ಭಾಷೆ ಬಲ್ಲವಳು, ಮಧುರ ಕಂಠದವಳೆಂದು ಈಕೆ ಕವಿಗಳಿಗೆ

ಆಶ್ರಯದಾತಳು, ದತ್ತಿಯ ಶಾಸನಗಳನ್ನು ಬರೆದವಳು ಎಂದು ಕಾವ್ಯದಲ್ಲಿ ಈಕೆಯ ನೀಡುವ ಮಾಹಿತಿಯಿಂದ ಈಕೆಯ ವ್ಯಕ್ತಿತ್ವದ ಪರಿಚಯವಾಗುತ್ತದೆ. ಈಕೆ ಬರೆದ ವರದಾಂಬಿಕಾ ಪರಿಣಯ ಕಾವ್ಯದಲ್ಲೂ ತನ್ನ ಮಾವ ನರಸನಾಯಕನು ಹಾಗೂ ಪತಿ ಅಚ್ಯುತರಾಯನ ವರ್ಣನೆ ಕುರಿತು ತಿಳಿಸುತ್ತಾಳೆ. ಜೊತೆಗೆ ಈ ಕಾವ್ಯದಲ್ಲಿ ತನ್ನ ಪತಿಯ ಬಾಲ್ಯದಿಂದ ಹಿಡಿದು ಆತನ ವಿದ್ಯಾಭ್ಯಾಸ, ಪ್ರೇಮ ಪರಿಚಯ, ವಿವಾಹ, ಕುಮಾರ ಚಿಕ್ಕವೆಂಕಟಾದ್ರಿಯ ಜನನ, ಆತನ ಪಟ್ಟವನ್ನು ಕಟ್ಟಿದ ಬಗೆಗೂ ಸಹ ಇದರಲ್ಲಿ ತಿಳಿಸಲಾಗಿದೆ.

ಈ ಕಾವ್ಯದಲ್ಲಿ ತನ್ನ ಪತಿ ಅಚ್ಯುತರಾಯನ ವರ್ಣನೆಯಲ್ಲಿ "ಆದರ್ಶರಾಜ ಹಾಗೂ ಸಕಲ ಕಲಾಕಲಾಪ ಚಾತುರ್ಯ ಗಾಂಭೀರ್ಯ ಕರುಣಾರಸಾಚಾರ್ಯ, ಶೌರ್ಯವಿಧಾನ ವಿತರಣಾದಿ ಸ್ಪೃಹಣೀಯ ಮಹನೀಯ" ಎಂದರೆ ಗುಣಗಳಿಗೆ ಅಗರದಂತಿದ್ದನು. ಅವನು ದಾನಕ್ಕೆ ವಿಶ್ವಾಸ ಭೂಮಿ ಗಾಂಭೀರ್ಯಕ್ಕೆ ಆಶ್ರಯ, ಸೌಜನ್ಯಕ್ಕೆ ರಕ್ಷಕ, ಸಾಹಿತ್ಯ ಸಂಗೀತಗಳಿಗೆ ಆಧಾರ ಸರ್ವಪ್ರಮಾಣಿಕತೆ ಗುಣಗಳಿಗೆ ಅವಾಸ ಸ್ಥಾನವಾಗಿದ್ದನು ಎಂದು ಹೊಗಳಿದ್ದಾಳೆ. ಇದರಿಂದಾಗಿ ಈಕೆಯ ಪತಿಯ ಮೇಲೆ ಇರುವ ಪ್ರೀತಿಯನ್ನು ಸೂಚಿಸುತ್ತದೆ.[೯೯]

ರಾಣಿಯು ಕಾಂಚೀಪುರದಲ್ಲಿನ ಅರಸನ ಅಚ್ಯುತರಾಯನ ಮುಕ್ತ ತುಲಾಭಾರಕ್ಕೆ ಸಂಬಂಧಿಸಿದ ಮೂರು ಶ್ಲೋಕಗಳನ್ನು ಅವಳೇ ರಚಿಸಿದ್ದಾಗಿ ತಿಳಿದುಬರುತ್ತದೆ. ಇದು ಪದದ ಬಳಕೆ ಪ್ರೌಢಮೆ ಚಾತುರ್ಯ ವರ್ಣನಾ ಕೌಶಲ್ಯಗಳು ಗ್ರಂಥದುದ್ದಕ್ಕೂ ವ್ಯಕ್ತವಾಗಿದೆ. ಇದು ಈಕೆಯ ವಿದ್ವತ್ತಿನ ಪರಿಚಯ ನೀಡಿದ್ದಾರೆ.[೧೦೦] ಈಕೆ ಒಬ್ಬ ಹೋರಾಟಗಾರ್ತಿಯು ಆಗಿದ್ದಳೆಂಬುದಕ್ಕೆ ಅಚ್ಯುತದೇವರಾಯನ ಮಧುರಾ ದಂಡಯಾತ್ರೆ ಸಂದರ್ಭದಲ್ಲಿ ಈಕೆಯು ಸಹ ಯುದ್ಧದಲ್ಲಿ ಪಾಲ್ಗೊಂಡು ಅರಸರಿಗೆ ಸ್ಫೂರ್ತಿಯನ್ನು ನೀಡುತ್ತಿದ್ದಳೆಂದು ತಿಳಿದುಬರುತ್ತದೆ.[೧೦೧] ಈಕೆಯ ಕುರಿತು ಹೆಚ್ಚಾಗಿ ಇವಳೇ ರಚಿಸಿದ ಕಾವ್ಯದಿಂದಲೇ ಈಕೆಯ ನಯವಿನಯದ ಪರಿಚಯ, ವಿದ್ವತ್ತಿನ ಪ್ರೌಢಮೆ ಜೊತೆಗೆ ಸವತಿ ಮತ್ಸರ್ಯವಿಲ್ಲದೆ ಹಿರಿಯ ಪಟ್ಟಾರಸಿಯ ವರದಾದೇವಿ ಕುರಿತು ಬರೆದಿರುವುದು ಇವಳ ವಿಶಾಲ ಹೃದಯದ ಪರಿಚಯ ನೀಡುತ್ತದೆ. ಜೊತೆಗೆ ಈ ಕೃತಿಯಲ್ಲಿ ಮುಖ್ಯವಾಗಿ ಗಮನಿಸುವ ಅಂಶವೆಂದರೆ ಅಚ್ಯುತರಾಯ/ಕೃಷ್ಣದೇವರಾಯನ ನಡುವಿನ ಭಿನ್ನಾಭಿಪ್ರಾಯ ಅಂದರೆ ಈಕೆ ಇಲ್ಲಿ ತುಳುವ ವಂಶದ ಪೂರ್ವಿಕರ ಪರಿಚಯ ನೀಡಿದ್ದರು ಸಹ ಅಚ್ಯುತರಾಯನ ಆಳ್ವಿಕೆಯ ಪ್ರಾರಂಭದಲ್ಲಿ ೨೦ ವರ್ಷಗಳ ವರೆಗೆ ಆಳ್ವಿಕೆ ನಡೆಸಿದ ಕೃಷ್ಣದೇವರಾಯನ ಕುರಿತು ಯಾವುದೇ ವಿಚಾರ ಪ್ರಸ್ತಾಪಿಸಿರುವುದಿಲ್ಲ. ಇದರಿಂದಾಗಿ ಇಲ್ಲಿ ರಾಜಕೀಯ ವೈಷಮ್ಯ ಇರಬಹುದೆಂದು ಊಹಿಸಬಹುದು. ಅಲ್ಲದೇ ರಾಣಿಯ ರಾಜಕೀಯ ವಿಚಾರದಲ್ಲಿಯೂ ಸಹ ಸ್ವಾತಂತ್ರ್ಯತೆಯನ್ನು ಪಡೆದಿದ್ದಳೆಂದು ತಿಳಿದುಬರುತ್ತದೆ.[೧೦೨]

ಒಟ್ಟಿನಲ್ಲಿ ತಿರುಮಲಮ್ಮನಿಗೆ ತುಳುವ ವಂಶದ ಮೇಲಿನ ಅಭಿಮಾನ, ಪತಿ ಅಚ್ಯುತರಾಯನ ರಾಣಿ ವರದಾದೇವಿ ಹಾಗೂ ಕುಮಾರ ವೆಂಕಟಾದ್ರಿಯವರ ಮೇಲಿನ ಪ್ರೀತಿ ವಿಶ್ವಾಸದ ಪರಿಚಯ ಸಿಗುತ್ತದೆ. ತುಳುವ ವಂಶದ ರಾಣಿಯರು ರಾಜಕೀಯ ಆಡಳಿತದಲ್ಲಿ ಪಾಲ್ಗೊಳ್ಳುತ್ತಿದ್ದರು ಎಂಬುದಕ್ಕೆ ಈಕೆಯ ಪ್ರತಿನಿಧಿಕರಣವೇ ಸಾಕ್ಷಿ ಎನ್ನಬಹುದು.

ವರದರಾಜಮ್ಮ

ವರದರಾಜಮ್ಮ ಅಚ್ಯುತರಾಯನ ಪ್ರಧಾನ ರಾಣಿ. ಈಕೆ ಮೂಲತಃ ಪಾಂಡ್ಯ ಮನೆತನದವಳೆಂದು ಸಾಕಷ್ಟು ಆಧಾರಗಳು ತಿಳಿಸುತ್ತವೆ.[೧೦೩] ಈಕೆಗೆ ವರದಾಜಂಮ್ಮ, ವರದಾದೇವಿ ಅಮ್ಮ, ವರದಾಜಿಯಮ್ಮ, ವರದಾರಾಜದೇವಿ ಅಮ್ಮ, ವರದಾದೇವಿ, ವರದಾಂಬಾ ಎಂಬ ಹೆಸರಿನ ಉಲ್ಲೇಖಗಳು ಶಾಸನಗಳಿಂದ ತಿಳಿಯುತ್ತದೆ. ಅಚ್ಯುತನ ಮತ್ತೊಬ್ಬ ರಾಣಿ ತಿರುಮಲಾಂಬೆ. ಈಕೆ ಕವಿಯಿತ್ರಿ. ಈಕೆ ಅಚ್ಯುತ ರಾಯನ ಪ್ರೀತಿಯ ಮಡದಿ ಎಂದು ತಿಳಿಸುತ್ತಾಳೆ. ಪತಿ ಅಚ್ಯುತನೊಂದಿಗೆ ಇವರ ವಿವಾಹವಾದ ಬಗ್ಗೆ ಅವರಿಗೆ ವೆಂಕಟಾದ್ರಿ ಎಂಬ ಮಗ ಜನಿಸಿದನೆಂದು ತಿಳಿಸುತ್ತಾಳೆ. ಅವನ ಯುವರಾಜನಾದ ಬಗ್ಗೆ ಅಚ್ಯುತರಾಯನ ಪ್ರೀತಿಯ ಮಡದಿ ಹಾಗೂ ಹಿರಿಯ ರಾಣಿ ಎಂದು ತಿಳಿಸಿ ಅವಳೇ ಹೆಸರಿನಲ್ಲಿಯೇ ಕಾವ್ಯ ವರದಾಂಬಿಕಾ ಪರಿಣಯಂ ರಚಿಸಿರುವುದನ್ನು ಕಾಣಬಹುದು.[೧೦೪]

ಇದಲ್ಲದೆ ಸಿವೆಲ್‌ರವರ ಅನುಮೋದಿಸಿರುವಂತೆ ಕಾಂಚೀವರಮ್‌ನಲ್ಲಿನ ಶಾಸನವೊಂದು ಅಚ್ಯುತನಿಗೆ ವರದಾದೇವಿ ಎಂಬ ಹೆಂಡತಿಯಿದ್ದಳು ಅವಳು ವೆಂಕಟನೆಂಬ ಮಗನನ್ನು ಹೆತ್ತಳು ಎಂದು ಹೇಳುತ್ತದೆ.[೧೦೫] ಅಚ್ಯುತರಾಯನಿಗೆ ವರದಾದೇವಿಯ ಬಗ್ಗೆ ವಿಶೇಷವಾದಂತಹ ಸ್ಥಾನಮಾನ ನೀಡಿದನೆಂದೂ ತಿಳಿದುಬರುತ್ತದೆ. ರಾಣಿಯರು ಹೆಚ್ಚಾಗಿ ತಮ್ಮನ್ನು ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿ ಗುರುತಿಸಿಕೊಳ್ಳುತ್ತಿದ್ದರು ಎಂಬುದಕ್ಕೆ ಇವರು ನೀಡಿದ ಅನೇಕ ಶಾಸನಗಳಿಂದ ಕಂಡುಕೊಳ್ಳಬಹುದು. ಕ್ರಿ.ಶ. ೧೫೩೨ರಲ್ಲಿ ಅಚ್ಯುತರಾಯನು ಬಾಲಕೃಷ್ಣದೇವಾಲಯಕ್ಕೆ ಗೋದ್ವಾದಶಿಯ ದಿನದಂದು ಕೃಷ್ಣಾಪುರಪೇಟೆಯ ವರಮಾನವಾದ ೮೦೦ ಗದ್ಯಾಣಗಳನ್ನು ಸಮರ್ಪಿಸಿದ್ದಾರೆ. ರಾಣಿ ವರದಾಜಿದೇವಿ ಅರಿಯನು ದೇವರ ಅವಸರ ಪೂಜೆಗೆ ೨೮೪೦ ಚಕ್ರ ಗದ್ಯಾಣಗಳನ್ನು ದತ್ತಿ ನೀಡಿದ್ದಳು ಎಂಬುದಾಗಿ ತಿಳಿದುಬರುತ್ತದೆ..[೧೦೬]

ಅದೇ ರೀತಿ ಕ್ರಿ.ಶ. ೧೫೩೨ ಸೋಮವಾರದಂದು ಅಚ್ಯುತದೇವರಾಯನು ಗೋದ್ವಾರಶಯ ಬಾಲಕೃಷ್ಣ ದೇವರಿಗೆ ಕೃಷ್ಣಾಪುರದ ಪೇಟೆಯ ದಿವಸದ ಅಂಗಡಿಗಳಿಂದ ಬರುತ್ತಿದ್ದ ಆದಾಯವಾದ ೮೦೦ ಗದ್ಯಾಣದ ಶುದ್ಧವರಹ(ಅಂಕಿಗಳನ್ನು ನೀಡಿಲ್ಲ)ಗಳನ್ನು ಸಮರ್ಪಿಸಿದನು. ಹಾಗೆ ರಾಣಿ ವರದಾಜಿ ದೇವಿ ಅಮ್ಮನು ಸಹ ದೇವರ ಅವಸರದ ಕಾರ್ಯಕ್ಕೆ ೧ಕ್ಕೆ ಒಂದು ದಿನಕ್ಕೆ ಚಕ್ರಗದ್ಯಾಣದ ಲೆಕ್ಕದಲ್ಲಿ ವರುಷಕ್ಕೆ ೩೨೪೦ ಚಕ್ರ ಗದ್ಯಾಣವನ್ನು ಅಚ್ಯುತದೇವರಾಯನು ಬಾಲಕೃಷ್ಣ ದೇವಾಲಯಕ್ಕೆ ನೀಡಿದ್ದು ದೇವರ ಉಯ್ಯಾಲೆಯ ತಿರುನಾಳು ಒಂದಕ್ಕೆ ೩೦೦ ಚಕ್ರಗದ್ಯಾಣ ಸೇರಿ ಒಟ್ಟು ೩೮೪೦ ಚಕ್ರಗದ್ಯಾಣಗಳನ್ನು ನೀಡಿ ಪೂಜಾ ಪ್ರಸಾರವನ್ನು ಪಂಚನಾಥ ಪರದೇನೆ ಶ್ರೀ ವೈಷ್ಣವರಿಗೆ ನೀಡಿಬೇಕೆಂದು ತಿಳಿಸಿರುತ್ತಾಳೆ.

ರಾಜಕೀಯ ದಿಗ್ವಿಜಯದಿಂದ ಜಯ ದೊರೆತ್ತಾಗ ಹೆಚ್ಚಾಗಿ ತುಳುವ ವಂಶದಲ್ಲಿ ಧಾರ್ಮಿಕ ಕ್ಷೇತ್ರಗಳಲ್ಲಿ ಸಂದರ್ಶಿಸುವುದು ಸಾಮಾನ್ಯವಾಗಿತ್ತು. ಅದೇ ರೀತಿ ಕ್ರಿ.ಶ. ೧೫೩೨ ವಿಜಯದ ಸವಿನೆನಪಿಗಾಗಿ ವರದರಾಜದೇವಿ ಅಮ್ಮ ಪುತ್ರ ವೆಂಕಟಾದ್ರಿಯವರು ವರದರಾಜದೇವರ ಸನ್ನಿಧಿಗೆ ಭೇಟಿ ನೀಡಿ ತುಲಾಪುರುಷ ಮಹಾದಾನ ನೆರವೇರಿಸಿ, ಈ ಸಂದರ್ಭದಲ್ಲಿ ರಾಣಿಯು ವರದರಾಜದೇವರ ಸನ್ನಿಧಿಯಲ್ಲಿ ತುಲಾಪುರುಷ ಮಹಾದಾನಗಳನ್ನು ನೇರವೇರಿಸಿ ದೇವರಿಗೆ ಚರವು ಪುಳಗಾವು ಸೀತಾಂಬ್ರ ಪದಕ, ಪಟ್ಟೆ,

ಸೀರೆ, ಮಂಜಿಡಿಕೆ ಸೀರೆ, ನೈವೇದ್ಯ ಪದಾರ್ಥಗಳು ಹಾಗೂ ರತ್ನಖಚಿತ ಶಂಖ ಚಕ್ರ ಅಭಯಹಸ್ತ ತಿರುನಾಮಗಳನ್ನು ಹಾಗೂ ಹದಿನೇಳು ಗ್ರಾಮಗಳನ್ನು ದತ್ತಿಬಿಟ್ಟ ವಿವರ ಈ ಶಾಸನದಲ್ಲಿ ಕಂಡುಬಂದಿದೆ.[೧೦೭]

ಕ್ರಿ.ಶ. ೧೫೩೨ ಭಾನುವಾರ ವಿಜಯನಗರ ಅರಸು ಅಚ್ಯುತರಾಯ ಆಳ್ವಿಕೆಯ ಕಾಲದಲ್ಲಿ ರಾಜನು ರಾಣಿ ವರದಾದೇವಿ ಹಾಗೂ ರಾಜಕುಮಾರ ಚಿಕ್ಕವೆಂಕಟಾದ್ರಿ ಅವರೊಂದಿಗೆ ವಿಷ್ಣುಕಂಚಿಗೆ ಒಂದು ಮುತ್ತಿನ ತುಲಾಪುರುಷ ಭೂದಾನ ಗೋಸಹಸ್ರ ದಾನಗಳನ್ನು ಮಾಡಿ ವರದರಾಜ ದೇವರ ಪೂಜಾ ಕೈಂಕಾರ್ಯಗಳಿಗಾಗಿ ೧೫೦೦ ಗದ್ಯಾಣಗಳ ಆದಾಯವುಳ್ಳ ೧೭ ಗ್ರಾಮಗಳನ್ನು ದತ್ತಿಬಿಟ್ಟ ವಿವರಗಳನ್ನು ಈ ಶಾಸನ ದಾಖಲಿಸುತ್ತದೆ. ರಾಣಿ ವರದಾಂಬಿಕಾ ತಿರುಪತಿ ದೇವರ ಪೊಂಗಲ್ ನೈವೇದ್ಯಕ್ಕಾಗಿ ಆರು ಹಳ್ಳಿಗಳನ್ನು ಕಾಣಿಕೆಯಾಗಿ ನೀಡಿದಳು ಎಂಬ ತಿರುಮಲೈ ತಿರುಪತಿ ದೇವಸ್ಥಾನದ ದಾಖಲೆ ಹಾಗೂ ಇತರ ಶಾಸನಗಳಿಂದ ಗೊತ್ತಾಗುತ್ತದೆ.[೧೦೮]

ವರದದೇವಿಯೂ ಸಹ ಹಲವಾರು ಧಾರ್ಮಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರೆಂಬುದಕ್ಕೆ ಇವು ಸ್ಪಷ್ಟಪಡಿಸುತ್ತವೆ. ಅಲ್ಲದೆ ರಾಣಿ ಕೃಷಿ ನೀರಾವರಿ ಅಭಿವೃದ್ಧಿಗಾಗಿ ಹೆಚ್ಚಾಗಿ ಪ್ರೋತ್ಸಾಹಿಸುತ್ತಿದ್ದರೆಂಬುದಕ್ಕೆ ರಾಣಿ ವರದದೇವಿಯೂ ಕರ್ನೂಲು ಜಿಲ್ಲೆಯ ಕಂಭಂ ಕೆರೆಯನ್ನು ದುರಸ್ತಿಗೊಳಿಸಿದ ಬಗ್ಗೆ ಅರಿಯಬಹುದು. ಈ ಕಾಲದಲ್ಲಿ ೭ ಸಲ ಭೇಟಿ ನೀಡಿದ ನ್ಯೂನಿಜ್‌ನು ತನ್ನ ದಿನಚರಿಯಲ್ಲಿ ಒಂದೆಗೆಮ್ಮ ಪಟ್ಟಣವಿತ್ತೆಂದು ಹೇಳಿದರೆ ಪೂರ್ವಕ್ಕೆ ಅರ್ದೆಗೆಮಾ ಎಂಬ ನಗರವಿದೆ. ಅದು ಈ ರಾಜನ ಪ್ರಧಾನ ರಾಣಿಯ ಹೆಸರು. ಅವಳ ಪ್ರೀತ್ಯರ್ಥ ಅದನ್ನು ಕಟ್ಟಿದ ಎಂಬ ಸಂಗತಿಯು ಪಾಯೇಸ್ ಕಥನದಲ್ಲಿ ಕಂಡುಬರುತ್ತದೆ ಎಂದು ಸಿವೆಲ್‌ರವರ ಅಭಿಪ್ರಾಯ ಸಮಂಜಸವಾಗಿದೆ.[೧೦೯]

ಪೂರ್ವಕ್ಕೆ ಅರ್ದೆಗೆಯಾ ಎಂದರೆ ಅದು ವಿಜಯನಗರದ ಅರಮನೆ ಪ್ರದೇಶದಿಂದ ಪೂರ್ವಕ್ಕಿರುವ ಅರ್ದೆಗೆಮಾ ಪಟ್ಟಣ ಎಂದೂ ಪುರಾತತ್ವಜ್ಞರು ಇಂದಿನ ಕಮಲಾಪುರದಿಂದ ಹಂಪಿ ಪವರ್ ಕಾಲೋನಿಗೆ ಹೋಗುವ ದಾರಿಯಲ್ಲಿರುವ ಪಟ್ಟಾಭಿರಾಮ ದೇವಾಲಯದ ಸುತ್ತಮುತ್ತಲ ಪ್ರದೇಶವನ್ನು ವಿಜಯನಗರ ಕಾಲದ ವರದರಾಜಮ್ಮನ ಪಟ್ಟಣ ಎಂದು ಗುರುತಿಸಿದ್ದಾರೆ. ಅಚ್ಯುತರಾಯ ತನ್ನ ಪ್ರಧಾನ ರಾಣಿ ವರದಾಂಬಾ ಅಥವಾ ವರದರಾಜಮ್ಮನ ಹೆಸರಿನಲ್ಲಿ ವರದರಾಜಮ್ಮನ ಪಟ್ಟಣವನ್ನು ನಿರ್ಮಿಸಿದ್ದಾನೆ. ಈ ಪ್ರದೇಶದಲ್ಲಿ ದೊರೆತ ಶಾಸನಗಳು ವರದಾದೇವಿ ಅಮ್ಮನವರ ಪಟ್ಟಣ ವರದಾಜಂಮನ ಪಟ್ಟಣ ಮತ್ತು ವರದಾಜಿಯಮ್ಮನ ಪಟ್ಟಣ ಎಂದು ಉಲ್ಲೇಖಿಸಿ ಅಲ್ಲಿನ ದೇವಾಲಯಗಳನ್ನು ಹೆಸರಿಸುತ್ತವೆ.

ವರದರಾಜಮ್ಮನ ಹೆಸರಿನಲ್ಲಿ ಆಕೆಯ ತವರು ಪಾಂಡ್ಯ ರಾಜ್ಯಕ್ಕೆಹೋಗುವ ಮಾರ್ಗದಲ್ಲಿ ಅಂದರೆ ಪೆನುಗೊಂಡ ಬಾಗಿಲ ಬಳಿ ವರದರಾಜಮ್ಮನ ಪಟ್ಟಣವನ್ನು ನಿರ್ಮಿಸಿರಬೇಕೆಂದು ಸಿ. ಮಹದೇವ ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಶಾಸನಾಧಾರವಾಗಿ ಕ್ರಿ.ಶ. ೧೫೪೦ರಲ್ಲಿ ಪೆನುಗೊಂಡ ಬಾಗಿಲಿನ ಹತ್ತಿರವಿರುವ ವರದಾಜಮ್ಮನ ಪಟ್ಟಣವನ್ನು ಅಚ್ಯುತದೇವರಾಯನ ರಾಣಿ ವರದಾಜಮ್ಮನ ಹೆಸರಿನಲ್ಲಿ ಕಟ್ಟಲಾಗಿದೆ. ಇಲ್ಲಿ ತಿಮ್ಮರಾಜು ರಘುನಾಥ ದೇವಸ್ಥಾನವನ್ನು ಕಟ್ಟಿಸಿದನು ಎಂದು ತಿಳಿಸುತ್ತದೆ.[೧೧೦]

ಇದರಿಂದಾಗಿ ವರದಾಜಮ್ಮನ ಪಟ್ಟಣವು ಪೆನುಗೊಂಡ ದ್ವಾರದ ಬಳಿ ಇರುವುದೇ ಎಂದು ಊಹಿಸಬಹುದು. ಇಲ್ಲಿ ಅಚ್ಯುತರಾಯನು ಪ್ರೀತಿಯ ಹೆಂಡತಿಗಾಗಿ ಪಟ್ಟಣ ನಿರ್ಮಿಸಿದ್ದು ಸ್ಪಷ್ಟವಾಗಿದೆ.

ಸದಾಶಿವರಾಯನ ಆಳ್ವಿಕೆಯಲ್ಲಿದ್ದಾಗ ಆನೆಗೊಂದಿಗೆ ಸಲ್ಲುವ ಕೆಳವಡಿ ನಾಡಿನ ರವುಡು ಕುಂಬೆಯ ಸೀಮೆಗೆ ಸೆರುವ ತುಂಗಾಭದ್ರಾ ತೀರದ ಮುಕ್ಕುಂದಕ್ಕೆ ವರದರಾಜಂಮಪುರವೆಂದು ಪ್ರತಿನಾಮವಿತ್ತೆಂದು ತಿಳಿಸುತ್ತದೆ. ಇದು ಅಚ್ಯುತರಾಯನ ರಾಣಿಯ ಹೆಸರಾಗಿದೆ. ಇದು ಆ ಕಾಲಕ್ಕೆ ಸರ್ವಮಾನ್ಯವುಳ್ಳ ಅಗ್ರಹಾರವಾಗಿತ್ತು. ಶಾಸನ ಮುಂದುವರೆದು ಈ ವರದಾಜಂಮಪುರ ಅಗ್ರಹಾರದ ಮಹಾಜನರು ಗೌಡ ಸೇವಭೋಗ ಗಣಾಚಾರಿ ಸೇನೆ ಪಟ್ಟಣಸ್ವಾಮಿ ಕೆಲವು ಬೋಪುಗಳು ಹೆಸರುಗಳಿವೆ. ಸೇರಿಗಾಸನ ಬರೆಸಿಕೊಟ್ಟಂತೆ ಹೇಳಿದ ಇಲ್ಲಿ ದಾನದ ವಿವರ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಇಲ್ಲಿಯೂ ಸಹ ಈಕೆಯ ಪ್ರಾಮುಖ್ಯತೆಯ ಅರಿವುಂಟಾಗುತ್ತದೆ.[೧೧]

ಸಿವೆಲ್‌ರ ಪ್ರಕಾರ ಅಚ್ಯುತರಾಜನು ಯಾವುದೇ ಊರಿಗೆ ಪ್ರಯಾಣಿಸುವಾಗ ತಾವೊಬ್ಬರೇ ಹೋಗದೆ ತಮ್ಮೊಂದಿಗೆ ರಾಣಿಯರನ್ನು ಕರೆದುಕೊಂಡು ಹೋಗುತ್ತಿದ್ದರು ಎಂದು ತಿಳಿಸಿ ಅಲ್ಲಿ ಪ್ರತಿಯೊಬ್ಬಳು ಕೋಲುಗಳುಳ್ಳ ತನ್ನ ಮೇಣೆಯಲ್ಲಿ ಕುಳಿತು ಅತನೊಂದಿಗೆ ಹೋಗುವಳು ಎಂದಿದೆ. ಪ್ರಧಾನ ಹೆಂಡತಿಯ ಮೇಣೇ ವಿಶೇಷವಾಗಿದ್ದು ಮೇಣೆ ಸಣ್ಣ ಮುತ್ತು ಮತ್ತು ದೊಡ್ಡಮುತ್ತುಗಳಿಂದ ಮತ್ತು ಬಾರಿಗೊಂಡೆಗಳನ್ನು ಹೆಣೆದ ಅರುಣ ವರ್ಣದ ಬಟ್ಟೆಯಿಂದ ಅಚ್ಛಾದಿತವಾಗಿರುತ್ತದೆ. ಕೋಲು ಬಂಗಾರದಿಂದ ಅಲಂಕೃತವಾಗಿರುತ್ತದೆ. ಇತರ ಹೆಂಡಂದಿರ ಮೇಣೆಗಳು ಬೆಳ್ಳಿಯಿಂದ ಮಾತ್ರ ಅಲಂಕೃತ ವಾಗಿರುತ್ತದೆ ಎಂದಿದ್ದಾರೆ. ಜೊತೆಗೆ ಇವರೊಂದಿಗೆ ಮಗಳು ಅಥವಾ ಮಗನು ಬಂಗಾರದ ಕುಂದಣವಿಟ್ಟ ಇನ್ನೊಂದು ದಂತದಿಂದ ಮಾಡಿದ ಮಂಚ ಒಯ್ಯುವನು ಎಂದಿರುವುದರಿಂದಾಗಿ ಅದು ಪ್ರಧಾನ ರಾಣಿಯನ್ನು ಪ್ರತ್ಯೇಕವಾಗಿಯೇ ಗುರುತಿಸಲಾಗುತ್ತಿತ್ತು. ಹಾಗೂ ಅವಳಿಗೆ ವಿಶೇಷ ರೀತಿಯ ಗೌರವ ನೀಡಲಾಗಿತ್ತು ಎಂದು ತಿಳಿಯಬಹುದು.[೧೨]

ಅಚ್ಯುತರಾಯನಿಗೆ ಹಲವು ಜನ ರಾಣಿಯರಿದ್ದರೆಂದು, ಆದರೆ ಅವರಾರು ಸಹ ವರದರಾಜಮ್ಮಳಷ್ಟು ಪ್ರಾಮುಖ್ಯತೆ ಪಡೆದಿರಲಾರರು. ಈಕೆ ರಾಜನ ಪ್ರೀತಿ ಪತ್ನಿಯಾಗಿದ್ದಳು. ಇವಳೊಂದಿಗೆ ರಾಜನು ಅನೇಕ ತೀರ್ಥಯಾತ್ರೆ, ಧಾರ್ಮಿಕ ಸೇವೆ ಮಾಡಿದ್ದು ಶಾಸನಗಳಿಂದ ಸಿಗುತ್ತದೆ. ಜೊತೆಗೆ ಇಲ್ಲಿ ರಾಣಿಯರ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ತಿಳಿಸುತ್ತದೆ. ಏಕೆಂದರೆ ವಿಜಯನಗರ ವೈಭವದಿಂದ ಮರೆದ ಸಾಮ್ರಾಜ್ಯವೆಂದಾಗ ಮೇಣೆಗಳಿಗೆ ಬಳಸಿದಂತಹ ಚಿನ್ನ ಮತ್ತು ಬೆಳ್ಳಿ ಇತರೇ ಅಂಶದಿಂದ ಇವರು ವೈಭೋಗದಿಂದ ಜೀವನ ನಡೆಸಿದರು ಎಂದು ಅರಿವಾಗುತ್ತದೆ. ಒಟ್ಟಿನಲ್ಲಿ ರಾಣಿಯರು ಆರ್ಥಿಕವಾಗಿ ಸಾಮಾಜಿಕವಾಗಿ ಉತ್ತಮ ಸ್ಥಾನಮಾನ ಪಡೆದು ಸಾಮ್ರಾಜ್ಯದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ ಸಂಗತಿ ಶ್ಲಾಘನೀಯವಾಗಿದೆ.

ಟಿಪ್ಪಣಿಗಳು

೧. ಎಂ.ವಿ. ಕೃಷ್ಣರಾವ್, ಎಂ. ಕೇಶವಭಟ್ಟ, ಕರ್ನಾಟಕದ ಇತಿಹಾಸ ದರ್ಶನ, ೧೯೭೦, ಪು.

೨. ದೇವರಕೊಂಡಾರೆಡ್ಡಿ, ಹಂಪಿ ಶಾಸನಗಳು ಸಂ.೩, ಶಾ.ಸಂ. ೩೪

೩. ಸರೋಜಿನಿ ಮಹಿಷಿ, ಕರ್ನಾಟಕದ ಕವಿಯಿತ್ರಿಯರು, ಪು. ೪೪೯-೪೫೦

೪. ದೇವರಕೊಂಡಾರೆಡ್ಡಿ, ಬಳ್ಳಾರಿ ಜಿಲ್ಲೆ ಸಂ.೧, ಪು. xxxiii-೬೩

೫. ಚನ್ನಬಸಪ್ಪ, ವಿನೋದಾ ಪಾಟೀಲ್, ವಿಜಯನಗರ ಹಂಪಿಯ ಶಾಸನಗಳು, ಪು. xviii-೩೦

೬. ಸಿ.ಎಸ್. ವಾಸುದೇವನ್, ವಿಜಯನಗರ ಅಧ್ಯಯನ, ಸಂ. ೬, ಪು. ೭

೭. ಚನ್ನಬಸಪ್ಪ, ವಿನೋದಾ ಪಾಟೀಲ್, ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ.. ೭, ಪು. ೭

೮. ವಸುಂಧರಾ ಫಿಲಿಯೋಬಾ, ಆಳಿದುಳಿದ ಹಂಪೆ, ಪು.

೯. ದೇವರಕೊಂಡಾರೆಡ್ಡಿ, ಹಂಪಿ ಶಾಸನಗಳು, ಪು. ೧೬

೧೦. ಕು. ವೀರಭದ್ರಪ್ಪ, ಶ್ರೀ ಕೃಷ್ಣದೇವರಾಯ, ಪು. ೧೪

೧೧. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಶನ್ಸ್, ಸಂ. ೯, ಭಾಗ ೨, ಪು. ೫೫೨

೧೨. ಕು. ವೀರಭದ್ರಪ್ಪ, ಶ್ರೀ ಕೃಷ್ಣದೇವರಾಯ, ಪು. ೧೫

೧೩. ವಿರೂಪಾಕ್ಷಿ ಪೂಜಾರಹಳ್ಳಿ, ಕೃಷ್ಣದೇವರಾಯನ ತಾಯಿ ನಾಗಲಾದೇವಿ ಚಾರಿತ್ರಿಕ ಹಿನ್ನೋಟ, ವಾಲ್ಮೀಕಿ ಬಂಧು, ಪು. ೧೬-೧೮

೧೪. ಜಿ.ಎಸ್. ದೀಕ್ಷಿತ್, ಇತರರು, ಕೃಷ್ಣದೇವರಾಯನ ಜೀವನ ಮತ್ತು ಸಾಧನೆ, ಪು. ೧೨

೧೫. ದೇವರಕೊಂಡಾರೆಡ್ಡಿ, ಹಂಪಿ ಶಾಸನಗಳು, ಪು. ೩೪

೧೬. ವಿರೂಪಾಕ್ಷಿ ಪೂಜಾರಹಳ್ಳಿ, ಕೃಷ್ಣದೇವರಾಯನ ತಾಯಿ ನಾಗಲಾದೇವಿ ಚಾರಿತ್ರಿಕ ಹಿನ್ನೋಟ, ವಾಲ್ಮೀಕಿ ಬಂಧು, ಪು. ೧೬-೧೮

೧೭. ಎಂ.ಎಂ. ಕಲಬುರ್ಗಿ, ಮಾರ್ಗ ೪, ಪು. ೪೨೫-೪೨೭

೧೮. ವಿರೂಪಾಕ್ಷಿ ಪೂಜಾರಹಳ್ಳಿ, ಕೃಷ್ಣದೇವರಾಯನ ತಾಯಿ ನಾಗಲಾದೇವಿ ಚಾರಿತ್ರಿಕ ಹಿನ್ನೋಟ, ವಾಲ್ಮೀಕಿ ಬಂಧು, ಪು. ೧೬-೧೮

೧೯. ಬಾ.ರಾ. ಗೋಪಾಲ್ ಇತರರು, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೪, ಪು. xxvii-೨೧೫

೨೦. ದೇವರಕೊಂಡಾರೆಡ್ಡಿ, ಕೊಪ್ಪಳ ಜಿಲ್ಲೆಯ ಶಾಸನಗಳು, ಪು. ೫೧, ೧೫೪, ೧೫೫, ೪೦೭

೨೧. ಅದೇ, ಪು. ೮೯, ೯೦, ೯೬

೨೨. ದೇವರಕೊಂಡಾರೆಡ್ಡಿ, ಕೊಪ್ಪಳ ಜಿಲ್ಲೆಯ ಶಾಸನಗಳು, ಪು. ೧೫೮-೧೫೯

೨೩. ಚನ್ನಬಸಪ್ಪ, ವಿನೋದಾ ಪಾಟೀಲ್, ಬಳ್ಳಾರಿ ಜಿಲ್ಲೆಯ ಶಾಸನಗಳು, ಪು. ೨೯, ೧೪೬

೨೪. ಪ್ರೊ. ಎಂ.ವಿ ಕೃಷ್ಣಪ್ಪ, ಎಚ್.ಜಿ. ತಾಳವಾರ, ವಿಜಯನಗರ ಅಧ್ಯಯನ, ಸಂ. ೬, ಪು.

೨೫. ದೇವರಕೊಂಡಾರೆಡ್ಡಿ, ಕೊಪ್ಪಳ ಜಿಲ್ಲೆಯ ಶಾಸನಗಳು, ಪು. ೧೧೮

೨೬. ದೇವರಕೊಂಡಾರೆಡ್ಡಿ, ಬಳ್ಳಾರಿ ಜಿಲ್ಲೆ ಶಾಸನ, ಪು. xxxvii-೧೫೮, ೧೫೯

೨೭. ಚೆನ್ನಕ್ಕ ಎಲಿಗಾರ, ವಿಜಯನಗರ ಅಧ್ಯಯನ, ಸಂ. ೧೦, ಪು. ೨೪೦

೨೮. ಚನ್ನಬಸಪ್ಪ, ವಿನೋದಾ ಪಾಟೀಲ್, ಬಳ್ಳಾರಿ ಜಿಲ್ಲೆಯ ಶಾಸನಗಳು, ಪು. ೮೧೪

೨೯. ವಿರೂಪಾಕ್ಷಿ ಪೂಜಾರಹಳ್ಳಿ, ಕೃಷ್ಣದೇವರಾಯನ ತಾಯಿ ನಾಗಲಾದೇವಿ ಚಾರಿತ್ರಿಕ ಹಿನ್ನೋಟ, ವಾಲ್ಮೀಕಿ ಬಂಧು, ಪು. ೧೬-೧೮

೩೦. ದೇವರಕೊಂಡಾರೆಡ್ಡಿ, ಹಂಪಿ ಶಾಸನಗಳು, ಸಂ. ೩, ಪು.

೩೧. ಕು. ವೀರಭದ್ರಪ್ಪ, ಶ್ರೀ ಕೃಷ್ಣದೇವರಾಯ, ಪು. ೩೧೪

೩೨. ದೇವರಕೊಂಡಾರೆಡ್ಡಿ, ಹಂಪಿ ಶಾಸನಗಳು, ಸಂ. ೩, ಪು. ೩೪

೩೩. ಅದೇ,

೩೪. ಕು. ವೀರಭದ್ರಪ್ಪ, ಶ್ರೀ ಕೃಷ್ಣದೇವರಾಯ, ೨೦೦೧, ಪು. ೧೪
೩೫. ಚನ್ನಬಸಪ್ಪ, ವಿನೋದಾ ಪಾಟೀಲ್, ಬಳ್ಳಾರಿ ಜಿಲ್ಲೆಯ ಶಾಸನಗಳು, ಸಂ. ೭, ಪು. ೪೧೪
೩೬. ಅದೇ, ಪು. ೧೫೧
೩೭. ಸಿ.ಟಿ.ಎಂ. ಕೊಟ್ರಯ್ಯ, ವಿಜಯನಗರ ಸಾಮ್ರಾಜ್ಯದ ಕೆರೆ ನೀರಾವರಿ ವ್ಯವಸ್ಥೆ, ಪು. ೯೫
೩೮. ಅದೇ, ಸಾಧನೆ, ಪು. ೧೦೩
೩೯. ಕು. ವೀರಭದ್ರಪ್ಪ, ಶ್ರೀ ಕೃಷ್ಣದೇವರಾಯ, ಪು. ೨-೨೫
೪೦. ಬಿ.ಎ. ವಿವೇಕ ರೈ, ಪ್ರವಾಸಿ ಕಂಡ ವಿಜಯನಗರ, ಪು. ೭೯
೪೧. ಎಂ. ಶಿವಶಂಕರ, ಚನ್ನಬಸಪ್ಪ ಎಸ್. ಪಾಟೀಲ್, ವಿಜಯನಗರ ಅಧ್ಯಯನ,, ಸಂ. ೨, ಪು. ೭೯
೪೨. ಸಿ. ಮಹದೇವ, ಕರ್ನಾಟಕ ಪುರಾತತ್ವ ಶೋಧ, ಪು. ೧೦೦
೪೩. ಕು. ವೀರಭದ್ರಪ್ಪ, ಶ್ರೀಕೃಷ್ಣದೇವರಾಯ, ಪು. ೨೪-೨೫
೪೪. ಜಿ.ಎಸ್. ದೀಕ್ಷಿತ್, ಶ್ರೀಕೃಷ್ಣದೇವರಾಯನ ಜೀವನ ಮತ್ತು ಸಾಧನೆ, ಪು. ೧೦೯
೪೫. ಜಿ.ಎಸ್. ದೀಕ್ಷಿತ್, ಶ್ರೀಕೃಷ್ಣದೇವರಾಯನ ಜೀವನ ಮತ್ತು ಸಾಧನೆ, ಪು. ೨೨೨
೪೬. ಜಿ.ಎಸ್. ದೀಕ್ಷಿತ್, ಶ್ರೀಕೃಷ್ಣದೇವರಾಯನ ಜೀವನ ಮತ್ತು ಸಾಧನೆ, ಪು. ೧೦೯
೪೭. ಕು. ವೀರಭದ್ರಪ್ಪ, ಶ್ರೀಕೃಷ್ಣದೇವರಾಯ, ಪು. ೨೨
೪೮. ಎಂ.ಎಂ. ಕಲಬುರ್ಗಿ, ಮಾರ್ಗ-೪, ಪು. ೪೨೬-೪೨೭
೪೯. ದೇವರಕೊಂಡಾರೆಡ್ಡಿ, ಹಂಪಿ ಶಾಸನಗಳು, ಸಂ. ೩, ಪು.
೫೦. ಚನ್ನಬಸಪ್ಪ, ವಿನೋದಾ ಪಾಟೀಲ್, ವಿಜಯನಗರ ಹಂಪಿ ಶಾಸನಗಳು, ಪು. ೫೦
೫೧. ಚನ್ನಬಸಪ್ಪ, ವಿನೋದಾ ಪಾಟೀಲ್, ಬಳ್ಳಾರಿ ಜಿಲ್ಲೆಯ ಶಾಸನಗಳು, ಪು.
೫೨. ಅದೇ, ಶಾ-೪೨೮, ಪು. ೨೨
೫೩. ದೇವರಕೊಂಡಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭, ಪು. ೩೬
೫೪. ಅದೇ, ಶಾ.ಸಂ. ೨೬೬, ೨೬೪, ೩೪೩
೫೫. ಅದೇ, ಪು. ೨೬೭
೫೬. ಅದೇ, ಪು. ೩೪೩
೫೭. ಸಿ. ಮಹದೇವ, ಕರ್ನಾಟಕ ಪುರಾತತ್ವ ಶೋಧ, ಪು. ೯೨-೯೩
೫೮. ಬಿ.ಎ. ವಿವೇಕ ರೈ, ಪ್ರವಾಸಿ ಕಂಡ ವಿಜಯನಗರ, ಪು. ೬೩
೫೯. ವಸುಂಧರಾ ಫಿಲಿಯೋಜಾರವರು ಅಭಿಪ್ರಾಯಪಟ್ಟಿರುವಂತೆ ಚಿನ್ನಾದೇವಿಯೂ ಡೊಂಬರಳಾಗಿದ್ದಳೆಂದು ಅದೇ ರೀತಿ ಐತಿಹ್ಯದ ಪ್ರಕಾರ ಕೃಷ್ಣದೇವರಾಯನ ಹೆಂಡತಿಯಾದ ಚಿನ್ನಿ ಅಥವಾ ಚಿನ್ನಾದೇವಿಯೂ ಡೊಂಬರವಳಾಗಿದ್ದಳು. ತನ್ನ ತಂದೆಯೊಡನೆ ರಾಜನ ಆಸ್ಥಾನದಲ್ಲಿ ನರ್ತಿಸುವಾಗ ಆಕೆಯನ್ನು ಕಂಡು ಮೋಹಿಸಿ ಮದುವೆಯಾದನೆಂದು ಹೇಳಲಾಗುತ್ತದೆ. ಏಕೆಂದರೆ ಡೊಂಬರು ನೃತ್ಯದಲ್ಲಿ ರೂಪದಲ್ಲಿ ಅತ್ಯಂತ ಚತುರೆಯಾಗಿದ್ದು ಇವರ ರೂಪಕ್ಕೆ ಅನೇಕ ರಾಜರು ಸಹ ಆಕರ್ಷಿಸಲ್ಪಡುತ್ತಿದ್ದ ರೆಂದು ಇದೆ ರೀತಿ ಕಂಪಿಲರಾಯನ ಕಿರಿಯ ರಾಣಿಯಾದ ರತ್ನಾಜಿಯು ಸಹ ಡೊಂಬರಳೆಂಬ ಐತಿಹ್ಯವಿದೆ. ಡೊಂಬರಳದಲ್ಲಿ ರತ್ನ, ಚಿನ್ನ ಇತರೆ ಹೆಸರುಗಳು ಸರ್ವಸಾಮಾನ್ಯವಾಗಿತ್ತು. ಆಧಾರಗಳು: ಶ್ರೀಮತಿ ಕೌಜಲಗಿ ನಿಂಗಮ್ಮ ಅಲೆಮಾರಿ ಸಮುದಾಯದ ಕಲಾವಿದೆಬ್ಬಳ ಅಧ್ಯಯನ, ಸಂ. ಜ್ಯೋತಿ ಡಿ.ಬಿ. 'ಡೊಂಬರ ಸಂಸ್ಕೃತಿ' ದೇವೇಂದ್ರಕುಮಾರ್ ಸಿ.
೬೦. ಜಿ.ಎಸ್. ದೀಕ್ಷಿತ್, ಶ್ರೀಕೃಷ್ಣದೇವರಾಯನ ಜೀವನ ಮತ್ತು ಸಾಧನೆ, ಪು. ೧೦೭

೬೧. ಕು. ವೀರಭದ್ರಪ್ಪ, ಶ್ರೀಕೃಷ್ಣದೇವರಾಯ, ಪು. ೨೨
೬೨. ರಾಬರ್ಟ್ ಸಿವೆಲ್, ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ, ೧೯೯೨, ಪು. ೩೮೬
೬೩. ಜಿ.ಎಸ್. ದೀಕ್ಷಿತ್, ಶ್ರೀಕೃಷ್ಣದೇವರಾಯನ ಜೀವನ ಮತ್ತು ಸಾಧನೆ, ಪು. ೧೦೭
೬೪. ತುಕಾರಾಮರಾವ್, ಹೊಸಪೇಟೆ, ೧೯೯೭, ಪು. ೧೯
೬೫. ರಾಬರ್ಟ್ ಸಿವೆಲ್, ಮರೆತು ಹೋದ ಮಹಾಸ್ರಾಮಜ್ಯ ವಿಜಯನಗರ, ೧೯೯೨, ಪು. ೧೦೭
೬೬. ಅದೇ, ಸಾಧನೆ, ಪು. ೧೦೭
೬೭. ಕು. ವೀರಭದ್ರಪ್ಪ, ಶ್ರೀಕೃಷ್ಣದೇವರಾಯ, ಪು. ೨೨
೬೮. ಅದೇ, ಸಾಧನೆ, ಪು. ೧೦೯
೬೯. ಎಂ.ಎಂ. ಕಲಬುರ್ಗಿ, ಮಾರ್ಗ-೪, ಪು. ೪೨೮
೭೦. ಚನ್ನಬಸಪ್ಪ, ವಿನೋದ ಪಾಟೀಲ್, ಬಳ್ಳಾರಿ ಜಿಲ್ಲೆ ಶಾಸನಗಳು, ಪು. ೫೦
೭೧. ದೇವರಕೊಂಡಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫, ಪು. ೨೭೦
೭೨. ದೇವರಕೊಂಡಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫, ಪು. ೨೬೬
೭೩. ದೇವರಕೊಂಡಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ಪು. xxxvi-೨೪೩
೭೪. ಎಂ.ವಿ ಪದ್ಮ, ವಿಜಯನಗರ ಅಧ್ಯಯನ, ಸಂ. ೧, ಪು. ೭೮
೭೫. ಬಿ.ಎ. ವಿವೇಕ ರೈ, ಪ್ರವಾಸಿ ಕಂಡ ವಿಜಯನಗರ, ಪು. ೧೬೪
೭೬. ಅದೇ, ಸಾಧನೆ, ಪು. ೧೦೯
೭೭. ಎಂ. ತುಕಾರಾಮರಾವ್, ಹೊಸಪೇಟೆ, ಪು. ೮
೭೮. ಸಿಂದಗಿ ರಾಜಶೇಖರ್, ವಿಜಯನಗರ ಅಧ್ಯಯನ, ಸಂ. ೧, ಪು. ೧೧೪
೭೯. ಸಿಂದಗಿ ರಾಜಶೇಖರ್, ವಿಜಯನಗರ ಅಧ್ಯಯನ, ಸಂ. ೧, ಪು. ೧೧೪
೮೦. ಎಂ. ರಾಮರಾವ್, ಶ್ರೀ ಕೃಷ್ಣದೇವರಾಯ, ಪು. ೧೪
೮೧. ಜಿ.ಎಸ್. ದೀಕ್ಷಿತ್ ಇತರರು, ಅದೇ ಸಾಧನೆ, ಪು. ೧೧೪
೮೨. ಎಚ್.ಎಲ್. ನಾಗೇಗೌಡ, ಪ್ರವಾಸಿ ಕಂಡ ಇಂಡಿಯಾ,ಪು.
೮೩. ಕು. ವೀರಭದ್ರಪ್ಪ, ಶ್ರೀಕೃಷ್ಣದೇವರಾಯ, ಪು. ೨೫
೮೪. ಪ್ರೊ. ಎಂ.ವಿ. ಸೀತಾರಾಮಯ್ಯ, ಬಿ.ಎಸ್.ಎನ್. ಆಚಾರ್ಯ, ಶ್ರೀಕೃಷ್ಣದೇವರಾಯನ ದಿನಚರಿ, ಪು. ೦೮
೮೫. ಕಾಶಿ ವಿಶ್ವನಾಥ ಶೆಟ್ಟಿ, ಕನ್ನಡ ಕವಿಯಿತ್ರಿಯರು, ಪು.
೮೬. ಎನ್. ಚಿನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ, ಪು. ೭೬
೮೭. ಅದೇ, ಸಾಧನೆ, ಪು. ೧೩, ೧೦೭, ೧೦೮, ೧೦೯
೮೮. ಕು. ವೀರಭದ್ರಪ್ಪ, ಶ್ರೀಕೃಷ್ಣದೇವರಾಯ, ಪು. ೧೮, ೧೯, ೨೨
೮೯. ಎಂ.ಎಂ. ಕಲಬುರ್ಗಿ, ಮಾರ್ಗ೪, ಪು. ೪೨೭
೯೦. ಅದೇ, ಸಾಧನೆ, ಪು. ೧೦೯
೯೧. ಎಂ.ಎಂ. ಕಲಬುರ್ಗಿ, ಮಾರ್ಗ೪, ಪು. ೪೨೭
೯೨. ದೇವರಕೊಂಡಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೩, ಪು. ೩೩೮
೯೩. ಸರೋಜಿನಿ ಮಹಿಷಿ, ಕರ್ನಾಟಕದ ಕವಿಯಿತ್ರಿಯರು, ಪು. ೪೪೯-೪೫೦
೯೪. ದೇವರಕೊಂಡಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೩, ಪು. ೧೮೩-೧೮೪

೯೫. ಕಾಶಿ ವಿಶ್ವನಾಥ, ಕನ್ನಡ ಕವಯಿತ್ರಿಯರು, ಪು.

೯೬. ಸಿಂದಗಿ ರಾಜಶೇಖರ್, ವಿಜಯನಗರ ಅಧ್ಯಯನ, ಸಂ. ೧, ಪು. ೨೧೯

೯೭. ಸರೋಜಿನಿ ಮಹಿಷಿ, ಕರ್ನಾಟಕದ ಕವಯಿತ್ರಿಯರು, ೧೯೭೫, ಪು. ೪೪೯-೪೫೧

೯೮. ಅದೇ, ಸಂ.೩, ಪು. ೨೮೪

೯೯. ಡಾ. ಚಿನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ, ಪು. ೧೩೨-೧೩೪

೧೦೦. ಎಸ್.ವೈ. ಸೋಮಶೇಖರ್, ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ, ಪು.೩೯

೧೦೧. ಅದೇ

೧೦೨. ಎಂ.ಎಲ್. ಶಿವಶಂಕರ್, ಚನ್ನಬಸಪ್ಪ ಎಸ್. ಪಾಟೀಲ, ವಿಜಯನಗರ ಅಧ್ಯಯನ, ಸಂ. ೩, ಪು. ೧೦೬

೧೦೩. ಸರೋಜಿನಿ ಮಹಿಷಿ, ಕರ್ನಾಟಕದ ಕವಯಿತ್ರಿಯರು, ೧೯೭೫, ಪು. ೪೫೦-೪೫೨

೧೦೪. ಸದಾನಂದ ಕನವಳ್ಳಿ, ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ, ೧೯೯೨, ಪು. ೧೯೬

೧೦೫. ದೇವರಕೊಂಡಾರೆಡ್ಡಿ, ಹಂಪಿ ಶಾಸನಗಳು ಸಂ. ೧, ಶಾ.ಸಂಖ್ಯೆ. ೭೭

೧೦೬. ದೇವರಕೊಂಡಾರೆಡ್ಡಿ, ತಮಿಳುನಾಡಿನ ಕನ್ನಡ ಶಾಸನಗಳು, ಸಂ. ೪, ಪು. ೨೧-೨೫

೧೦೭. ಎಂ.ವಿ. ಪದ್ಮ, ವಿಜಯನಗರ ಅಧ್ಯಯನ, ಸಂ.೧, ಪು. ೧೦೬

೧೦೮. ಅದೇ,

೧೦೯. ದೇವರಕೊಂಡಾರೆಡ್ಡಿ, ವಿಜಯನಗರ ಹಂಪಿ ಶಾಸನಗಳು, ಶಾ.ಸಂಖ್ಯೆ ೪೬೮

೧೧೦. ಸಿ.ಟಿ.ಎಂ. ಕೊಟ್ರಯ್ಯ, ವಿಜಯನಗರ ಕಾಲದ ನೀರಾವರಿ ಪದ್ಧತಿ, ಪು. ೧೮೦

೧೧೧. ದೇವರಕೊಂಡಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ ೭, ಪು. ೩೭೦

೧೧೨. ಸದಾನಂದ ಕನವಳ್ಳಿ, ಮರೆತು ಹೋಚ ಮಹಾಸಾಮ್ರಾಜ್ಯ ವಿಜಯನಗರ, ೧೯೯೨, ಪು. ೩೯೪- ೩೯೫

ಅಧ್ಯಾಯ ೫

ತುಳುವ ರಾಣಿಯರ ಸಾಂಸ್ಕೃತಿಕ ಕೊಡುಗೆಗಳು

ತುಳುವ ರಾಣಿಯರ ಸಾಂಸ್ಕೃತಿಕ ಕೊಡುಗೆಗಳು

ಪೀಠಿಕೆ

ತುಳುವ ರಾಣಿಯರು ಸಮಾಜದಲ್ಲಿ ವಿಶೇಷವಾದ ಸ್ಥಾನಮಾನವನ್ನು ಪಡೆದು, ಇವರು ಸಾಮ್ರಾಜ್ಯಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಹಲವು ಕೊಡುಗೆಗಳನ್ನು ನೀಡಿದ್ದಾರೆ. ಇದು ಮುಖ್ಯವಾಗಿ ಸಾಮ್ರಾಜ್ಯದ ಉನ್ನತಿಗಾಗಿ, ಕುಟುಂಬವರ್ಗದವರಿಗಾಗಿ, ವೈಯಕ್ತಿಕವಾಗಿ, ಪ್ರಜೆಗಳಿಗಾಗಿ ಹೀಗೆ ಹಲವಾರು ವಿಚಾರವಾಗಿ ಇವರು ಹೆಚ್ಚಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ತುಳುವ ಅರಸರ ರಾಣಿಯರು ಸಾಮ್ರಾಜ್ಯದಲ್ಲಿ ಕೆಲವೊಂದು ಕ್ಷೇತ್ರದಲ್ಲಿ ಭಾಗವಹಿಸಿ ನೀಡಿದ ಕೊಡುಗೆಗಳನ್ನು ಈ ಅಂಶಗಳ ಮೂಲಕ ಗುರುತಿಸಬಹುದು. ೧. ರಾಜಕೀಯ, ೨. ಧಾರ್ಮಿಕ, ೩. ಸಾಹಿತ್ಯ, ೪. ಕಲೆ ಮತ್ತು ವಾಸ್ತುಶಿಲ್ಪ ಇವುಗಳಲ್ಲಿ ಇವರು ನೀಡಿದಂತಹ ಕೊಡುಗೆಗಳ ಕುರಿತು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ರಾಣಿಯರು ಕೇವಲ ಪರದೇ ಹಿಂದೆ ಇರದೇ ತಮ್ಮ ಜೀವನವನ್ನು ವೈವಿಧ್ಯಮವಾಗಿ ರೂಪಿಸಿಕೊಂಡಿದ್ದು ಹಲವಾರು ಚಟುವಟಿಕೆಗಳಲ್ಲಿ ಆಸಕ್ತಿ ಭಾವಹಿಸುತ್ತಿದ್ದರು. ರಾಣಿಯರು ಕೇವಲ ಅಂತಃಪುರಕ್ಕೆ ಸೀಮಿತವಾಗಿರದೇ ಸಕಲ ಕಲೆಗಳಲ್ಲಿ ಪರಿಣಿತರಾಗಿ ಅರಸರೊಂದಿಗೆ ಮತ್ತು ನೇರವಾಗಿ ಹಲವಾರು ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಎಂಬುದನ್ನು ಈ ಮುಂದಿನ ಅಂಶಗಳಿಂದ ಗುರುತಿಸಬಹುದು.

೪.೧. ತುಳುವ ರಾಣಿಯರ ರಾಜಕೀಯ ಸೇವೆ

ವಿಜಯನಗರ ತುಳುವ ಸಾಮ್ರಾಜ್ಯದ ಆಡಳಿತಾವಧಿಯಲ್ಲಿ ಸಾಮ್ರಾಜ್ಯದ ಗಡಿಯೂ ತುಂಗಭದ್ರೆಯಿಂದ ಪಶ್ಚಿಮಕ್ಕೆ ಇದ್ದ ದೇಶವನ್ನೆಲ್ಲಾ ಆವರಿಸಿತ್ತು. ಈ ಬಲಿಷ್ಠ ರಾಜ್ಯದ ಪ್ರಭಾವ ದಕ್ಷಿಣದ ಶ್ರೀಲಂಕದವರೆಗೂ ಈಶಾನ್ಯದಲ್ಲಿ ತೆಲಂಗಾಣ ಒರಿಯದವರೆಗೂ ಹರಡಿತ್ತು.[೧] ಈ ವಂಶದವರು ಯುದ್ಧಗಳಿಗೆ ಹೆಚ್ಚು ಮಹತ್ವ ನೀಡುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಯುದ್ಧ ಇಲ್ಲದೇ ಯಾವುದೇ ಪ್ರಾಂತ್ಯ, ರಾಜ್ಯಗಳನ್ನು ವಶಪಡಿಸಿಕೊಳ್ಳುವುದು ಅಸಾಧ್ಯದ ಮಾತು. ಇಂಥ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯವು ಇಷ್ಟು ವಿಸ್ತಾರ ರಾಜ್ಯ ಸ್ಥಾಪನೆ ಮಾಡಿರುವುದು ಇಲ್ಲಿನ ರಾಜ್ಯದ ಆಡಳಿತ ಶಿಸ್ತು, ರಾಜನೀತಿ, ತಂತ್ರಗಾರಿಕೆ ಇತರೇ ಅಂಶಗಳಿಂದ ಎಂಬುದು ಸ್ಪಷ್ಟವಾಗುತ್ತದೆ.

ವಿಜಯನಗರದ ತುಳುವ ವಂಶದಲ್ಲಿ ರಾಣಿಯರು ರಾಜಕೀಯದಲ್ಲಿ ಪಾಲ್ಗೊಳ್ಳುತ್ತಿದ್ದರು ಎಂಬುದಕ್ಕೆ ಸಾಹಿತ್ಯ ಆಧಾರಗಳಿಂದ, ಶಾಸನಗಳಿಂದ, ವಿದೇಶಿಯರ ಬರವಣಿಗೆಯಿಂದ ತಿಳಿದು ಕೊಳ್ಳಬಹುದು. ವಿಜಯನಗರ ಕಾಲದಲ್ಲಿ ರಾಣಿಯರು ರಾಜಕೀಯದಲ್ಲಿ ಪಾಲ್ಗೊಳ್ಳುತ್ತಿದ್ದರು ಎಂಬುದಾಗಿ

ಆಧಾರಗಳು ಸ್ಪಷ್ಟಪಡಿಸುತ್ತವೆ. ರಾಣಿಯರು ನೇರವಾಗಿ ಇಲ್ಲವೇ ಪರೋಕ್ಷವಾಗಿ ಪಾಲ್ಗೊಂಡ ಬಗ್ಗೆ ತಿಳಿದುಬರುತ್ತದೆ. ಯುದ್ಧಕ್ಕೆ ಹೊರಡುವಾಗ ಪೂರ್ವ ತಯಾರಿಕೆಯೊಂದಿಗೆ ಅವಶ್ಯಕತೆಗಳುಳ್ಳ ಅನೇಕ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು ಎಂಬುದಾಗಿ ಪ್ರಾಚೀನ ಕಾಲದಿಂದಲ್ಲೂ ಸಹ ತಿಳಿದುಬರುತ್ತದೆ. ಮುಖ್ಯವಾಗಿ ವ್ಯಾಪಾರಿಗಳು, ಅಡುಗೆಯವರು, ಅಗಸರು ಇತರ ಕೂಲಿಕಾರರು ಮನೋರಂಜನೆಗಾಗಿ ಗಾಯಕರು, ವಾದಕರು, ಗಾಯಗೊಂಡವರಿಗೆ ವೈದ್ಯರ ಉಪಚಾರದ ವ್ಯವಸ್ಥೆ ಎಲ್ಲವೂ ಏರ್ಪಡಾಗಿರುತ್ತಿತ್ತು. ಇದು ಮುಖ್ಯವಾಗಿ ದೀರ್ಘಕಾಲ ದಿಗ್ವಿಜಯಗಳ ಸಂದರ್ಭದಲ್ಲಿ ಕೆಲವೊಮ್ಮೆ ರಾಣಿಯರು ಜೊತೆಯಾಗಿದ್ದು ರಾಜರಿಗೆ ಪ್ರೋತ್ಸಾಹ ನೀಡುತ್ತಿದ್ದರು. ಉದಾ: ೧ನೇ ಅಮೋಘವರ್ಷ ನೃಪತುಂಗನು ಹುಟ್ಟಿದುದು ಆತನ ತಂದೆ ಗೋವಿಂದನು ಮಧ್ಯ ಇಂಡಿಯಾದಲ್ಲಿ ದಿಗ್ವಿಜಯದಲ್ಲಿದ್ದಾಗ ಎಂಬುದು ಸ್ಮರಿಸಬಹುದು.[೨] ವಿಜಯನಗರ ಕಾಲದಲ್ಲಿಯೂ ಸಹ ರಾಣಿಯರು ರಾಜರೊಂದಿಗೆ ಯುದ್ಧದಲ್ಲಿ ಪಾಲ್ಗೊಳ್ಳುತ್ತಿದ್ದರು ಎಂಬುದಕ್ಕೆ ನ್ಯೂನಿಜ್‌ನ ವಿವರಣೆ, ನಂಜುಂಡ ಕವಿಯ 'ರಾಮನಾಥ ಚರಿತೆ', ವಿರೂಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ'ದಲ್ಲಿಯೂ ಕಾಣಬಹುದು.[೩]

ಕೃಷ್ಣದೇವರಾಯನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲದೇವಿಯರು ಅನೇಕ ಯುದ್ಧಗಳಲ್ಲಿ ಪಾಲ್ಗೊಂಡು ರಾಜರಿಗೆ ಪ್ರೋತ್ಸಾಹಿಸುತ್ತಿದ್ದರು. ಕ್ರಿ.ಶ. ೧೫೧೫ರ ಕೊಂಡವೀಡು ಹಾಗೂ ಮತ್ತಿತರ ಕೋಟೆಗಳನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ರಾಣಿಯರು ಜೊತೆಯಲ್ಲಿದ್ದರು. ಈ ವಿಜಯದ ನೆನಪಿಗಾಗಿ ರಾಣಿಯರೊಂದಿಗೆ ರಾಜನು ತಿರುಪತಿಗೆ ಭೇಟಿ ನೀಡಿ ತಿರುವೇಂಗಳನಾಥ ಸ್ವಾಮಿಗೆ ದಾನದತ್ತಿಗಳನ್ನು ನೀಡಿದ್ದರು.[೪]

ರಾಯಚೂರು ದಂಡಯಾತ್ರೆಯೂ ವಿಜಯನಗರದ ಯುದ್ಧಗಳಲ್ಲಿಯೇ ಪ್ರತಿಷ್ಠಿತ ವಿಷಯವಾಗಿತ್ತು. ಬುಕ್ಕರಾಯನ ಕಾಲದಿಂದಲ್ಲೂ ಸಹ ಗೆಲ್ಲಲ್ಲೂ ಪ್ರಯತ್ನಿಸಿದ್ದರು. ತುಳುವ ವಂಶದ ಶ್ರೀಕೃಷ್ಣದೇವರಾಯನ ಕಾಲದಲ್ಲಿ ಇದನ್ನು ಗೆಲ್ಲಲಾಯಿತು. ಇದು ದೀರ್ಘಕಾಲದ ಹೋರಾಟವಾಗಿತ್ತು. ಈ ಸಂದರ್ಭದಲ್ಲಿ ರಾಣಿಯರು ಸಹ ಯುದ್ಧದಲ್ಲಿ ಪಾಲ್ಗೊಂಡಿದ್ದರೂ ಇವರನ್ನು ಮುಚ್ಚಿದ ಪಲ್ಲಕ್ಕಿಯಲ್ಲಿ ಕರೆದ್ಯೊಯಲಾಯಿತು ಎಂದು ನ್ಯೂನಿಜ್‌ನು ತಿಳಿಸುತ್ತಾನೆ. ಕ್ರಿ.ಶ. ೧೫೨೦ರಲ್ಲಿ ಭೀಕರ ಕಾಳಗದೊಂದಿಗೆ ಯುದ್ಧ ನಡೆದು ಬಿಜಾಪುರದ ಇಸ್ಮಾಯಿಲ್‌ನನ್ನು ಸೋಲಿಸಲಾಯಿತ್ತು. ಈ ಸಂದರ್ಭದ ಸವಿನೆನಪಿಗಾಗಿ ಚಿನ್ನಾದೇವಿಯು ಗೋರಂಟ್ಲು ಗ್ರಾಮದ ದೇವಿಯ ಗುಡಿಯನ್ನು, ಚಿನ್ನಾಂಬದೇವಿ ನಿರ್ಮಿಸಿದ್ದಳೆಂದು ಈಗಲೂ ಸ್ಥಳೀಯ ಪ್ರತೀತಿಯಾಗಿದೆ.[೫]

ಕೆಲವೊಂದು ಸಂದರ್ಭದಲ್ಲಿ ರಾಣಿಯರು ರಾಜಕೀಯ ಆಡಳಿತದಲ್ಲಿ ನೇರವಾಗಿ ಪಾಲ್ಗೊಳ್ಳು ತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿ ಕೃಷ್ಣದೇವರಾಯನ ೩ನೇ ರಾಣಿಯಾದ ಒರಿಸ್ಸಾದ ರಾಜಪುತ್ರಿ ಜಗಮ್ಮೋಹಿನಿಯು ಆಂಧ್ರ ದೇಶದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಳೆಂದು ಕೆಲವು ಆಧಾರಗಳಿಂದ ಸ್ಪಷ್ಟವಾಗುತ್ತದೆ.[೬] ಜೊತೆಗೆ ಅಚ್ಯುತನ ರಾಣಿಯಾದ ಓದುವ ತಿರುಮಲದೇವಿಯೂ ಕೂಡ ಮಧುರಾ ದಂಡಯಾತ್ರೆಯಲ್ಲಿ ಪಾಲ್ಗೊಂಡಿದ್ದುದಾಗಿ ತಿಳಿಯುತ್ತದೆ.[೭] ದಂಡಯಾತ್ರೆಯಿಂದ ಮರಳಿದ ರಾಯನನ್ನು ಧೂಪದಾರತಿ ಮುತ್ತಿನಾರತಿಗಳಿಂದ ಬೆಳಗಿ ಸ್ವಾಗತಿಸುತ್ತಿದ್ದವರು ರಾಣಿಯರು. ಇದು ರಾಜನ ದಿಗ್ವಿಜಯ

ಗಳಿಂದ ಸುರಕ್ಷಿತವಾಗಿ ಮರಳಿದ ಸಂತಸವನ್ನು ಸೂಚಿಸುವ ಸಂಕೇತದ ಪದ್ಧತಿ ಎನ್ನಬಹುದು. ರಾಣಿಯರು ಅರಮನೆಯ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರೆಂದು ಮನುಚರಿತ್ರೆಯಲ್ಲಿ ರಾಯನು ಹೇಳಿಕೊಂಡಿದ್ದಾನೆ.[೮]

ಇದಲ್ಲದೇ ಅರಮನೆಯಲ್ಲಿ ಅನೇಕ ಬಗೆಯ ದೈಹಿಕ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಅದರಲ್ಲಿ ದ್ವಂದ್ವ ಯುದ್ಧವು ಒಂದು. ಈ ಕುಸ್ತಿ ಆಟವು ಒಂದು ದೊಡ್ಡ ವಿಧಾನ. ಇದು ರಾಜಾಶ್ರಯ ದಿಂದ ಮನ್ನಣೆ ಪಡೆದಿತ್ತು. ಇದರಲ್ಲಿ ಒಬ್ಬರಿಗೊಬ್ಬರು ಸವಾಲು ಹಾಕುತ್ತಾರೆ. ಆಗ ರಾಜ ಅವರಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟು ದ್ವಂದ್ವ ಯುದ್ಧಕ್ಕೆ ಬಿಡುತ್ತಾರೆ. ಅವರಿಗೆ ಸಹಾಯಕರಾಗಿ ಇರುತ್ತಾರೆ. ಆ ಯುದ್ಧಗಳು ಅಳತೆಗೆ ತಕ್ಕಂತೆ ಇರುವುದು, ಹೋರಾಳುಗಳು ಒಂದೇ ಚಡ್ಡಿ ಧರಿಸಿ ನಗು ಮುಖದಿಂದ ಅಖಾಡಕ್ಕೆ ಇಳಿಯುತ್ತಾರೆ. ರಾಜನೂ ಅವನ ಪರಿವಾರದವರು ಈ ಯುದ್ಧವನ್ನು ವೀಕ್ಷಿಸಲು ಬರುತ್ತಾರೆ ಎಂಬು ಬಾರ್ಬೋಸ್ ವಿವರಿಸಿದ್ದಾನೆ.[೯] ಇದರಿಂದಾಗಿ ಅಂದು ರಾಣಿಯರು ಸಹ ರಾಜರೊಂದಿಗೆ ಅನೇಕ ಕ್ರೀಡಾ ಸಂಸ್ಕೃತಿಕ ಚಟುವಟಿಕೆಗಳಲ್ಲಿ ಪ್ರೋತ್ಸಾಹ ನೀಡುತ್ತಿದ್ದರು ಎಂಬುದನ್ನು ಸೂಚಿಸುತ್ತದೆ. ಒಟ್ಟಿನಲ್ಲಿ ರಾಣಿಯರು ಇಲ್ಲಿ ನೇರವಾಗಿ ಹಾಗೂ ಪರೋಕ್ಷವಾಗಿ ಯುದ್ಧದಲ್ಲಿ ಪಾಲ್ಗೊಂಡ ಬಗ್ಗೆ ರಾಜಕೀಯ ಆಡಳಿತದಲ್ಲಿಯೂ ಪಾಲ್ಗೊಳ್ಳುತ್ತಿದ್ದರೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ.

೪.೨. ತುಳುವ ರಾಣಿಯರ ಧಾರ್ಮಿಕ ಕೊಡುಗೆ

ವಿಜಯನಗರ ಸ್ಥಾಪನೆಯಾದದ್ದು ಧರ್ಮದ ತಳಹದಿಯ ಮೇಲೆ ಎಂದು ಹೇಳಲಾಗುತ್ತದೆ. ಈ ಕಾಲದಲ್ಲಿ ಎಲ್ಲಾ ಧರ್ಮಗಳು ಸಹ ಪ್ರಮುಖ ಸ್ಥಾನ ಪಡೆದಿದ್ದವು. ಮುಖ್ಯವಾಗಿ ಜೈನ, ಬೌದ್ಧ, ಶೈವ, ವೈಷ್ಣವ, ಮುಸ್ಲಿಂ, ಕ್ರೈಸ್ತ ಹೀಗೆ ಎಲ್ಲಾ ಧರ್ಮಗಳು ಪ್ರಾಮುಖ್ಯತೆ ಪಡೆದಿದ್ದರೂ ಸಹ ವೈಷ್ಣವ ಧರ್ಮವು ಎಲ್ಲಾ ಧರ್ಮಗಳಿಗಿಂತಲೂ ಹೆಚ್ಚು ರಾಜಾಶ್ರಯ ಪಡೆದಿತ್ತು. ಸಾಳುವ, ತುಳುವ, ಅರವೀಡು ಈ ಮೂರು ವಂಶಗಳು ಸಹ ವೈಷ್ಣವ ಧರ್ಮಕ್ಕೆ ಪ್ರಾಮುಖ್ಯತೆ ನೀಡಿದ್ದವು. ವೈಷ್ಣವ ಧರ್ಮದವರು ಮುಖ್ಯವಾಗಿ ವಿಷ್ಣುವಿನ ಅವತಾರಗಳಾದ ವೆಂಕಟೇಶ್ವರ, ಹರಿಕೃಷ್ಣ, ಪುರುಷೋತ್ತಮ, ನಾರಾಯಣ, ಮಾಧವ, ಲಕ್ಷ್ಮೀಯವರನ್ನು ಪೂಜಿಸುವವರು. ರಾಮಾನುಜಚಾರ್ಯರಿಂದ ಈ ಧರ್ಮ ಹೆಚ್ಚು ಪ್ರಾಮುಖ್ಯತೆ ಗಳಿಸಿತು.[೧೦]

ಕ್ರಿ.ಶ. ೧೫ ಮತ್ತು ೧೬ನೇ ಶತಮಾನದಲ್ಲಿ ವೈಷ್ಣವ ಧರ್ಮವು ಹೆಚ್ಚು ಪ್ರಾಮುಖ್ಯತೆ ಪಡೆದು ಕರ್ನಾಟಕದ ಜನತೆಯಲ್ಲಿ ಸ್ವಧರ್ಮ ಜಾಗೃತಿ ಮೂಡಿಸಿತ್ತು. ವಿಜಯನಗರದ ಅರಸರು ಅರಸಿಯರು ಸಹ ಹೆಚ್ಚಾಗಿ ದೈವಭಕ್ತಿಯುಳ್ಳವರಾಗಿದ್ದರು.[೧೧] ತುಳುವ ವಂಶದ ರಾಣಿಯರು ಹೆಚ್ಚಾಗಿ ತಮ್ಮನ್ನು ತಾವು ತೊಡಗಿಸಿಕೊಂಡದ್ದು ಧಾರ್ಮಿಕ ಕ್ಷೇತ್ರವಾಗಿದೆ. ರಾಣಿಯರು ಅನೇಕ ತೀರ್ಥಯಾತ್ರೆ, ದೇವಾಲಯಗಳ ನಿರ್ಮಾಣ, ದಾನದತ್ತಿ ಹೀಗೆ ಹಲವಾರು ಚಟುವಟಿಕೆಗಳನ್ನು ಧಾರ್ಮಿಕ ಕಾರ್ಯಗಳಿಗಾಗಿ ಮಾಡುತ್ತಿದ್ದರು. ಈ ಬಗ್ಗೆ ಶಾಸನಗಳಿಂದ ದೇವಾಲಯಗಳಿಂದ, ಸಾಹಿತ್ಯ ಕೃತಿಗಳಿಂದಲೂ ಹೆಚ್ಚಿನ ಮಾಹಿತಿ ಸಿಗುತ್ತದೆ.

ಈ ರಾಣಿಯರು ಅನೇಕ ದೇವಾಲಯಗಳಿಗೆ ದಾನದತ್ತಿ ನೀಡಿದ್ದಾರೆ. ಶ್ರೇಯಸ್ಸು, ಯಶಸ್ಸು,

ಆಯುಷ್ಯ ಹೀಗೆ ಕಲ ಸಂಪತ್ತು ಸಮ್ಮುದ್ಧಿಗಳಿಂದ ಜೀವನ ಕೂಡಿರುವುದೆಂದು ಜನ ಅಂದು ನಂಬಿದ್ದರು. ರಾಣಿಯರು, ಅರಸರು, ಸಾಮಂತರು, ಜನಸಾಮಾನ್ಯರು ಹೀಗೆ ಪ್ರತಿಯೊಬ್ಬರು ಸಹ ಧಾರ್ಮಿಕ ಕ್ಷೇತ್ರದಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದರು. ಜೊತೆಗೆ ಈ ರೀತಿ ಹಬ್ಬ, ಉತ್ಸಾಹಗಳು, ಜಾತ್ರೆ ಪೂಜೆ ಈ ರೀತಿ ತೊಡಗುವುದರಿಂದ ಎಲ್ಲರೊಂದಿಗೆ ಅನ್ಯೂನ್ಯತೆ ಏರ್ಪಡುತ್ತಿದ್ದು, ಜನರಲ್ಲಿ ಎಲ್ಲರೂ ಒಂದೇ ಎನ್ನುವ ಮನೋಭಾವನೆ ಬೆಳೆಯುತ್ತಿತ್ತು. ಇದು ಮುಖ್ಯವಾಗಿ ರಾಜಕುಟುಂಬದ ಮೂಲಕ ಹೆಚ್ಚಾಗಿ ಈ ರೀತಿ ಧಾರ್ಮಿಕ ಕಾರ್ಯಗಳು ನಡೆಯುತ್ತಿದ್ದರಿಂದಾಗಿ ಇವರು ಸಮಾಜಕ್ಕೆ ಮಾದರಿಯಾಗಿದ್ದರು.

ರಾಣಿಯರು ತಾವು ಧಾರ್ಮಿಕ ಕ್ಷೇತ್ರಗಳಿಗೆ ಕಾಣಿಕೆಗಳನ್ನು ಸಲ್ಲಿಸುವುದರ ಮೂಲಕ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ತುಳುವ ವಂಶಕ್ಕೆ ಧಾರ್ಮಿಕ ಅಸ್ತಿಭಾರ ಹಾಕಿದ ಮೊದಲ ರಾಣಿಯರಲ್ಲಿ ಬುಕ್ಕಮ್ಮಳೆಂದು ತಿಳಿದುಬರುತ್ತದೆ. ಕ್ರಿ.ಶ. ೧೫೧೦ರಲ್ಲಿ ರಾಣಿಯು ಮುದ್ದನ್ನಯಹಳ್ಳಿಯನ್ನು ವಿರೂಪಾಕ್ಷ ದೇವರ ಸೇವೆಗಾಗಿ ತಿರುಮಲಭದ್ರರ ಮಗ ಸಾಯಿಭಟ್ಟನಿಗೆ ಕೊಟ್ಟಿದ್ದು ರಾಣಿಯರಲ್ಲಿ ಮೊದಲನೆಯದಾಗಿ ಪರಿಗಣಿಸಬಹುದು.[೧೨] ನೇರವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಗುರುತಿಸಿಕೊಂಡ ರಾಣಿಯರೆಂದರೆ ತಿರುಮಲಾ ದೇವಿ, ಚಿನ್ನಾದೇವಿ, ವರದದೇವಿ, ಓದುವ ತಿರುಮಲಮ್ಮರವರು. ಇವರು ದಾನದತ್ತಿ ಕೊಟ್ಟಿರುವುದನ್ನು ಈ ರೀತಿ ನೋಡಬಹುದು. ಈ ಮೇಲೆ ನೀಡಿದ ದಾನದತ್ತಿಗಳಲ್ಲದೆ ಬುಕ್ಕಾಜಮ್ಮಳ ಹೆಸರಿನಲ್ಲಿ ವಿರೂಪಾಕ್ಷ ದೇವರ ದೇವಸ್ಥಾನದ ಪಶ್ಚಿಮಕ್ಕೆ ಸೋಮಣ್ಣನಾಯಕನ ಗೋಪುರದಲ್ಲಿ ಬುಕ್ಕೇಶ್ವರ ದೇವರ ಸಿಂಹಾಸನವನ್ನು ಸ್ಥಾಪಿಸಿ ದೇವರ ಸೇವೆಗೆ ದೊಂಡವಡೆ ಗ್ರಾಮವನ್ನು ನೀಡಿದ ಅಂಶ ಕಂಡುಬರುತ್ತದೆ. ಇದು ಮೊಮ್ಮಗನಾದ ಅಚ್ಯುತರಾಯನು ಹಿರಿಯರ ಮೇಲೆ ಇರುವ ಭಕ್ತಿಯನ್ನು ಈ ಮೂಲಕ ತೋರ್ಪಡಿಸುತ್ತಿದ್ದರು.[೧೩]

ತಿರುಮಲ ದೇವಿಯು ಕ್ರಿ.ಶ. ೧೫೧೮ರಲ್ಲಿ ವಿಜಯನಗರದ ಬಳಿ ಇದ್ದ ಕುಮ್ಮರ ಗುಂಟೆ ಎಂಬ ಭೂಮಿಯನ್ನು ವಿಜಯನಗರದ ಅಜನ ಗಿರಿಯ ಕರಿಯ ತಿರುವೆಂಗಳನಾಥನಿಗೆ ಭೂದಾನ ನೀಡುವುದರ ಮೂಲಕ ತನ್ನ ಮಗನಾದ ತಿರುಮಲ ಮಹಾರಾಯನಿಗೆ ಪುಣ್ಯವಾಗಬೇಕೆಂದು ನೀಡಿರುವುದು ಸ್ಪಷ್ಟ ವಾಗಿರುತ್ತದೆ.[೧೪]

ಜೊತೆಗೆ ಯುದ್ಧಗಳಲ್ಲಿ ಗೆದ್ದ ಖುಷಿಗಾಗಿಯೂ ಸಹ ರಾಣಿಯರು ತೀರ್ಥಯಾತ್ರೆ ಗೊಳ್ಳುತ್ತಿದುದ್ದು ಸರ್ವಸಾಮಾನ್ಯವಾಗಿತ್ತು. ಈ ಸಂದರ್ಭದಲ್ಲಿ ಕ್ರಿ.ಶ. ೧೫೧೫ ಅಕ್ಟೋಬರ್ ೨೫ ಒರಿಸ್ಸಾ ಗೆದ್ದ ಉದ್ದೇಶಕ್ಕಾಗಿ ಅಮರೇಶ್ವರ ದೇವರ ಸನ್ನಿಧಿಯಲ್ಲಿ ರಾಣಿಯರಾದ ತಿರುಮಲದೇವಿ, ಚಿನ್ನಾದೇವಿರೊಂದಿಗೆ ತುಲಾಭಾರ ಮಾಡಿಸಿರುತ್ತಾರೆ.[೧೫] ಹಾಗೆಯೇ ೧೫೨೧ರಲ್ಲಿಯು ಸಹ ರಾಯಚೂರು ಹಾಗೂ ಸುತ್ತಮುತ್ತಲಿನ ಪ್ರದೇಶವನ್ನು ಗೆದ್ದ ಸವಿನೆನಪಿಗಾಗಿ ಕೃಷ್ಣಾನದಿ, ಭೀಮಾನದಿ ಸಂಗಮದಲ್ಲಿ ಚಿನ್ನಾದೇವಿ ಗೋದಾನ ಮಾಡಿದರೇ, ತಿರುಮಲಾದೇವಿಯು ಕನಕ ದಾನವನ್ನು ಮಾಡಿದಳು. ಜೊತೆಗೆ ಅರಸ ಕೃಷ್ಣದೇವರಾಯನು ರತ್ನಧೇನು ಮಹಾದಾನ ಮಾಡಿದನು. ಇದು ಅಂದಿನ ಈ ಮೂವರು ಸಹ ಸರ್ವಸಮಾನ ಧಾರ್ಮಿಕ ಭಕ್ತಿವುಳ್ಳವರಾಗಿದ್ದರೆಂದು ತಿಳಿದುಬರುತ್ತದೆ.[೧೬]

ರಾಣಿ ನಾಗಲಾದೇವಿ ಹೆಸರಿನಲ್ಲಿ ಅನೇಕ ಧಾರ್ಮಿಕ ಕಾರ್ಯಗಳನ್ನು ಪುತ್ರ ಕೃಷ್ಣದೇವರಾಯನು ನೀಡಿದನು. ಕ್ರಿ.ಶ. ೧೫೧೨ ವಿಠ್ಠಲದೇವರಿಗೆ, ಕ್ರಿ.ಶ. ೧೫೧೩ ಕಾಳಿಹಸ್ತೀಶ್ವರ ದೇವರಿಗೆ, ಕ್ರಿ.ಶ. ೧೫೧೩ ರಲ್ಲಿ ವಿರೂಪಾಕ್ಷ ದೇವರಿಗೆ ಮೂರು ಗ್ರಾಮಗಳನ್ನು ದಾನ ನೀಡಿದನು. ಹಾಗೆಯೇ ವರದರಾಜ ಸ್ವಾಮಿಗೆ ಪುಣ್ಯಕೋಟಿ ವಿಮಾನಕ್ಕೆ ಲೋವೆಯಿಂದ ಕಳಸದವರೆಗೂ ಅಪರಂಜಿ ಚಿನ್ನದ ಹೊದಿಕೆ ಹಾಕಿಸಿದನು. ಹಾಗೆಯೇ ತಾಯಿ ಹೆಸರಿನಲ್ಲಿ ಕ್ರಿ.ಶ. ೧೫೧೮ರಲ್ಲಿ ನಾಗೇಂದ್ರನಾಥ ಎಂಬ ದೇವಾಲಯ ನಿರ್ಮಿಸಿದನು. ಇದು ಹಿರಿಯರಿಗೆ ನೀಡಿದಂತಹ ಭಕ್ತಿ ಗೌರವದ ವಿವರಗಳನ್ನು ತಿಳಿಸುತ್ತದೆ.[೧೬]

ಅಂದು ಧಾರ್ಮಿಕ ಕಾರ್ಯಚಟುವಟಿಕೆಗಳಿಗೆ ಹೆಚ್ಚು ವೆಚ್ಚ ಬೇಕಾಗುತ್ತಿತ್ತು. ಈ ವೆಚ್ಚವನ್ನು ರಾಜಕುಟುಂಬವು ನೀಡುತ್ತಿದ್ದರೆಂದು ಮೇಲಿನ ಸಂಗತಿಯು ಸ್ಪಷ್ಟಪಡಿಸುತ್ತದೆ. ಇವರು ದೇವಾಲಯಗಳ ನಿರ್ಮಾಪಕರು ಹಾಗೂ ದಾನಿಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ವೈಷ್ಣವ ಧರ್ಮವು ಅಂದು ಶ್ರೀಮಂತ ಸಂಸ್ಥೆಗಳಾಗಿ ಮಾರ್ಪಟಿದ್ದರಿಂದ ಸಾಂಪ್ರದಾಯಿಕ ಪೂಜಾ ಪದ್ಧತಿಗಳು ಜೊತೆಗೆ ಪಕ್ಷೋತ್ಸವ, ಮಸೋತ್ಸವ, ಕಲ್ಯಾಣೋತ್ಸವ, ಜಾತ್ರೆ ಹಬ್ಬ, ಉತ್ಸವಗಳು ಇತ್ಯಾದಿ ವೈಭವದಿಂದ ನಡೆಸಲೂ ರಾಣಿಯರು ಪ್ರೋತ್ಸಾಹಿಸುತ್ತಿದ್ದರು. ಜೊತೆಗೆ ದೇವಾಲಯದ ದಿನನಿತ್ಯದ ಪೂಜೆಗೆ ನೈಮಿತ್ತಿನ ನೈವೇದ್ಯ, ಆರತಿ, ಅಂಗಭೋಗ, ರಂಗಭೋಗಗಳಿಗೆ ರಾಣಿಯರು ನೀಡಿದಂತಹ ಪ್ರೋತ್ಸಾಹ ಪ್ರಮುಖವಾದುದು.[೧೭]

ಸಮಾಜದಲ್ಲಿ ರಾಣಿಯರು ದಾನದತ್ತಿಗಳನ್ನು ನೀಡುವುದರ ಮೂಲಕ ಅಂದು ಜನರಲ್ಲಿ ಧಾರ್ಮಿಕ ಅಂಶಗಳಿಗೆ ಹೆಚ್ಚು ಉತ್ತೇಜನ ನೀಡುತ್ತಿದ್ದರೆಂದು ತಿಳಿಯಬಹುದು. ವಿರೂಪಾಕ್ಷ ರಥೋತ್ಸವ ಕಾರ್ಯಕ್ಕೆ ಮೊದಲು ಚಾಲನೆ ನೀಡುವವರೆ ರಾಜವರ್ಗದವರು. ಮೊದಲು ರಾಜನು ದೇವಸ್ಥಾನಕ್ಕೆ ಬಂದು ಪ್ರದಕ್ಷಿಣೆ ಹಾಕಿದ ನಂತರ ಮಂಗಳಾರತಿ ತೆಗೆದುಕೊಂಡು ರಥೋತ್ಸವ ಮುಗಿಯುವವರೆಗೂ ತೇರುಜೀರ್ಣೋದ್ಧಾರಕ್ಕೆ ಅಡಿಗೆ ಹಂದರಕ್ಕೆ ಇತರೆ ಎಲ್ಲಾ ಸಂದರ್ಭದಲ್ಲಿ ರಾಣಿಯರನ್ನು ಮೇನೆಯಲ್ಲಿ ಕರೆ ತರುತ್ತಾರೆ. ಉತ್ತರ ದ್ವಾರದ ಮೂಲಕ ವಿರೂಪಾಕ್ಷನನ್ನು ದರ್ಶನ ಪಡೆದು ಹೋಗಬೇಕು. ರಾಣಿಯರು ಇಲ್ಲಿಯೇ ನಿವಾಸ ಮಾಡಬೇಕು ಅಥವಾ ಭೋಜನ ಮಾಡಬೇಕೆಂಬ ಅಪೇಕ್ಷೆ ಪಟ್ಟಲ್ಲಿ ಉತ್ತರ ಗೋಪುರದಲ್ಲಿ ಇಳಿದು ಅಡಿಗೆ ಮಾಡಿಕೊಂಡು ಭೋಜನ ಮಾಡಬೇಕೆಂಬ ಶಿಷ್ಟಚಾರಗಳಿದ್ದು, ಇವರಿಗೂ ಸಹ ಅಂದು ಆಚರಣೆಗಳನ್ನು ಮಾಡುತ್ತಿದ್ದರ ಬಗ್ಗೆ ತಿಳಿದುಬರುತ್ತದೆ.[೧೮]

ಹಾಗೆಯೇ ಮಹಾನವಮಿ ಉತ್ಸವ ಇತರೇ ಹಬ್ಬಗಳನ್ನು ವೀಕ್ಷಿಸಲು ಹೊರದೇಶದಿಂದ ಜನರು ಬಂದು ಇಲ್ಲಿನ ವೈಭೋಗದ ವರ್ಣನೆ ಮಾಡಿರುವುದು ಸ್ಪಷ್ಟ. ಅಂದು ರಾಜರು ರಾಣಿಯರು ಧಾರ್ಮಿಕ ಕಾರ್ಯಗಳಿಗೆ ನೀಡಿದಂತಹ ಪ್ರೋತ್ಸಾಹದಿಂದ ವೈಭವದಿಂದ ನಡೆಸಲಾಗುತ್ತೆಂದು ತಿಳಿದುಬರುತ್ತದೆ. ಒಟ್ಟಿನಲ್ಲಿ ರಾಣಿಯರು ತಮ್ಮನ್ನು ಧಾರ್ಮಿಕ ಕ್ಷೇತ್ರದಲ್ಲಿ ಅನೇಕ ದಾನದತ್ತಿ ನೀಡುವುದರ ಮೂಲಕ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಿದ್ದರು. ಹಾಗೂ ಸಮಾಜದಲ್ಲಿ ಧಾರ್ಮಿಕ ಭಾವನೆ ಮೂಡಿಸುವಲ್ಲಿ ಇವರು ಮಾದರಿ ವ್ಯಕ್ತಿಗಳಾಗಿದ್ದರು ಎಂದು ತಿಳಿಯಬಹುದು.

೪.೩. ತುಳುವ ವಂಶದ ರಾಣಿಯರ ಸಾಹಿತ್ಯ ಕೊಡುಗೆ

'ವಿದ್ಯಾವಿಹೀನ ಪಶುಭಿಃ ಸಮಾನಃ' ಎಂಬುದು ಪ್ರಮುಖವಾದ ಮಾತು. ಪ್ರಾಚೀನ ಕಾಲದಿಂದಲೂ ಸ್ತ್ರೀ ಪುರುಷರಿಗೆ ಜ್ಞಾನಾರ್ಜನೆಗೆ ಸಮಾನ ತಳಹದಿಯನ್ನು ನೀಡಲಾಗಿತ್ತು. ಪ್ರಾರಂಭದಿಂದಲೂ ಹೆಚ್ಚಾಗಿ

ವಿದ್ಯಾಭ್ಯಾಸವು ಉಚ್ಚವರ್ಗದ ಮಹಿಳೆಯರಿಗೆ ದೊರಕಿರುವುದನ್ನು ಕಾಣಬಹುದು. ಬೌದ್ಧ ಹಾಗೂ ಜೈನ ಯುಗದಲ್ಲೂ ಮಹಿಳಾ ವರ್ಗಕ್ಕೆ, ಮುಕ್ತ ವಾತಾವರಣ ಕಲ್ಪಿಸಿಕೊಡಲಾಗಿತ್ತು. ವಿದ್ಯಾಭ್ಯಾಸ ಬೌದ್ಧಧರ್ಮ ಅಡಿಪಾಯ ಸ್ವರೂಪದ್ದಾದರೆ, ಜೈನಧರ್ಮವು ಅದರ ಕಾರ್ಯದ ವಸ್ತುರಚನೆಯೆನಿಸಿದ್ದಿತು. ಪ್ರಾರಂಭಧಲ್ಲಿ ಬೌದ್ಧ ವಿಹಾರ ಮತ್ತು ಜೈನಬಸದಿಗಳಲ್ಲಿ ಶಿಕ್ಷಣ ನಡೆಯತ್ತಿತ್ತು. ಇವು ವಿದ್ಯಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದವು.[೨೦] ನಂತರ ಮಹಿಳಾ ಸಾಧನೆಗೆ ಮಾರಕವಾಗಿ ಬಾಲ್ಯವಿವಾಹ ಪದ್ಧತಿಯಿಂದಾಗಿ ವಿದ್ಯೆ ಅವರಲ್ಲಿ ಮರೆಯಾಗತೊಡಗಿತು.[೨೧] ನಂತರ ರಾಜವಂಶದ ಮೇಲಾಧಿಕಾರಿಗಳ ಹೆಣ್ಣುಮಕ್ಕಳಿಗೆ ಮನೆಗಳಲ್ಲಿಯೇ ವಿದ್ಯಾಭ್ಯಾಸ ದೊರಕಿಸಿಕೊಡುವ ವ್ಯವಸ್ಥೆ ಉಂಟಾಯಿತು. ರಾಜಕುಟುಂಬ ದಲ್ಲಿ ಬಾದಾಮಿ ಚಾಲುಕ್ಯರ ಕಾಲಕ್ಕೆ ಬಂದರೆ ಪುಲಕೇಶಿಯ ಮಗ ಚಂದ್ರಾದಿತ್ಯನ ಮಡದಿ ವಿಜಯ ಭಟ್ಟಾರಕೆ ರಾಣಿ ವಿಜಯಾಂಬಿಕೆ 'ಕೌಮುದಿ ಮಹೋತ್ಸವ' ಎಂಬ ಕೃತಿಯನ್ನು ರಚಿಸಿ ಕರ್ನಾಟಕದ ಪ್ರಥಮ ಕವಿಯಿತ್ರಿಯಾಗಿ ಗೋಚರಿಸುತ್ತಾಳೆ. ಹಾಗೆಯೇ ಕದಂಬ ರಾಜ ದಯಸಿಂಹನ ತಾಯಿ ಮೇಚಲದೇವಿ ಅತೀಚತಯೋಕ್ತಯೊಳೆ ಸರಸ್ವತಿಗಂ ಮುಗಿಲು ಎನಿಸಿಕೊಂಡಿದ್ದಳು. ಆರನೇ ವಿಕ್ರಮಾದಿತ್ಯನ ರಾಣಿಯಾದ ಪಟ್ಟಮಹಾದೇವಿ ಮೈಳಲದೇವಿ 'ಕಲಿಕಾಲ ಸರಸ್ವತಿ' ಮುಂತಾದ ಅರಸಿಯರು ಪ್ರಮುಖ ವಿದ್ಯಾವರ್ತಿಯಾಗಿದ್ದರು.[೨೨]

ವಿಜಯನಗರದ ತುಳುವ ಅರಸರ ಕಾಲದಲ್ಲಿ ಸಾಹಿತ್ಯ ಕ್ಷೇತ್ರವು ಸುವರ್ಣಯುಗವೆನಿಸಿತು. ಎಲ್ಲ ಧರ್ಮಗಳು ಉನ್ನತಿಗೊಂಡು ಕನ್ನಡದ ಬೊಕ್ಕಸವನ್ನು ತುಂಬಿದವು. ಈ ಕಾಲದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ರಾಣಿಯರು ಸಾಧಿಸಿರುವ ಸೇವೆ ಕಡಿಮೆಯೇನಲ್ಲ. ಇಲ್ಲಿ ಸಾರ್ವತ್ರಿಕ ಬೆಳವಣಿಗೆಗೆ ಸಾರ್ವತ್ರಿಕ ಉತ್ತೇಜನ ದೊರಕಿ ಸಂಸ್ಕೃತ, ಕನ್ನಡ, ತೆಲುಗು, ಭಾಷೆಯ ಸಾಹಿತ್ಯದ ಅಭಿವೃದ್ಧಿಯಾದರು, ರಾಣಿ ವರ್ಗದವರಲ್ಲಿ ಸಂಸ್ಕೃತ ಸಾಹಿತ್ಯದ ರಚನೆಗೆ ಹೆಚ್ಚಾಗಿ ಆದ್ಯತೆ ನೀಡಿದರು.[೨೩] ಸಾಹಿತ್ಯಕ್ಕೆ ಕೊಡುಗೆ ನೀಡಿದವರು ತಿರುಮಲಾಂಬ, ಮೋಹನಾಂಗಿ ಮತ್ತು ತುಕ್ಕಾರಮಣಿ ಅಥವಾ ಜಗನ್ಮೋಹಿನಿ ಪ್ರಮುಖವಾಗಿ ಕಂಡುಬರುವ ರಾಣಿಯರು ಹಾಗೂ ಕವಿಯಿತ್ರಿಯರು.

೧. ಜಗನ್ಮೋಹಿನಿ : ಈಕೆ ಸಂಸ್ಕೃತದ ಕವಿಯಿತ್ರಿಯಾಗಿದ್ದು, ಕೆಲವು ಪದ್ಯಗಳನ್ನು ಬರೆದಂತೆ ಕುಮುಲನ ಅಭಿದಾವೃತ್ತ ಮಾತೃಕೆಯಿಂದ ವಲ್ಲಭದೇವನ ಸುಭಾಷಿತಾವಳಿಯಿಂದ ತಿಳಿದುಬರುತ್ತದೆ. ರಾಜನಿಂದ ಆಗಲಿದಾಗ ಉಂಟಾದ ವಿರಹ ವೇದನೆಯನ್ನು ಐದು ಶ್ಲೋಕಗಳಲ್ಲಿ ಬರೆದಿದ್ದಾಳೆ. ಅದು "ಭೃಂಗಪಂಚಕ" ಅಥವಾ "ತುಕ್ಕಾಪಂಚಕ"ವೆಂದು ಪ್ರಸಿದ್ಧವಾಗಿದೆ.[೨೪] ಈಕೆ ಸನ್ಯಾಸಿನಿಯಾಗಿ ಕಾಲ ಕಳೆದರು ಕೃಷ್ಣದೇವರಾಯನಲ್ಲಿ ಕೊನೆಯವರೆಗೆ ಅಮಿತವಾದ ಪ್ರೇಮವನ್ನಿಟ್ಟಿದ್ದಳು ಎಂದು ಈ ಪದ್ಯದಿಂದ ತಿಳಿದುಬರುತ್ತದೆ.[೨೫] ಕೆಲವರು ಈ ಪದ್ಯ ಅವಳದಲ್ಲವೆಂದು ಪುರುಷ ಕೃತವೆಂದು ಹೇಳಲಾಗುತ್ತದೆ. ಆದರೆ ಅದಕ್ಕೆ ಯಾವುದೇ ಆಧಾರವಿಲ್ಲ ಎನ್ನಲಾಗುತ್ತದೆ.[೨೬]

೨. ಮೋಹನಾಂಗಿ ಅಥವಾ ತಿರುಮಲಾಂಬೆ : ಈಕೆಯೂ ಸಹ ಸಂಸ್ಕೃತ ವಿದ್ವಾಂಸಳಾಗಿದಳು. ಈಕೆ 'ಮಾರೀಚೀ ಪರಿಣಯಂ' ಎಂಬ ಪ್ರಬಂಧ ರಚಿಸಿದ್ದಾಳೆ. ಈ ಪ್ರಬಂಧದಲ್ಲಿ ಅವತಾರೀಕಾ ಭಾಗದ ೯೯ ಪದ್ಯಗಳು ನಾಲ್ಕನೆಯ ಅಸ್ವಾಸದ ೨ ಪದ್ಯಗಳು ಮತ್ತು ೨ ಗದ್ಯಗಳು ಮಾತ್ರ ದೊರಕಿ ಪ್ರಕಟಗೊಂಡಿದೆ.

ಈ ಕಾವ್ಯದಲ್ಲಿ ತನ್ನಗೂ ತನ್ನ ತಾಯಿಗೂ ತಿರುಮಲಾಂಬೆ ಎಂಬ ಒಂದೇ ಹೆಸರು ಇದ್ದುದರಿಂದ ತಂದೆ ಕೃಷ್ಣನು 'ಮೋಹನಾಂಗಿ' ಎಂದು ಕರೆಯುತ್ತಿದ್ದರೆಂದು ಹೇಳಿದ್ದಾಳೆ. ಈ ಕಾವ್ಯದ ಅವತರಣಿಕೆಯಲ್ಲಿ ತನ್ನ ತಂದೆ ಕೃಷ್ಣದೇವರಾಯನು ಹುಟ್ಟಿದ್ದು ಶಕ ಸಂವತ್ಸರ ೧೩೯೩. ವಿಕೃತಿ ಸಂವತ್ಸರ ಪುಷ್ಯ ಬಹುಳ ದ್ವಾದಶಿ ಶುಕ್ರವಾರದಂದು ಎಂದು ಹೇಳುತ್ತಾಳೆ. ಇದಕ್ಕೆ ಸರಿಯಾಗಿ ಕ್ರಿ.ಶ. ೧೪೭೧ರ ಜನವರಿ ೧೭ ರಾಯನು ಹುಟ್ಟಿದ್ದು ಎಂದು ತಿಳಿಸುತ್ತಾಳೆ. ಜೊತೆಗೆ ರಾಯನು ಅಶುಕವಿತ್ವದಲ್ಲಿಯೂ, ಸಮಸ್ಯಾಪೂರಣ ದಲ್ಲಿಯೂ ತನ್ನೊಂದಿಗೆ ತೊಡಗಿರುತ್ತಿದ್ದನೆಂದೂ ತಾನು ಬರೆದ ಚಿತ್ರಗಳನ್ನು ರಾಗಲಾಪನೆಗಳನ್ನು ಮೆಚ್ಚುತ್ತಿದ್ದ ಬಗ್ಗೆ ಮಗಳೊಂದಿಗೆ ಚದುರಂಗವನ್ನು ಆಡುತ್ತಿದ್ದ ಬಗ್ಗೆ ರಾಯನಲ್ಲಿದ್ದ ಆಸಕ್ತಿ ಕುರಿತು ತಿಳಿಸುತ್ತಾಳೆ. ಅಲ್ಲದೇ ಅಲ್ಲಿ ತಂದೆಗೆ ತಿರುಮಲದೇವಿ 'ಹೃದಯಪ್ರಿಯ' ಚಿನ್ನಾಮಾಂಬಾ, ಮನೋಹರ, ನರಸಿಂಹ ದೇವರಾಯನ, ಪ್ರಿಯನಂದನ, ನಾಗಮಾಂಬಾ ತನುಜ ಹೀಗೆ ತನ್ನ ಅಜ್ಜ ಅಜ್ಜಿ, ತಂದೆ ತಾಯಿಯವರ ಪರಿಚಯ ನೀಡಿದ್ದಾಳೆ. ತಾನು ತಿರುಮಲಾಂಬೆಯಲ್ಲೂ, ತನ್ನ ತಂಗಿ ವೇಂಗಳಾಂಬೆಯ ಅನ್ನಪೂರ್ಣದೇವಿಯಲ್ಲೂ ತಂದೆ ಪಡೆದನೆಂದು ತಿಳಿಸುತ್ತಾಳೆ. ಜೊತೆಗೆ ತಂದೆಯೂ ಗಜಪತಿಯ ಮಗಳು ರಾಜಕುಮಾರಿಯೊಂದಿಗೆ ಮದುವೆಯಾದನೆಂದು ಆಕೆಯೆ ಲಕ್ಷ್ಮಿ ಎಂದು ತಿಳಿಸಿ ತನ್ನ ತಂದೆ ಹಾಗೂ ಪೂರ್ವಿಕರ ಪರಿಚಯವನ್ನು ಈ ಕೃತಿಯಲ್ಲಿ ಸೆರೆ ಹಿಡಿದಿದ್ದಾಳೆ.[೨೭] ಈಕೆಯೂ ದೊಡ್ಡರಸಗ್ರಹಣ ಪಾರಿಣೆ ಎಂದೂ ಚತುರಮತಿಯಾಗಿದ್ದಳೆಂದೂ, ರಸಜ್ಞೆ, ಗುಣಗ್ರಹಣ ಮತ್ತು ಔಚಿತ್ಯವನ್ನರಿತವಳೆಂದು ತಿಳಿದವರಿಂದ ಹೇಳಲ್ಪಟ್ಟಿದೆ.[೨೮]

೬. ಓದುವ ತಿರುಮಲಾಂಬ : ತಿರುಮಲಾಂಬೆ ವಿಜಯನಗರದ ರಾಜಮನೆತನಕ್ಕೆ ಸೇರಿದ ಕ್ರಿ.ಶ. ೧೫೩೦-೪೨ರವರೆಗೆ ಆಳಿದ ಅಚ್ಯುತರಾಯನ ರಾಣಿ, ಸಂಸ್ಕೃತ ಸಾಹಿತ್ಯಕ್ಕೆ ಕೊಡುಗೆಯನ್ನಿತ್ತ ಕನ್ನಡಿತಿಯರಲ್ಲಿ ಕವಯಿತ್ರಿ ತಿರುಮಲಾಂಬೆ ಮೂರನೆಯವಳು. ಮೊದಲ ಕವಿಯಿತ್ರಿ ವಿಜಯಾ, ಎರಡನೆಯವಳು ಗಂಗಾದೇವಿ, ತಿರುಮಲಾಂಬೆಯೂ 'ವರದಾಂಬಿಕಾ ಪರಿಣಯ' ಎಂಬ ಚಂಪೂ ಕಾವ್ಯವನ್ನು ರಚಿಸಿದಳು. ಅದು ಸಮಗ್ರವಾಗಿ ದೊರತಿರುವುದು ಕನ್ನಡಿಗರ ಸುದೈವವೇ ಸರಿ. ಈಕೆ ತುಳು ಮನೆತನದ ಅರಸೊತ್ತಿಗೆಯ ಸಂಸ್ಥಾಪಕನಾದ ನರಸನಾಯಕನವಂಶದ ಪೂರ್ವೇತಿಹಾಸದಿಂದ ಕಥೆ ಪ್ರಾರಂಭವಾಗುತ್ತದೆ. ಪುರಾಣ ಪ್ರಸಿದ್ಧ ಚಂದ್ರವಂಶದಲ್ಲಿ ತಿಮ್ಮನಾಯಕನೆಂಬುವನು ಜನಿಸಿದನು. ಅವನ ಪತ್ನಿ ದೇವಕಿ ಅವರಿಗೆ ಈಶ್ವರನಾಯಕನೆಂಬ ಮಗನಾದನು. ಈ ಈಶ್ವರನಾಯಕ ಹಾಗೂ ಬುಕ್ಕಮಾಂಬೆಯ ಮಗನೇ ನರಸನಾಯಕ, ನರಸಯ್ಯನಿಗೆ ಓಬಾಂಬೆಯಲ್ಲಿ ಹುಟ್ಟಿದವನೇ ಅಚ್ಯುತರಾಯ ಎಂದಿದೆ.

ಕಾವ್ಯದ ಮೊದಲಿನ ಭಾಗ ನರಸರಾಜನ ರೂಪ, ಗುಣ ಪರಾಕ್ರಮಗಳ ವರ್ಣನೆ, ಅವನ ದಿಗ್ವಿಜಯ ಕಾವೇರಿಯ ಸ್ತುತಿ. ನರಸರಾಜನಿಗೂ ಚೋಳ ರಾಜನಿಗೂ ಆದ ಯುದ್ಧದ ವರ್ಣನೆ, ಸಮುದ್ರದ ವರ್ಣನೆ, ನರಸರಾಜನು ರಾಮೇಶ್ವರನನ್ನು ಪೂಜಿಸಿದ್ದು ಮುಸ್ಲಿಂರನ್ನು ಸದೆಬಡೆದು ವಿಜಯ ನಗರಕ್ಕೆ ಬಂದದ್ದು ಇತ್ಯಾದಿ ಘಟನೆಗಳಿಂದ ಕೂಡಿದೆ. ಮುಂದೆ ಅಚ್ಯುತರಾಯನ ವರ್ಣನೆ, ಯೌವನ, ವಿದ್ಯಾಭ್ಯಾಸ, ವರದಾಂಬಿಕೆಯ ಪರಿಚಯ, ಪ್ರೇಮಾಂಕುರ ವಿವಾಹ, ಕುಮಾರನಾದ ಜಿನವೆಂಕಟಾದ್ರಿಯ ಜನನ ಕುಮಾರನಿಗೆ ಯುವರಾಜ ಪಟ್ಟವನ್ನು ಕಟ್ಟಿದ್ದು ಇವೆಲ್ಲವುಗಳಿಂದ ಕಥೆ ಕೊನೆಗೊಳ್ಳುತ್ತದೆ.[೨೯]

ಇಲ್ಲಿ ಸವತಿಯ ಮತ್ಸರ್ಯವಿಲ್ಲದೆ ಒಬ್ಬ ರಾಣಿ ತನ್ನ ಪತಿಯ ಮತ್ತೊಂದು ವಿವಾಹದ ಬಗ್ಗೆ ವರ್ಣನೆಯನ್ನು ಮಾಡಿರುವುದು ಈ ಕಾವ್ಯದ ಪ್ರಮುಖ ವೈಶಿಷ್ಟ್ಯವಾಗಿದೆ.[೬೦] ಕಾವ್ಯ, ನಾಟಕ, ಪುರಾಣಗಳಲ್ಲಿ ಗತಿಯುಳ್ಳಂಥವಳು. ಒಂದೇ ಸಲ ಕೇಳಿ ತಿಳಿಯುವ ಗ್ರಹಣ ಶಕ್ತಿಯುಳ್ಳವಳು. ಅನೇಕ ಭಾಷೆಗಳನ್ನು ಬಲ್ಲವಳು, ಮಧುರಕಂಠದವಳು, ಕವಿಗಳಿಗೆ ಆಶ್ರಯದಾತಳು. ದತ್ತಿಯ ಶಾಸನಗಳನ್ನು ಬರೆದವಳು ಎಂದೆಲ್ಲ ಹೇಳಿದ್ದಾಳೆ.[೬೧]

ಹಂಪೆಯ ವಿಠ್ಠಲದೇವಾಲಯದ ಗರ್ಭಗೃಹದ ಉತ್ತರಕ್ಕೆ ತಳಪಾಯದಲ್ಲಿರುವ ಶಾಸನದಲ್ಲಿ 'ಸುವರ್ಣವೇರು' ಎಂಬ ದಾನವನ್ನು ಕ್ರಿ.ಶ. ೧೫೩೩ರಲ್ಲಿ ಮಾಡಿದ ಬಗ್ಗೆ ಈ ಸಂಸ್ಕೃತ ಶ್ಲೋಕದಲ್ಲಿದೆ. ಅದನ್ನು ಬರೆದವಳು ಓದುವ ತಿರುಮಲಮ್ಮ ಎಂದು ಅದರಲ್ಲಿ ಹೇಳಲಾಗಿದೆ. ಇದಲ್ಲದೆ ಕಾಂಚೀಪುರದಲ್ಲಿ ಅರಸರ ಮುಕ್ತತುಲಾಭಾರಕ್ಕೆ ಸಂಬಂಧಿಸಿದ ಮೂರು ಶ್ಲೋಕಗಳನ್ನು ಅವಳೇ ರಚಿಸಿದ್ದಾಗಿ ತಿಳಿದುಬರುತ್ತದೆ. ಇನ್ನೂ ಅನೇಕ ಶಾಸನಗಳಲ್ಲಿ ಆಕೆಯ ಹೆಸರು ಬರುತ್ತದೆ.[೬೨] ಈಕೆ ಸಂಗೀತವಿದುಷಿ ವೈಯಾಕರಣೆ ಪುರಾಣೇತಿ ಹಾಸ್ಯ ಪಂಡಿತೆ. ಸಕಲಕಲಾಪ್ರವೀಣೆ, ಬಹುಭಾಷಾ ನಿಪುಣತೆ ಕವಿ ಪಂಡಿತಾಶ್ರಯ, ಧರ್ಮ ಶ್ರದ್ಧೆಯುಳ್ಳವಳೆಂದು ತಿಳಿಯುತ್ತದೆ. ಜೊತೆಗೆ ಇಷ್ಟೆಲ್ಲ ಪಾಂಡಿತ್ಯವಿದ್ದರೂ ತಿರುಮಲಮ್ಮ ವಿದ್ವಾಂಸರು ತನ್ನ ಕೃತಿಯನ್ನು ತಿದ್ದಬೇಕೆಂದು ವಿನಯದಿಂದ ಕೇಳಿಕೊಂಡಿದ್ದಾಳೆ.

"ಕರಕೃತಮಪರಾಧಂ ಕ್ಷಂತುಮರ್ಹಂತಿ ಸಂತಃ" ಮತ್ತು ಹೇಳಿದ್ದಾಳೆ.

"ಅಕ್ಷರಂ ಮಂತ್‌ಪರಿಭ್ರಷ್ಟಂ ಮಾತ್ರ್‌ಹೀನಂ ತು ಯದ್‌ಭವೇತ್
ಕ್ಷಂತುಮರ್ಹಂತಿ ವಿದ್ವಾಂಸ ಕ್ಷಮಾ ಹಿ ವಿದುಷಾಂ ಧನಮ್"

ಅಕ್ಷರ ಅಥವಾ ಮಾತ್ರೆ ಬಿಟ್ಟು ಹೋಗಿದ್ದರೆ ವಿದ್ವಾಂಸರು ಕ್ಷಮಿಸಬೇಕೆಂದು ಹೇಳುತ್ತಾಳೆ. ಈ ಕಾವ್ಯದಲ್ಲಿ ಮುಖ್ಯವಾದ ವಿಚಾರದ ಬಗ್ಗೆ ತಿಳಿಸುತ್ತಾಳೆ. ಇದರಲ್ಲಿ ೨೦ ವರ್ಷ ಆಳಿದ ಕೃಷ್ಣನ ಹಾಗೂ ಅಚ್ಯುತರಾಯನ ನಡುವಿನ ವೈಮನಸ್ಸಿನ ಮೇಲೆ ಬೆಳಕು ಚೆಲ್ಲುತ್ತಾಳೆ. ಜೊತೆಗೆ ಪತಿ ಅಚ್ಯುತರಾಯನ ಚಿತ್ರ ಕಣ್ಣೆದುರಿನಲ್ಲಿ ನಿಲ್ಲಿಸುತ್ತಾಳೆ. ವಿದ್ಯಾದರಿ, ಇಲ್ಲಿ ಕವಿಯಾತ್ರಿಯು ಪದರಚನಾ ಪ್ರೌಢಮೆ, ಚಾತುರ್ಯ, ವರ್ಣನಾ ಕೌಶಲ್ಯಗಳು ವ್ಯಕ್ತವಾಗಿದೆ. ಜೊತೆಗೆ ಸರೋವರದಲ್ಲಿ ಜಲಕ್ರೀಡೆಯನ್ನಾಡುವಾಗ ಮುಳುಮುಳುಗಿ ಏಳುತ್ತಿದ್ದ ಮಿಂಚಿನ ಚಂಚಲಾಕ್ಷಿಯ ಮೋಡಗಳ ಅಂಚಿನಲ್ಲಿ ಮೂಡಿ ಮುಳುಗುವ ಮಿಂಚಿನ ಬಳ್ಳಿಯಂತೆ ಕಂಡಳು ಎಂದು ಮತ್ತೊಂದು ಪದ್ಯದಲ್ಲಿ ಸಹಜ ಸುಂದರ ವರ್ಣನೆ ನಿಸರ್ಗದ ಮಣಿಯಂತೆ ಅದರ ನಿರೀಕ್ಷಣೆ ಕವಿಯಿತ್ರಿಯ ಸ್ವಭಾವ ಇದು ಒಳಗೊಂಡಿದೆ. ತಿರುಮಲಾಂಬೆಯು ಚಂಪೂಕೃತಿಯನ್ನು ಬರೆದ ಪ್ರಥಮ ಕವಿಯಿತ್ರಿ. ಇದರಿಂದಾಗಿ ಈಕೆಯೂ ಮಹಾನ್ ವಿದ್ವಾಂಸಳಾಗಿದ್ದು, ತುಳುವ ವಂಶದ ಬಗ್ಗೆ ಹೊಸ ಬೆಳಕು ಬೀರುವ ವಿದ್ವತ್ತನ್ನು ಈಕೆ ಪಡೆದಿರುವುದು ಈಕೆಯ ಕಾವ್ಯದಿಂದ ತಿಳಿದುಬರುತ್ತದೆ.[೬೩]

ಈ ಕಾಲದಲ್ಲಿ ಕನ್ನಡ ಕವಿಯಿತ್ರಿಯರು ಒಬ್ಬರು ಕಂಡುಬರುವುದಿಲ್ಲ. ಇಲ್ಲಿ ಹೆಚ್ಚಾಗಿ ಸಂಸ್ಕೃತ ಭಾಷೆಗೆ ಹೆಚ್ಚು ಪ್ರೋತ್ಸಾಹ ನೀಡಲಾಗಿತ್ತು. ತೆಲುಗು, ಕನ್ನಡ, ಪ್ರಭಾವವಿದ್ದರೂ ಸಹ ರಾಣಿವರ್ಗದವರಿಗೆ ಹೆಚ್ಚಾಗಿ ಸಂಸ್ಕೃತದ ಶಿಕ್ಷಣ ನೀಡಲಾಗುತ್ತಿತ್ತು ಎಂದು ತಿಳಿದುಬರುತ್ತದೆ. ಬಾಲ್ಯಾವಸ್ಥೆಯಲ್ಲಿಯೇ

ಇವರಿಗೆ ಶಿಕ್ಷಣ ನೀಡಲಾಗುತ್ತಿತ್ತು ಎಂಬುದಕ್ಕೆ ತಿರುಮಲಾಂಬೆಯ ಚಿಕ್ಕಂದಿನಲ್ಲಿಯೇ ಕವನಗಳನ್ನು ಬರೆಯುತ್ತಿದ್ದಳೆಂದು 'ಕನ್ನಡ ಕವಿಯಿತ್ರಿಯರು' ಕೃತಿಯಲ್ಲಿ ವಿವರ ಸಿಗುವುದರಿಂದಾಗಿ ಇವರಿಗೂ ಸಹ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿತ್ತೆಂದು ವೈಶಿಷ್ಟ್ಯವಾಗಿದೆ.

೪.೪. ನೃತ್ಯ, ಸಂಗೀತ ಕಲೆಗೆ ತುಳುವ ಅರಸರ ರಾಣಿಯರ ಸೇವೆ

ಉತ್ತರ ಭಾರತದ ಮುಸ್ಲಿಂ ದಾಳಿಯಿಂದ ಸಂಗೀತ, ನೃತ್ಯ ಪರಂಪರೆ ಕಳೆದುಕೊಳ್ಳುವ ಸ್ಥಿತಿ ಬಂದಾಗ ಅದನ್ನು ಉಳಿಸಿ ಬೆಳೆಸಿದ ಕೀರ್ತಿ ವಿಜಯನಗರಕ್ಕೆ ಸಲ್ಲುತ್ತದೆ. ತುಳುವ ಅರಸರ ಕಾಲದ ಕೃಷ್ಣದೇವರಾಯನ ಕಾಲದಲ್ಲಿ ಕಲೆಗಳಿಗೆ ವಿಶೇಷ ಪೋಷಣೆಯನ್ನು ನೀಡಿಲಾಗಿತ್ತು. ಕಲೆಯಲ್ಲಿ ಮುಖ್ಯವಾಗಿ ಎರಡು ಕಲೆಗಳನ್ನು ನೋಡಬಹುದು. ಭರತನಾಟ್ಯ ಹಾಗೂ ಸಂಗೀತ ಇವೆರಡರಲ್ಲಿಯೂ ಸಹ ಅಂದು ರಾಣಿಯರು ವಿಶೇಷವಾಗಿ ಭಾಗವಹಿಸುತ್ತಿದ್ದರು. ಇವೆರಡೂ ಕಲೆಗಳು ಸಹ ಉನ್ನತ ವರ್ಗವರಿಗೆ ಮಾತ್ರ ಮೀಸಲಾಗಿತ್ತು ಎಂದರೆ ತಪ್ಪಾಗಲಾರದು. ಸಂಗೀತ, ನೃತ್ಯಗಳು ಪ್ರಾಚೀನ ಕಾಲದಿಂದಲೂ ಸಹ ಜನಮನ್ನಣೆ ಪಡೆದ ಕಲೆಗಳಾಗಿವೆ.

ಭರತ ನಾಟ್ಯ : ಭಾರತೀಯ ಸಂಪ್ರದಾಯವನ್ನು ಬಹುಮಟ್ಟಿಗೆ ಪಾಲಿಸಿಕೊಂಡು ಬಂದ ನೃತ್ಯವೆಂದರೆ ಭರತನಾಟ್ಯ. ಅದಕ್ಕೆ ತವರುಮನೆಯಂತಿದ್ದು, ಪ್ರಧಾನವಾಗಿ ಅದನ್ನು ಬೆಳೆಸಿಕೊಂಡು ಬಂದ ನಾಡು ಕರ್ನಾಟಕವಾಗಿದೆ. 'ಭ' ಎಂದರೆ ಭಾವ, 'ರ' ಎಂದರೆ ರಸ, 'ತ' ಎಂದರೆ ತಾಳ. ಭಾವ-ರಸ-ತಾಳ ಈ ಮೂರನ್ನು ಪ್ರಧಾನವಾಗಿ ಉಳ್ಳ ನಾಟ್ಯ ಭರತನಾಟ್ಯ ಇದರಲ್ಲಿ ೨೦ ಭಾವಗಳು ವ್ಯಕ್ತವಾಗುತ್ತದೆ.[೩೪]

ಪ್ರಾಚೀನ ಕಾಲದಿಂದಲೂ ಸಹ ರಾಣಿಯರಿಗೆ ವಿದ್ಯೆಗಿಂತಲೂ ಗಾಯನ ನರ್ತನಗಳಲ್ಲಿ ವಿಶೇಷ ತರಬೇತಿ ನೀಡಲಾಗುತ್ತಿತ್ತು. ರಾಜಮನೆತನದ ಸ್ತ್ರೀಯರು ರಾಜರ ಮನದಾಕರ್ಷಣೆಗಳಿಗಾಗಿ ನೃತ್ಯ ಸಂಗೀತಗಳಿಗೆ ಹೆಚ್ಚು ಮಹತ್ವ ನೀಡುತ್ತಿದ್ದರು. ಈ ಅಂಶಗಳಿಂದ ಅನೇಕ ಕರ್ನಾಟಕದ ರಾಣಿಯರು ತಮ್ಮದೇ ಆದ ಬಿರುದುಗಳಿಂದ ಗುರುತಿಸಿಕೊಳ್ಳುತ್ತಿದ್ದರು. ಉದಾ. ಕದಂಬ ರಾಜ ದಯಾಸಿಂಹನ ರಾಣಿ ಮೇಚಲದೇವಿಯನ್ನು ಅತಿ ಚತುರೋಕ್ತಿಯೊಳೆ ಸರಸ್ವತಿಗಂ ಮಿಗಿಲು ಎಂದು ಕರೆಯುತ್ತಿದ್ದರು. ಆರನೇ ವಿಕ್ರಮಾದಿತ್ಯನ ರಾಣಿಯರಲ್ಲಿ ಪಟ್ಟಮಹಾದೇವಿ ಮೈಳಲದೇವಿ 'ಕಲಿಕಾಲ ಸರಸ್ವತಿ', 'ಸಾಹಸ ವಿದ್ಯಾಧರಿ', 'ಸಕಳಕಳಾವತಿ' ಎಂದು ಕರೆಯುತ್ತಿದ್ದರು. ಹೊಯ್ಸಳರಲ್ಲಿ ಕಲೆಗೆ ಹೆಚ್ಚು ಖ್ಯಾತಳಾದ ವಿಷ್ಣುವರ್ಧನನ ರಾಣಿ ಶಾಂತಲಾದೇವಿಯನ್ನು 'ಸಂಗೀತನಾಟ್ಯ ಸರಸ್ವತಿ' ಎಂದೇ ಪ್ರಸಿದ್ಧಳಾಗಿದ್ದಳು.[೩೫]

ದಕ್ಷಿಣ ಭಾರತದಲ್ಲಿ ನೃತ್ಯಕಲೆ ವಿಜಯನಗರ ಅರಸರ ಕಾಲದಲ್ಲಿ ತುಳುವ ಅರಸರಲ್ಲಿ ಶ್ರೀ ಕೃಷ್ಣದೇವರಾಯ, ಅಚ್ಯುತರಾಯ ಹಾಗೂ ಸದಾಶಿವರಾಯರು ಹೆಚ್ಚು ಪ್ರೋತ್ಸಾಹ ನೀಡಿದ್ದರು. ಕೃಷ್ಣದೇವರಾಯನ ಕಾಲದಲ್ಲಿ ಸಂಗೀತ ನೃತ್ಯ ಕಲೆಗಳು ಉನ್ನತ ಶಿಖರವನ್ನು ಮುಟ್ಟಿತ್ತು. ನೃತ್ಯದ ಕುರಿತು ವಿದೇಶಿ ಪ್ರವಾಸಿಗರಾದ ಅಬ್ದುಲ್ ರಜಾಕ್, ಪಾಯೇಸ್, ನ್ಯೂನಿಜ್‌ರವರು ವಿವರಣೆ ಹಾಗೇ ಹಜಾರರಾಮಚಂದ್ರ ದೇವಾಲಯ, ಮಹಾನವಮಿ ದಿಬ್ಬ ಇದರ ಗೋಡೆಯ ಮೇಲಿನ ಕೆತ್ತನೆಯಿಂದ ತಿಳಿಯುತ್ತದೆ.[೩೬]

ವಿಜಯನಗರ ಕಾಲದ ವಿಶೇಷವೆಂದರೆ ಬಾಲ್ಯದಿಂದಲೇ ಹೆಣ್ಣುಮಕ್ಕಳಿಗೆ ನೃತ್ಯದ ಶಿಕ್ಷಣ

ನೀಡುತ್ತಿದ್ದರು.[೩೭] ಪೇಯಿಸ್‌ನು ಅಂದಿನ ನಾಟ್ಯದ ಬಗ್ಗೆ ವಿವರಿಸುತ್ತಾ ರಾಣಿಯರಿಗೂ ಸಹ ನೃತ್ಯವನ್ನು ಬಹಿರಂಗವಾಗಿ ಮನರಂಜನೆಗಾಗಿ ನಾಟ್ಯವಾಡುತ್ತಿದ್ದರೆಂದು ಜೊತೆಗೆ ನೃತ್ಯ ಕಲಿಕೆಯಲ್ಲಿ ಅವರ ಆಸಕ್ತಿಯ ಕುರಿತು ವಿವರಿಸುತ್ತಾನೆ.[೩೮] ಇದಕ್ಕಾಗಿಯೇ ಸಾರ್ವಜನಿಕ ನೃತ್ಯ ಪ್ರದರ್ಶನಗಳಲ್ಲದೇ ಅರಮನೆಯಲ್ಲಿಯೂ ಹಾಗೆಯೇ ನೃತ್ಯ ಮುಂತಾದ ಕಲಾಪ್ರದರ್ಶನ ಪ್ರದರ್ಶಿಸುತ್ತಿದ್ದರೆಂದು ಜೊತೆಗೆ ರಾಣಿಯರಿಗಾಗಿಯೇ ಅರಮನೆಯಲ್ಲಿ ಅನೇಕ ನಾಟ್ಯ ಕಲಾ ಶಾಲೆಗಳಿದ್ದವೆಂದು ತಿಳಿದುಬರುತ್ತದೆ. ಇದರಲ್ಲಿ ಒಂದು ನಾಟಕ ಶಾಲೆ, ಮತ್ತೊಂದು ನಾಟ್ಯ ಶಾಲೆ ಇತ್ತು. ಇದನ್ನು 'ನರ್ತನ ಶಾಲೆ' ಎಂದು ಕರೆಯುತ್ತಿದ್ದರು. ಅಂತಃಪುರದಲ್ಲಿ ಅನೇಕ ನರ್ತನ ಭಂಗಿಯಲ್ಲಿರುವ ಮೂರ್ತಿಶಿಲ್ಪಗಳನ್ನು ನಿಲ್ಲಿಸುತ್ತಿದ್ದರು. 'ಇದರ ಉದ್ದೇಶ ನೃತ್ಯದ ಕುರಿತು ಅರಿವು ಮೂಡಿಸುವುದು ಹಾಗೂ ಕಲಿಯುವವರಿಗೆ ಸುಲಭವಾಗಿರಬೇಕೆಂಬ ಉದ್ದೇಶದಿಂದ ಎಂದು ತಿಳಿದುಬರುತ್ತದೆ.[೩೯] ರಾಣಿಯರು ಸಹ ನೃತ್ಯದ ತರಬೇತಿ ಪಡೆಯುತ್ತಿದ್ದರು ಹಾಗೂ ಅಂದು ರಾಣಿಯರು ಸಾರ್ವಜನಿಕ ನೃತ್ಯ ಪ್ರದರ್ಶನ ನೀಡುತ್ತಿದ್ದರು ಎಂಬುದಕ್ಕೆ ಅನೇಕ ಸಾಹಿತ್ಯದಿಂದಲೂ ತಿಳಿದುಬರುತ್ತದೆ. ಕೃಷ್ಣದೇವರಾಯನ ಕಿರಿಯ ರಾಣಿಯಾದ ಚಿನ್ನಾದೇವಿಯು ಹಂಪೆಯ ವಿರೂಪಾಕ್ಷ ದೇವಸ್ಥಾನ ಪ್ರಸಿದ್ಧ ನರ್ತಕಿಯಾಗಿದ್ದಳೆಂದು ತಿಳಿಸಲಾಗಿದೆ.[೪೦]

ಮೌಖಿಕವಾಗಿ ಹೇಳುವುದಾದರೆ ಕೃಷ್ಣದೇವರಾಯನು ತನ್ನ ಪ್ರೀತಿಯ ದೇವಾಲಯವಾದ ವಿಜಯ ವಿಠ್ಠಲ ದೇವಾಲಯ ಕಟ್ಟಿಸಿದ ನೆನಪಿಗಾಗಿ ಇಲ್ಲಿ ನೃತ್ಯ ಮಂಟಪವನ್ನು ನಿರ್ಮಿಸಿದನೆಂದು ಈ ನೃತ್ಯ ಮಂಟಪದಲ್ಲಿ ವಿಶೇಷ ಪೂಜಾ ವೇಳೆಯಲ್ಲಿ ರಾಜ ನೃತ್ಯ, ವೀಕ್ಷಣೆ ಮಾಡುತ್ತಿದ್ದರೆಂದು ಆ ಸಂದರ್ಭದಲ್ಲಿ ರಾಣಿಯರಾದ ಚಿನ್ನಾದೇವಿ, ತಿರುಮಲದೇವಿಯರು ಸಹ ರಾಜನ ಮನಸಂತೋಷಪಡಿಸಲು ನೃತ್ಯವನ್ನು ಮಾಡುತ್ತಿದ್ದರೆಂಬ ಪ್ರತೀತಿ ಇದೆ.[೪೧] ನೃತ್ಯಕ್ಕಾಗಿಯೇ ವಿಜಯ ವಿಠ್ಠಲ ದೇವಾಲಯವನ್ನು ರಾಣಿಯರ ಸಲುವಾಗಿ ನೃತ್ಯ ಮಂಟಪವನ್ನು ಕಟ್ಟಿಸಿದನೆಂಬ ಪ್ರತೀತಿಯೂ ಇದೆ. ತಿರುಮಲಾದೇವಿ, ಚಿನ್ನಾದೇವಿ ಅಲ್ಲದೇ ಕೃಷ್ಣದೇವರಾಯನ ತಾಯಿಯಾದ ನಾಗಲಾದೇವಿಯೂ ಸಹ ವಿವಾಹವಾಗುವ ಪೂರ್ವದಲ್ಲಿ ಅರಮನೆಯ ದಾಸಿಯಾಗಿದ್ದು ನರ್ತನ, ನಾಟ್ಯ ಇನ್ನಿತರ ಬಹುವೈವಿಧ್ಯಮಯ ವ್ಯಕ್ತಿತ್ವವನ್ನು ಪಡೆದುಕೊಂಡಿದ್ದಳೆಂದು ತಿಳಿಸುವುದರಿಂದ ನಾಗಲಾದೇವಿಯು ಸಹ ಪ್ರಮುಖ ನರ್ತಕಿಯಾಗಿದ್ದಳೆಂದು ಅಭಿವ್ಯಕ್ತ ಪಡಲಾಗುತ್ತದೆ.[೪೨]

ನೃತ್ಯಕ್ಕಾಗಿಯೇ ಅಂದು ಅನೇಕ ಕೃತಿಗಳು ರಚನೆಗೊಂಡವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಕೃಷ್ಣದೇವರಾಯನ 'ಜಾಂಬವತೀ ಕಲ್ಯಾಣ' ಇದು ಸಂಗೀತ ನಾಟ್ಯದ ಬಗ್ಗೆ ವಿವರಣೆ ನೀಡುತ್ತದೆ.[೪೩] ಅಚ್ಯುತರಾಯನ 'ತಾಳಕಾಲವಾರಿದಿಯು' ಆಧುನಿಕ ತಾಳದ ತತ್ವಗಳು ಇದರಲ್ಲಿವೆ. ಪೊಲೂರಿಗೋವಿಂದ ಕವಿಯ 'ತಾಳಿದಶಪ್ರಾಣ ದೀಪಿಕಾ' ಎಂಬ ಗ್ರಂಥವು ನಂತರವಾದರೂ ನೃತ್ಯದ ಬಗ್ಗೆ ಅಧಿಕೃತ ವಿಷಯ ತಿಳಿಸುತ್ತದೆ ಎಂದು ಅಭಿಪ್ರಾಯ ಪಡಲಾಗಿದೆ.[೪೪]

ಒಟ್ಟಿನಲ್ಲಿ ತುಳುವ ಅರಸರ ರಾಣಯರಲ್ಲಿ ತಿರುಮಲಾದೇವಿ, ಚಿನ್ನಾದೇವಿ ಸಂಗೀತ ನಾಟ್ಯ ಬಲ್ಲವರೆಂದು ತಿಳಿಯಬಹುದು. ಹಾಗೆಯೇ ನಾಗಲಾದೇವಿಯು ಸಹ ಸಂಗೀತ ನೃತ್ಯ ಬಲ್ಲ ಪರಿಣಿತಳೆಂಬ ವಾದವಿದೆ. ರಾಣಿಯರು ಸಂಗೀತ ನೃತ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಇದು ಪ್ರಮುಖ

ವಾದಂತಹ ಉಲ್ಲೇಖವಾಗಿತ್ತು. ಶ್ರೀಮಂತ ಹೆಣ್ಣು ಮಕ್ಕಳಿಗೆ ರಾಣಿಯರಿಗೆ ಇದು ಕಡ್ಡಾಯವೆಂಬ ರೀತಿಯಲ್ಲಿ ಇದರ ಶಿಕ್ಷಣ ದೊರಕುತ್ತಿತ್ತು. ಅಂದಿನ ಕಾಲದಲ್ಲಿ ರಾಜರನ್ನು ಸಂತೋಷಪಡಿಸಲು ಇದು ಒಂದು ಮಾರ್ಗವಾಗಿತ್ತು ಎಂದು ಹೇಳಿದರೆ ತಪ್ಪಾಗಲಾರದು. ಅಂದು ಸಂಗೀತ, ನೃತ್ಯಗಳು ರಾಜರಿಂದ ಹಿಡಿದು ಜನಸಾಮಾನ್ಯ ವರ್ಗದವರೆಗೆ ಅದೊಂದು ಜೀವನದ ಒಂದು ಭಾಗವಾಗಿತ್ತು.

ಭರತ ನಾಟ್ಯವು ಅಂದು ಶ್ರೀಮಂತ ವರ್ಗದವರ ನೃತ್ಯವಾಗಿತ್ತು. ನೃತ್ಯ ರಾಜಾಶ್ರಯ ಪಡೆದಿತ್ತು. ಅದು ಕೇವಲ ಶ್ರೀಮಂತ ವರ್ಗದವರು, ರಾಣಿಯರು, ವೇಶ್ಯೆಯರಿಗೆ ಮಾತ್ರ ಮೀಸಲಾಗಿತ್ತು. ಈ ನೃತ್ಯಕ್ಕಾಗಿ ರೇಷ್ಮೆ ಬಟ್ಟೆ ಹಾಗೂ ಬೆಲೆ ಬಾಳುವ ಆಭರಣಗಳಿಂದ ತಯಾರಿಸಿದ ಉಡುಪುಗಳನ್ನು ಧರಿಸ ಬೇಕಾಗಿತ್ತು.[೪೫] ವಿಜಯನಗರದ ಕಾಲದಲ್ಲಿ ಭರತನಾಟ್ಯವು ಶ್ರೀಮಂತವರ್ಗದವರ ನೃತ್ಯವಾಗಿದ್ದು, ತುಳುವ ಅರಸರ ಕಾಲದಲ್ಲಿ ವಿಶೇಷ ಮನ್ನಣೆ ಪಡೆದಿತ್ತು. ರಾಣಿ ವರ್ಗದವರು ವಿದ್ಯೆಯ ಜೊತೆಗೆ ನೃತ್ಯವು ಸಹ ಸಹಜವಾದ ವಿದ್ಯೆ ಮಾದರಿಯ ಕ್ರಮವಾಗಿತ್ತು.

ಸಂಗೀತ ಕಲೆ : ವಿಜಯನಗರ ಕಾಲದಲ್ಲಿ ಅರಸರ ಸಂಗೀತವು ಹೆಚ್ಚು ಪ್ರೋತ್ಸಾಹ ಮನ್ನಣೆ ನೀಡಿ ಬೆಳೆಸಿದರು. ಮುಖ್ಯವಾಗಿ ಇದು ಹಿಂದೂಸ್ಥಾನಿ ಸಂಗೀತಕ್ಕೆ ರಾಜಾಶ್ರಯ ಪಡೆದಿತ್ತು. ರಾಜವರ್ಗ ಬವರಿಂದಲೇ ಸಂಗೀತಕ್ಕಾಗಿ ಅನೇಕ ಗ್ರಂಥಗಳನ್ನು ಸಹ ರಚನೆ ಗೊಂಡಿದ್ದವು. ಅವುಗಳಲ್ಲಿ ಮುಖ್ಯವಾಗಿ ವಿದ್ಯಾರಣ್ಯರು ರಚಿಸಿದ 'ಸಂಗೀತಸಾರ' ಇವರು ಸಂಗೀತ ಶಾಸ್ತ್ರದ ಕರ್ತೃ ಸಹ ಆಗಿದ್ದರು.[೪೬] ವಿಜಯನಗರ ಅರಸನಾದ ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ಸಂಗೀತವು ಅತ್ಯಂತ ಉನ್ನತವಾಗಿ ಪೋಷಿಸಲ್ಪಟ್ಟಿತ್ತು. ವಿಜಯ ವಿಠಲ ದೇವಾಲಯವನ್ನು ಕಟ್ಟಿಸಿ ಅಲ್ಲಿ ೫೬ ಕಂಬಗಳನ್ನು ನಿರ್ಮಿಸಿ ಆ ಕಂಬಗಳ ಮೂಲಕ ವಿವಿಧ ರೀತಿಯ ನಾದ ಸ್ವರಗಳನ್ನು ಹೊರಡಿಸಿರುವುದರಿಂದ ಇದನ್ನು ಸಂಗೀತ ಮಂಟಪವೆಂತಲೂ ಕರೆಯುತ್ತಾರೆ.[೪೭] ತುಳುವ ಅರಸರ ರಾಣಿಯರಲ್ಲಿ ಚಿನ್ನಾದೇವಿ/ತಿರುಮಲಾದೇವಿಯರು ಸಂಗೀತದ ಪ್ರಮುಖ ವಿದ್ವಾಂಸರಿದ್ದರೆಂದು ಇವರು ಸಂಗೀತ ವಾದ್ಯಗಳಲ್ಲಿ ಜನಪ್ರಿಯವಾದ ವೀಣೆಯ ವಿದುಷಿಯರಾಗಿದ್ದರು.[೪೮] ತಿರುಮಲಾಗೇವಿ/ಕೃಷ್ಣದೇವರಾಯ ಮಗಳಾದ ತಿರುಮಲಾಂಬೆಯು ಸಹ ತನ್ನ ಕೃತಿಯಲ್ಲಿ ಅಭಿಪ್ರಾಯ ಪಟ್ಟಿರುವಂತೆ ರಾಯನು ತನ್ನ ಮಗಳೊಂದಿಗೆ ಸಮಯ ಕಳೆಯುವಾಗ ಮಗಳ ಚಿತ್ರಗಳನ್ನು ರಾಗ-ಲಾಪನೆಗಳನ್ನು ಮೆಚ್ಚುತ್ತಿದ್ದನೆಂದು ತಿಳಿಸಿರುವುದರಿಂದಾಗಿ ಈಕೆಯು ಸಹ ಸಂಗೀತ ಬಲ್ಲವಳಾಗಿದ್ದಳೆಂದು ತಿಳಿದುಬರುತ್ತದೆ.[೪೯]

೪.೫. ವಾಸ್ತುಶಿಲ್ಪಕ್ಕೆ ತುಳುವ ರಾಣಿಯರ ಕೊಡುಗೆ

ವಿಜಯನಗರ ಕಾಲದ ವಾಸ್ತುಶಿಲ್ಪವು ಅತ್ಯಂತ ಮಹತ್ವವಾದದ್ದು. ಇಡೀ ದಕ್ಷಿಣ ಭಾರತದಲ್ಲೇ ಪ್ರತ್ಯೇಕವಾದ ವಾಸ್ತುಶಿಲ್ಪ ರಚನೆಯನ್ನು ಇಲ್ಲಿ ಕಾಣಬಹುದು. ವಿಜಯನಗರದ ವಾಸ್ತುಶಿಲ್ಪವೂ ಗ್ರ್ಯಾನೈಟ್ ಕಲ್ಲಿನಿಂದ ನಿರ್ಮಿತವಾದ ವಾಸ್ತುಶಿಲ್ಪವಾಗಿದೆ. ಭಾರತದಲ್ಲಿಯೇ ಸು. ೧೬೦ ಬಗೆಯ ಗ್ರ್ಯಾನೈಟ್ ಇರುವುದು ಕಂಡುಬರುತ್ತದೆ. ವಿಜಯನಗರದ ವಾಸ್ತುಶಿಲ್ಪವು ಅತ್ಯಂತ ಉನ್ನತ ಮಟ್ಟದೆಂದು ಅಭಿಪ್ರಾಯಪಡಲಾಗಿದೆ. ಜೊತೆಗೆ ಸುದೀರ್ಘ ಬಾಳಿಕೆಯಿಂದಾಗಿ ಇದು ವಿಜಯನಗರ ಕಾಲದಲ್ಲಿಯೇ ಹೆಚ್ಚು ಉಪಯೋಗಿಸಲ್ಪಟ್ಟಿದೆ.[೫೦] ಈ ವಾಸ್ತುಶಿಲ್ಪ ಶೈಲಿಯೂ ತಮಿಳು ವಾಸ್ತುಶಿಲ್ಪ ಎಂದರೆ ದ್ರಾವಿಡ

ಶೈಲಿಯನ್ನು ಒಳಗೊಂಡಿದೆ. ಒಂದು ಅಭಿಪ್ರಾಯದ ಪ್ರಕಾರ ತಮಿಳುನಾಡಿನಿಂದ ಶಿಲ್ಪಗಳನ್ನು ಕರೆತಂದು ನಿರ್ಮಿಸಲಾಗಿದೆ ಎಂದು ಹೇಳಲಾಗುತ್ತದೆ.[೫೧] ಇಲ್ಲಿ ಒಟ್ಟು ನಾಲ್ಕು ಬಗೆಯ ವಾಸ್ತುಶಿಲ್ಪ ಲಕ್ಷಣಗಳು ನಿರ್ಮಾಣಗೊಂಡವು. ಅವುಗಳಲ್ಲಿ ದೇವಾಲಯ ವಾಸ್ತುಶಿಲ್ಪ, ಇಸ್ಲಾಮಿಕ್ ವಾಸ್ತುಶಿಲ್ಪ, ಪೌರವಾಸ್ತುಶಿಲ್ಪ, ಸೇನಾಸಂಬಂಧವಾದ ವಾಸ್ತುಶಿಲ್ಪವೆಂದು ವಿಂಗಡಿಸಿರುವುದರಿಂದ' ದ್ರಾವಿಡ ಶೈಲಿ'ಯಲ್ಲಿದ್ದರು ಸಹ ಇದನ್ನು 'ವಿಜಯನಗರ ಶೈಲಿ' ಎಂದೇ ಕರೆಯಲಾಗುತ್ತದೆ.[೫೨]

ವಿಜಯನಗರ ತುಳುವ ರಾಣಿಯರು ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿರುವುದನ್ನು ನಾವು ಕಾಣಬಹುದು. ಮುಖ್ಯವಾಗಿ ಇವರ ವಾಸ್ತುಶಿಲ್ಪವನ್ನು ಎರಡು ವಿಧವಾಗಿ ವಿಂಗಡಿಸಿ ಅಭ್ಯಾಸ ಮಾಡಬಹುದು.

೧. ರಾಣಿಯರು ನಿರ್ಮಿಸಿದ ವಾಸ್ತುಶಿಲ್ಪ

೨. ರಾಣಿಯರಿಗಾಗಿ ನಿರ್ಮಿಸಿದ ವಾಸ್ತುಶಿಲ್ಪ

೧. ರಾಣಿಯರು ನಿರ್ಮಿಸಿದ ವಾಸ್ತುಶಿಲ್ಪ

ತುಳುವ ವಂಶದಲ್ಲಿ ಮುಖ್ಯವಾಗಿ ವಾಸ್ತುಶಿಲ್ಪಕ್ಕೆ ಕೊಡುಗೆ ನೀಡಿದವರೆಂದರೆ ಚಿನ್ನಾದೇವಿ ಹಾಗೂ ತಿರುಮಲದೇವಿಯರು. ಇವರಿಬ್ಬರನ್ನು ಬಿಟ್ಟರೆ ಬೇರೆ ರಾಣಿಯರು ನಿರ್ಮಿಸಿದ ಸಂಗತಿಯಾಗಲಿ ಅಥವಾ ನಿರ್ಮಿಸಿದ ಕಟ್ಟಡಗಳಾವು ಕಂಡುಬರುವುದಿಲ್ಲ. ಈ ರಾಣಿಯರು ನಿರ್ಮಿಸಿದ್ದು ಗೋಪುರವಾಗಿದೆ.

ಪ್ರಕಾರ ಗೋಪುರ : ತಿರುಮಲದೇವಿ ಮತ್ತು ಚಿನ್ನಾದೇವಿಯರಿಬ್ಬರು ಕ್ರಿ.ಶ. ೧೫೧೩ರಲ್ಲಿ ವಿಠ್ಠಲ ದೇವಾಲಯಕ್ಕೆ ಪ್ರಕಾರ ಗೋಪುರವನ್ನು ನಿರ್ಮಿಸಿದರು. ಗೋಪುರಕ್ಕೆ ಹೊಂದಿಕೊಂಡಂತೆ ಪೂರ್ವ, ದಕ್ಷಿಣ, ಉತ್ತರಕ್ಕೆ ಮೂರು ದ್ವಾರಗೋಪುರಗಳಿವೆ. ಇದರಲ್ಲಿ ಪೂರ್ವದ ಗೋಪುರವು ಮುಖ್ಯ ದ್ವಾರಗೋಪುರವಾಗಿದ್ದು, ಇದು ತೇರುಬಿದಿಗೆ ಮುಖಮಾಡಿದೆ. ಈ ಗೋಪುರವು ಉತ್ತರ ದಿಕ್ಕಿನ ದ್ವಾರಗೋಪುರದ ನದಿ ತೀರಕ್ಕೆ ಹೋಗುವ ಮಾರ್ಗದಲ್ಲಿದೆ. ದಕ್ಷಿಣ ದಿಕ್ಕಿನ ದ್ವಾರಗೋಪುರವು ವಿರೂಪಾಕ್ಷಪುರಕ್ಕೆ ಹೋಗುವ ದ್ವಾರಬಾಗಿಲಿನಲ್ಲಿದೆ. ಈ ಗೋಪುರದ ಗೋಡೆಯು ಕೆಳಭಾಗವನ್ನು ಕಲ್ಲಿನ ಬಂಡೆಗಳಿಂದ ನಿರ್ಮಿಸಿ, ಆಮೇಲೆ ಇಟ್ಟಿಗೆ ಗಾರೆಯಿಂದ ಕಟ್ಟಲಾಗಿದೆ. ಇದು ೧೫ ಅಡಿಗಳಷ್ಟು ಎತ್ತರ ಗೋಡೆಯಾಗಿದೆ.[೫೩]

೨. ರಾಣಿಯರಿಗಾಗಿ ನಿರ್ಮಿಸಿದ ವಾಸ್ತುಶಿಲ್ಪ

ಕೃಷ್ಣದೇವರಾಯನ ಕಾಲದಲ್ಲಿ ವಾಸ್ತುಶಿಲ್ಪಕ್ಕೆ ಅಪಾರ ಕೊಡುಗೆ ನೀಡಿರುವುದು ಕಂಡುಬರುತ್ತದೆ. ಇವನು ತನ್ನ ಮಡದಿಯರಿಗಾಗಿ ನಿರ್ಮಿಸಿದ ವಾಸ್ತುಶಿಲ್ಪವು ಪ್ರಮುಖವಾದುದಾಗಿದೆ. ಇವು ಇಂದಿಗೂ ಜೀವಂತವಾಗಿದ್ದು ಅಂದಿನ ರಾಣಿಯರ ಜೀವನದ ನೆನಪನ್ನು ಮರುಕಳಿಸುತ್ತದೆ. ಅವುಗಳೆಂದರೆ.

ಕಮಲ್ ಮಹಲ್ : ಹಂಪಿಯ ಸ್ಮಾರಕಗಳಲ್ಲಿಯೇ ಅತ್ಯಂತ ಗಮನ ಸೆಳೆಯುವ ಅಪರೂಪದ ಕಟ್ಟಡ ಗಳಲ್ಲಿ ಕಮಲ್ ಹಮಲ್ ಒಂದು. ಎರಡು ಮಹಡಿಗಳ ಪೆವಿಲಿಯನ್.[೫೪] ಇದು ಚೌಕಾಕಾರದಲ್ಲಿದೆ. ಇದನ್ನು ಚಿತ್ರಾಂಗಿಣಿ ಮಹಲ್, ರಾಣಿಮಹಲ್, ಲೋಟಸ್ ಮಹಲ್, ಪದ್ಮಮಹಲ್, ಪಂಚಮಹಲ್

ಎಂತಲೂ ಕರೆಯುತ್ತಾರೆ. ಈ ಕಟ್ಟಡವೂ ಇಸ್ಲಾಮಿಕ್ ಶೈಲಿಯಲ್ಲಿದೆ. ಕಮಲ್ ಮಹಲ್ ಎಂದು ಹೆಸರು ಬರಲೂ ಕಾರಣವೇನೆಂದರೆ ಮೇಲಿನಿಂದ ನೋಡಿದಾಗ ಇದು ಕಮಲ ಅರಳಿದ ಹೂವಿನ ಹಾಗೆ ಕಾಣಿಸುವುದರಿಂದಾಗಿ ಹೀಗೆ ಕರೆಯುತ್ತಾರೆ. ಪರ್ಶಿಯನ್ ಭಾಷೆಯಲ್ಲಿ 'ಜನಾನ್ ಎನ್‌ಕ್ಲೋಸರ್' ಎಂದು ಕರೆಯುತ್ತಾರೆ. ಇದು ತಿರುಮಲಾದೇವಿ ಮತ್ತು ಚಿನ್ನಾದೇವಿಯರ ಸಲುವಾಗಿ ಕಟ್ಟಲಾಗಿದೆ. ಏಕೆಂದರೆ ಬೇಸಿಗೆ ಕಾಲವನ್ನು ರಾಣಿಯರು ಇಲ್ಲಿ ಕಾಲ ಕಳೆಯುತ್ತಿದ್ದರೆಂದು ಐತಿಹ್ಯವಾಗಿ ಹೇಳಲಾಗುತ್ತದೆ. ಅಲ್ಲದೆ ಇದನ್ನು ೩ನೇ ದೇವರಾಯನು ತನ್ನ ಮಡದಿಗಾಗಿ ನಿಲ್ಲಿಸಿದನೆಂದು ಹೇಳಲಾಗುತ್ತದೆ. ಆದರೆ ಇದಕ್ಕೆ ಸ್ಪಷ್ಟ ಅಧಾರವಿಲ್ಲ. ಒಟ್ಟಿನಲ್ಲಿ ರಾಣಿಯರಿಗಾಗಿ ನಿರ್ಮಿಸಿರುವುದು ನಿಜಕ್ಕೂ ಅದ್ಭುತವಾದದ್ದು ಎಂದು ಹೇಳಿದರೆ ತಪ್ಪಾಗಲಾರದು.[೫೫]

ರಾಣಿಯರ ಸ್ನಾನಗೃಹ : ಇದು ಚೌಕಾಕಾರದ ನೀರಿನ ಅಂಗಳ. ಕಟ್ಟಡದ ಹೊರಭಾಗ ಸಾದಾ ಆಗಿದೆ. ನಡುವೆಯ ಒಳಭಾಗವು ಬೋಗುಣಿಗೆ ತೆರೆದಿದ್ದು ಕಾಮಾನುಗಳಿಂದ ಕೂಡಿದೆ. ಇದರ ಬಾಲ್ಕನಿಯ ಹೊರಭಾಗ ಗಾರೆಯ ತಾವರೆಯ ಮೊಗ್ಗುಗಳು, ಹಂಸಗಳು, ಯಾಳಿಗಳು, ಗಿಳಿಗಳು, ಹೂವಿನ ದಳಗಳು, ಹೂಬಳ್ಳಿಗಳಿಂದ ಕೂಡಿದೆ.[೫೬] ಇದನ್ನು 'ಓಕಳಿಯ ಹೊಂಡ' ವೆಂದು ಕರೆಯಲಾಗಿದೆ. ಪ್ರತಿದಿನವು ಇಲ್ಲಿ ರಾಣಿಯರು ಆನೆ ಪಲ್ಲಕ್ಕಿಯ ಮೇಲೆ ಕುಳಿತು ಸ್ತ್ರೀ ಸೇವಕಿಯರೊಂದಿಗೆ ಜಲಕ್ರೀಡೆಗಾಗಿ ಬರುತ್ತಿದ್ದರೆಂದು ಪ್ರತೀತಿ. ಇದರ ಸುತ್ತಲೂ ಎಂಟು ಬಾಲ್‌ಕಾನ್‌ಗಳಿದ್ದು ಇದರ ಸುತ್ತಲೂ ಸ್ತ್ರೀ ಸೇವಕಿಯರು ಕುಳಿತು ಪುಷ್ಪಗಳನ್ನು ನೀರಿನಲ್ಲಿ ಬಿಡುತ್ತಿದ್ದರು. ರಾಣಿಯರು ಜಲಕ್ರೀಡೆಯನ್ನಾಡುವಾಗ ಅವರಿಗೆ ಹೆಚ್ಚು ಸಂತೋಷವನ್ನುಂಟು ಮಾಡಲು ಅವರ ಜೊತೆಗೆ ಸ್ತ್ರೀ ಸಮೂಹವು ಇರುತ್ತಿತ್ತು. ಇವರ ಸ್ನಾನ ಮಾಡಿದ ನಂತರ ಹತ್ತಿರವಿದ್ದ ಚಂದ್ರಶೇಖರ ದೇವಾಲಯಕ್ಕೆಹೋಗಿ ಪೂಜೆ ಸಲ್ಲಿಸಿ ಅಂತಃಪುರಕ್ಕೆ ಹೋಗುತ್ತಿದ್ದರೆಂಬುದು ಪ್ರತೀತಿ. ಜೊತೆಗೆ ಇವರು ಸ್ನಾನ ಮಾಡುವಾಗ ಪುರುಷರ ಪ್ರವೇಶವಿರಬಾರದೆಂದು ಮಂದಿರದ ಸುತ್ತಲೂ ಕಂದಕಗಳನ್ನು ನಿರ್ಮಿಸಲಾಗಿತ್ತು. ಇಲ್ಲಿ ದೊಡ್ಡ ದೊಡ್ಡ ಮೊಸಳೆ ಬಿಡಲಾಗಿತ್ತು. ಈ ಮಂದಿರ ನಾಲ್ಕು ಕಾಲುವೆಗಳನ್ನು ಹೊಂದಿದ್ದು ಎರಡು ಕಾಲುವೆಗಳ ಮೂಲಕ ಒಳನೀರನ್ನು ಬಿಟ್ಟರೇ ಇನ್ನುಳಿದ ಎರಡು ಕಾಲುವೆಗಳ ಮೂಲಕ ಸ್ನಾನ ಮಾಡಿದ ನೀರನ್ನು ಹೊರಬಿಡುವ ವ್ಯವಸ್ಥೆ ಮಾಡಲಾಗಿತ್ತು. ಇದರಿಂದ ರಾಣಿಯರ ಕುರಿತು ಹೆಚ್ಚು ಸುರಕ್ಷತೆಯ ಕಡೆಗೆ ಗಮನ ನೀಡಲಾಗಿತ್ತು ಎಂದು ತಿಳಿಯಬಹುದು. ಜೊತೆಗೆ ರಾಣಿಯರ ಸ್ನಾನ ಮಾಡುವಾಗ ಬಿಸಿಲು ಬೀಳಬಾರದೆಂದು ಈ ಕೊಳದ ಮೇಲೆ ನಾಲ್ಕು ಕಂಬಗಳಿದ್ದು, ಈ ಕಂಬದ ಮೇಲೆ ಸಣ್ಣ ಕಟ್ಟಡ ನಿರ್ಮಾಣವಿದೆ. ಈ ಕಾರಣದಿಂದಾಗಿ ಎಂದು ಹೇಳಿರುವುದರಿಂದ ಅದು ರಾಣಿಯರ ಜೀವನವು ಎಷ್ಟು ವಿಲಾಸವಾಗಿತ್ತು, ಹಾಗೂ ರಾಣಿಯರ ಕುರಿತು ಪ್ರಾಮುಖ್ಯತೆ ನೀಡುತ್ತಿದ್ದ ಬಗೆಯನ್ನು ಗುರುತಿಸಬಹುದಾಗಿದೆ.[೫೭]

ನೃತ್ಯಮಂಟಪ (ಸಂಗೀತ ಮಂಟಪ) : ಸಂಗೀತ, ನೃತ್ಯವು ತುಳುವ ವಂಶದ ಕಾಲದಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದ ಕಲೆಯಾಗಿತ್ತು. ಅನೇಕ ದೇವಾಲಯಗಳಲ್ಲಿ ನಾಟ್ಯವಾಡುತ್ತಿರುವ ಸ್ತ್ರೀವರ್ಗವನ್ನು ಕಾಣಬಹುದು. ಆದರೆ ಈ ನಾಟ್ಯಮಂಟಪವನ್ನು ಕೃಷ್ಣದೇವರಾಯನು ತನ್ನ ಪಟ್ಟದರಸಿಯರಿಗಾಗಿ ನಿರ್ಮಿಸಿರುವುದು ವಿಶೇಷ. ರಾಣಿಯರಾದ ಚಿನ್ನಾದೇವಿ, ತಿರುಮಲಾದೇವಿಯು ಸಂಗೀತ, ನೃತ್ಯದಲ್ಲಿ

ಪ್ರಖ್ಯಾತರಾಗಿದ್ದರು. ಇವರು ವಿಶೇಷ ಪೂಜೆ ಸಂದರ್ಭದಲ್ಲಿ ರಾಜನ ಮನಸಂತೋಷಪಡಿಸಲು ಇಲ್ಲಿ ನೃತ್ಯ ನಡೆಸುತ್ತಿದ್ದರೆಂದು ಜಾನಪದ ಹಿನ್ನೆಲೆಯಿಂದ ಹೇಳಲಾಗುತ್ತದೆ. ಇದಕ್ಕೆ ಅಧಾರವಾಗಿ ಈ ಮಂಟಪದಲ್ಲಿ ೫೬ ಕಂಬಗಳಿದ್ದು ಪ್ರತಿಯೊಂದು ಕಂಬದಲ್ಲಿಯೂ ಸಹ ಭಿನ್ನವಾದ ನಾದಸ್ವರ ಹೊರಡುವುದರಿಂದ ಈ ಮೇಲಿನ ಹಿನ್ನೆಲೆ ಸ್ಪಷ್ಟಪಡಿಸುತ್ತದೆ. ತುಳುವ ವಂಶದಲ್ಲಿಯೇ ಕೃಷ್ಣದೇವರಾಯನು ರಾಣಿಯರಿಗಾಗಿ ಮಂಟಪ ನಿರ್ಮಿಸಿರುವುದು ನಿಜಕ್ಕೂ ಶ್ಲಾಘನೀಯವಾದ ಸಂಗತಿಯಾಗಿದೆ.[೫೮]

ತಿರುಮಲಾದೇವಿ ಗೋಪುರ : ಕೃಷ್ಣದೇವರಾಯ ಹಿರಿಯ ರಾಣಿಗಾಗಿ ವಿಜಯ ವಿಠಲ ದೇವಾಲಯದ ಪೂರ್ವದ್ವಾರದಲ್ಲಿ ನಿರ್ಮಿಸಿದನು. ಇದು ಅರ್ಧಕಲ್ಲಿನಿಂದ, ಅರ್ಧ ಇಟ್ಟಿಗೆಯಿಂದ ನಿರ್ಮಾಣಗೊಂಡಿದೆ. ಈ ಗೋಪುರದ ಮೇಲೆ ಬಂಗಾರದ ಕಳಸಗಳಿದ್ದವೆಂದು, ಅವು ತಾಳಿಕೋಟೆ ಸಂದರ್ಭದಲ್ಲಿ ನಾಶಪಡಿಸಲಾಯಿತೆಂದು ಹೇಳಲಾಗುತ್ತದೆ.ಇದು ೧೨೦ ಅಡಿ ಎತ್ತರವಾದ ಗೋಪುರವಾಗಿದೆ.

ಚಿನ್ನಾದೇವಿ ಗೋಪುರ : ಪ್ರೀತಿಯ ರಾಣಿಯಾದ ಚಿನ್ನಾದೇವಿ ಜ್ಞಾನಪಕಾರ್ಥವಾಗಿ ಕಟ್ಟಿಸಿದನೆನ್ನಲಾಗಿದೆ. ವಿಠಲ ದೇವಾಲಯದ ದಕ್ಷಿಣ ದಿಕ್ಕಿನಲ್ಲಿದೆ. ೮೦ ಅಡಿ ಎತ್ತರವಾಗಿದೆ. ಬಲಭಾಗ ವಿಠಲ ವಿಗ್ರಹವಿದ್ದರೆ ಎಡಭಾಗದಲ್ಲಿ ರುಕ್ಮಿಣಿ ವಿಗ್ರಹವಿದೆ.[೫೯]

ತುಲಾಭಾರ : ಇದನ್ನು ಕೃಷ್ಣದೇವರಾಯನು ಕಟ್ಟಿಸಿದನು. ಇದು ೧೫ ಅಡಿ ಎತ್ತರದಲ್ಲಿದೆ. ಎರಡು ಕಲ್ಲಿನ ಕಂಬಗಳ ಮೇಲೆ ೧೨ ಅಡಿ ಉದ್ದದ ಇನ್ನೊಂದು ಕಂಬವನ್ನು ಇಡಲಾಗಿದೆ. ಇದಕ್ಕೆ ತಕ್ಕಡಿಯಲ್ಲಿ ಒಂದು ಕಡೆ ರಾಣಿಯರನ್ನು (ಅರಸ) ಇನ್ನೊಂದು ಕಡೆ ಅಷ್ಟೇ ಸಮವಾದ ಮುತ್ತುರತ್ನಗಳನ್ನು ಹಾಕಿ ತೂಗಿ ಬ್ರಾಹ್ಮಣರಿಗೆ ದಾನ ಮಾಡುತ್ತಿದ್ದನೆಂದು ಜೊತೆಗೆ ರಾಣಿಯರೊಂದಿಗೆ ತುಲಾಭಾರ ಮಾಡಿಸಿಕೊಂಡು ಬಡಜನರಿಗೆ ಸಂಪತ್ತನ್ನು ದಾನ ಮಾಡುತ್ತಿದ್ದನೆಂಬು ಐತಿಹ್ಯದಿಂದ ಹೇಳಲಾಗುತ್ತದೆ.[೬೦]

ಒಟ್ಟಿನಲ್ಲಿ ಅನೇಕ ಸ್ಮಾರಕಗಳು, ಗೋಪುರಗಳು, ನಿರ್ಮಾಣಗೊಂಡಿರುವುದು ಹೆಚ್ಚಾಗಿ ರಾಣಿಯರ ಪ್ರೋತ್ಸಾಹದಿಂದಾಗಿ ಎಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ತುಲಾಭಾರದ ಕಂಬದ ಬಲಭಾಗದ ಕೆಳಭಾಗದಲ್ಲಿ ಕೃಷ್ಣದೇವರಾಯನೊಂದಿಗೆ ತಿರುಮಲಾದೇವಿ/ಚಿನ್ನಾದೇವಿಯರು ಕೈಮುಗಿದು ನಿಂತಿರುವುದು ಕಂಡುಬರುವುದರಿಂದಾಗಿ ಅಂದು ರಾಣಿಯರು ಸಾರ್ವಜನಿಕ ಕಾರ್ಯಗಳಿಗೆ ಸ್ವಯಂಪ್ರೇರಿತರಾಗಿ ಕೆಲಸ ಮಾಡುತ್ತಿದ್ದರೆಂಬುದು ಇದು ಸ್ಪಷ್ಟಪಡಿಸುತ್ತದೆ. ಹಾಗೂ ರಾಜನ ಮೇಲೆ ರಾಣಿಯರ ಪ್ರಭಾವವು ಹೆಚ್ಚಾಗಿತ್ತು ಎಂದು ತಿಳಿಯಬಹುದು. ಇವರ ಉತ್ತೇಜನದಿಂದಲೇ ತುಳುವ ವಂಶದ ಆಳ್ವಿಕೆಯಲ್ಲಿ ಈ ರೀತಿ ವಾಸ್ತುಶಿಲ್ಪಗಳು ನಿರ್ಮಾಣವಾಗಿರುವು ಸ್ಪಷ್ಟ.

ಟಿಪ್ಪಣಿಗಳು

೧. ಹಂಪೆ ಪ್ರಖ್ಯಾತ ರಾಜಧಾನಿ

೨. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೧೮೯

೩. ಶ್ರೀ ಕಂಠಯ್ಯ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು. ೧೪೬

೪. ಎಸ್.ವೈ. ಸೋಮಶೇಖರ್, ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ, ಯುದ್ಧ ನೀತಿ, ಪು.

೫. ಸುಜಾನತ ಮಲ್ಲನಗೌಡ, ವಿಜಯನಗರ ಅಧ್ಯಯನ, ಸಂ.೩

೬. ಎನ್. ಚಿನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ, ಪು. ೭೬

೭. ಎಸ್.ವೈ. ಸೋಮಶೇಖರ್, ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ, ಯುದ್ಧ ನೀತಿ, ಪು. ೩೮, ೩೯

೮. ಜಿ.ಎಸ್. ದೀಕ್ಷಿತ್, ಕೃಷ್ಣದೇವರಾಯನ ಜೀವನ ಮತ್ತು ಸಾಧನೆ, ಪು. ೧೦೭

೯. ಬಿ.ಎ. ವಿವೇಕ ರೈ, (ಸಂ.) ಪ್ರವಾಸಿ ಕಂಡ ವಿಜಯನಗರ, ಪು. ೩೪

೧೦. ಸಿ.ಆರ್ ಗೋವಿಂದರಾಜು, ಕರ್ನಾಟಕ ಚರಿತ್ರೆ, ಸಂ.೩, ಪು. ೩೪೯-೩೫೦

೧೧. ಪುಲುಮತಿ ಶ್ಯಾಮರಾವ್, ವಿಜಯನಗರ ಕಾಲದ ಕಲೆ ಮತ್ತು ಸಾಹಿತ್ಯ, ಪು.

೧೨. ಚನ್ನಬಸಪ್ಪ, ವಿನೋದಾ ಪಾಟೀಲ್, ಬಳ್ಳಾರಿ ಜಿಲ್ಲೆಯ ಶಾಸನಗಳು, ಪು. ೨೯

೧೩. ಅದೇ, ಪು. ೭

೧೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೩, ಪು. ೨೩೦

೧೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫, ಪು. ೨೫೯

೧೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ಪು. ೩೮

೧೭. ಅದೇ

೧೮. ಅದೇ

೧೯. ಕೆ. ಮಹೇಶ್, ಕೃಷ್ಣದೇವರಾಯನ ಕಾಲದ ವೈಭವ ದೇವಾಲಯಗಳು, ಪು. ೧೯೦

೨೦. ಚಂದ್ರಶೇಖರ್, ವಿಜಯನಗರ ಅಧ್ಯಯನ, ಸಂ. ೧೦, ಪು. ೧೨೪-೧೨೫

೨೧. ಚೆನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪು. ೭೯

೨೨. ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ, ಪು.

೨೩. ಪುಲುಮತಿ ಶ್ಯಾಮರಾವ್, ವಿಜಯನಗರ ಕಲೆ ಮತ್ತು ಸಾಹಿತ್ಯ, ಪು.

೨೪. ಎನ್. ಚಿನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ, ಪು. ೧೩೦

೨೫. ಕಾಶಿ ವಿಶ್ವನಾಥ ಶೆಟ್ಟಿ, ಕನ್ನಡ ಕವಿಯತ್ರಿಯರು, ಪು.

೨೬. ಪುಲುಮತಿ ಶ್ಯಾಮರಾವ್, ವಿಜಯನಗರದ ಕಲೆ ಮತ್ತು ಸಾಹಿತ್ಯ, ಪು.

೨೭. ಕಾಶಿವಿಶ್ವನಾಥ ಶೆಟ್ಟಿ, ಕನ್ನಡ ಕವಿಯಿತ್ರಿಯರು, ಪು.

೨೮. ಜಿ.ಎಸ್. ದೀಕ್ಷಿತ್, ಕೃಷ್ಣದೇವರಾಯನ ಜೀವನ ಮತ್ತು ಸಾಧನೆ, ಪು. ೧೨, ೯೮, ೧೦೯

೨೯. ಕಾಶಿವಿಶ್ವನಾಥ ಶೆಟ್ಟಿ, ಸಾಧನೆ, ಪು. ೧೨, ೯೮, ೧೦೯

೩೦. ಸರೋಜಿನಿ ಮಹಿಷಿ, ಕರ್ನಾಟಕದ ಕವಿಯಿತ್ರಿಯರು, ಪು.

೩೧. ಎನ್. ಚಿನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ, ಪು. ೧೩೨

೩೨. ಅದೇ, ಮಹಿಷಿ, ಪು.

೩೩. ದೇವರಕೊಂಡಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ ೩, ಶಾಸನ ಸಂಖ್ಯೆ. ೧೮೪

೩೫. ಡಾ. ಎಚ್. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕತಿ ಸಮೀಕ್ಷೆ, ೨೦೦೧, ಪು. ೬೯೦

೩೬. ಚೆನ್ನಕ್ಕ ಎಲಿಗಾರ, ಪ್ರಾಚೀನ ಕರ್ನಾಟಕದ ರಾಣಿಯರು, ಪು. ೧೪-೧೫

೩೭. ಜಿ.ಎಸ್. ದೀಕ್ಷಿತ್ ಇತರರು, ಕೃಷ್ಣದೇವರಾಯನ ಜೀವನ ಮತ್ತು ಸಾಧನೆ, ಪು. ೯೯-೧೦೦

೩೮. ಎನ್. ಚಿನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ, ಪು. ೯೨

೩೯. ಶ್ರೀ ಕಂಠಯ್ಯ, ವಿಜಯನಗರ ಕಾಲದ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು. ೪೫೯
೪೦. ಕೆ. ಮಹೇಶ್, ವಿಜಯನಗರ ಅಧ್ಯಯನ, ಸಂ. ೧, ಪು. ೧೧೪
೪೧. ನಾಗಲಾದೇವಿಯ ಚಾರಿತ್ರಿಕ ಹಿನ್ನೆಲೆ, ಪು. ೪೪
೪೨. ಎನ್. ಚಿನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ, ಪು. ೯೧
೪೩. ಕೆ. ಮಹೇಶ್, ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು, ಪು. ೧೪೨
೪೪. ವಿಜಯನಗರ ಅಧ್ಯಯನ, ಸಂ.೧, ಪು. ೧೧೫
೪೫. ಶ್ರೀ ಕಂಠಯ್ಯ, ಪು. ೪೬೦-೪೬೧
೪೬. ರವೀಂದ್ರಕುಮಾರ್, ಮೌಖಿಕ ಚರಿತ್ರೆ ಮತ್ತು ಹಂಪೆ, ಪು. ೪೩೩
೪೭. ವಿಜಯನಗರ ಅಧ್ಯಯನ, ಸಂ. ೧, ಪು. ೪೪
೪೮. ಜಿ.ಎಸ್. ದೀಕ್ಷಿತ್, ಕೃಷ್ಣದೇವರಾಯನ ಜೀವನ ಮತ್ತು ಸಾಧನೆ, ಪು. ೧೩
೩೪. ಅದೇ, ಕರ್ನಾಟಕದ ಕವಿಯಿತ್ರಿಯರು, ಪು.
೪೯. ಎನ್. ಚಿನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ, ಪು. ೧೪೭-೧೪೮
೫೦. ಆರ್. ಪುರುಷೋತ್ತಮ ರೆಡ್ಡಿ, ಇತಿಹಾಸ ದರ್ಶನ, ಸಂ. ೧೬, ಪು. ೧೯೮-೯೯
೫೧. ಡಾ. ಚನ್ನಬಸಪ್ಪ ಎಸ್ ಪಾಟೀಲ, ಕರ್ನಾಟಕದ ಚರಿತ್ರೆ ಸಂ.೩, ಪು. ೩೫೭
೫೨. ಕೆ. ಮಹೇಶ್, ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು, ಪು.
೫೩. ಚನ್ನಬಸಪ್ಪ ಎಸ್. ಪಾಟೀಲ, ಕರ್ನಾಟಕದ ಚರಿತ್ರೆ ಸಂ.೩, ಪು. ೩೬೭
೫೪. ಕೆ. ರವೀಂದ್ರಕುಮಾರ್, ಮೌಖಿಕ ಚರಿತ್ರೆ ಮತ್ತು ಹಂಪೆ, ಪು. ೩೬-೩೭
೫೫. ಚನ್ನಬಸಪ್ಪ ಎಸ್. ಪಾಟೀಲ, ಕರ್ನಾಟಕದ ಚರಿತ್ರೆ ಸಂ. ೪, ಪು. ೩೬೭
೫೬. ಕೆ. ರವೀಂದ್ರಕುಮಾರ್, ಮೌಖಿಕ ಚರಿತ್ರೆ ಮತ್ತು ಹಂಪೆ, ಪು. ೪೩
೫೭. ಅದೇ, ಪು. ೪೪
೫೮. ಅದೇ, ಪು. ೪೭
೫೯. ಕೆ. ರವೀಂದ್ರಕುಮಾರ್, ಮೌಖಿಕ ಚರಿತ್ರೆ ಮತ್ತು ಹಂಪೆ, ಪು. ೪೭-೪೮
೬೦. ಡಾ. ಬಸವರಾಜ ಮಲಶೆಟ್ಟಿ, ಹಂಪೆ ಒಂದು ಪರಿಚಯ, ಪು. ೨೩

ಅಧ್ಯಾಯ ೬

ತುಳುವ ಅರಸರ ರಾಣಿಯರು ಮತ್ತು ಆಕಾಲದ ಸಾಮಾನ್ಯ ಮಹಿಳೆಯರು : ತೌಲನಿಕ ಅಧ್ಯಯನ

ತುಳುವ ಅರಸರ ರಾಣಿಯರು ಮತ್ತು ಆಕಾಲದ ಸಾಮಾನ್ಯ ಮಹಿಳೆಯರ : ತೌಲನಿಕ ಅಧ್ಯಯನ

ವಿಜಯನಗರ ಸಾಮ್ರಾಜ್ಯದಲ್ಲಿ ರಾಣಿಯರಷ್ಟೇ ಅಲ್ಲದೆ ಸಾಮಾನ್ಯ ಮಹಿಳೆಯರು ಸಹಾ ಯಾವ ರೀತಿ ಎಲ್ಲಾ ರಂಗಗಳಲ್ಲೂ ಪಾತ್ರವಹಿಸಿದ್ದಾರೆಂಬುದಕ್ಕೆ ಅನೇಕ ಸಂಗತಿಗಳನ್ನು ಚರ್ಚಿಸಬಹುದಾಗಿದೆ. ಈ ಬಗ್ಗೆ ಅಧ್ಯಯನ ಮಾಡುವಾಗ ಮಹಿಳೆಯರ ಸಾಧನೆಗಳ ಬಗ್ಗೆ ಹಾಗೂ ಜೀವನ ವಿಧಾನದ ಬಗ್ಗೆ ಆ ಕಾಲದ ಶಿಲ್ಪ, ಶಾಸನ, ಸಮಕಾಲೀನ ಸಾಹಿತ್ಯ ಗ್ರಂಥಗಳಲ್ಲದೆ, ವಿದೇಶಿ ಪ್ರವಾಸಿಗರ ಬರವಣಿಗೆಗಳು ಬೆಳಕು ಚೆಲ್ಲುತ್ತವೆ. ವಿಜಯನಗರ ಕಾಲದಲ್ಲಿ ರಾಣಿಯರಂತೆ ಸಾಮಾನ್ಯ ಮಹಿಳೆಯರ ಪಾತ್ರ ವಿವಿಧ ಕ್ಷೇತ್ರಗಳಲ್ಲಿ ಪ್ರಮುಖವಾಗಿತ್ತು.)ಅವರು ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಹ ಭಾಗವಹಿಸುತ್ತಿದ್ದ ರೆಂಬುದಾಗಿ ಕೆಲವು ನಿದರ್ಶನಗಳಿಂದ ತಿಳಿದುಬರುತ್ತದೆ.)

ವಿಜಯನಗರ ಕಾಲದಲ್ಲಿ ಸಾಮಾನ್ಯ ಸ್ತ್ರೀಯರು ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಇವರು ಸಂಪೂರ್ಣವಾಗಿ ಸ್ವಾತಂತ್ರ್ಯವನ್ನು ಪಡೆದಿದ್ದರೆಂಬುದಾಗಿ ತಿಳಿದುಬರುತ್ತದೆ. ಏಕೆಂದರೆ ವಿಜಯನಗರ ಕಾಲದಲ್ಲಿ ಸಾಮಾನ್ಯ ಮಹಿಳೆಯರ ಸೇವೆ ವಿಶೇಷವಾದದ್ದು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಹಾ ಇವರು ಪುರುಷರಿಗೆ ಸಮನಾಗಿ ದುಡಿದಿದ್ದಾರೆ. ಇಲ್ಲಿ ಸ್ತ್ರೀ ಪುರುಷರ ನಡುವೆ ತಾರತಮ್ಯ ಭಾವನೆಗಳಿಗೆ ಅವಕಾಶವೇ ಇರಲಿಲ್ಲ. ಈ ಕಾಲದಲ್ಲಿ ಸ್ತ್ರೀಯರು ರಾಜ್ಯಕಾರ್ಯ ಧುರೀಣೆಯರೆಂಬ ಬಿರುದಿಗೆ ಪಾತ್ರರಾಗಿದ್ದರು. ಶ್ರೀ ಕೃಷ್ಣದೇವರಾಯನ ಕಾಲದಲ್ಲಿಯೇ ಅಂತಃಪುರದಲ್ಲಿ ೧೨,೦೦೦ ಪರಿಚಾರಕಿಯರು ಇದ್ದರೆಂದು ವಿದ್ವಾಂಸರು ತಿಳಿಸಿದ್ದಾರೆ. ಇವರು ಅರಮನೆಯ ಪ್ರತಿಯೊಂದು ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರೆಂಬುದಕ್ಕೆ ಆಧಾರಗಳಿವೆ.

ತುಳುವ ವಂಶದ ಕಾಲಘಟ್ಟದಲ್ಲಿ ಅಂದಿನ ರಾಣಿಯರ ಹಾಗೂ ಸಾಮಾನ್ಯ ಮಹಿಳೆಯರ ನಡುವೆ ಇರುವ ಜೀವನ ವಿಶಿಷ್ಟ ಸಂಗತಿಗಳನ್ನು ಇಲ್ಲಿ ತೌಲನಿಕವಾಗಿ ನೋಡುವ ಅವಶ್ಯಕತೆ ಇದೆ.

೧. ಹೋರಾಟದಲ್ಲಿ ರಾಣಿ ಮತ್ತು ಸಾಮಾನ್ಯ ಮಹಿಳೆಯರ ಪಾತ್ರ ಪರಿಗಣಿಸುವಂತದ್ದು. ವಿಜಯನಗರ ಕಾಲದಲ್ಲಿ ಮಹಿಳೆಯರು ಅನೇಕ ಯುದ್ಧಗಳಲ್ಲಿ ಪಾಲ್ಗೊಂಡ ಬಗ್ಗೆ ವಿವರಗಳಿವೆ. ಇವರಿಗೆ ಯುದ್ಧ ತರಬೇತಿ ನೀಡುತ್ತಿದ್ದ ಬಗ್ಗೆ ಒಂಟೆ ಸವಾರಿ, ಕುದುರೆ ಸವಾರಿ, ಆನೆ ಸವಾರಿ ಮಾಡುತ್ತಿದ್ದ ಬಗ್ಗೆ ಹಜಾರರಾಮ ದೇವಾಲಯ, ಮಹಾನವಮಿದಿಬ್ಬ ಇತ್ಯಾದಿ ಶಿಲ್ಪಗಳಿಂದ ಹಾಗೂ ಆ ಕಾಲದ ಬರವಣಿಗೆಗಳಿಂದ ತಿಳಿಯಬಹುದು. ಮಹಿಳೆಯರು ಯುದ್ಧದಲ್ಲಿ ಪ್ರಾವೀಣ್ಯತೆ ಪಡೆದಿದ್ದರೆಂದು ಹೇಳಲಾಗುತ್ತದೆ. ಜೊತೆಗೆ ಮಲ್ಲಯುದ್ಧದಲ್ಲಿ ಅಂದು ಮಹಿಳೆಯರು ಭಾಗವಹಿಸುತ್ತಿದ್ದರೆಂದು ಇದರಲ್ಲಿ

'ಹರಿಯಕ್ಕ' ಎಂಬುವವಳು ಪ್ರಖ್ಯಾತ ಕುಸ್ತಿಪಟುವಾಗಿದ್ದಳು ಎಂಬುದಾಗಿ ನ್ಯೂನಿಜ್‌ನು ಅಭಿಪ್ರಾಯ ಪಟ್ಟಿದ್ದಾನೆ.[೧]

ಹಾಗೆಯೇ ರಾಣಿಯರು ಸಹಾ ಯುದ್ಧದಲ್ಲಿ ಭಾಗವಹಿಸಿದ್ದಾರೆ. ಆದರೆ ರಾಣಿಯರನ್ನು ಮೇನೆಗಳಲ್ಲಿ ಕರೆದ್ಯೊಯುತ್ತಿದ್ದರು. ಸಾಮಾನ್ಯ ಮಹಿಳೆಯರು ಕುದುರೆ, ಕಾಲ್ನಡಿಗೆಗಳಲ್ಲಿ ಪ್ರಯಾಣಿಸಿ ಭಾಗವಹಿಸುತ್ತಿದ್ದರು. ರಾಣಿಯರು ಸ್ಫೂರ್ತಿಯನ್ನು ನೀಡಿದರೆ, ಸಾಮಾನ್ಯ ಮಹಿಳೆಯರು ಹೋರಾಡುತ್ತಿದ್ದರು ಎಂಬುದಾಗಿ ತಿಳಿದುಬರುತ್ತದೆ. ವಿದೇಶಿ ಪ್ರವಾಸಿಗ ಡೊಮಿಂಗೊ ಪಾಯಸ್‌ನ ಪ್ರಕಾರ ರಾಣಿಯರು ಹೋರಾಟದಲ್ಲಿ ಪಾಲ್ಗೊಂಡ ಬಗ್ಗೆ ತಿಳಿದುಬರುತ್ತದೆ ಹೊರತು, ಹೋರಾಡಿದ ಸ್ವರೂಪದ ಬಗ್ಗೆ ತಿಳಿದು ಬರುವುದಿಲ್ಲ. ಆದರೆ ಸಾಮಾನ್ಯ ಮಹಿಳೆಯರು ಯುದ್ಧದಲ್ಲಿ ಹೋರಾಡಿದ ಪ್ರಸಂಗವು ಸಹಜವಾಗಿ ಮಹಿಳೆಯರ ಸಾಹಸವನ್ನು ಎತ್ತಿಹಿಡಿಯುತ್ತದೆ.[೨]

೨. 'ಸತಿಪದ್ಧತಿ'ಯೂ ಸಹಾ ವಿಜಯನಗರದ ತುಳುವ ಅರಸರ ಕಾಲದಲ್ಲಿ ಪ್ರಾಮುಖ್ಯತೆ ಪಡೆದ ಪದ್ಧತಿಯಾಗಿತ್ತು. ಗಂಡಸತ್ತಾಗ ಹೆಂಡತಿಯೂ ಅಗ್ನಿ ಪ್ರವೇಶಿಸಿ ಸಹಗಮನ ಮಾಡುವ ಪದ್ಧತಿಯನ್ನು ಸತಿಪದ್ಧತಿ ಎಂದು ಕರೆಯುತ್ತಾರೆ. ಇದೊಂದು ಪ್ರಮುಖ ಆಚರಣೆಯಾಗಿದ್ದು, ಸಾಮಾನ್ಯ ಮಹಿಳೆ ಹಾಗೂ ರಾಣಿಯರು ಸಹ ಈ ಪದ್ಧತಿ ಆಚರಿಸಿದ ಬಗ್ಗೆ ತಿಳಿದುಬರುತ್ತದೆ. ಆದರೆ ಆಚರಣೆಯಲ್ಲಿ ಭಿನ್ನತೆಯನ್ನು ಗುರುತಿಸಬಹುದು. ಸಾಮಾನ್ಯ ಮಹಿಳೆಯ ಸತಿ ಆಚರಣೆ ಪದ್ಧತಿಯೂ ತುಂಬಾ ಸರಳ ವಾಗಿದ್ದು, ಆಕೆ ಬಡತನದಿಂದ ಬಂದವಳೆಂಬ ಕಾರಣಕ್ಕೋ ಏನೋ ಆತ್ಮಸಂತೋಷದಿಂದ ನೇರವಾಗಿ ಹೋಗಿ ಗಂಡನ ಚಿತೆಯಲ್ಲಿ ಬಿದ್ದು ಸಾಯುತ್ತಾಳೆ. ಆದರೆ ರಾಜಕುಟುಂಬದ ಸ್ತ್ರೀಯರು ಸತಿ ಆಚರಣೆಯಲ್ಲಿ ಅನೇಕ ಶ್ರೀಮಂತಿಕೆಯ ಆಡಂಬರದ ಪದ್ಧತಿಗಳನ್ನು ಅನುಸರಿಸುತ್ತಿದ್ದರು. ಚಿತೆಗೆ ಬೀಳುವ ಮುನ್ನ ನೆಂಟರಿಷ್ಟರನ್ನೆಲ್ಲಾ ಸೇರಿಸಿ ಊಟೋಪಚಾರ ಮಾಡಿಸಿ ಬಿಳಿಯ ಬಣ್ಣದ ಅಥವಾ ಬೂದುಬಣ್ಣದ ಕುದುರೆ ಮೇಲೆ ಕೂರಿಸಿ ಮೆರವಣಿಗೆ ಮಾಡಿಸಿ, ನಿಗದಿತ ಸ್ಥಳಕ್ಕೆ ಬಂದು, ತಾನು ಧರಿಸಿದ ಆಭರಣ, ವಸ್ತುಗಳನ್ನು ಅಪ್ತರಾದವರಿಗೆ ನೀಡಿ, ತಾನು ಸರಳ ಉಡುಪು ಧರಿಸಿ ಸಂಬಂಧಿಕರಿಗೆ ಹೇಳಬೇಕಾದ ಮಾತುಗಳನ್ನು ಹೇಳಿ, ದೇವರನ್ನು ಪ್ರಾರ್ಥಿಸಿ ಚಿತೆಯೊಳಗೆ ಧುಮುಕ್ತಿದ್ದಳೆಂದು ತಿಳಿದು ಬರುತ್ತದೆ. ಕ್ರಮೇಣ ಇದು ರಾಣಿವರ್ಗದವರ ಪ್ರಭಾವದಿಂದಾಗಿ ಇದು ಸಾಮಾನ್ಯರ ಮೇಲೂ ಪ್ರಭಾವ ಬೀರಿತ್ತು.[೩]

ಅಲ್ಲದೆ, ರಾಜರು ಸಹ ಇದಕ್ಕೆ ಪ್ರೋತ್ಸಾಹಿಸುತ್ತಿದ್ದರು ಎಂಬುದಕ್ಕೆ ಕೃಷ್ಣದೇವರಾಯನು ರಾಯಚೂರು ಯುದ್ಧದ ಸಂದರ್ಭದಲ್ಲಿ "ರಾಯನು ತನ್ನ ಬೆರಳಿನಿಂದ ಒಂದು ಉಂಗುರವನ್ನು ಬಿಚ್ಚಿ ತನ್ನ ಸೇವಕನೊಬ್ಬನಿಗೆ ಕೊಟ್ಟು ತಾನು ಸತ್ತರೆ ಅದನ್ನು ತನ್ನ ರಾಣಿಯರಿಗೆ ತೋರಿಸಬೇಕೆಂದೂ ಅದನ್ನು ನೋಡಿ ಅವರು ಚಿತೆಯೇರುವರೆಂದೂ" ಹೇಳುತ್ತಾನೆ. ಈ ಪದ್ಧತಿಯೂ ಹೆಚ್ಚಾಗಿ ರಾಣಿವರ್ಗದವರ ಆಚರಣೆಯಿಂದ ಸಮಾಜದ ಮೇಲೆ ಇದೊಂದು ಪವಿತ್ರಕಾರ್ಯವೆಂದು ಭಾವಿಸಿ ಎಲ್ಲಾ ವರ್ಗದವರು ಸಹ ಈ ಪದ್ಧತಿ ಅನುಸರಿಸಲು ಪ್ರಾರಂಭಿಸಿದರು. ಇಲ್ಲಿ ಗಮನಿಸುವ ಅಂಶವೆಂದರೆ ಸಾಮಾನ್ಯ ಮಹಿಳೆಗೆ ಸತಿ ಆಚರಣೆ ಕಡ್ಡಾಯವಾಗಿರಲಿಲ್ಲವೆಂದು ತಿಳಿದುಬರುತ್ತದೆ. ಆದರೆ ರಾಣಿ ವರ್ಗದವರಿಗೆ ಇದು ಕಡ್ಡಾಯವಾಗಿತ್ತು ಎಂದು ಭಾವಿಸಬಹುದು.[೪]

೩. ರಾಣಿಯರ ಅಂತಃಪುರದ ಜೀವನವು ವಿಚಿತ್ರವಾಗಿದ್ದು, ಅಸೂಯೆ, ಈರ್ಷೆಗಳು ಇದ್ದವೆಂದು ಕೊನೆಗೆ ಅದೂ ಇನ್ನೊಬ್ಬರಿಗೆ ವಿಷಹಾಕಿ ಕೊಲ್ಲುವ ಇಲ್ಲವೆ ತಾವೇ ವಿಷ ಕುಡಿದು ಸಾಯುವವರೆಗೂ ಹೋಗುತ್ತಿದ್ದರೆಂದು ಹಾಗೆಯೇ ಪ್ರೇಮದಿಂದ ಇದ್ದ ನಿದರ್ಶನಗಳಿವೆ ಎಂದು ಪಾಯೇಸ್ ಹೇಳುತ್ತಾನೆ. ಆದರೆ ಇಲ್ಲಿ ಗಮನಿಸುವ ಸಂಗತಿಯೆಂದರೆ ರಾಣಿಯರು ಈ ರೀತಿ ಇರಲಿಲ್ಲವೆಂದು ಭಾವಿಸಬಹುದು. ಏಕೆಂದರೆ ಅಂತಃಪುರದಲ್ಲಿನ ಎಲ್ಲಾ ಕೆಲಸಗಳನ್ನು ಕೇವಲ ಸ್ತ್ರೀಯರ ಮೂಲಕ ನಡೆಸುತ್ತಿದ್ದರಿಂದಾಗಿ ಮುಖ್ಯ ಸಂಗತಿಯೆಂದರೆ ಈ ಕಾಲದಲ್ಲಿ ಒಟ್ಟು ಅಂತಃಪುದಲ್ಲಿ ೧೨,೦೦೦ ಸ್ತ್ರೀಯರು ಇಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಈ ಸ್ತ್ರೀಯರ ಮಧ್ಯೆ ಈ ರೀತಿ ನಡೆದಿರಬಹುದು ಹೊರತು ರಾಣಿಯರೊಂದಿಗೆ ಅಲ್ಲವೆಂದು ತಿಳಿಯಬಹುದು. ಇಲ್ಲಿ ರಾಣಿಯರಿಗೆ ಪ್ರತ್ಯೇಕವಾದ ಮಹಲ್ ಇದ್ದು ಅನೇಕ ಸೇವಕಿಯರು ಇರುತ್ತಿದ್ದರಿಂದಾಗಿ ಈ ರೀತಿ ನಡೆದುಕೊಳ್ಳುವುದು ರಾಣಿಯರಿಗೆ ಗೌರವತಕ್ಕ ಕೆಲಸವಲ್ಲ, ಆದರೆ ಈ ಸಂದರ್ಭದಲ್ಲಿ ಅನೇಕ ಸುಂದರ ಸ್ತ್ರೀಯರು ಇದ್ದರೆಂದು ತಿಳಿಸಿರುವುದರಿಂದಾಗಿ ಅವರ ಮಧ್ಯೆ ನಡೆದಿರಬಹುದು ಎಂದು ಭಾವಿಸಬಹುದು. ಒಟ್ಟಿನಲ್ಲಿ ರಾಣಿಯರು ಅಂತಃಪುರದಲ್ಲಿ ಗೌರವ ಸ್ಥಾನಮಾನ ಪಡೆದಿದ್ದರೆಂಬುದಾಗಿ ತಿಳಿಯಬಹುದು."

೪. ವಿಜಯನಗರ ಕಾಲದಲ್ಲಿ 'ವೇಶ್ಯೆ' ಪದ್ಧತಿಯೂ ಅತ್ಯಂತ ಪ್ರಮುಖವಾದುದಾಗಿತ್ತು. ಇವರು ರಾಜಕೀಯ ವಲಯದಲ್ಲಿ ತಮ್ಮನ್ನು ಉನ್ನತ ಮಟ್ಟದಲ್ಲಿ ಗುರುತಿಸಿಕೊಂಡಿದ್ದರು. ಇವರಿಗಾಗಿಯೇ ಪ್ರತ್ಯೇಕ ಸೂಳೆ ಬಜಾರ್ ಎಂಬ ನಗರವಿತ್ತು. ಅಲ್ಲಿ ಈ ವೇಶ್ಯೆಯರು ಉತ್ತಮ ಜೀವನ ನಡೆಸುತ್ತಿದ್ದರೆಂದು ಹೇಳಲಾಗುತ್ತದೆ. ಇವರು ರಾಣಿಯರೊಂದಿಗಷ್ಟೇ ಅಲ್ಲದೆ ಉತ್ಸವ ಹಾಗೂ ಹಬ್ಬಗಳಲ್ಲಿ ಅರಸನೊಂದಿಗೆ ತಾಂಬೂಲ ಸೇವಿಸುವ ವಿಶೇಷ ಅಧಿಕಾರ ಹೊಂದಿದವರಾಗಿದ್ದರು. ರಾಣಿಯರಂತೆ ಇವರು ಸಹ ವೈಭವ ಜೀವನ ನಡೆಸುತ್ತಿದ್ದರು. ಇವರ ಬಳಿಯೂ ಅನೇಕ ಆಭರಣಗಳು ದಾಸಿಯರನ್ನು, ಆಸ್ತಿ ಪಾಸ್ತಿಗಳನ್ನು ಹೊಂದಿದ್ದರು. ರಾಣಿಯರು ಹೊರಗಡೆ ಹೋಗುವಾಗ ಪಲ್ಲಕ್ಕಿ ಬಳಸುವಂತೆ ಇವರು ಪಲ್ಲಕ್ಕಿಯನ್ನು ಬಳಸುತ್ತಿದ್ದರು ಎಂಬುದಕ್ಕೆ ಪಾಯೇಸ್‌ನು ದೃಢಪಡಿಸುತ್ತಾನೆ. ಅಬ್ದುಲ್ ರಜಾಕ್‌ನ ಪ್ರಕಾರ ವೇಶ್ಯೆಯರ ಮೇಲೆ ಹಾಕಿದ ತೆರಿಗೆಯಿಂದ ೧೨,೦೦೦ ಫನಂ ಆದಾಯ ಬರುತ್ತಿತ್ತು. ಇದನ್ನೇ ಹರೆಯವರಿಗೆ ಸಂಬಳವಾಗಿ ಕೊಡುತ್ತಾರೆ ಎಂದು ಹೇಳಿರುವುದರಿಂದ ಹಾಗೂ ಅಧಿಕ ಸಂಖ್ಯೆಯಲ್ಲಿ ಇವರಿದ್ದರು ಎಂದು ಕಂಡುಬರುತ್ತದೆ. ಅರಸರು, ಮಾಂಡಲೀಕರು, ದಳಪತಿ, ರಾಜಕುಮಾರರು ಹೀಗೆ ಹಲವು ವರ್ಗದ ಶ್ರೀಮಂತ ವ್ಯಕ್ತಿಗಳು ಇವರ ವಸತಿಗಳಿಗೆ ಯಾವುದೇ ನಿರ್ಬಂಧವಿಲ್ಲದೆ ಪ್ರವೇಶಿಸಿದ್ದರಿಂದ ಇವರಿಗೆ ಸ್ವತಂತ್ರ್ಯವಿತ್ತು ಎಂದು ಭಾವಿಸಬಹುದು. ಇಲ್ಲಿ ಮುಖ್ಯವಾಗಿ ಗಮನಿಸುವ ಅಂಶವೆಂದರೆ ಕೃಷ್ಣದೇವರಾಯನ ರಾಣಿಯಾದ ಚಿನ್ನಾದೇವಿಯೂ ಒಬ್ಬ ವೇಶ್ಯೆಯಾಗಿದ್ದು ಈಕೆ ರಾಣಿ ಪಟ್ಟಕ್ಕೆ ಬಂದದ್ದು ಜನತಲ್ಲಿ ಇವರ ಬಗ್ಗೆ ಬಹಳ ಗೌರವ ಭಾವನೆ ಮೂಡಲು ಕಾರಣವಿರಬಹುದು. ಜೊತೆಗೆ ಇದು ರಾಜಾಶ್ರಯ ಪಡೆದಿದ್ದುದರಿಂದಾಗಿ ಜನರಲ್ಲಿ ಇವರ ಕುರಿತು ಉತ್ತಮ ಭಾವನೆಗೆ ಅವಕಾಶ ಮಾಡಿಕೊಟ್ಟಿರಬಹುದೆಂದು ಪರಿಗಣಿಸಬಹುದು. ಇದರಿಂದಾಗಿ ವೇಶ್ಯೆಯರು ಸಹ ರಾಣಿಯರಂತೆ ವೈಭವ ಜೀವನ ನಡೆಸುತ್ತಿದ್ದರೆಂದು ಆರ್ಥಿಕವಾಗಿ ರಾಣಿಯರಷ್ಟು ಅಲ್ಲದೇ ಹೋದರೂ ಸ್ವಲ್ಪಮಟ್ಟಿಗೆ ಪ್ರಬಲರಾಗಿದ್ದು, ಅಲಂಕಾರಗಳಲ್ಲಿ ಆಭರಣಗಳಿಂದ ಹೆಚ್ಚಾಗಿ ತಮ್ಮನ್ನು ತೊಡಗಿಸಿಕೊಂಡರು ಸಹ

ಪ್ರತಿಯೊಬ್ಬ ವೇಶ್ಯೆಯೂ ಇದೇ ರೀತಿ ಇರಲಿಲ್ಲವೆಂದು ಭಾವಿಸಬಹುದು. ಇದು ಹೆಚ್ಚಾಗಿ ಮಾಹಿತಿ ವಿದೇಶಿ ಪ್ರವಾಸಿಗರ ಹೇಳಿಕೆಯೂ ಉತ್ತಮ ಸ್ಥಿತಿಯಲ್ಲಿನ ವೇಶ್ಯೆಯರ ಪಾತ್ರದ ಬಗ್ಗೆ ಬೆಳಕು ಚೆಲ್ಲುತ್ತದೆ. ಅದರಿಂದಾಗಿ ಇವರೆ ಅಲ್ಲದೇ ಆರ್ಥಿಕವಾಗಿ ದುರ್ಬಲರಾಗಿರದವರು ಸಹ ಇದ್ದರೂ ಎಂಬುದು ಮುಖ್ಯ ಸಂಗತಿಯಾಗಿದೆ.[೬]

(೫. ವಿಜಯನಗರ ಕಾಲದ ಹಬ್ಬಗಳಲ್ಲಿ ಹೆಚ್ಚಾಗಿ ವೈಭವದಿಂದ ಆಚರಿಸುತ್ತಿದ್ದಂತಹ ಹಬ್ಬಗಳಲ್ಲಿ ದಸರಾ ಹಬ್ಬ ಹಾಗೂ ವಸಂತೋತ್ಸವ ಹಬ್ಬವು ಪ್ರಮುಖವಾಗಿ ರಾಣಿವರ್ಗದವರಿಂದ ಹಾಗೂ ಜನಸಾಮಾನ್ಯರ ವರ್ಗದವರಿಂದ ಭಿನ್ನತೆಯಿಂದ ಹೆಚ್ಚು ಜನಪ್ರಿಯತೆಯನ್ನು ಪಡೆದಿದ್ದವು. ದಸರಾ ಹಬ್ಬವು ಹೆಚ್ಚಾಗಿ ರಾಜಾಶ್ರಯ ಪಡೆದು ಸಮಾಜದಲ್ಲಿ ಈ ಸಂದರ್ಭದಲ್ಲಿ ಇವರನ್ನು ಪ್ರತ್ಯೇಕವಾಗಿಯೇ ನೋಡುತ್ತಿದ್ದರು. ಅಂದರೆ ದಸರಾ ಹಬ್ಬದಲ್ಲಿ ಗೊಂಬೆಗಳನ್ನು ಕೂಡಿಸುವುದು ಸಾಮಾನ್ಯ. ಇಲ್ಲಿ ರಾಜಾರಾಣಿ ದಂಪತಿಗಳ ಗೊಂಬೆಗಳನ್ನು ಎಲ್ಲಕ್ಕಿಂತ ಎತ್ತರವಾದ ಹಾಗೂ ಮುಖ್ಯಸ್ಥಾನದಲ್ಲಿ ಕೂಡಿಸಿ ಸುತ್ತಲೂ ಒಂದು ಸಣ್ಣ ಬೊಂಬೆ ಪ್ರಪಂಚ ನಿರ್ಮಿಸಿರುತ್ತಾರೆ. ಇಲ್ಲಿ ರಾಜ ರಾಣಿಯರನ್ನು ಪ್ರತ್ಯೇಕ್ಷ ದೇವರೆಂಬ ಭಾವನೆಯಿಂದ ಕಾಣುತ್ತಿದ್ದರು ಎಂದು ತಿಳಿದುಬರುತ್ತದೆ.[೬] ಈ ಸಂದರ್ಭದಲ್ಲಿ ಈ ಹಬ್ಬವು ಒಂಬತ್ತು ದಿನಗಳವರೆಗೆ ನಡೆಯುತ್ತಿತ್ತು. ಹಬ್ಬದ ಪ್ರಯುಕ್ತ ಅನೇಕ ಸಮಾರಂಭಗಳನ್ನು ಏರ್ಪಡಿಸ ಲಾಗುತ್ತಿತ್ತು. ಕ್ರೀಡೆ, ಮನೋರಂಜನೆ, ಜನಪ್ರಿಯವಾದ ಕ್ರೀಡೆಗಳಾಗಿದ್ದವು. ಮಹಿಳೆಯರ ಕುಸ್ತಿಯು ಜನಪ್ರಿಯವಾಗಿತ್ತು. ಕತ್ತಿ ವರಸೆ, ದೊಡ್ಡ ವರಸೆ, ಲಗಾರಿ ಕುಣಿತ, ಡೋಲು ಕುಣಿತ, ಭರತನಾಟ್ಯ, ಸಂಗೀತ ಹೀಗೆ ಸಾಂಸ್ಕೃತಿಕ ಕಾರ್ಯಕ್ರಮ ಜರುಗುತ್ತಿದ್ದವು. ಈ ಸಂದರ್ಭದಲ್ಲಿ ರಾಣಿಯರು ಒಂದೊಂದು ದಿನ ಒಬ್ಬೊಬ್ಬ ರಾಣಿಯರು ತನ್ನ ದಾಸಿಯರಿಂದ ಕಾರ್ಯಕ್ರಮ ನಡೆಸುತ್ತಿದ್ದರು. ಇದು ರಾಣಿಯರ ಶ್ರೀಮಂತಿಕೆಯ ವೈಭವದ ಪ್ರದರ್ಶನವಾಗಿತ್ತು. ಆ ದಾಸಿಯರು ಎಷ್ಟು ಆಭರಣ ಹಾಕಿಕೊಳ್ಳುತ್ತಿದ್ದರೆಂದರೆ ಅವರನ್ನು ನಡೆಸಿಕೊಂಡು ಬರುವ ಸಹಾಯಕಿರಿರುತ್ತಿದ್ದರು. ರಾಣಿಯರ ದಾಸಿಯರೇ ಹೀಗಿರುವಾಗ ಆಯಾ ರಾಣಿಯರು ಹೇಗಿರಬೇಕು ಎಂದು ಜನರಲ್ಲಿ ಕುತೂಹಲ ಮೂಡುತ್ತಿತ್ತು. ಇಂಥ ವೈಭವದ ಜೀವನ ರಾಣಿಯರದಾಗಿತ್ತು. ಜೊತೆಗೆ ಇದು ದಸರಾ ಹಬ್ಬದ ಸಂದರ್ಭದಲ್ಲಿ ರಾಣಿಯರು ಜನರಿಗಾಗಿ ಸೌಂದರ್ಯಸ್ಪರ್ಧೆ ಅಥವಾ ಉಡುಗೆ ತೊಡುಗೆಗಳ ಪ್ರದರ್ಶನ ನಡೆಸುತ್ತಿದ್ದಿರಬಹುದು. ಇದು ಮುಖ್ಯವಾಗಿ ಆಭರಣ ಉಡುಗೆ ಪ್ರದರ್ಶನಗಳಾಗಿರಬಹುದು. ಇದರಿಂದಾಗಿ ಈ ಸಂದರ್ಭದಲ್ಲಿ ರಾಣಿಯರು ತಮ್ಮನ್ನು ಪ್ರತ್ಯೇಕವಾಗಿಯೇ ಗುರುತಿಸಿಕೊಳ್ಳುತ್ತಿದ್ದರು.[೬]

ಹಾಗೆಯೇ ಓಕುಳಿ ಹಬ್ಬವು ಪ್ರಮುಖವಾದಂತಹ ಹಬ್ಬವಾಗಿತ್ತು. ಇದಕ್ಕೆ ಕಾಮನ ಹಬ್ಬ, ಕಾಮನ ಹುಣ್ಣಿಮೆ, ವಸಂತನ ಹಬ್ಬ, ವಸಂತೋತ್ಸವ ಇತ್ಯಾದಿ ಹೆಸರುಗಳಿಂದ ಕರೆಯುವುದು ರೂಢಿ ಯಲ್ಲಿದೆ. ವಿಜಯನಗರದಲ್ಲಿ ಸಾರ್ವಜನಿಕವಾಗಿ ನಡೆಯುವ ಉತ್ಸವ ದಿನಗಳಲ್ಲಿ ವಿಜಯದಶಮಿ ಬಿಟ್ಟರೆ ಕಾಮನಹಬ್ಬವು ಪ್ರಮುಖವಾದ ಹಬ್ಬವಾಗಿತ್ತು. ಇದನ್ನು ಹೆಚ್ಚಾಗಿ ಜನಸಾಮಾನ್ಯರು ಮಹಿಳೆಯರು ಪುರುಷರೆಂಬ ಭೇದವಿಲ್ಲದೆ ಪ್ರತಿಯೊಬ್ಬರು ಬಣ್ಣದ ಓಕುಳಿಯಿಂದ ಎರಚಾಡುವರು. ಆಗ ಭೇರಿ, ಮದ್ದಳೆ, ಶಂಖ, ಪಟಹ, ಡಿಂಡಿಮ, ಚೋಳುಮಾರಿ, ತಂಬಟ ಇವುಗಳ ದನಿಗಳು ಈ ಸಂದರ್ಭದಲ್ಲಿ

ಮುಳುಗುತ್ತಿದ್ದವು ಎಂದು ಕನಕದಾಸರ 'ಮೋಹನ ತರಂಗಿಣಿ'ಯಲ್ಲಿ ಒಂದು ಇಡೀ ಪ್ರಕರಣದಲ್ಲಿ ವರ್ಣಿಸಿರುವುದು ಕಂಡುಬರುತ್ತದೆ.

ವಸಂತೋತ್ಸವ ತುಂಬಾ ವೈಭವದಿಂದ ಆಚರಿಸುವ ಸಾರ್ವಜನಿಕ ಉತ್ಸವಗಳಲ್ಲಿ ಈ ಹಬ್ಬವೂ ಒಂದಾಗಿತ್ತು. ಇದು ಸಹ ಮೂರು ದಿನಗಳ ಕಾಲ ನಡೆಯುತ್ತಿದ್ದರಿಂದ ಜನರು ಬೀದಿಯಲ್ಲಿ ಹೋಗಿ ಬರುವವರ ಮೇಲೆಲ್ಲಾ ಸ್ವತಃ ರಾಜ ರಾಣಿಯರ ಮೇಲೆ ಕೂಡ ಕೆಂಪು, ಕೇಸರಿ ಬಣ್ಣಗಳನ್ನು ಓಕುಳಿ ಗಳಿಂದ ಎರಚುವರು. ಇಂತಹ ಬಣ್ಣದಿಂದ ತುಂಬಿದ ಹಂಡೆ ಹಂಡೆಗಳನ್ನು ದಾರಿಯ ಮೇಲೆ ಇಟ್ಟಿರುವರು. ಈ ಬಣ್ಣದ ಎರಚಾಟದಲ್ಲಿ ನಗುತ್ತ ಎರಗುತ್ತಾ ಆನಂದದಿಂದ ಎಲ್ಲರೂ ಭಾಗವಹಿಸುವರು ಎಂದು ಶ್ರೀಕಂಠಯ್ಯನವರು ಅಭಿಪ್ರಾಯಪಡುತ್ತಾರೆ. ಜನಸಾಮಾನ್ಯ ಮಹಿಳೆಯರು ಶತಮಾನದಿಂದ ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ನಲಿವು ತೋರುತ್ತಾ ಅದನ್ನು ಹೊರಜಗತ್ತಿಗೆ ಸಾರುತ್ತ ನಿಂತಿರುವರು ಸಾಮಾನ್ಯ ವರ್ಗದವರು ಎಂದರೆ ತಪ್ಪಾಗಲಾರದು.[೯]

ಒಟ್ಟಿನಲ್ಲಿ ರಾಣಿ ವರ್ಗದವರು ಹೆಚ್ಚಾಗಿ ದಸರಾ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಸಾಮಾನ್ಯ ಮಹಿಳೆಯರು ವಸಂತೋತ್ಸವವನ್ನು ಹೆಚ್ಚು ಸಂತೋಷ ಸಂಭ್ರಮದಿಂದ ಆಚರಿಸುತ್ತಿದ್ದರೆಂದು ತಿಳಿಯಬಹುದು. ರಾಣಿವರ್ಗದವರಿಂದ ನವರಾತ್ರಿ ಹಬ್ಬವು ಹೆಚ್ಚಾಗಿ ಪ್ರಾಮುಖ್ಯತೆ ಪಡೆದರೆ ಓಕುಳಿ ಹಬ್ಬವು ಜನಸಾಮಾನ್ಯರಿಂದ ಪ್ರಾಮುಖ್ಯತೆ ಪಡೆದಿತ್ತು ಎಂದಗೆ ತಪ್ಪಾಗಲಾರದು.

೬. ಉಡಿಗೆಗಳಲ್ಲಿ ಸಹ ರಾಣಿಯರು ಹಾಗೂ ಸಾಮಾನ್ಯ ಮಹಿಳೆಯರ ನಡುವೆ ಭಿನ್ನತೆಯನ್ನು ಕಾಣಬಹುದು. ಇಲ್ಲಿ ಮುಖ್ಯವಾಗಿ ಇವುಗಳನ್ನು ಉಬ್ಬುಶಿಲ್ಪಗಳಿಂದ ಹಾಗೂ ಸಾಹಿತ್ಯ ಕೃತಿಗಳಿಂದ ತಿಳಿದುಕೊಳ್ಳಬಹುದು. ಅಂದು ಹೆಚ್ಚಾಗಿ ಹತ್ತಿ ಬಟ್ಟೆ ಹಾಗೂ ರೇಷ್ಮೆ ಬಟ್ಟೆಗಳ ಬಳಕೆ ಹೆಚ್ಚಾಗಿತ್ತು ಎಂದು ತಿಳಿದುಬರುತ್ತದೆ. ಸಾಧಾರಣವಾಗಿ ಬಣ್ಣ ಬಣ್ಣದ ಸೀರೆ ಉಡುತ್ತಿದ್ದರು. ಇದರಲ್ಲಿ ಭಿನ್ನತೆಯನ್ನು ಗುರುತಿಸಬಹುದು. ವಿಜಯ ವಿಠ್ಠಲ ದೇವಾಲಯದ ಸಾಮಾನ್ಯ ಮಹಿಳೆಯರ ಶಿಲ್ಪದಲ್ಲಿ ಈಕೆ ಮೈಗೆ ಅಂಟುವಂತೆ ಸೀರೆಯುಟ್ಟು, ಸೀರೆಯನ್ನು ನಡುವಿಗೆ ಸಿಕ್ಕಿಸಿಕೊಂಡು ಕಲಾತ್ಮಕವಾಗಿ ಪಸರಿ ನಿಲ್ಲುವಂತೆ ಉಟ್ಟಿದ್ದಾಳೆ. ಮತ್ತೊಬ್ಬ ಯುವತಿಯು ಸಹ ಒಂದು ನರಿಗೆ ಬಾರದ ತುಂಡು ಸೀರೆಯನ್ನು ಮಾಟವಾಗಿ ಉಟ್ಟಿದ್ದಾಳೆ. ಹಾಗೆಯೇ ಬೇಟೆಗಾರ್ತಿಯು ತಲೆಗೆ ಪರ್ಣಗಳಿಂದ ರಚಿತವಾದ ಕಿರೀಟವನ್ನು ಅಲಂಕರಿಸಿ ಕೊಂಡು ಕಾಡಿನ ಹೂಗಳನ್ನು ಕಿವಿಗೆ ಪೋಣಿಸಿಕೊಂಡಿದ್ದಾಳೆ. ವರ್ಣಗಳನ್ನು ಜೋಡಿಸಿದ ಉಡುಗೆ ಸಡುವನ್ನು ಮುಚ್ಚಿದೆ. ಉಳಿದ ಆಭರಣಗಳೆಂದರೆ ಕಾಡಿನ ಸಾಮಗ್ರಿಗಳೆಂದು ಹೇಳುತ್ತಾರೆ.[೧೦] ಆದರೆ ಹಂಪೆಯ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಸಂಗ್ರಹಾಲಯದಲ್ಲಿ ತಿರುಮಲದೇವಿ ವಿಗ್ರಹದಲ್ಲಿ ಸೀರೆಯನ್ನು ಕಲಾತ್ಮಕವಾಗಿ ಸುರುಳಿಯಂತೆ ೩.೪ ಸುತ್ತು ಕಟ್ಟಿರುವುದು ಕೆಳಗೆ ಬಂದಿದೆ. ಮತ್ತು ಎರಡೂ ಪಾದಗಳ ನಡುವೆ ನೆರಿಗೆ ತುಂಬಿ ಅರ್ಧಚಂದ್ರಾಕೃತಿಯಲ್ಲಿ ಕಂಗೊಳಿಸುವ ವಸ್ತ್ರವು ಮನೋಹರ ವಾಗಿವೆ. ಇಲ್ಲಿ ರಾಣಿಯರು ಕಲಾತ್ಮಕವಾಗಿ ಹೆಚ್ಚು ವೈವಿಧ್ಯತೆಯಲ್ಲಿ ಧರಿಸುತ್ತಿದ್ದರು. ಸಾಮಾನ್ಯ ಸ್ತ್ರೀಯರು ಸಾಧಾರಣವಾಗಿ ಉಡುತ್ತಿದ್ದರು. ರಾಣಿಯರು ಹೆಚ್ಚಾಗಿ ಅತ್ಯಂತ ಬೆಲೆ ಬಾಳುವ ವಸ್ತ್ರ ಧರಿಸುತ್ತಿದ್ದರು ಎಂಬುದು ಸ್ಪಷ್ಟ. ಇಲ್ಲೂ ಸಹ ರಾಣಿಯರು ಸಿರಿವಂತಿಕೆಯನ್ನು ಎದ್ದು ಕಾಣುವ ವಸ್ತ್ರ ಉಡುಪುಗಳನ್ನು ಧರಿಸುತ್ತಿದ್ದರು. ಈ ಉಡುಗೆಯೂ ಸೂಕ್ಷ್ಮವಾಗಿ ನೇಯ್ದಿದ್ದರು ಎಂದು ಹೇಳಲಾಗುತ್ತದೆ.[೧೧]

೮. 'ಆಭರಣ'ಗಳಲ್ಲಿಯೂ ಸಹ ರಾಣಿಯರು ಹಾಗೂ ಸಾಮಾನ್ಯ ಮಹಿಳೆಯರು ಧರಿಸುತ್ತಿದಂತಹ ಆಭರಣಗಳಿಗೆ ಸಾಕಷ್ಟು ಭಿನ್ನತೆಯನ್ನು ಗುರುತಿಸಬಹುದು. ಸಾಹಿತ್ಯ, ವಿದೇಶಿಯ ಬರವಣಿಗೆ, ಶಿಲ್ಪಗಳಿಂದ ಹಾಗೂ ಇತರೆ ಮೂಲಗಳಿಂದ ವಿಜಯನಗರವು ಆರ್ಥಿಕವಾಗಿ ಸಂಪತ್ತುಗಳಿಂದ ಕೂಡಿತ್ತು ಎಂದು ಹೇಳಲಾಗುತ್ತದೆ. ಆರ್ಥಿಕವಾಗಿಯೇ ರಾಣಿಯರನ್ನು ಪ್ರತ್ಯೇಕವಾಗಿ ನೋಡಲಾಗುತ್ತದೆ. ಅಂದು ಹೆಚ್ಚಾಗಿ ಪ್ರತಿಯೊಬ್ಬರು ಸಹ ಬಂಗಾರದ ಆಭರಣಗಳನ್ನೇ ಬಳಸುತ್ತಿದ್ದರೆಂದು ಹೇಳಲಾಗುತ್ತದೆ. ಕೃಷ್ಣದೇವರಾಯನು ಜಗಮ್ಮೋಹಿನಿಯನ್ನು ವಿವಾಹವಾಗುವ ಸಂದರ್ಭದಲ್ಲಿ ೧೬ ಬಗೆಯ ಒಡವೆಗಳನ್ನು ನೀಡಿದನು. ಅವುಗಳೆಂದರೆ ಬೆಣ್ಣೆಯ ಮುದ್ದೆ ಕಂಠಮಾಲೆ, ನವರತ್ನ ಖಚಿತ ಗಿಳಿತಾಳಿ, ತುಂಬಿದ ತಾಳಿ, ವೈಢೂರ್ಯತಾಳಿ, ವಜ್ರದ ಸರಪಳಿ, ಪಚ್ಚೆಯ ಕಡಗ, ಹುರುಮಂಜಿಯ ಕಿರುಮಂಜಿಯ ಮುತ್ತಿನ ಪಚ್ಚೆಯ ಸರ, ಇಂದ್ರನೀಲಮುಕುಟ, ವಜ್ರದ ಉಡಿದಾರ, ಕೆಂಪುಗಳ ಜವದಾಡೆ, ಮತ್ತಿನ ಕಾಲ ಘೆಂಡೆಯ, ವಜ್ರಗಳ ಬಾಹುಪುರಿ, ದೊಡ್ಡ ಮುತ್ತುಗಳ ಅಡ್ಡಗತ್ತಿ, ನವರತ್ನದ ಹರಿಗೆ, ನವರತ್ನದ ಸಿಂಹಲಾರಾಟ, ಮುತ್ತುಗಳ ಮೊಗರಂಬ, ಇಂಥಹ ಆಭರಣಗಳನ್ನು ರಾಣಿಯರು ಧರಿಸುತ್ತಿದ್ದರು. ಆದರೆ ಸಾಮಾನ್ಯ ಮಹಿಳೆಯರು ಹೆಚ್ಚಾಗಿ ಕತ್ತಿಗೆ ಸರಗಳು ಎರಡು, ಮೂರು ಬಗೆಯ ಕೈಗಳಿಗೆ ಬಳೆಗಳು, ಕಿವಿಗಳಿಗೆ ಓಲೆ, ಕಾಲಿಗೆ ಕಡಗಗಳನ್ನು ಧರಿಸುತ್ತಿದ್ದರು. ಆದರೆ ರಾಣಿಯರು ಸರ್ವಾಂಗಗಳಿಗೂ ಸಹ ಒಂದೊಂದು ಅಥವಾ ಹಲವು ಬಗೆಯ ಆಭರಣಗಳನ್ನು ಧರಿಸಿ ಸಮಾಜದ ಭಿನ್ನತೆಯಲ್ಲಿ ಕಂಡು ಬರುತ್ತಿದ್ದರು ಎಂಬುದು ಸ್ಪಷ್ಟ.[೧೨]

೯. 'ನೃತ್ಯ'ವು ವಿಜಯನಗರ ಕಾಲದಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದ ಹಾಗೂ ಮನೋರಂಜನೆಯ ಸಾಧನವಾಗಿತ್ತು. ಅಂದು ನೃತ್ಯವನ್ನು ಹೆಚ್ಚಾಗಿ ರಾಣಿವರ್ಗದವರು ಹಾಗೂ ಜನಸಾಮಾನ್ಯ ಸ್ತ್ರೀಯರು ಕಲಿಯುತ್ತಿದ್ದರೆಂಬುದಾಗಿ ಮೂರ್ತಿಶಿಲ್ಪಗಳಿಂದ ಸ್ಪಷ್ಟವಾಗುತ್ತದೆ. ರಾಣಿ ವರ್ಗದವರು ಹೆಚ್ಚಾಗಿ ಭರತನಾಟ್ಯದಲ್ಲಿ ಅಭ್ಯಸಿಸುತ್ತಿದ್ದರೆ, ಕೋಲಾಟವನ್ನು ಜನಸಾಮಾನ್ಯ ಮಹಿಳೆಯರು ಅಭ್ಯಸಿಸುತ್ತಿದ್ದರು. ಭರತನಾಟ್ಯವು ರಾಜಾಶ್ರಯ ಪಡೆದು ಶ್ರೀಮಂತ ವರ್ಗದವರಿಂದ ಹೆಚ್ಚು ಪ್ರಚಾರದಲ್ಲಿತ್ತು. ಈ ನೃತ್ಯಭ್ಯಾಸಕ್ಕೆ ಮುಖ್ಯವಾಗಿ ಗುರುಗಳ ಅವಶ್ಯಕತೆ ಅಗತ್ಯವಾಗಿತ್ತು. ಇದಕ್ಕಾಗಿಯೇ ಪ್ರತ್ಯೇಕ ನರ್ತನ ಶಾಲೆಗಳಿದ್ದವು. ಇಲ್ಲಿ ನೃತ್ಯಭ್ಯಾಸದಲ್ಲಿ ತೊಡಗುವಾಗ ಹೆಚ್ಚಿನ ಅಲಂಕಾರದ ವಸ್ತುಗಳು ಹಾಗೂ ವಸ್ತ್ರಗಳು ಬೇಕಾಗುತ್ತಿತ್ತು. ಇದರಿಂದಾಗಿ ಇದನ್ನು ಸಾಮಾನ್ಯ ಸ್ತ್ರೀಯರು ಕಲಿಯಲೂ ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಸಾಮಾನ್ಯ ಸ್ತ್ರೀಯರು ಖರ್ಚು ಮಾಡಿ ನೃತ್ಯ ಕಲಿಯುವುದು ವಿರಳವಾಗಿತ್ತು. ಸಾಮಾನ್ಯ ವರ್ಗದ ಸ್ತ್ರೀಯರು ಕೋಲಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಮೂರ್ತಿಶಿಲ್ಪದಿಂದ ಕಾಣಬಹುದು. ಈ ನೃತ್ಯದಲ್ಲಿರುವ ಸ್ತ್ರೀಯರು ಸಾಧಾರಣ ಉಡುಪುಗಳನ್ನು ಧರಿಸಿರುವುದನ್ನು ಕಾಣಬಹುದು. ಇದೊಂದು ಮಿತಿವ್ಯಯದ ನೃತ್ಯವಾಗಿದ್ದು ಕೇವಲ ಎರಡು ಕೋಲುಗಳನ್ನು ಬಳಸಿ ಕಲಾತ್ಮಕವಾಗಿ ನರ್ತಿಸುತ್ತಿದ್ದರು. ಇದರಿಂದಾಗಿ ರಾಣಿವರ್ಗದ ನೃತ್ಯ, ಭರತನಾಟ್ಯವಾದರೆ ಸಾಮಾನ್ಯ ವರ್ಗದವರು ಕೋಲಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡು ಮನೋರಂಜನೆಯನ್ನು ಪಡೆಯುತ್ತಿದ್ದರು ಎಂದು ತಿಳಿದುಬರುತ್ತದೆ.[೧೩]

೧೦. ಪ್ರಯಾಣಕ್ಕೆ ಹೊರಟಾಗಲೂ ಸಹ ಹೆಚ್ಚಾಗಿ ರಾಜಪರಿವಾರವರು ರಾಣಿಯರು ಸುಂದರವಾದ

ಬೆಲೆ ಬಾಳುವ ಪಲ್ಲಕ್ಕಿಯಲ್ಲಿ ಕುಳಿತು ಸಂಪ್ರದಾಯಕವಾಗಿ ಪಲ್ಲಕ್ಕಿಯನ್ನು ಹೊರಲು ನೇಮಿಸಲಾಗಿದ್ದ ಬೋಯಿಗಳಿಂದ ಪ್ರಯಾಣಿಸುತ್ತಿದ್ದರು. ಹಾಗೂ ರಥಗಳಲ್ಲಿ ಪ್ರಯಾಣಿಸುತ್ತಿದ್ದರು. ಆದರೆ ಸಾಮಾನ್ಯ ಮಹಿಳೆಯರು ಸಾಮಾನ್ಯವಾಗಿ ಕಾಲ್ನಡಿಗೆ, ಚಕ್ಕಡಿ ಅಥವಾ ಎತ್ತಿನ ಬಂಡಿಯಲ್ಲಿ ಪ್ರಯಾಣಿಸುತ್ತಿದ್ದರು.[೧೪]

೧೧. ಪ್ರಾಚೀನ ಕಾಲದಿಂದಲೂ ಸಹ ಪಾದರಕ್ಷೆಯ ಬಳಕೆ ಇತ್ತು. ಆದರೆ ಇಲ್ಲಿ ಗಮನಿಸುವ ಮುಖ್ಯ ಸಂಗತಿ ಎಂದರೆ ರಾಣಿವರ್ಗದವರು ಬಂಗಾರದಿಂದ ಬೆಳ್ಳಿಯಿಂದ ತಯಾರಿಸಿದ ಪಾದರಕ್ಷೆಯನ್ನು ಧರಿಸಿದರೆ, ಸಾಮಾನ್ಯ ಮಹಿಳೆಯರು ಚರ್ಮದಿಂದ ಅದ ಮಾಡಿದ ಪಾದರಕ್ಷೆಯನ್ನು ಹಾಕುತ್ತಿದ್ದರೆಂದು ತಿಳಿದುಬರುವುದರಿಂದಾಗಿ ರಾಣಿವರ್ಗದವರು ಆರ್ಥಿಕವಾಗಿ ವೈಭೋಗದಿಂದ ಜೀವನ ನಡೆಸುತ್ತಿದ್ದರೆಂದು ಕಂಡುಬರುತ್ತದೆ.[೧೫]

೧೨. ಆಹಾರವು ಮನುಷ್ಯನ ಮೂಲಭೂತ ಅಗತ್ಯಗಳಲ್ಲಿ ಒಂದು. ವಿಜಯನಗರ ಕಾಲದಲ್ಲಿ ಆಹಾರದ ಬಳಕೆಯು ಅಲ್ಲಿನ ವೈಭವ ಸಂಪತ್ತನ್ನು ಸೂಚಿಸುವ ಪದವಾಗಿದೆ. ಈ ಬಗ್ಗೆ ಹೆಚ್ಚಿನದಾಗಿ ಮಾಹಿತಿ ಸಿಗುವ ಸಾಹಿತ್ಯ ಗ್ರಂಥಗಳೆಂದರೆ ಕನಕದಾಸರ ರಾಮಧ್ಯಾನ ಚರಿತೆ ಶಾಸನಗಳಿಂದ, ವಿದೇಶಿ ಬರವಣಿಗೆಯಿಂದ ಹೆಚ್ಚಿನ ಮಾಹಿತಿ ಸಿಗುತ್ತದೆ.[೧೬]

ಅಂದು ಸಾಮಾನ್ಯ ಮಹಿಳೆಯರು ಗೃಹಗಳಲ್ಲಿ ಅನೇಕ ಬಗೆಯ ಆಹಾರವನ್ನು ತಯಾರಿಸುತ್ತಿದ್ದರೆಂದು ತಿಳಿಯುತ್ತದೆ. ಮಳೆಗಾಲದಲ್ಲಿ ಸಾಮಾನ್ಯ ಮಹಿಳೆ ಅಡಿಗೆ ಮಾಡಲು ಕಷ್ಟಪಡುತ್ತಿದ್ದ ರೀತಿಯನ್ನು ಕೃಷ್ಣದೇವರಾಯನ ಆಮುಕ್ತಮಾಲ್ಯದಲ್ಲಿ ತಿಳಿದುಬರುತ್ತದೆ. ಮಳೆಗಾಲದಲ್ಲಿ ಒಲೆ ಉರಿಯದೇ ಗೃಹಿಣಿಯ ಕಣ್ಣಲ್ಲಿ ಹೊಗೆ ತುಂಬಿ ಕಣ್ಣೀರು ಬರುತ್ತಿತ್ತು. ಅಲ್ಲದೆ ಗೃಹಿಣಿಯೂ ಓಲೆ ಹಚ್ಚಲು ಮನೆ ಮನೆಗೆ ತಿರುಗಿದರೆ ಒಂದೆರಡು ಕೆಂಡ ಸಿಗುತ್ತದೆ. ಸಿಕ್ಕರೂ ಒಣಗಿದ ಹುಲ್ಲು, ಇಟ್ಟರೆ ಹೊರತು ಹೊತ್ತಿ ಕೊಳ್ಳುವುದಿಲ್ಲ. ಹೊತ್ತಿಕೊಂಡರು ಮನೆಯ ಸೂರಿನಿಂದ ದೂಲಮುಂದು ಒಲೆಯಲ್ಲಿಟ್ಟು ಹೊರತು ಉರಿಯುವುದಿಲ್ಲ. ಉರಿದರೂ ಅನ್ನ ಬೇಯುವುದಿಲ್ಲ, ಒಂದು ವೇಳೆ ಅನ್ನನೆಂದರು ಮನೆಯಲ್ಲಿ ಹೊಗೆ ವಾಸನೆ ತುಂಬಿ ಸುಖವಾಗಿ ಊಟ ಮಾಡಲಾಗದು.ಇಷ್ಟರಲ್ಲಿ ಮನೆಗೆ ಯಾರಾದರೂ ಅತಿಥಿಗಳು ಬಂದರೆ ಇಷ್ಟು ಕಷ್ಟಪಟ್ಟು ಮಾಡಿದ ಅಡಿಗೆ ಮೊದಲನೇ ಪಂಕ್ತಿಯವರಿಗೆ ಸರಿಹೋಗುತ್ತದೆ. ಹೆಂಗಸರು ಪುನಃ ಅಡಿಗೆ ಮಾಡಬೇಕಾಗುತ್ತದೆ. ಅವರು ಆ ಹೊತ್ತಿನಲ್ಲಿ ತುಪ್ಪ ತೋಯಿಸಿದ ಬಟ್ಟೆಯನ್ನು ಹಾಕಲು ಸಹ ಹಿಂತೆಗೆಯುವುದಿಲ್ಲ ಎಂದು ಅಮುಕ್ತಮಾಲ್ಯದಿಂದ ತಿಳಿಯುವುದರಿಂದ ಅದು ಸಾಮಾನ್ಯ ಮಹಿಳೆಯೂ ಪಡುತ್ತಿರುವಂತಹ ಕಷ್ಟದ ಪರಿಚಯ ನೀಡುತ್ತದೆ.[೧೭] ಆದರೆ ಅರಮನೆಯಲ್ಲಿ ರಾಣಿಯರಿಗೆ ಅಡಿಗೆ ಮಾಡಲೂ ಅನೇಕ ಸ್ತ್ರೀವರ್ಗದವರೂ ಇದ್ದರೆಂದು ತಿಳಿದುಬರುವುದರಿಂದ ಇಲ್ಲಿ ರಾಣಿಯರು ಶ್ರಮಜೀವಿ ಗಳಾಗಿರಲಿಲ್ಲ. ಶ್ರೀಮಂತವರ್ಗದವಗು ಹೆಚ್ಚಾಗಿ ಅನ್ನವನ್ನು ಬಳಸಿದರೆ ಸಾಮಾನ್ಯ ವರ್ಗದವರು ರಾಗಿಯನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರೆಂದು ಕನಕದಾಸರ ಅಭಿಪ್ರಾಯವಾಗಿದೆ.[೧೮] ಅರಮನೆಗಳಲ್ಲಿ ಹೆಚ್ಚಾಗಿ ಚಿನ್ನ ಬೆಳ್ಳಿಯ, ಪಾತ್ರೆ, ಲೋಕ, ಬೋಗುಳಿ ಇತ್ಯಾದಿ ಉಪಕರಣಗಳನ್ನು ಬಳಸಿದರೆ ಸಾಮಾನ್ಯವರ್ಗದವರು ಲೋಹದ ಮಡಕೆಯ ಗೃಹೋಪಯೋಗಿ ವಸ್ತುಗಳನ್ನು ಬಳಸುತ್ತಿದ್ದರೆಂದು ಹಂಪೆಯ ಉತ್ಖನನದಿಂದ ತಿಳಿದುಬರುತ್ತದೆ.

ಗೃಹೋಪಯೋಗಕ್ಕೆ ಅತಿಹೆಚ್ಚಿನ ಅಗತ್ಯವಾಗಿ ಬೇಕಾದ ವಸ್ತುಗಳಲ್ಲಿ ಒರಳುಕಲ್ಲು, ಒಂದು ಇದರ ಬಳಕೆಯೂ ಹೆಚ್ಚಾಗಿ ಎಲ್ಲಾ ವರ್ಗದವರಿಂದಲ್ಲೂ ಒಳಸಲ್ಪಡುತ್ತಿತ್ತು ಎಂಬುದು ಇತ್ತೀಚಿಗೆ ದೊರಕಿರುವ ಅರಮನೆಯ ಉತ್ಖನನದಿಂದ ಸ್ಪಷ್ಟಪಡಿಸುತ್ತದೆ.[19]

ವಿಜಯನಗರ ಕಾಲದಲ್ಲಿ ಇಂದಿನಂತೆ ಅಂದು ಸಹ ಖಾನಾವಳಿ ಇದ್ದವೆಂದು ಇವುಗಳನ್ನು ಹೆಚ್ಚಾಗಿ ಬ್ರಾಹ್ಮಣ ವಿಧವೆಯರು ನಡೆಸುತ್ತಿದ್ದರು. ಪ್ರಯಾಣಿಕರ ಬಳಿ ಹಣ ತೆಗೆದುಕೊಂಡು ಊಟ ಹಾಕುತ್ತಿದ್ದರು ಎಂದು ತಿಳಿಸಿರುವುದರಿಂದ ಅಂದು ಮಹಿಳೆಯರು ಹೆಚ್ಚಾಗಿ ಎಲ್ಲಾ ಕ್ಷೇತ್ರಗಳಿಗೂ ಹೆಚ್ಚು ಸ್ವಾತಂತ್ರ್ಯರಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ.[20] ವಿಜಯನಗರ ಕಾಲದಲ್ಲಿ ಸಾಮಾನ್ಯ ಮಹಿಳೆಯ ಹೊಣೆಗಾರಿಕೆ ದೊಡ್ಡದಾಗಿತ್ತು. ಅಂದು ಅವಳದು ಬಿಡುವಿಲ್ಲದ ಜೀವನವಾಗಿತ್ತು. ಮನೆಯನ್ನು ಗುಡಿಸುವುದು, ರಂಗೋಲಿಯನ್ನು ಬಿಡುವುದರ ಮೂಲಕ ಮನೆಯನ್ನು ಸಿಂಗರಿಸುವುದು, ಪಾತ್ರೆ ತೊಳೆಯುವುದು, ಅಡಿಗೆಯನ್ನು ಮಾಡುವುದು ಇತ್ಯಾದಿ ಕೆಲಸಗಳಲ್ಲದೆ, ಈಕೆ ಕೂಡು ಕುಟುಂಬದಲ್ಲಿ ಇರಬೇಕಾಗಿತ್ತು. ಗಂಡ ಮನೆ ಮಕ್ಕಳು ಎಂಬ ಪ್ರತಿಯೊಂದು ಕೆಲಸವನ್ನು ನೋಡಿಕೊಂಡು ಮನೆಯ ಸದಸ್ಯರನ್ನು ನೋಡಿಕೊಳ್ಳಬೇಕಾಗಿತ್ತು. ಆದರೆ ರಾಣಿಯರ ಜೀವನವು ವೈಭವದಿಂದ ಕೂಡಿತ್ತು. ಇವರು ಪ್ರತ್ಯೇಕವಾದ ಮಹಲ್‌ಗಳಲ್ಲಿ ವಾಸಿಸುತ್ತಿದ್ದರು. ೧೦ ವರ್ಷಗಳು ಮೇಲ್ಪಟ್ಟ ಗಂಡುಮಕ್ಕಳಿಗೆ ರಾಣಿ ವಾಸವನ್ನು ಪ್ರವೇಶಿಸುವಂತಿರಲಿಲ್ಲ. ರಾಣಿಯರಿಗೆ ಪ್ರತ್ಯೇಕ ಭವನ, ದಾಸಿಯರು ಇದ್ದರು. ರಾಣಿ ವಾಸವೂ ಸೌಂದರ್ಯವಾಗಿಯೂ ಕಲಾಭವನವಾಗಿಯೂ ಇದ್ದಿತು. ರಾಣಿ ವಾಸಕ್ಕೆ ಪುರುಷನಿಗೆ ಪ್ರವೇಶವಿರಲಿಲ್ಲ. ಅರಮನೆಯಲ್ಲಿ ರಾಣಿಯರ ಸನಿಹದಲ್ಲಿದ್ದ ಆಪ್ತಸಖಿಯರು ಕಲಾಪಿದೆಯರಾಗಿರುತ್ತಿದ್ದರು. ರಾಣಿ ವಾಸದವರು ಹೊರಗೆ ಹೊರ ಹೋಗಲೂ ಅವರ ಜೊತೆಯಲ್ಲಿ ಈ ಕಲಾವಿದೆಯರ ಬಳಗವಿರುತ್ತಿತ್ತು. ಈ ರೀತಿಯಲ್ಲಿ ರಾಣಿಯರು ಸುಖ ಸಂಪತ್ತಿಗೆಯಲ್ಲಿ ಜೀವಿಸುತ್ತಿದ್ದರು. ಅಂದರೆ ಅವರ ಪ್ರತಿಯೊಂದು ಕೆಲಸವೂ ಸಹ ಅಂತಃಪುರ ಸೇವಕಿಯರು ಮಾಡಬೇಕಾಗಿತ್ತು. ರಾಜರಿಗೆ ಅಡಿಗೆ ಬಡಿಸಲೂ ಸಹ ಸ್ತ್ರೀ ಸೇವಕಿಯರು ನೀಡುತ್ತಿದ್ದರು, ಹೊರತು ರಾಣಿಯರಲ್ಲ. ಇಲ್ಲಿ ರಾಣಿಯರು ಸಾಮಾನ್ಯ ಮಹಿಳೆಯರ ಜೀವನಕ್ಕಿಂತ ಭಿನ್ನವಾಗಿತ್ತು ಎಂಬುದು ಸ್ಪಷ್ಟ ಅಲ್ಲದೆ ಸಾಮಾನ್ಯ ಮಹಿಳೆಯರು ಅನೇಕ ಉದ್ಯೋಗದಲ್ಲಿ ಕೈಗಾರಿಕೆಗಳಲ್ಲಿ ಇತ್ಯಾದಿ ಕೆಲಸಗಳಲ್ಲಿ ತೊಡಗಿದರೆ ರಾಣಿ ಇವುಗಳ ಒಡತಿಯಾಗಿದ್ದಳು. ಸಾಮಾನ್ಯ ಮಹಿಳೆಯರ ಜೀವನ ದೈಹಿಕ ಶ್ರಮವಾಗಿದ್ದರೆ ರಾಣಿಯರ ಭೌತಿಕ ಶ್ರಮಜೀವಿಯಾಗಿರುತ್ತಿದ್ದಳೆಂದು ಸ್ಪಷ್ಟಪಡಿಸುತ್ತದೆ.

ಟಿಪ್ಪಣಿಗಳು

೧. ಎಸ್. ಸರಸ್ವತಿ, ವಿಜಯನಗರ ಅಧ್ಯಯನ, ಸಂ. ೨, ಪು. ೦೧

೨. ಅದೇ

೩. ಬಿ.ಎ. ವಿವೇಕ ರೈ, ಪ್ರವಾಸಿ ಕಂಡ ವಿಜಯನಗರ, ಪು. ೪೨

೪. ಎಸ್.ವೈ. ಸೋಮಶೇಖರ್, ವಿಜಯನಗರ ಅಧ್ಯಯನ, ಸಂ.೪, ಪು. ೫೨

೫. ಬಸವರಾಜಯ್ಯ ಮಠದ್, ವಿಜಯನಗರ ಕಾಲದ ಸಮಾಜ ಕೆಲವು ಅನಿಷ್ಟ ಪದ್ಧತಿಗಳು, ಪು. ೨೨-೨೪

೬. ಎಂ.ಎಸ್. ಕೃಷ್ಣಮೂರ್ತಿ, ವಿಜಯನಗರ ಅಧ್ಯಯನ, ಸಂ. ೩, ಪು. ೭೫

೭. ಬಿ.ಎ. ವಿವೇಕ ರೈ, ಪ್ರವಾಸಿ ಕಂಡ ವಿಜಯನಗರ, ಪು. ೮೩

೮. ಶ್ರೀಕಂಠಯ್ಯ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನ ಜೀವನ ಚಿತ್ರ, ಪು. ೨೨೩-೨೨೪

೯. ಜ್ಯೋತ್ಸ್ನ ಕಾಮತ್, ಹಂಪಿ ಪರಂಪರೆ, ಪು. ೩೮

೧೦. ಜ್ಯೋತ್ಸ್ನ ಕಾಮತ್, ಹಂಪಿ ಪರಂಪರೆ, ಪು. ೩೮-೩೯

೧೧. ಎನ್. ಸರಸ್ವತಿ, ವಿಜಯನಗರ ಅಧ್ಯಯನ, ಸಂ. ೩, ಪು. ೧೬

೧೨. ಪ್ರೊ. ಸೀತಾರಾಮಯ್ಯ ಎಂ.ವಿ. ಪ್ರ.ಸಂ. ಸಂ. ಡಾ. ವಿ.ಎಸ್.ಎಸ್. ಆಚಾರ್ಯ, ಶ್ರೀ ಕೃಷ್ಣದೇವರಾಯನ ದಿನಚರಿ, ಪು. ೮

೧೩. ಎನ್. ಸರಸ್ವತಿ, ವಿಜಯನಗರ ಅಧ್ಯಯನ, ಸಂ.೩, ಪು. ೧೬-೧೭

೧೪. ಶ್ರೀಕಂಠಯ್ಯ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು. ೩೩೩

೧೫. ಶ್ರೀಕಂಠಯ್ಯ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು. ೪೦೫

೧೬. ಶ್ರೀಕಂಠಯ್ಯ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು. ೨೫೦

೧೭. ನಿರೂಪಮ, ಶ್ರೀ ಕೃಷ್ಣದೇವರಾಯನ ಅಮುಕ್ತಮೌಲ್ಯದ, ಪು. ೩೧-೩೩

೧೮. ಶ್ರೀಕಂಠಯ್ಯ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು. ೩೭೫

೧೯. ಚೆಲುವರಾಜು, ಹಂಪಿಯ ಸ್ಮಾರಕಗಳಲ್ಲಿ ಜನಪದೀಯ ಅಂಶಗಳು, ಪು. ೧೦೪-೦೭

೨೦. ನಿರೂಪಮ, ಅಮುಕ್ತಮೌಲ್ಯದ, ಪು. ೩೩

ಅಧ್ಯಾಯ ೭

ಸಮಾರೋಪ

ಸಮಾರೋಪ

"ವಿಜಯನಗರದ ತುಳುವ ಅರಸರ ರಾಣಿಯರು : ಚಾರಿತ್ರಿಕ ಅಧ್ಯಯನ" ಎಂಬ ಶೀರ್ಷಿಕೆಯನ್ನು ಹೊತ್ತ ಈ ನಿಬಂಧವು ತುಳುವ ಅರಸರ ರಾಣಿಯರ ಕುರಿತು ಸಮಗ್ರವಾಗಿ ವಿಶ್ಲೇಷಿಸುವ ಒಂದು ಪ್ರಯತ್ನವಾಗಿದೆ. ತುಳುವ ವಂಶದ ಅರಸರಂತೆ ರಾಣಿಯರು ಸಹ ಪ್ರಾಮುಖ್ಯತೆ ಪಡೆದಿರುವುದು ವಿಶೇಷವಾಗಿದೆ. ಈ ಕಾಲದ ರಾಣಿಯರ ಚರಿತ್ರೆಯೂ, ಹೆಚ್ಚು ವಿಸ್ತಾರವಾದದ್ದು ಹಾಗೂ ಕುತೂಹಲ ಅಂಶಗಳಿಂದ ಕೂಡಿದ ಸಂಗತಿಗಳನ್ನು ಒಳಗೊಂಡಿರುವುದು ಈ ಅಧ್ಯಯನದ ಒಳನೋಟಗಳಿಂದ ಗ್ರಹಿಸಬಹುದಾಗಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ತುಳುವ ವಂಶದ ಉಗಮ ಮತ್ತು ವಿಕಾಸವು ಬಹು ಚಾರಿತ್ರಿಕ ಮಹತ್ವವನ್ನು ಹೊಂದಿರುತ್ತದೆ. ಈ ವರೆಗೆ ಬೆಳಕಿಗೆ ಬಾರದ ಅನೇಕ ಸಂಗತಿಗಳನ್ನು ತುಳುವ ವಂಶದ ಮೂಲವನ್ನು ಅನೇಕ ಸ್ಪಷ್ಟ ಮಾಹಿತಿಯ ಮೂಲಕ ಗುರುತಿಸಲಾಗಿದ್ದು, ಈ ಅರಸರು ದಕ್ಷಿಣ ಕನ್ನಡದವರಾಗಿರುವುದು ಇಲ್ಲಿ ಹೆಚ್ಚು ಪರಿಗಣನಾರ್ಹವಾದ ಅಂಶವಾಗಿ ಕಂಡುಬರುತ್ತದೆ. ಈ ತುಳುವ ಅರಸರ ಪೂರ್ವೇತಿಹಾಸವೂ ಬಹಳ ಹಿಂದಿನ ಕಾಲಕ್ಕೆ ಹೋಗುತ್ತದೆ. ಇಲ್ಲಿ ಭಾಷೆ, ನಾಡು ಮತ್ತು ಅರಸರ ಸಂಸ್ಕೃತಿಯಲ್ಲಿ ತುಳುವ ಚಾರಿತ್ರಿಕ ಅಂಶಗಳಿಂದ ಪರಿಗಣಿಸುವುದು ಹೆಚ್ಚು ಔಚಿತ್ಯಪೂರ್ಣವಾದದ್ದು. ಹಾಗಾಗಿ ಸ್ಥೂಲವಾಗಿ ಹಾಗೂ ಅನುಕ್ರಮವಾಗಿ ಕಟ್ಟಿಕೊಡಲಾಗಿದೆ.

ವಿಜಯನಗರದ ಸಂಗಮ, ಸಾಳ್ವ, ತುಳುವ, ಅರವೀಡು ವಂಶದ ರಾಣಿಯರು ಸಹ ಪ್ರಸ್ತುತ ಅಧ್ಯಯನದಲ್ಲಿ ಕಾಣಿಸಿಕೊಂಡಿದ್ದು ಇವರು ವಿಜಯನಗರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಆ ಮೂಲಕ ರಾಣಿಯರು ನೀಡಿದ ಸಂಗತಿ ಕಂಡುಬರುತ್ತದೆ. ಪ್ರಜಾಕಲ್ಯಾಣಕ್ಕಾಗಿ ಕೆರೆ-ಕಾಲುವೆ, ದೇವಾಲಯಗಳ ನಿರ್ಮಾಣ, ದಾನದತ್ತಿ ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿ ಇವರು ವಹಿಸಿದ ಪಾತ್ರವನ್ನು ಇಲ್ಲಿ ಅವಲೋಕಿಸಲಾಗಿದೆ.

ತುಳುವ ವಂಶದಲ್ಲಿ ಹನ್ನೊಂದು ಜನ ರಾಣಿಯರು ಸಹ ತಮ್ಮದೇ ಆದ ಸ್ಥಾನಮಾನ ಪಡೆದಿರುವುದು ವಿಶೇಷವಾಗಿದೆ. ಈ ವಂಶದ ಮೊಟ್ಟಮೊದಲ ರಾಣಿಯಾದ ಬುಕ್ಕಮ್ಮಳು ತನ್ನನ್ನು ಧಾರ್ಮಿಕ ಕಾರ್ಯಗಳಲ್ಲಿ ಗುರುತಿಸಿಕೊಂಡರೆ. ತಿಪ್ಪಾಂಬೆ, ಓಬಾಂಬೆಯರು ಅಂತಃಪುರದ ಜೀವನಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡು ಅರಸರ ಹಾಗೂ ರಾಜಪುತ್ರರ ಶ್ರೇಯಸ್ಸಿಗಾಗಿ ಶ್ರಮಿಸಿರುವುದು ಹೆಚ್ಚು. ಇವರಿಬ್ಬರೂ ಸಹ ಸಮಾನವಾದ ಸ್ಥಾನಮಾನ ಪಡೆದಿರುವುದು ಗಮನಿಸಬಹುದು.

ನಾಗಲಾದೇವಿಯೂ ತುಳುವ ವಂಶದಲ್ಲಿಯೇ ವಿಶೇಷವಾದ ಸ್ಥಾನಮಾನ ಪಡೆದು ತುಳುವ ವಂಶದ ಬದಲಾವಣೆಗೆ ಬಹುವಾಗಿ ಶ್ರಮಿಸಿರುವುದು ಹೆಚ್ಚು. ಜೊತೆಗೆ ತನ್ನನ್ನು ವೈವಿಧ್ಯಮಯ ವ್ಯಕ್ತಿತ್ವದಿಂದ ಗುರುತಿಸಲ್ಪಟ್ಟಿದ್ದಾಳೆ. ಇದಕ್ಕೆ ಸಾಕ್ಷಿಯಾಗಿ ಪುತ್ರ ಕೃಷ್ಣದೇವರಾಯನ ಬೆಳವಣಿಗೆಯಿಂದ ಗ್ರಹಿಸಬಹುದು. ರಾಣಿ ತಿರುಮಲಾದೇವಿಯೂ ಸಹ ಸಾಮ್ರಾಜ್ಯದ ಏಳ್ಗೆಗಾಗಿ ಅರಸನಿಗೆ ಬೆಂಬಲವಾಗಿ ನಿಂತು ಉತ್ತೇಜನ ನೀಡಿ ತನ್ನನ್ನು ತೊಡಗಿಸಿಕೊಂಡ ಅಂಶ ಪರಿಗಣನಾರ್ಹವಾದದ್ದು. ಚಿನ್ನಾದೇವಿಯೂ ಕೃಷ್ಣದೇವರಾಯನ ಪ್ರೀತಿಯ ಮಡದಿ. ಈಕೆ ಡೊಂಬರವಳೆಂದು, ವೇಶ್ಯೆಯೆಂದು, ಉತ್ತಮ ಕುಲಸ್ತ್ರೀ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲದೆ ಹೋದರೂ ಹೆಚ್ಚಾಗಿ ಈಕೆ ವೇಶ್ಯೆ ಎಂಬ ಅಂಶಕ್ಕೆ ಪುಷ್ಟಿ ನೀಡುತ್ತವೆ. ಈಕೆ ಲಲಿತ ಕಲೆಗಳಲ್ಲಿ ತನ್ನನ್ನು ತೊಡಗಿಸಿಕೊಂಡು ತುಳುವ ವಂಶದ ಕಲೆಗೆ ನೀಡಿದ ಆಸಕ್ತಿಯನ್ನು ಈ ರಾಣಿಯ ಮೂಲಕ ಗುರುತಿಸಬಹುದು. ಜೊತೆಗೆ ಚನ್ನಾದೇವಿ, ತಿರುಮಲದೇವಿಯರು, ತುಳುವ ವಂಶದಲ್ಲಿಯೇ ಪ್ರತ್ಯೇಕವಾಗಿ ಹೆಚ್ಚು ಶ್ರಮಿಸಿರುವುದು ಪ್ರಮುಖ ವಿಚಾರವಾಗಿದೆ.

ಜಗನ್ಮೋಹಿನಿಯೂ ವಿಜಯನಗರ ಸಾಮ್ರಾಜ್ಯದ ವಿಸ್ತರಣೆಯಿಂದ ಉಂಟಾಗಿದ್ದ ವೈಮನಸ್ಸನ್ನು ಹೋಗಲಾಡಿಸಲು ಈಕೆ ರಾಣಿಯಾಗಿ ಬಂದು, ಕೆಲವೊಂದು ಸಂದರ್ಭದಲ್ಲಿ ಆಡಳಿತದಲ್ಲೂ ತನ್ನನ್ನು ತೊಡಗಿಸಿಕೊಂಡಳೆಂಬುದು ಸ್ಪಷ್ಟವಾಗಿದೆ. ಮೋಹನಾಂಗಿ, ವೇಂಗಳಾಂಬೆಯರು ರಾಜಕುಟುಂಬದ ಪುತ್ರಿಯರಾಗಿದ್ದರು ಸಹ ರಾಜ್ಯಾಳ್ವಿಕೆಯಲ್ಲಿ ಯಾವುದೇ ಪಾತ್ರವಹಿಸಿದ ನಿದರ್ಶನವಿಲ್ಲ. ಆದರೆ ಈ ರಾಜ ಪುತ್ರಿಯರಿಗೆ ಸಕಲ ವಿದ್ಯೆಗಳಲ್ಲಿ ತರಬೇತಿ ನೀಡಲಾಗುತ್ತಿತ್ತು ಎಂಬ ಸಂಗತಿ ಪ್ರಮುಖವಾಗಿದೆ.

ಓದುವ ತಿರುಮಲಮ್ಮಳು ಪ್ರಮುಖ ವಿದ್ವಾಂಸಳಾಗಿ ಗುರುತಿಸಿಕೊಂಡಿದ್ದು ಈಕೆ ಹಲವು ವಿಚಾರದಲ್ಲಿ ಸ್ವಾತಂತ್ರ್ಯ ಪಡೆದಿರುವುದು ಇವಳ ವಿದ್ವತ್ತಿನಿಂದ ಪರಿಚಯವಾಗುತ್ತದೆ. ರಾಣಿ ವರದರಾಜಮ್ಮ ಸಹ ಪ್ರಮುಖ ರಾಣಿಯಾಗಿದ್ದು ಈಕೆ ಪಾಂಡ್ಯವಂಶದ ರಾಜಕುಮಾರಿಯಾಗಿ ತುಳುವ ವಂಶದ ಏಳ್ಗೆಗಾಗಿ ಶ್ರಮಿಸಿರುವುದು ಸ್ಪಷ್ಟವಾಗುತ್ತದೆ.

ಮತ್ತೊಂದು ಪ್ರಮುಖವಾಗಿ ಕಂಡುಬರುವ ವಿಚಾರವೆಂದರೆ, ಈ ವಂಶದ ಎಲ್ಲಾ ರಾಣಿಯರು ಸಹ ಹೆಚ್ಚಾಗಿ ರಾಜಕುಟುಂಬಕ್ಕೆ ಸೇರಿದವರಲ್ಲ. ನಾಗಲಾದೇವಿ, ಚಿನ್ನಾದೇವಿ, ಓದುವ ತಿರುಮಲಮ್ಮನವರ ಮೂಲದ ಬಗ್ಗೆ ಆಕರಗಳ ಕೊರತೆಯಿಂದ ಇಲ್ಲಿ ಗ್ರಹಿಸಬಹುದು. ತುಳುವ ರಾಣಿಯರು ವಿಜಯನಗರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಸಂಗತಿ ಪರಿಗಣನಾರ್ಹವಾದದ್ದು. ರಾಜರುಗಳಂತೆ ರಾಣಿಯರು ಪ್ರಜಾಕಲ್ಯಾಣಕ್ಕಾಗಿ ದುಡಿದವರು ರಾಣಿಯರು ಕೈಗೊಂಡ ಕಾರ್ಯಗಳಲ್ಲಿ ಗಮನಾರ್ಹವಾದದ್ದೆಂದರೆ ಆಡಳಿತದಲ್ಲಿ ತಮ್ಮನ್ನು ತೊಡಗಿಸಿಕೊಂಡು ಅರಸರಿಗೆ ಸ್ಪೂರ್ತಿಯನ್ನು, ಸಲಹೆಗಳನ್ನು ನೀಡುತ್ತಿದ್ದ ಅಂಶವನ್ನು ಗುರುತಿಸಬಹುದು. ಕೆರೆ ಕಾಲುವೆಗಳ ನಿರ್ಮಾಣ, ಬಾವಿ ತೊಡಿಸುವಿಕೆ ಮೊದಲಾದ ನೀರಾವರಿ ಕಾರ್ಯಗಳಲ್ಲಿಯೂ ಸಹ ರಾಣಿಯರ ಸೇವೆ ಶ್ಲಾಘನೀಯವಾದದ್ದು ಹಾಗೂ ಇವರ ಹೆಸರಿನಲ್ಲಿಯೂ ನಿರ್ಮಿಸಲಾಗುತ್ತಿತ್ತು ಎಂಬುದಕ್ಕೆ ನಾಗಸಮುದ್ರ ಇತ್ಯಾದಿ ಗುರುತಿಸಬಹುದು.

ತುಳುವ ಅರಸರ ರಾಣಿಯರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸ್ವಾತಂತ್ರರಾಗಿದ್ದು, ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ದತ್ತಿ ದಾನ ಮಾಡಿದ್ದು ಉಲ್ಲೇಖನಾರ್ಹ. ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ

ಧರ್ಮವನ್ನು ಅನುಸರಿಸಿ ಅನೇಕ ದೇವಾಲಯಗಳ ನಿರ್ಮಾಣಕ್ಕೆ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿರುವುದು ಹೆಚ್ಚು. ದೇವರ ಹೆಸರಿನಲ್ಲಿ ನಿರ್ಮಿಸಿದ ದೇವಾಲಯಗಳ ತನ್ನ ಒಳಿತಿಗಾಗಿ ಕೈಗೊಂಡ ತೀರ್ಥಯಾತ್ರೆಗಳು ಇಲ್ಲಿ ಮಹತ್ವ ತಂದಿದೆ. ಅಲ್ಲದೆ ಈ ರೀತಿ ಯಾತ್ರೆ, ತೀರ್ಥಯಾತ್ರೆ, ದತ್ತಿ ದಾನ ನೀಡುವ ಉದ್ದೇಶವನ್ನು ಕುರಿತು ಕ್ರಿ.ಶ. ೧೫೫೦-೧೫೭೯ರ ಕೃಷ್ಣದೇವರಾಯನ ನಿಕಟ ಸಂಪರ್ಕ ಹೊಂದಿದ ವಿದ್ವಾಂಸರೊಬ್ಬರಿಂದ ರಚಿಸಲ್ಪಟ್ಟ 'ಸಾಮಾಜ್ರ್ಯ ಲಕ್ಷ್ಮಿ ಪೀಠಿಕಾ' ಎಂಬ ಗ್ರಂಥವು ೧೫೩ ಅಧ್ಯಾಯಗಳನ್ನು ಹೊಂದಿದ್ದು, ಇದರಲ್ಲಿ ಒಂದು ಅಧ್ಯಾಯದಲ್ಲಿ ರಾಜಮಹರ್ಷಿ ಪಟ್ಟದರಾಣಿಯ ಗುಣವಾಳಿಗಳನ್ನು ತಿಳಿಸಿ ಚಕ್ರಾಧಿಪತ್ಯದ ಆಡಳಿತದಲ್ಲಿ ಚಕ್ರವರ್ತಿಗಳೊಂದಿಗೆ ಮಹಾರಾಣಿ ಆಗಿದ್ದಾಂಗೆ ಭಾಗವಹಿಸುವುದರಿಂದ ಸಾಮ್ರಾಜ್ಯ ಲಕ್ಷ್ಮಿಯೂ ಸಂತೋಷಗೊಂಡು ರಾಜ್ಯದಲ್ಲಿ ಸ್ಥಿರವಾಗಿ ನೆಲೆಸುವಳೆಂಬ ನಂಬಿಕೆಯಿಂದ ಹೆಚ್ಚಾಗಿ ದಾನದತ್ತಿ ನೀಡುತ್ತಿದ್ದರೆಂಬ ಸಂಗತಿಯನ್ನು ಪರಿಗಣಿಸುವುದು ಔಚಿತ್ಯಪೂರ್ಣವಾಗಿ ಕಂಡುಬರುತ್ತದೆ.

ರಾಣಿಯರು ತಮ್ಮ ತಮ್ಮ ಕರ್ತವ್ಯಗಳು, ಹಕ್ಕು ಬಾಧ್ಯತೆಗಳ ಬಗ್ಗೆ ಕೆಲವು ಕೃತಿಗಳಲ್ಲಿ ಉಲ್ಲೇಖವಿದ್ದು ತಮ್ಮ ಪುತ್ರ ಶ್ರೇಯೋಭಿವೃದ್ಧಿಗಾಗಿ ಸಾಮ್ರಾಜ್ಯದಲ್ಲಿ ಕ್ಲಿಷ್ಟಕರವಾದ ವಾತಾವರಣವು ಉಂಟಾಗುತ್ತಿತ್ತೆಂದು ಕಂಡುಬಂದರೆ, ಸವತಿ ಮತ್ಸರ ಇದ್ದ ಬಗ್ಗೆ ಆಧಾರಗಳಿಲ್ಲ. ಆದರೆ ತಮ್ಮ ಪುತ್ರ ರಾಜಕುಮಾರರೇ ಯುವರಾಜ, ರಾಜನಾಗಬೇಕೆಂದು ಹಂಬಲಿಸುತ್ತಿದ್ದ ವಿಚಾರ ಪ್ರಮುಖವಾದುದಾಗಿದೆ.

ತುಳುವ ಅರಸರ ರಾಣಿಯರು ಸಾಮಾನ್ಯ ಮಹಿಳೆಯರೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರು ಸಹ ಸಾಮಾನ್ಯ ಮಹಿಳೆಯರ ಪಾತ್ರ ವಿಶೇಷವೇನೂ ಆಗಿರಲಿಲ್ಲ. ಕುಟುಂಬ ವ್ಯವಸ್ಥೆ ಉಡುಗೆ-ತೊಡುಗೆ, ಆಚಾರ-ವಿಚಾರಗಳಲ್ಲಿ, ಆಹಾರ, ಆಭರಣ ಇತ್ಯಾದಿ ಸಂಗತಿಗಳಲ್ಲಿ ಪರಸ್ಪರ ವಿನಿಮಯ ಲಕ್ಷಣಗಳಿದ್ದರೂ ಸಹ ರಾಣಿಯರು ಉನ್ನತಮಟ್ಟದಲ್ಲಿಯೇ ಗುರುತಿಸಲ್ಪಡುತ್ತಿದ್ದರು. ಮತ್ತೊಂದು ಸಂಗತಿ ಎಂದರೆ ಅಂತಃಪುರದಲ್ಲಿ ೧೨,೦೦೦ ಸ್ತ್ರೀ ಸೇವಕಿಯರು ರಾಣಿಯರ ಸೇವೆಗೆ ತೊಡಗಿಕೊಂಡ ಉದ್ದೇಶವೇಂದರೆ ಅರಸಿಯರು ಪರಪುರುಷನ ಕಣ್ಣಿಗೆ ಬೀಳಬಾರದೆಂಬ ಉದ್ದೇಶವಿರಬಹುದೇ ಅಥವಾ ಆ ಕಾಲದ ಸ್ತ್ರೀಯರು ಹೆಚ್ಚಾಗಿ ನಂಬಿಕೆಗೆ ಅರ್ಹರು, ಸಮರ್ಥರು ಆಗದಿರಬಹುದೇ ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಇಲ್ಲಿ ಸರ್ವರು ಸಮಾನರಂತೆ ಭಾವಿಸಿದ್ದರೂ ರಾಣಿಯ ವೈಭವ ಜನಸಾಮಾನ್ಯರಿಗಿಂತ ಉನ್ನತ ಹಂತದಲ್ಲಿತ್ತು.

ಅರಸರು ರಾಣಿಯರಿಗೆ ನೀಡಿದ ಸ್ಥಾನ-ಮಾನ ದೊಡ್ಡದ್ದು. ಇಲ್ಲಿ ಅರಸರು ತಾಯಿಯ ಬಗ್ಗೆ ಮತ್ತು ರಾಣಿಯರ ಬಗ್ಗೆ ಇದ್ದ ಪ್ರೀತಿಯನ್ನು ನಾಗಲಾಪುರ, ಚಿತ್ತವಾಡ್ಗಿ, ತಿರುಮಲದೇವಿಪಟ್ಟಣ, ವರದರಾಜಮ್ಮನ ಪಟ್ಟಣ ಇತ್ಯಾದಿ ರಾಣಿಯರ ಹೆಸರಿನ ಸ್ಥಳಗಳಿಗೆ ಇಡುವುದರ ಮೂಲಕ ಅನನ್ಯತೆಯನ್ನು ಮೆರೆದಿದ್ದಾರೆ.

ಒಟ್ಟಾರೆ ಹೇಳುವುದಾದರೆ ತುಳುವ ವಂಶದ ಪ್ರಗತಿಗೆ ಹಾಗೂ ಖ್ಯಾತಿಗೆ ಆ ಕಾಲದ ರಾಣಿಯರ ಪಾತ್ರವಿದೆ. ರಾಣಿಯರ ಪ್ರೋತ್ಸಾಹ ಬೆಂಬಲಗಳಿಂದ ರಾಜ್ಯವಿಸ್ತರಿಸಿದ್ದು, ನೆರಹೊರೆಯವರೊಡನೆ ಅವಿನಾಭಾವ ಸಂಬಂಧ ಹೊಂದಲು ಕಾರಣರಾಗಿ ಸಾಮ್ರಾಜ್ಯದಲ್ಲಿ ಇವರ ಸೇವೆಯೂ ಔಚಿತ್ಯ ಪೂರ್ಣವಾಗಿದೆ.

ಅನುಬಂಧಗಳು

೧. ಗ್ರಂಥ ಋಣ
೨. ಕೋಷ್ಟಕ
೩. ಛಾಯಾಚಿತ್ರಗಳು

ಗ್ರಂಥ ಋಣ

೧. ಅಡಪ ರಾಮಕೃಷ್ಣರಾವ್ : ೨೦೦೩, *ಶ್ರೀಕೃಷ್ಣದೇವರಾಯ*, ಭಾರತೀಯ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨. ಪ್ರೊ. ಒಡೆಯರ್ ಡಿ. ಹೆಗ್ಗಡೆ : ೨೦೦೩, *ಹಕ್ಕಬುಕ್ಕ*, ತನುಮನು ಪ್ರಕಾಶನ, ಮೈಸೂರು

೩. ಪ್ರೊ. ಕೆ.ಎಸ್. ಕಣ್ಣನ್ : ೨೦೦೧, *ವಿರೂಪಾಕ್ಷ ವಸಂತೋತ್ಸವ ಚಂಪೂ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಡಾ. ಎಂ.ಎಂ. ಕಲಬುರ್ಗಿ : ೧೯೯೨, *ಕರ್ನಾಟಕ ಕೈಫಿಯತ್ತುಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಡಾ. ಎಂ.ಎಂ. ಕಲಬುರ್ಗಿ : ೨೦೦೪, *ಮಾರ್ಗ ೪*, ಸಪ್ನ ಬುಕ್ ಹೌಸ್, ಬೆಂಗಳೂರು

೬. ಕಾಶಿವಿಶ್ವನಾಥ ಶೆಟ್ಟಿ : ೧೯೭೫, *ಕನ್ನಡ ಕವಯಿತ್ರಿಯರು*, ಎನ್.ಎನ್. ಜಯಕುಮಾರ್ ಸ್ಮಾರಕ ಗ್ರಂಥ ಪ್ರಕಾಶನ, ಚಿಕ್ಕಮಗಳೂರು

೭. ಕೆ. ಕುಶಾಲಪ್ಪಗೌಡ (ಅನು) : ೧೯೮೯, *ಮಧುರಾವಿಜಯ ಅಥವಾ ವೀರಕಂಪರಾಯ ಚರಿತಂ*, ಜಯಗೌರಿ ಪ್ರಕಾಶನ, ಅಂಚೆ ಪೆರಾಜೆ ಸುಳ್ಯ

೮. ಪ್ರೊ. ಕೃಷ್ಣಪ್ಪ ಎಂ.ವಿ. ಚೆನ್ನಬಸಪ್ಪ ಎಸ್. ಪಾಟೀಲ್ : ೧೯೯೯, *ವಿಜಯನಗರ ಅಧ್ಯಯನ ಸಂ. ೪*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

೯. ಪ್ರೊ. ಕೃಷ್ಣಪ್ಪ ಎಂ.ವಿ. ಚೆನ್ನಬಸಪ್ಪ ಎಸ್. ಪಾಟೀಲ್ : ೨೦೦೧, *ವಿಜಯನಗರ ಅಧ್ಯಯನ ಸಂ. ೬*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

೧೦. ಪ್ರೊ. ಕೃಷ್ಣಪ್ಪ ಎಂ.ವಿ. ಚೆನ್ನಬಸಪ್ಪ ಎಸ್. ಪಾಟೀಲ್ : ೧೯೯೯, *ವಿಜಯನಗರ ಅಧ್ಯಯನ ಸಂ. ೫*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

೧೧. ಡಾ. ಕೋತಿನ ಎಸ್.ಎನ್. : ೧೯೮೪, *ಮೋಹನ ತರಂಗಿಣಿ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೨. ಸಿ.ಟಿ.ಎಂ. ಕೊಟ್ರಯ್ಯ : ೨೦೦೧, *ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩. ಡಾ. ಗೋಪಾಲ ಬಾ.ರಾ. : ೧೯೮೩, *ವಿಜಯನಗರದ ವಾಸ್ತುಶಿಲ್ಪ*, ಕನ್ನಡ ಮತ್ತು ಸಂಸ್ಕೃತ ನಿರ್ದೇಶನಾಲಯ, ಬೆಂಗಳೂರು

೧೪. ಡಾ. ಆರ್. ಗೋಪಾಲ್, ಚಿಕ್ಕಮಾರೇಗೌಡ, ಡಾ. ಡಿ.ಎಂ. ಮಂಜುನಾಥಯ್ಯ : ೨೦೦೫, *ವಿಜಯನಗರ ಅಧ್ಯಯನ*, ಸಂ.೧೦, ಕರ್ನಾಟಕ ಸರ್ಕಾರ, ಮೈಸೂರು

೧೫. ಡಾ. ಚಿದಾನಂದ ಮೂರ್ತಿ ಎಂ. : ೧೯೯೭, *ಹೊಸತು ಹೊಸತು*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೧೬. ಡಾ. ಚಿದಾನಂದ ಮೂರ್ತಿ ಎಂ. : ೨೦೦೪, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಸಪ್ನ ಬುಕ್ ಹೌಸ್, ಬೆಂಗಳೂರು

೧೭. ಡಾ. ಚಿನ್ನಸ್ವಾಮಿ ಸೋಸಲೆ ಎನ್. : ೨೦೦೧, *ಕರ್ನಾಟಕ ರಾಜಕೀಯ ಚರಿತ್ರೆ ಮತ್ತು ಸಾಹಿತ್ಯ*, ಸಿ.ವಿಜಿ ಪಬ್ಲಿಕೇಷನ್ಸ್, ಬೆಂಗಳೂರು

೧೮. ಡಾ. ಚಿನ್ನಸ್ವಾಮಿ ಸೋಸಲೆ ಎನ್. : ೨೦೦೪, *ಸಾಮ್ರಾಜ್ಯ ಮತ್ತು ಸಂಸ್ಥಾನ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೯. ಚೆಲುವರಾಜು : ೨೦೦೦, *ಹಂಪಿಯ ಸ್ಮಾರಕಗಳಲ್ಲಿ ಜನಪದೀಯ ಅಂಶಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦. ಚೆನ್ನಕ್ಕ ಎಲಿಗಾರ : ೧೯೮೭, *ಪ್ರಾಚೀನ ಕರ್ನಾಟಕದ ರಾಣಿಯರು*, ಚನ್ನಗಂಗಾ ಪ್ರಕಾಶನ, ಧಾರವಾಡ

೨೧. ಚೆನ್ನಕ್ಕ ಎಲಿಗಾರ : ೧೯೯೦, *ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೨. ಡಾ. ತಿಪ್ಪೇರುದ್ರಸ್ವಾಮಿ ಎನ್. : ೧೯೯೭, *ಕರ್ನಾಟಕ ಸಂಸ್ಕೃತಿ ಸಮೀಕ್ಷೆ*, ಡಿ.ವಿ.ಕೆ ಮೂರ್ತಿ ಪ್ರಕಾಶಕರು, ಮೈಸೂರು ೦೪

೨೩. ಎಚ್ ತುಕಾರಾಮರಾವ್ : ೧೯೯೬, *ಹೊಸಪೇಟೆ ಚಾರಿತ್ರಿಕ ವಿವೇಚನೆ ಐತಿಹ್ಯ ಪರಿಶೀಲನೆ*, ಶರಣರ ಸುವಾಸಿನಿ ಬಳಗ, ಹೊಸಪೇಟೆ

೨೪. ದೀಕ್ಷಿತ್ ಜಿ.ಎಸ್., ಬಿ. ರಾಮಸ್ವಾಮಿ, ಭಾರ್ಗವಿ, ಶಿವಯ್ಯ : ೧೯೯೭, *ಶ್ರೀಕೃಷ್ಣದೇವರಾಯನ ಜೀವನ ಮತ್ತು ಸಾಧನೆ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಬೆಂಗಳೂರು

೨೫. ಡಿ.ವಿ. ದೇವರಾಜ್, ಡಾ ಚನ್ನಬಸಪ್ಪ ಎಸ್.ಪಾಟೀಲ್ : ೧೯೯೬, *ವಿಜಯನಗರ ಅಧ್ಯಯನ*, ಸಂ.೧, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

೨೬. ದೇವೇಂದ್ರ ಕುಮಾರ್ ಸಿ. ಹಕಾರಿ : ೧೯೯೩, *ಡೊಂಬರ ಸಂಸ್ಕೃತಿ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨೭. ನಂಜುಂಡಸ್ವಾಮಿ ಎ.ಎನ್. : ೧೯೯೧, *ವಿಜಯನಗರ ಇತಿಹಾಸ*, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ ೦೧

೨೮. ನರಸಿಂಹಮೂರ್ತಿ ಎಂ. : ೨೦೦೩, *ಕರ್ನಾಟಕ ನಾಣ್ಯ ಪರಂಪರೆ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೨೯. ಡಾ. ನಾಗರಾಜ್ ಎಂ.ಜಿ., ಪಿ.ವಿ. ಕೃಷ್ಣಮೂರ್ತಿ : ೧೯೯೭, *ಇತಿಹಾಸ ದರ್ಶನ*, ಸಂ. ೧೨, ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು

೩೦. ಡಾ. ನಾಗರಾಜ್ ಎಂ.ಜಿ., ಪಿ.ವಿ. ಕೃಷ್ಣಮೂರ್ತಿ : ೧೯೯೭, *ಇತಿಹಾಸ ದರ್ಶನ*, ಸಂ. ೧೬, ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು

೩೧. ಎಚ್.ಎಲ್. ನಾಗೇಗೌಡ : ೧೯೬೬, *ಪ್ರವಾಸಿ ಕಂಡ ಇಂಡಿಯಾ*, ಸಂ. ೨, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೩೨. ನಿರೂಪಮ : ೧೯೭೯, *ಶ್ರೀಕೃಷ್ಣದೇವರಾಯನ ಆಮುಕ್ತಮಾಲ್ಯ*, ಶ್ರೀ ಪ್ರಕಾಶನ, ರಾಜಾಜಿನಗರ, ಬೆಂಗಳೂರು

೩೩. ಪ್ರೊ. ಪರಮೇಶ್ವರಪ್ಪ ಪಿ. : ೧೯೯೬, *ಹಂಪಿ ಪರಂಪರೆ*, ಶ್ರೀ ವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗುಂದಿ, ಹೊಸಪೇಟೆ

೩೪. ಪಾಂಡುರಂಗ ದೇಸಾಯಿ : ೨೦೦೩, *ಹಂಪೆ*, ಸಪ್ನ ಬುಕ್ ಹೌಸ್, ಬೆಂಗಳೂರು

೩೫. ಪುಲುಮತಿ ಶ್ಯಾಮರಾವ್ : ೧೯೫೬, *ವಿಜಯನಗರದ ಕಲೆ ಮತ್ತು ಸಾಹಿತ್ಯ*, ಮೈಸೂರು ಸಂಸ್ಥಾನ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು

೩೬. ಪ್ರಕಾಶ ಎಂ.ಪಿ. : ೨೦೦೦, *ಡೋಮಿಂಗೋ ಪಾಯಸ್ ಕಂಡ ವಿಜಯನಗರ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೭. ಡಾ. ಬಸವರಾಜ ಮಲಶೆಟ್ಟಿ : ೧೯೮೧, *ಹಂಪೆ ಒಂದು ಪರಿಚಯ*, ಮಹಾಕವಿ ಹರಿಹರ ಸ್ಮಾರಕ ಸಂಶೋಧನ ಕೇಂದ್ರ, ಹಂಪೆ

೩೮. ಪ್ರೊ. ಸಂ.ಶಿ. ಭೂಸನೂರು ಮಠ : ೧೯೮೮, *ವಿಜಯ ಕಲ್ಯಾಣ*, ಮಹಾಕವಿ ಹರಿಹರ ಸ್ಮಾರಕ ಸಂಶೋಧನ ಕೇಂದ್ರ, ಹಂಪಿ

೩೯. ಮಂಜುನಾಥ ಬೇವಿನಕಟ್ಟಿ : ೧೯೯೭, *ವಿಜಯನಗರ ಸಾಂಸ್ಕೃತಿಕ ಆಯಾಮಗಳು*, ಶ್ರೀ ವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ಹೊಸಪೇಟೆ

೪೦. ಮಂಜೇಶ್ವರ ಗಣಪತಿರಾವ್ ಐಗಳ : ೨೦೦೪, *ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ*, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ

೪೧. ಮಜುಮ್‌ದಾರ್ ಪಿ.ಆರ್. ಭಾರದ್ವಾಜ್ ಆರ್.ಕೆ. ಚೌದರಿ ಆರ್.ಸಿ. : ೧೯೯೯, *ದಕ್ಷಿಣ ಭಾರತದ ಇತಿಹಾಸ*, ಚೇತನ ಬುಕ್ ಹೌಸ್, ಮೈಸೂರು

೪೨. ಮಹಾದೇವ ಸಿ. : ೨೦೦೧, *ಕರ್ನಾಟಕ ಪುರಾತತ್ವ ಶೋಧ*, ಶ್ರೀ ಲಕ್ಷ್ಮಿ ಪ್ರಕಾಶನ, ಶ್ರೀರಂಗಪಟ್ಟಣ

೪೩. ಮೈಸೂರು ಸರ್ಕಾರ : ೧೯೭೦, *ಕರ್ನಾಟಕ ಪರಂಪರೆ*, ಸಂ. ೨, ಭಾಷಾಂತರ ಯೋಜನಾ ಸಮಿತಿ, ಮೈಸೂರು

೪೪. ಪ್ರೊ. ವಿ. ರಾಘುವೇಂದ್ರರಾವ್ : ೧೯೪೮, *ವಿಜಯನಗರ*, ಎಚ್. ವೆಂಕಟರಾಮಯ್ಯ ಅಂಡ್ ಸನ್ಸ್, ಮೈಸೂರು

೪೫. ಕೆ.ಆರ್. ರಾಮಕೃಷ್ಣ, ಡಾ. ಆರ್. ಗೋಪಾಲ, ಪಿ.ಎನ್. ಗಂಗಾಧರ : ೨೦೦೩, *ವಿಜಯನಗರ ಅಧ್ಯಯನ*, ಸಂ. ೮, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ

೪೬. ಕೆ.ಆರ್. ರಾಮಕೃಷ್ಣ, ಡಾ. ಆರ್. ಗೋಪಾಲ, ಪಿ.ಎಸ್. ಗಂಗಾಧರ್ : ೨೦೦೪, *ವಿಜಯನಗರ ಅಧ್ಯಯನ*, ಸಂ. ೯, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ

೪೭. ಪ್ರೊ. ರಾಜಗೋಪಾಲ್ ಟಿ.ಎನ್. : ೧೯೮೩, *ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ*, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೪೮. ರಾಮರಾವ್ ಎಂ. (ಅನು) : ಚದುರಂಗ, ೧೯೭೧, *ಕೃಷ್ಣದೇವರಾಯ*, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಹೊಸದೆಹಲಿ

೪೯. ಡಾ. ಲಿಂಗಯ್ಯ ಟಿ.ಎಲ್. : ೧೯೬೭, *ಭವ್ಯ ಹಿಂದೂ ಸಾಮ್ರಾಜ್ಯ*, ಶ್ರೀ ಪಂಪಾಚಾರ್ಯ ಪ್ರೆಸ್, ಮೈಸೂರು

೫೦. ಡಾ. ವಸುಂಧರಾ ಫಿಲಿಯೋಜಾ : ೧೯೮೦, *ವಿಜಯನಗರ ಸಾಮ್ರಾಜ್ಯ ಸ್ಥಾಪನೆ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೫೧. ಡಾ. ವಸುಂಧರಾ ಫಿಲಿಯೋಜಾ : ೧೯೯೧, *ಅಳಿದುಳಿದ ಹಂಪೆ*, ಪ್ರೇಮ ಸಾಹಿತ್ಯ ಪ್ರಕಾಶನ, ಬೆಂಗಳೂರು

೫೨. ಪ್ರೊ. ವಸಂತಕುಮಾರಿ : ೨೦೦೩, *ಇತಿಹಾಸದ ಹಾದಿಯಲ್ಲಿ*, ವಸು ಪ್ರಕಾಶನ, ಮೈಸೂರು

೫೩. ಸಿ.ಎಸ್. ವಾಸುದೇವನ್ : ೨೦೦೧, *ಹಂಪಿ ಪರಿಸರದ ಕೆರೆಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೪. ಡಾ. ಬಿ.ಎ. ವಿವೇಕ ರೈ : ೨೦೦೫, *ಪ್ರವಾಸಿ ಕಂಡ ವಿಜಯನಗರ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೫. ಕು. ವೀರಭದ್ರಪ್ಪ : ೨೦೦೧, *ಶ್ರೀಕೃಷ್ಣದೇವರಾಯ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೬. ಕೆ. ವೆಂಕಟರಾಮಪ್ಪ (ಪ್ರ.ಸಂ.) ಹಾ.ಮಾ.ನಾಯಕ (ಸಂ.) : ೧೯೭೪, *ಶ್ರೀಕೃಷ್ಣದೇವರಾಯನ ಕಾಲದ ಕರ್ನಾಟಕಾಂಧ್ರ ಸಾಹಿತ್ಯ ಸಮೀಕ್ಷೆ*, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೫೭. ಬಿ.ವ್ಹಿ. ಶಿರೂರ : ೧೯೭೬, *ಶ್ರವಣಬೆಳ್ಗೊಳ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫೮. ಎಂ.ಎಲ್. ಶಿವಶಂಕರ್ ಚನ್ನಬಸಪ್ಪ ಎಸ್. ಪಾಟೀಲ : ೧೯೯೭, *ವಿಜಯನಗರ ಅಧ್ಯಯನ*, ಸಂ. ೨, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

೫೯. ಎಂ.ಎಲ್. ಶಿವಶಂಕರ್ ಚನ್ನಬಸಪ್ಪ ಎಸ್. ಪಾಟೀಲ : ೧೯೯೮, *ವಿಜಯನಗರ ಅಧ್ಯಯನ*, ಸಂ. ೩, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

೬೦. ಡಾ. ಶೈಲಾ ಪಿ. ಶರ್ಮಾ : *ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಜ್ಞಾನೋದಯ ಪ್ರಕಾಶನ, ಬೆಂಗಳೂರು ೭೯

೬೧. ಶ್ರೀಕಂಠಯ್ಯ : ೧೯೮೩, *ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ*, ಗೀತಾ ಬುಕ್ ಹೌಸ್, ಮೈಸೂರು

೬೨. ಶ್ರೀನಿವಾಸ್‌ಚಾರ್ ಎಸ್. : *ಹಂಪಿ ವಿಜಯನಗರ ಸಾಮ್ರಾಜ್ಯದ ಪ್ರಖ್ಯಾತ ರಾಜಧಾನಿ*, ಕರ್ನಾಟಕ ಪುರಾತತ್ವ ಸಂಗ್ರಹಾಲಯ ಇಲಾಖೆ, ಕರ್ನಾಟಕ ಸರ್ಕಾರ

೬೩. ಪ್ರೊ. ಬಿ. ಷೇಕ್ ಅಲಿ (ಪ್ರ.ಸಂ.) ಪ್ರೊ. ಕೆ.ಎಸ್. ಶಿವಣ್ಣ (ಸಂ.) : ೧೯೯೭, *ಕರ್ನಾಟಕ ಚರಿತ್ರೆ*, ಸಂ. ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೪. ಸದಾನಂದ ಕನವಳ್ಳಿ : ೧೯೯೨, *ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೫. ಸರೋಜಿನಿ ಮಹಿಷಿ : ೧೯೬೫, *ಕರ್ನಾಟಕದ ಕವಿಯಿತ್ರಿಯರು*, ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಧಾರವಾಡ

೬೬. ಪ್ರೊ. ಸೀತಾರಾಮಯ್ಯ ಎಂ.ವಿ. (ಪ್ರ.ಸಂ.) ಡಾ. ಡಿ.ಎನ್.ಎನ್. ಆಚಾರ್ಯ (ಸಂ.) : ೧೯೮೭, *ಕೃಷ್ಣದೇವರಾಯನ ದಿನಚರಿ*, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

೬೭. ಡಾ. ಕೆ.ಎಂ. ಸುರೇಶ, ವಾಸುದೇವ ಬಡಿಗೇರ, ಮಾಡಲಗೇರಿ ಕೊಟ್ರೇಶ್, ಎಸ್.ವೈ. ಸೋಮಶೇಖರ್ : ೧೯೯೯, *ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೮. ಸೂರ್ಯನಾರಾಯಣರಾವ್ (ಅನು), ಬಾಲಸುಬ್ರಹ್ಮಣ್ಯ : ೨೦೦೦, *ಮರೆಯಲಾಗದ ಮಹಾಸಾಮ್ರಾಜ್ಯ ವಿಜಯನಗರ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೯. ಸೂರ್ಯನಾಥ್ ಕಾಮತ್, ಪಿ.ವಿ. ಕೃಷ್ಣಮೂರ್ತಿ : ೧೯೯೬, *ಇತಿಹಾಸ ದರ್ಶನ*, ಸಂ. ೧೧, ಕನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

೨೦. ಸೂರ್ಯನಾಥ್ ಕಾಮತ್, ಪಿ.ವಿ. ಕೃಷ್ಣಮೂರ್ತಿ : ೧೯೯೬, *ಇತಿಹಾಸ ದರ್ಶನ*, ಸಂ. ೧೨, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

೨೧. ಸೂರ್ಯನಾಥ್ ಕಾಮತ್, ಪಿ.ವಿ. ಕೃಷ್ಣಮೂರ್ತಿ : ೧೯೯೬, *ಇತಿಹಾಸ ದರ್ಶನ*, ಸಂ. ೧೬, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ಇಂಗ್ಲಿಷ್ ಗ್ರಂಥಗಳು

೨೧. Dr. N. Saraswathi nanaiah : 1992, *The Position of Women During Vijayanagara Period*, Southern Printers, Mysore

೨೨. *South Indian Inscriptions*, Vol. IX, Part II, The director (Epigraphy Dept) Mysore

೨೩. Anil, Verghese : 2000, *Archaeology Art and Religion in Vijayanagar*, Oxford University, New Delhi

೨೪. A.H. Long Hurst : 1988, *Hampi Ruins*, Assion Educational Service, New Delhi

೨೫. M.H. Ramasharma (Ed), M.H. Gopal : 1978, *'The History of the Vijayanagar Empire*, Papular Prakashan, Bombay

೨೬. Anil Verghese : 2002, *Hampi*, Oxford university press, New Delhi.

ಅಪ್ರಕಟಿತ ಗ್ರಂಥಗಳು

೧. ಬಸವರಾಜಯ್ಯ ಮಠದ್ : ೧೯೯೪, *ವಿಜಯನಗರ ಕಾಲದ ಸಮಾಜ ಕೆಲವು ಅನಿಷ್ಟ ಪದ್ಧತಿಗಳು*, (ಎಂ.ಫಿಲ್), ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಮಂಜುನಾಥಯ್ಯ ಟಿ.ಎಂ. : ೨೦೦೩, *ಕಮ್ಮಟನಾಯಕರು ಒಂದು ಸಾಂಸ್ಕೃತಿಕ ಅಧ್ಯಯನ*, (ಪಿಎಚ್.ಡಿ.), ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಮಹೇಶ್ ಕೆ. : ೨೦೦೨, *ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು*, (ಪಿಎಚ್.ಡಿ.), ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಜಿ. ರವೀಂದ್ರಕುಮಾರ್ : ೨೦೦೩, *ಮೌಖಿಕ ಚರಿತ್ರೆ ಮತ್ತು ಹಂಪಿ*, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಸತೀಶ್ ಕೆ. : ೨೦೦೪, *ವಿಜಯನಗರ ಕಾಲದ ಶೈವದೇವಾಲಯಗಳು*, (ಪಿಎಚ್.ಡಿ.), ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಎಸ್.ವೈ. ಸೋಮಶೇಖರ್ : ೧೯೯೯, *ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ*, (ಪಿಎಚ್.ಡಿ.), ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ಹಾರಾಳು ಮಹಾಬಲೇಶ್ವರ : ೨೦೦೩, *ಚರಿತ್ರೆ ರಚನಾ ಶಾಸ್ತ್ರ ಬಳ್ಳಾರಿ ಪ್ರದೇಶದ ಮೇಲಿನ ಅಧ್ಯಯನ*, (ಎಂ.ಫಿಲ್), ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶಾಸನ ಗ್ರಂಥಗಳು

೧. ಚನ್ನಬಸಪ್ಪ ಎಸ್. ಪಾಟೀಲ, ವಿನೋದಾ ಪಾಟೀಲ : ೧೯೯೬, *ವಿಜಯನಗರದ ಶಾಸನಗಳು*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

೨. ಚನ್ನಬಸಪ್ಪ ಎಸ್. ಪಾಟೀಲ, ವಿನೋದಾ ಪಾಟೀಲ : ೧೯೯೭, *ಬಳ್ಳಾರಿ ಜಿಲ್ಲೆಯ ಶಾಸನಗಳು*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

೩. ದೇವರಕೊಂಡಾರೆಡ್ಡಿ, ಶ್ರೀ ಕಲವೀರ ಮನ್ವಾಚಾರ್, ಡಾ. ಕೆ.ಜಿ. ಭಟ್‌ಸೂರಿ, ಡಾ. ಡಿ.ವಿ. ಪರಮಶಿವಮೂರ್ತಿ : ೧೯೯೮, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.೧ ಬಳ್ಳಾರಿ ಜಿಲ್ಲೆ*, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ದೇವರಕೊಂಡಾರೆಡ್ಡಿ : ೧೯೯೯, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.೨ ಕೊಪ್ಪಳ ಜಿಲ್ಲೆ*, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ದೇವರಕೊಂಡಾರೆಡ್ಡಿ : ೨೦೦೦, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.೩ ಹಂಪಿ ಶಾಸನಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಬಾ.ರಾ. ಗೋಪಾಲ್, ಎಚ್.ಎನ್. ಗೋಪಾಲರಾವ್, ಡಾ. ಪಿ.ವಿ. ಕೃಷ್ಣಮೂರ್ತಿ : ೨೦೦೦, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.೪*, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ಕೆ.ಆರ್. ಗಣೇಶ್, ಡಾ. ಆರ್. ಶೇಷಶಾಸ್ತ್ರಿ : ೨೦೦೧ *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.೫ ಆಂಧ್ರ ಪ್ರದೇಶ ಮತ್ತು ಕನ್ನಡ ಶಾಸನಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ

೮. ದೇವರಕೊಂಡಾರೆಡ್ಡಿ, ಕೆ.ಜಿ. ಭಟ್‌ಸೂರಿ, ಶ್ರೀ ಕಲವೀರ ಮನ್ವಾಚಾರ್, ಡಾ. ಡಿ.ವಿ. ಪರಮಶಿವಮೂರ್ತಿ : ೨೦೦೩, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.೭ ರಾಯಚೂರು ಜಿಲ್ಲೆ*, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯. ಕೆ.ಆರ್. ಗಣೇಶ್, ಡಾ. ಆರ್. ಶೇಷಶಾಸ್ತ್ರಿ : ೨೦೦೧, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೫, ಆಂಧ್ರ ಪ್ರದೇಶದ ಕನ್ನಡ ಶಾಸನಗಳು*, ಭಾಗ ೨. ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ಬಿ.ಎಲ್. ರೈಸ್ : ೧೯೯೦, *ಎಪಿಗ್ರಾಫಿ ಕರ್ನಾಟಿಕಾ*, ಮೈಸೂರು ಅಧ್ಯಯನ ಸಂಸ್ಥೆ, ಮೈಸೂರು

೧೧. ದೇವರಕೊಂಡಾರೆಡ್ಡಿ : ೨೦೦೪, *ಶಾಸನ ಅಧ್ಯಯನ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೋಷ್ಟಕ-೧

ರಾಣಿಯರು ಮಾಡಿದ ಧಾರ್ಮಿಕ ಸೇವೆ

ಸಂ.	ಶಾಸನ	ಗ್ರಾಮ/ಊರು	ದೇವಾಲಯ	ಜೀರ್ಣೋದ್ಧಾರಗೊಳಿಸಿದವರು	ಕಾಲ	ವಿಷಯ
೧.	ವಿಜಯನಗರ (ಹಂಪೆಯ) ಶಾಸನ ಸಂ.೧, ಸಂ. ೧೦೩	ಹಂಪಿ	ವಿರೂಪಾಕ್ಷ	ಬುಕ್ಕಾಮಜೀ	೧೫೧೦	ಗ್ರಾಮದಾನ
೨.	SII-XI, ಸಂಖ್ಯೆ ೫೬, ಕ.ವಿ.ಶಾ.ಸಂ. ೩ ಹಂಪಿ ಸಂಖ್ಯೆ ೧೮೧ AR 49-081884	ಹಂಪಿ	ವಿಠಲೇಶ್ವರ	ಚಿನ್ನಾದೇವಿ, ತಿರುಮಲದೇವಿ	೧೫೧೩	ಗ್ರಾಮಗಳ ದಾನ
೩.	ಕ.ವಿ.ಶಾ.ಸಂ. ೫ ಭಾಗ ೧, ಸಂ. ೨೫೭	ತಿರುಮಲೆ	ತಿರುವೇಂಗಳನಾಥ	ಚಿನ್ನಾಜೀ ಅಮ್ಮನವರು	೧೫೧೩	ಚಿನ್ನದ ಬಟ್ಟಲು
೪.	SII-XVI, No. 57	ವಿಷ್ಣುಕಂಚಿ	ವರದರಾಜ ದೇವರು ಹಾಗೂ ಕೃಷ್ಣದೇವರಾಯ	ಚಿನ್ನಾದೇವಿ, ತಿರುಮಲದೇವಿ	೧೫೧೭	ಗ್ರಾಮದಾನ
೫.	SII-XVI, No. 57	ವಿಷ್ಣುಕಂಚಿ	ವರದರಾಜ ದೇವರು	ಚಿನ್ನಾದೇವಿ, ತಿರುಮಲದೇವಿ	೧೫೧೭	೧೦೦೦ ವರಹಾ
೬.	ಕ.ವಿ.ಶಾ.ಸಂ. ೩, ಸಂಖ್ಯೆ ೩೨೦ ಸಂ, ೨೬೭	ವಿಜಯನಗರ	ಕರಿಯ ತಿರುವೇಂಗಳನಾಥ	ತಿರುಮಲದೇವಿ	೧೫೧೮	ಮುತ್ತುಗಳು ಕೆಂಪು ಪದಕ ಭೂಮಿ

೭.	ಕ.ವಿ.ವಿ.ಸಂ. ೫, ಭಾಗ ೧, ಸಂ. ೨೬೭,೫	ತಿರುಮಲೆ	ತಿರುವೇಂಗಳನಾಥ	ಕೃಷ್ಣದೇವರಾಯ ತಿರುಮಲದೆವಿ	೧೫೨೧	ನವರತ್ನ ಪಿತಾಂಬರ ಚಾಮರ, ೧೦,೦೦೦ ವರಹ ನವರತ್ನ ಪದಕ
೮.	ಕ.ವಿ.ವಿ.ಸಂ. ೩, ಸಂ. ೭೭	ವಿಜಯನಗರ	ಬಾಲಕೃಷ್ಣ	ವರದಾದೇವಿ	೧೫೩೨	೩೮೪೦ ಚಕ್ರ ಗದ್ಯಾಣ ಚಿನ್ನದ ಉಯ್ಯಾಲೆ ಇತರೆ
೯.	ತ.ನಾ.ಕ.ಶಾ.ಸಂ. ೪, ಸಂ. ೧೬	ವಿಷ್ಣುಕಂಚಿ	ತಿರುವೇಂಗಳನಾಥ	ವರದಾದೇವಿ	೧೫೩೨	ಅನೇಕ ಪೂಜಾ ಪರಿಕರಗಳು ಹಾಗೂ ೧೭ ಗ್ರಾಮದಾನ ತುಲಾಭಾರ ಮಹಾದಾನ

ಛಾಯಚಿತ್ರಗಳು



ಪಟ್ಟದರಸಿಯರಾದ ಚಿನ್ನಾದೇವಿ, ತಿರುಮಲದೇವಿಯರೊಂದಿಗೆ ಶ್ರೀ ಕೃಷ್ಣದೇವರಾಯ

ಪುರಾತತ್ವ ಇಲಾಖೆ, ಕಮಲಾಪುರ.

ಭಗ್ನಗೊಂಡ ತಿರುಮಲದೇವಿ ವಿಗ್ರಹದಲ್ಲಿನ ವಸ್ತ್ರ ಮತ್ತು ಆಭರಣಗಳ ವೈಭವ
ಪುರಾತತ್ವ ಇಲಾಖೆ - ಕಮಲಾಪುರ



ರಾಣಿಯರು ನಿರ್ಮಿಸಿದ ಪೂರ್ವಗೋಪುರ ವಿಠ್ಠಲ ದೇವಾಲಯ - ಹಂಪಿ.





ರಾಣಿಯರ ಬೇಸಿಗೆಯ ವಿಶ್ರಾಂತಿ ಧಾಮ - ಕಮಲ ಮಹಲ್ - ಹಂಪಿ.



ಶ್ರೀಮಂತರ ವಾಸಿಸುತ್ತಿದ್ದ ಪ್ರದೇಶ (ಭಗ್ನಗೊಂಡ ಅವಶೇಷಗಳು) ಹಂಪಿ.



ರಾಣಿಯರ ಸ್ನಾನಗೃಹ - ಹಂಪಿ





ತುಲಾಭಾರ ಗೋಪುರದ ಎಡಭಾಗದ ಕೆಳಭಾಗದಲ್ಲಿನ ಸಾರ್ವಜನಿಕ ಸೇವೆಗಾಗಿ ನಿಂತಿರುವ
ತಿರುಮಲದೇವಿಯ, ಚಿನ್ನಾದೇವಿಯೊಂದಿಗೆ ಶ್ರೀ ಕೃಷ್ಣದೇವರಾಯ



ದಕ್ಷಿಣ ದಿಕ್ಕಿಗಿರುವ ಗೋಪುರ - ವಿಜಯ ವಿಠ್ಠಲ ದೇವಾಲಯ - ಹಂಪಿ.



ಬೇಟೆ ಮತ್ತು ಯುದ್ಧದಲ್ಲಿ ತೊಡಗಿರುವ ಮಹಿಳೆಯರು - ಮಹಾನವಮಿ ದಿಬ್ಬ-ಹಂಪಿ



ಬೇಟೆಗಾರ್ತಿ - ಹಂಪಿ ವಿರೂಪಾಕ್ಷ ದೇವಸ್ಥಾನ - ಮಹಾ ಮಂಟಪ



ಆನೆಯ ತುಳಿತಕ್ಕೊಳಪಟ್ಟ ಮಹಿಳೆಯ ರಕ್ಷಣೆಯಲ್ಲಿ ತೊಡಗಿರುವ ವೀರ ಮಹಿಳೆಯರು

ಮಹಾನವಮಿ ದಿಬ್ಬ- ಹಂಪಿ



ಭರತನಾಟ್ಯದಲ್ಲಿ ತೊಡಗಿರುವ ಮಹಿಳೆಯರು - ಹಜಾರರಾಮ ದೇವಾಲಯ -ಹಂಪಿ.



ಯುದ್ಧ ಮತ್ತು ಕೋಲಾಟದಲ್ಲಿ ತೊಡಗಿರುವ ಮಹಿಳೆಯರು - ಹಜಾರರಾಮ ದೇವಾಲಯ - ಹಂಪಿ



ನೃತ್ಯ ಮತ್ತು ಸಂಗೀತದಲ್ಲಿ ರಾಣಿಯರು ಪಾಲ್ಗೊಳ್ಳುತ್ತಿದ್ದಂತಹ ವೇದಿಕೆ
ನೃತ್ಯ (ಸಂಗೀತ) ಮಂಟಪ - ವಿರೂಪಾಕ್ಷ ದೇವಾಲಯ - ಹಂಪಿ.